prajavani.net prajavani | ಮಂಗಳವಾರ, ಡಿಸೆಂಬರ್ 23, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 353 | ಪುಟ 16 | www.prajavani.net

ಬೆಳ್ಳಿಯ ಜಿಗಿತ
ದೆಹಲಿಯ ಚಿನಿವಾರ ಪೇಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ ಕೆ.ಜಿ. ಬೆಳ್ಳಿ ಧಾರಣೆಯು ₹10,400ರಷ್ಟು ಜಿಗಿತ ಕಂಡಿದೆ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸೆನ್ಸೆಕ್ಸ್ 85,567 | ನಿಫ್ಟಿ 26,172 | $/₹ 89.68 | ಚಿನ್ನ (Std. 10g) ₹1,39,340 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,21,800 (ಬೆಂಗಳೂರು)

ಆದಿಕೇಶವುಲು ಪುತ್ರ, ಪುತ್ರಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿ ಡಿ.ಕೆ. ಆದಿಕೇಶವುಲು ಪುತ್ರ ಡಿ.ಎ ಶ್ರೀನಿವಾಸ್, ಪುತ್ರಿ ಡಿ.ಎ.ಕಲ್ಪಜಾ, ಡಿವೈಎಸ್‌ಪಿ ಎಸ್.ವೈ.ಮೋಹನ್ ಅವರನ್ನು ಕೆ.ರಘುನಾಥ್ ಅವರ ಅನುಮಾನಾಸ್ಪದ ಸಾವು ಹಾಗೂ ನಕಲಿ ದಾಖಲೆ ಸೃಷ್ಟಿ ಆರೋಪದ ಪ್ರಕರಣದಲ್ಲಿ ಸಿಬಿಐ ಪೊಲೀಸರು ಬಂಧಿಸಿದ್ದಾರೆ.

ಎಸ್.ವೈ. ಮೋಹನ್ ಅವರು ಸದ್ಯ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿದ್ದರು. ಮೂವರು ಆರೋಪಿಗಳ ವೈದ್ಯಕೀಯ ಪರೀಕ್ಷೆ ಪೂರ್ಣಗೊಂಡ ಬಳಿಕ ನ್ಯಾಯಾಧೀಶರ ಎದುರು ಹಾಜರುಪಡಿಸುವುದಾಗಿ ತನಿಖಾ ಸಂಸ್ಥೆ ತಿಳಿಸಿದೆ. 9

ಚಿನಕುರುಳಿ ಪ್ರಕಾಶ್ ಶೆಟ್ಟಿ

ಅಕ್ರಮ ಕಾಮಗಾರಿ; ತಪ್ಪೊಪ್ಪಿಗೆ

ಎತ್ತಿನಹೊಳೆ: 267 ಎಕರೆ ಅರಣ್ಯ ಬಳಕೆ: ಅರಣ್ಯ ಸಚಿವಾಲಯಕ್ಕೆ ವರದಿ

• ಮಂಜುನಾಥ ಹೆಬ್ಬಾರ್

ನವದೆಹಲಿ: ಬರಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ಉದ್ದೇಶ ಹೊಂದಿರುವ ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗಾಗಿ ಹಾಸನ ಜಿಲ್ಲೆಯಲ್ಲಿ 267 ಎಕರೆ (107 ಹೆಕ್ಟೇರ್) ಅರಣ್ಯದಲ್ಲಿ ನಿಯಮಬಾಹಿರವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂಬುದನ್ನು ಕರ್ನಾಟಕ ಸರ್ಕಾರ ಒಪ್ಪಿಕೊಂಡಿದೆ.

ಯೋಜನೆಗೆ ನಿಯಮ ಉಲ್ಲಂಘಿಸಿ 0.04 ಹೆಕ್ಟೇರ್ ಅರಣ್ಯವನ್ನಷ್ಟೇ ಪಡೆಯಲಾಗಿದೆ ಎಂದು ವರ್ಷದಿಂದ ಹೇಳುತ್ತಿದ್ದ ರಾಜ್ಯ ಸರ್ಕಾರವು, ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಭಾರಿ ಪ್ರಮಾಣದಲ್ಲಿ ನಿಯಮ ಉಲ್ಲಂಘನೆ ಆಗಿರುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಈ ಸಂಬಂಧ ರಾಜ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ) ಅವರು ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯದ ಉಪ ಮಹಾನಿರ್ದೇಶಕ-ರಿಗೆ (ಅರಣ್ಯ) ಡಿಸೆಂಬರ್ 11ರಂದು 84 ಪುಟಗಳ ವರದಿ ಸಲ್ಲಿಸಿದ್ದಾರೆ.

ಹಾಸನ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಗುರುತ್ವಾಕರ್ಷಣ ಕಾಲುವೆ ನಿರ್ಮಾಣಕ್ಕಾಗಿ 432 ಎಕರೆ ಅರಣ್ಯ ಬಳಕೆಗೆ ಅನುಮೋದನೆ ನೀಡುವಂತೆ ಅರಣ್ಯ ಇಲಾಖೆಯು ಪರಿಸರ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಹಾಸನ ಜಿಲ್ಲೆಯಲ್ಲಿ ಯೋಜನೆಯ ಕಾಮಗಾರಿಗಾಗಿ ಅಕ್ರಮವಾಗಿ ಅರಣ್ಯ ಬಳಸಿಕೊಳ್ಳಲಾಗಿದ್ದು, ಇದರಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಅರಣ್ಯ ಸಚಿವಾಲಯ ನಿರ್ದೇಶನ ನೀಡಿತ್ತು. 432 ಎಕರೆ ಅರಣ್ಯ ಬಳಕೆಗೆ ಅನುಮೋದನೆ ನೀಡಲು ಸಚಿವಾಲಯದ ಅರಣ್ಯ ಸಲಹಾ ಸಮಿತಿ ಎರಡು ಬಾರಿ ನಿರಾಕರಿಸಿತ್ತು.

'ಯೋಜನೆಯ ಕಾಲುವೆ ನಿರ್ಮಾಣಕ್ಕೆ ಅಕ್ರಮವಾಗಿ 107 ಹೆಕ್ಟೇರ್ ಬಳಕೆ ಮಾಡಿರುವುದನ್ನು ಸಚಿವಾಲಯದ ಉನ್ನತ ಅಧಿಕಾರಿಗಳ ಸಮಿತಿ ಪತ್ತೆ ಹಚ್ಚಿ ವರದಿ ಸಲ್ಲಿಸಿದೆ. ಆದರೆ, ರಾಜ್ಯ ಸರ್ಕಾರವು 0.04 ಹೆಕ್ಟೇರ್ ಉಲ್ಲಂಘನೆ ಪ್ರಕರಣದಲ್ಲಷ್ಟೇ ಎಫ್‌ಐಆರ್ ದಾಖಲಿಸಿದೆ. ಇದು ಗಂಭೀರ ಲೋಪ' ಎಂದು ನವೆಂಬರ್ 6ರಂದು ಅಭಿಪ್ರಾಯ ಪಟ್ಟಿದ್ದ ಸಮಿತಿಯು, ಈ ಸಂಬಂಧ ಅರಣ್ಯ ಇಲಾಖೆ ಹಾಗೂ ಸಚಿವಾಲಯದ ಪ್ರಾದೇಶಿಕ ಕಚೇರಿಗೆ ಜಂಟಿ ವರದಿ ಸಲ್ಲಿಸಬೇಕು ಎಂದು ನಿರ್ದೇಶನ ನೀಡಿತ್ತು.

ಎಲ್ಲೆಲ್ಲಿ ನಿಯಮ ಉಲ್ಲಂಘನೆ?

84 ಹೆಕ್ಟೇರ್
ಹಾಸನ ಮತ್ತು ಬೇಲೂರು ತಾಲ್ಲೂಕುಗಳ ಐದಳ್ಳ ಅಮೃತ ಮಹಲ್ ಕಾವಲ್ ಮತ್ತು ಅರಸೀಕೆರೆ ತಾಲ್ಲೂಕು ಅರಣ್ಯ ಪ್ರದೇಶದ ಪಕ್ಕದಲ್ಲಿರುವ ನಾಯ್ಕನಕೆರೆ ಅಮೃತ ಮಹಲ್ ಕಾವಲ್

21.96 ಹೆಕ್ಟೇರ್
ಸೀಗೆಗುಡ್ಡ ಅರಣ್ಯ ಪ್ರದೇಶ

0.13 ಹೆಕ್ಟೇರ್
ರಾಮದೇವರಹಳ್ಳ ಕಾವಲ್ ಅರಣ್ಯ ಪ್ರದೇಶ

1.33 ಹೆಕ್ಟೇರ್
ಮುದ್ದುಡಿ ಪರಿಭಾವಿತ ಅರಣ್ಯ

'ಅಸ್ಪಷ್ಟ ದಾಖಲೆಗಳಿಂದ ಲೋಪ'

'ಹಾಸನ ವೃತ್ತದ ಸಿಸಿಎಫ್ ಹಾಗೂ ಡಿಸಿಎಫ್ ಅವರು ಯೋಜನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದಾರೆ. ನಿಯಮ ಉಲ್ಲಂಘಿಸಿ ವಿಶ್ವೇಶ್ವರಯ್ಯ ಜಲ ನಿಗಮವು 107 ಹೆಕ್ಟೇರ್ ಅರಣ್ಯ ಬಳಸಿರುವ ಬಗ್ಗೆ ಉಲ್ಲೇಖಿಸಿದ್ದಾರೆ. ಆದರೆ, ಈ ಲೋಪಕ್ಕೆ ವಿಶ್ವೇಶ್ವರಯ್ಯ ಜಲ ನಿಗಮ ಅಥವಾ ಅರಣ್ಯ ಇಲಾಖೆಯ ಅಧಿಕಾರಿಗಳು ಕಾರಣರಲ್ಲ. ಅಸ್ಪಷ್ಟ ದಾಖಲೆಗಳ ಕಾರಣದಿಂದ ಈ ಲೋಪ ಘಟಿಸಿದೆ' ಎಂದು ಪಿಸಿಸಿಎಫ್ ಅವರು ವರದಿಯಲ್ಲಿ ಸಮಜಾಯಿಷಿ ನೀಡಿದ್ದಾರೆ.

ಯಾದವ್ ಭೇಟಿಯಾಗಲಿರುವ ಡಿಕೆಶಿ

ಎತ್ತಿನಹೊಳೆ, ಮೇಕೆದಾಟು ಹಾಗೂ ಮಹದಾಯಿ ಯೋಜನೆಗಳ ಬಗ್ಗೆ ಚರ್ಚಿಸಲು ಉಪಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಅರಣ್ಯ ಸಚಿವ ಭೂಪೇಂದರ್ ಯಾದವ್ ಅವರನ್ನು ಮಂಗಳವಾರ ಭೇಟಿ ಮಾಡಲಿದ್ದಾರೆ. ಎತ್ತಿನಹೊಳೆ ಯೋಜನೆಗೆ 432 ಎಕರೆ ಅರಣ್ಯ ಬಳಕೆಗೆ ಅನುಮೋದನೆ ನೀಡುವಂತೆ ಶಿವಕುಮಾರ್ ಅವರು ಕೇಂದ್ರ ಸಚಿವರಿಗೆ ಎರಡು ಬಾರಿ ಮನವಿ ಸಲ್ಲಿಸಿದ್ದರು.

ಹಾದಿ ಹತ್ಯೆಯ ಬೆನ್ನಲ್ಲೇ ದಾಳಿ • ದೇಶದಲ್ಲಿ ಪ್ರಕ್ಷುಬ್ಧ ಸ್ಥಿತಿ

ಬಾಂಗ್ಲಾ: ಮತ್ತೆ ಗುಂಡಿನ ಮೊರೆತ

ಢಾಕಾ (ಪಿಟಿಐ): ಬಾಂಗ್ಲಾದೇಶ ಮೀಸಲಾತಿ ವಿರೋಧಿ ಹೋರಾಟದ ಮುಂಚೂಣಿಯಲ್ಲಿದ್ದ ಮತ್ತೊಬ್ಬ ಯುವನಾಯಕ ಮುತ್ತಲಿಬ್ ಸಿಕ್ದರ್ ಮೇಲೆ ಅಪರಿಚಿತ ಬಂದೂಕುಧಾರಿಗಳು ಸೋಮವಾರ ಬೆಳಿಗ್ಗೆ ಗುಂಡಿನ ದಾಳಿ ನಡೆಸಿದ್ದಾರೆ.

ಮುತ್ತಲಿಬ್ ಸಿಕ್ದರ್

ಖುಲ್ನಾ ನಗರದ ನೈಋತ್ಯ ಭಾಗದ ಮಜೀದ್ ಸರಾನಿ ಪ್ರದೇಶದಲ್ಲಿ ಈ ದಾಳಿ ನಡೆದಿದೆ.

'ನ್ಯಾಷನಲ್ ಸಿಟಿಜಿನ್ ಪಕ್ಷದ (ಎನ್‌ಸಿಪಿ) ಖುಲ್ನಾ ವಿಭಾಗೀಯ ಮುಖ್ಯಸ್ಥ, ಕೇಂದ್ರ ಸಂಯೋಜಕರಾಗಿದ್ದ ಸಿಕ್ದರ್ ಅವರ ಮೇಲೆ ಗುಂಡಿನ ದಾಳಿಯಾಗಿದೆ' ಎಂದು ಎನ್‌ಸಿಪಿಯ ಜಂಟಿ ಸಂಯೋಜಕ ಹಾಗೂ ವೈದ್ಯ ಮಹ್‌ಮುದಾ ಮಿಟು ಅವರು 'ಫೇಸ್‌ಬುಕ್'ನಲ್ಲಿ ಸೋಮವಾರ ಪೋಸ್ಟ್ ಮಾಡಿದ್ದರು.

'ಅತ್ಯಂತ ಗಂಭೀರ ಸ್ಥಿತಿಯಲ್ಲಿ ಖುಲ್ನಾ ಆಸ್ಪತ್ರೆಗೆ ಸಿಕ್ದರ್ ಅವರನ್ನು ದಾಖಲಿಸಲಾಗಿದೆ. ಅವರ ತಲೆಯ ಎಡಭಾಗಕ್ಕೆ ಗುಂಡು ಹೊಕ್ಕಿದೆ. 12

ಹಾದಿ ಹತ್ಯೆ: ಖಚಿತ ಮಾಹಿತಿ ಸಿಕ್ಕಿಲ್ಲ

'ಉಸ್ಮಾನ್ ಹಾದಿ ಹತ್ಯೆಗೆ ಸಂಬಂಧಿಸಿದಂತೆ ಪ್ರಮುಖ ಶಂಕಿತರ ಖಚಿತ ಮಾಹಿತಿ ಇನ್ನೂ ಸಿಕ್ಕಿಲ್ಲ' ಎಂದು ಬಾಂಗ್ಲಾದೇಶ ಪೊಲೀಸರು ತಿಳಿಸಿದ್ದಾರೆ.

ಹತ್ಯೆ ನಡೆಸಿದವರನ್ನು ಬಂಧಿಸಲು ಹಾದಿ ಅವರ ಇಂಕ್ವಿಲಾಬ್ ಮಂಚ್ ಪಕ್ಷವು ಮಧ್ಯಂತರ ಸರ್ಕಾರಕ್ಕೆ 24 ತಾಸುಗಳ ಗಡುವು ನೀಡಿತ್ತು.

ಇದರ ಬೆನ್ನಲ್ಲೇ, ಗೃಹ ಸಚಿವಾಲಯದಲ್ಲಿ ತುರ್ತು ಪತ್ರಿಕಾಗೋಷ್ಠಿ ನಡೆಸಿದ ಹೆಚ್ಚುವರಿ ಐಜಿಪಿ ಖಾಂಡೇಕರ್ ರಫೀಕುಲ್ ಇಸ್ಲಾಂ, 'ದಾಳಿಕೋರ ಫೈಸಲ್ ಕರೀಂ ಮಸೂದ್ ಪತ್ತೆಗೆ ಪೊಲೀಸ್ ಇಲಾಖೆ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಆದರೆ, ಆತ ಇರುವ ಸ್ಥಳ ಇನ್ನೂ ಪತ್ತೆಯಾಗಿಲ್ಲ. ಗುಪ್ತಚರ ತಂಡಗಳು ಹಾಗೂ ಸೇನಾ ಪಡೆಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ' ಎಂದು ತಿಳಿಸಿದ್ದಾರೆ.

'ದಾಳಿಯು ರಾಜಕೀಯ ಕಾರಣದಿಂದ ನಡೆದಿರುವ ಸಾಧ್ಯತೆ ಮೇಲ್ನೋಟಕ್ಕೆ ಕಂಡುಬಂದಿದೆ. ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಲಾಗುವುದು' ಎಂದು ಪತ್ತೇದಾರಿ ವಿಭಾಗದ ಮುಖ್ಯಸ್ಥ ಶಫೀಕುಲ್ ಇಸ್ಲಾಂ ತಿಳಿಸಿದ್ದಾರೆ. 12

'ಮುಖ್ಯಮಂತ್ರಿ: ರಾಹುಲ್ ತೀರ್ಮಾನಿಸಲಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ನಾಯಕತ್ವ ಬದಲಾವಣೆ ಕುರಿತು ಪಕ್ಷದ ನಾಯಕ ರಾಹುಲ್ ಗಾಂಧಿ ತೀರ್ಮಾನಿಸಬೇಕು. ಅವರು ಕೈಗೊಳ್ಳುವ ನಿರ್ಧಾರಕ್ಕೆ ನಾವು ಬದ್ಧ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ತಿಳಿಸಿದರು.

ಸೋಮವಾರ ಇಲ್ಲಿ ಪತ್ರಕರ್ತ-ರೊಂದಿಗೆ ಮಾತನಾಡಿದ ಅವರು, 'ನಾನು ಈ ಕುರಿತು ಪಕ್ಷದ ವರಿಷ್ಠರ ಜೊತೆಗೆ ಮಾತನಾಡಿದ್ದೇನೆ. ತೀರ್ಮಾನ ಮಾಡುವುದಾಗಿ ಹೇಳಿದ್ದಾರೆ. ಅಲ್ಲಿಗೆ ಎಲ್ಲವೂ ಮುಗಿಯಿತು' ಎಂದರು.

'ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಹೇಳಿಕೆ ಒಪ್ಪಬೇಕಾದ ವಿಚಾರ. ಪಕ್ಷಕ್ಕಿಂತ ಯಾರೂ ದೊಡ್ಡವರಾಗಲು ಸಾಧ್ಯವೇ ಇಲ್ಲ' ಎಂದು ಹೇಳಿದರು. 9

> **ನಾಯಕತ್ವ ಬದಲಾವಣೆ ಕುರಿತು ಮಾಧ್ಯಮಗಳಲ್ಲೇ ಹೆಚ್ಚು ಚರ್ಚೆಯಾಗುತ್ತಿದೆ. ವಿಧಾನಸಭೆಯಲ್ಲಿ ಹೇಳಿದ ಮೇಲೂ ಈ ಬಗ್ಗೆ ಚರ್ಚಿಸುವ ಅಗತ್ಯವಿಲ್ಲ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ನಮ್ಮಲ್ಲಿ ಯಾವುದೇ ಸಮಸ್ಯೆ ಇಲ್ಲದಿರುವಾಗ ಬಗೆಹರಿಸಿಕೊಳ್ಳುವಂಥದ್ದು ಏನಿದೆ? ಸಮಸ್ಯೆ ಸೃಷ್ಟಿ ಮಾಡುತ್ತಿರುವವರು ನೀವೇ (ಮಾಧ್ಯಮಗಳು)**
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಸೂರ್ಯೋದಯ: 6:37 ಸೂರ್ಯಾಸ್ತ : 5:59 ಚಂದ್ರೋದಯ: ಬೆ. 8:25 ಚಂದ್ರಾಸ್ತ: ರಾ. 8:00 | ಸೋಮವಾರದ ಉಷ್ಣಾಂಶ : ಗರಿಷ್ಠ 26° ಕನಿಷ್ಠ 15°
ಮಂಗಳವಾರದ ಉಷ್ಣಾಂಶ 26° ಗರಿಷ್ಠ 15° ಕನಿಷ್ಠ | ಬುಧವಾರ 27° : 16° | ಗುರುವಾರ 27° : 16° | ಶುಕ್ರವಾರ 28° : 16°
ಮಂಗಳವಾರ • ಡಿಸೆಂಬರ್ 23, 2025
ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ.

ಮಾರ್ಚ್ ವೇಳೆಗೆ 5 ಕಿ.ಮೀ ಬಫರ್ ರಸ್ತೆ

ಕೋರಮಂಗಲದಿಂದ ಸರ್ಜಾಪುರವರೆಗಿನ ರಸ್ತೆ ಕಾಮಗಾರಿ ಪೂರ್ಣ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದಿಂದ ಸರ್ಜಾಪುರವರೆಗಿನ 5.50 ಕಿ.ಮೀ ಉದ್ದದ ರಾಜಕಾಲುವೆ ಪಕ್ಕದ ಬಫರ್ ರಸ್ತೆ ಕಾಮಗಾರಿ ಮುಂದಿನ ವರ್ಷದ ಮಾರ್ಚ್ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ರಾಜಕಾಲುವೆ ಪಕ್ಕದಲ್ಲಿ 'ಸಂಚಾರ ಯುಕ್ತ' ಯೋಜನೆಯಡಿ ಬಫರ್ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಶಿವಕುಮಾರ್ ಅವರು ಸೋಮವಾರ ಪರಿಶೀಲನೆ ನಡೆಸಿ, ಮಾತನಾಡಿದರು.

'ಬಫರ್ ರಸ್ತೆಗಳು ಬೆಂಗಳೂರಿನ ಪಾಲಿಗೆ ಇತಿಹಾಸ ಸೃಷ್ಟಿ ಮಾಡಲಿವೆ. ಕೆರೆಗಳು ಹಾಗೂ ರಾಜಕಾಲುವೆ ಪಕ್ಕದಲ್ಲಿರುವ ಬಫರ್ ವಲಯದಲ್ಲಿ ರಸ್ತೆ ನಿರ್ಮಾಣ ಮಾಡಿ ಸಂಚಾರ ದಟ್ಟಣೆ ನಿಯಂತ್ರಣ ಮಾಡಲು ಮುಂದಾಗಿದ್ದೇವೆ. ಮೊದಲ ಹಂತದಲ್ಲಿ 300 ಕಿ.ಮೀ ಉದ್ದದ ರಸ್ತೆ ನಿರ್ಮಿಸಲು ಮಾರ್ಗ ಗುರುತಿಸಲಾಗಿದೆ' ಎಂದು ಮಾಹಿತಿ ನೀಡಿದರು.

'ಕೋರಮಂಗಲದಿಂದ ಬೆಳ್ಳಂದೂರಿನವರೆಗೆ ಬಫರ್ ರಸ್ತೆ ಸಾಗಲಿದೆ. ಮಿಲಿಟರಿಯವರು ಈ ಭಾಗದಲ್ಲಿ ರಸ್ತೆ ನಿರ್ಮಾಣಕ್ಕೆ ಜಾಗ ನೀಡಿದ್ದಾರೆ. ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಮನವಿ ಮಾಡಿದ್ದೆವು. ಅವರು ಸದ್ಯಕ್ಕೆ ಕೆಲಸ ಮಾಡಿಕೊಳ್ಳಿ ಎಂದು ಅನುಮತಿ ನೀಡಿದ್ದಾರೆ. ಈ ಹೊಸ ರಸ್ತೆ ನಿರ್ಮಾಣದಿಂದ ಸುಮಾರು 10 ಕಿ.ಮೀ. ನಷ್ಟು ಪ್ರಯಾಣ ಕಡಿಮೆಯಾಗಲಿದೆ' ಎಂದು ತಿಳಿಸಿದರು.

'ಈ ಬಫರ್ ರಸ್ತೆಗಳಲ್ಲಿ ಬಸ್, ಲಾರಿಯಂತಹ ಭಾರಿ ಗಾತ್ರದ ವಾಹನಗಳ ಸಂಚಾರಕ್ಕೆ ಅವಕಾಶವಿರುವುದಿಲ್ಲ. ಬೈಕ್, ಕಾರುಗಳ ಓಡಾಟಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗುವುದು. ಭಾರಿ ವಾಹನಗಳಿಂದ ರಸ್ತೆ ಕುಸಿಯುವ ಸಮಸ್ಯೆಯಾಗಬಾರದು ಎಂದು ಈ ತೀರ್ಮಾನ ಮಾಡಿದ್ದೇವೆ' ಎಂದರು.

ಮೊದಲ ಹಂತದಲ್ಲಿ, ರಾಜರಾಜೇಶ್ವರಿ ನಗರ, ಐಟಿಪಿಎಲ್ ಭಾಗದಲ್ಲಿ ಕಾಮಗಾರಿ ಮಾಡುತ್ತಿದ್ದೇವೆ. ಬಫರ್ ವಲಯದಲ್ಲಿ ಯಾರಿಗೂ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡುವುದಿಲ್ಲ. ಹೀಗಾಗಿ ಜಾಗ ಕಳೆದುಕೊಳ್ಳುವವರಿಗೆ ಟಿಡಿಆರ್ ನೀಡುತ್ತಿದ್ದೇವೆ. ಇದರಿಂದ ಅವರಿಗೆ ರಕ್ಷಣೆ ಸಿಗಲಿದೆ. ಕೆಐಎಡಿಬಿ ಸೇರಿದಂತೆ ಇತರೆ ಆಸ್ತಿಗಳಿದ್ದರೆ, ಬಫರ್ ವಲಯ ರಸ್ತೆಗೆ ಜಾಗ ಬಿಟ್ಟು ಕಟ್ಟಡ ನಿರ್ಮಾಣ ಮಾಡುವಂತೆ ಸೂಚಿಸಿದ್ದೇವೆ' ಎಂದು ತಿಳಿಸಿದರು.

ಮುಖ್ಯಾಂಶಗಳು
- 'ಸಂಚಾರಯುಕ್ತ' ಯೋಜನೆಯಡಿ ಬಫರ್ ರಸ್ತೆ ನಿರ್ಮಾಣ
- ಜಾಗ ಕಳೆದುಕೊಳ್ಳುವವರಿಗೆ ಟಿಡಿಆರ್

ಕೋರಮಂಗಲದಿಂದ ಸರ್ಜಾಪುರ ವರೆಗಿನ ರಾಜಕಾಲುವೆ ಬಫರ್ ರಸ್ತೆ ಕಾಮಗಾರಿಯನ್ನು ಡಿಸಿಎಂ ಡಿ.ಕೆ. ಶಿವಕುಮಾರ್ ಪರಿಶೀಲಿಸಿದರು

'ಸುರಂಗ ರಸ್ತೆ ಟೆಂಡರ್: ಮಾಹಿತಿ ಇಲ್ಲ'

'ಸುರಂಗ ರಸ್ತೆ ನಿರ್ಮಾಣದಲ್ಲಿ ನಾವು ಯಾರಿಗೂ ಹಣ ನೀಡುವುದಿಲ್ಲ. ಗುತ್ತಿಗೆ ಪಡೆದವರೇ ಬಂಡವಾಳ ಹಾಕಿ ನಿರ್ಮಾಣ ಮಾಡಬೇಕು' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಸುರಂಗ ರಸ್ತೆ ಟೆಂಡರ್ ಅಂತಿಮಗೊಂಡಿದ್ದು, ಅದಾನಿ ಕಂಪನಿ ಕಡಿಮೆ ಬಿಡ್ ಮಾಡಿದೆಯೆ' ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ನನಗೆ ಇನ್ನೂ ಸಂಪೂರ್ಣ ಮಾಹಿತಿ ಬಂದಿಲ್ಲ. ನನಗೆ ಅಧಿಕೃತವಾಗಿ ಪತ್ರ ಬರುವವರೆಗೂ ನಾನು ಪ್ರತಿಕ್ರಿಯೆ ನೀಡುವುದಿಲ್ಲ' ಎಂದರು.

'ನಾವು ಯಾರಿಗೂ ಹಣ ನೀಡುವುದಿಲ್ಲ. ಅವರೇ ಬಂಡವಾಳ ಹಾಕಿ ಮಾಡಬೇಕು. ವಿಜಿಎಫ್ ಎಷ್ಟು ಪ್ರಮಾಣದಲ್ಲಿ ನೀಡುತ್ತೇವೆ ಎಂದು ಹೇಳಿದ್ದೇವೋ ಅಷ್ಟನ್ನೇ ನೀಡುತ್ತೇವೆ. ನಾವು ಅಂದಾಜು ಮಾಡಿರುವುದರಲ್ಲಿ ಶೇ 40ರಷ್ಟನ್ನು ಮಾತ್ರ ನೀಡುತ್ತೇವೆ. ಅದರ ಮೇಲೆ ನಾವು ನೀಡುವುದಿಲ್ಲ. ಮುಂಬೈನಲ್ಲಿ ಪ್ರತಿ ಕಿ.ಮೀ ಸುರಂಗ ರಸ್ತೆಗೆ ₹1,200 ಕೋಟಿ ವೆಚ್ಚವಾಗುತ್ತಿದೆ' ಎಂದು ತಿಳಿಸಿದರು.

'2027ಕ್ಕೆ ವಿಮಾನ ನಿಲ್ದಾಣಕ್ಕೆ ಮೆಟ್ರೊ ಸಂಚಾರ'

ಬೆಂಗಳೂರು: ಮೆಟ್ರೊ ಮಾರ್ಗಗಳನ್ನು ಹೆಚ್ಚಳ ಮಾಡಿ ವಾಹನ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ರಾಜ್ಯ ಸರ್ಕಾರ ಮುಂದಾಗಿದೆ. 2027ರ ಡಿಸೆಂಬರ್ ಒಳಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮೆಟ್ರೊ ಸಂಚಾರ ಆರಂಭಗೊಳ್ಳಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಎಂಆರ್‌ಸಿಎಲ್ ಕಚೇರಿಯಲ್ಲಿ ಮೆಟ್ರೊ ಕಾಮಗಾರಿಗಳ ಕುರಿತು ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಪ್ರಸ್ತುತ ಮೆಟ್ರೊ ಜಾಲವು 96 ಕಿ.ಮೀ. ಹೊಂದಿದೆ. 2026ರಲ್ಲಿ 41 ಕಿ.ಮೀ ಉದ್ದದ ಮಾರ್ಗಗಳಲ್ಲಿ ಮೆಟ್ರೊ ಕಾರ್ಯಾರಂಭ ಮಾಡಲಿದೆ. 2027ರಲ್ಲಿ 38 ಕಿ.ಮೀ. ಸೇರ್ಪಡೆಗೊಳ್ಳಲಿದೆ. ಗುಲಾಬಿ ಮತ್ತು ನೀಲಿ ಮಾರ್ಗಗಳ ಸೇರ್ಪಡೆಯಿಂದ ಬೆಂಗಳೂರಿನಲ್ಲಿ ಒಟ್ಟು 175 ಕಿ.ಮೀ ಉದ್ದದ ಮೆಟ್ರೊ ಮಾರ್ಗಗಳು ಕಾರ್ಯನಿರ್ವಹಿಸಲಿವೆ ಎಂದು ವಿವರಿಸಿದರು.

'ಇದರ ಹೊರತಾಗಿ ಮಾಗಡಿ ರಸ್ತೆಯಲ್ಲಿ ತಾವರಕೆರೆವರೆಗೆ, ಹೊಸಕೋಟೆ, ಬಿಡದಿ, ನೆಲಮಂಗಲದವರೆಗೆ ಮೆಟ್ರೊ ವಿಸ್ತರಿಸುವ ಯೋಜನೆ ಹಮ್ಮಿಕೊಂಡಿದ್ದೇವೆ. ಒಂದು ಕಡೆ ಯೋಜನೆ ಕೈಗೆತ್ತಿಕೊಂಡಿದ್ದು, ಉಳಿದ ಕಡೆಗಳಲ್ಲಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದೆ' ಎಂದು ತಿಳಿಸಿದರು.

'ಈ ವರ್ಷ ಆರಂಭಗೊಂಡಿರುವ ಹಳದಿ ಮಾರ್ಗದಲ್ಲಿ ದಿನಕ್ಕೆ ಸರಾಸರಿ 1 ಲಕ್ಷ ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ಮುಂದಿನ ತಿಂಗಳು ಮೆಟ್ರೊ ಮೂರನೇ ಹಂತದ ಯೋಜನೆಯಲ್ಲಿ ಎತ್ತರಿಸಿದ ಕಾರಿಡಾರ್ (ಡಬಲ್ ಡೆಕರ್) ಸೇರಿದಂತೆ ಸುಮಾರು 100 ಕಿ.ಮೀ ಉದ್ದದ ಮೆಟ್ರೊ ಕಾಮಗಾರಿಗೆ ಟೆಂಡರ್ ಕರೆಯಲಾಗುವುದು. ₹ 25,311 ಸಾವಿರ ಕೋಟಿ ವೆಚ್ಚದ ಈ ಕಾಮಗಾರಿಗೆ, ಜೈಕಾದಿಂದ ₹ 15,600 ಕೋಟಿ ಸಾಲ ಪಡೆಯಲಾಗುತ್ತಿದೆ. ₹ 9,700 ಕೋಟಿ ವೆಚ್ಚದ ಎತ್ತರಿಸಿದ ಕಾರಿಡಾರ್‌ಗೆ ಜನವರಿಯಲ್ಲಿ ಟೆಂಡರ್ ಕರೆಯಲಾಗುವುದು' ಎಂದು ಮಾಹಿತಿ ನೀಡಿದರು.

'ಪಿಂಚಣಿ: ಆದಾಯ ಮಿತಿ ಹೆಚ್ಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗವಿಕಲರ ವೇತನ, ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆ, ಸಂಧ್ಯಾ ಸುರಕ್ಷಾ ಯೋಜನೆ, ವಿಧವಾ ವೇತನ, ಮೈತ್ರಿ ಮತ್ತು ಮನಸ್ವಿನಿ ಸೇರಿದಂತೆ ವಿವಿಧ ಯೋಜನೆಗಳ ಅಡಿ ನೀಡುವ ಪಿಂಚಣಿಗೆ ಅರ್ಜಿ ಸಲ್ಲಿಸಲು ಇರುವ ಆದಾಯದ ಮಿತಿಯನ್ನು ₹32 ಸಾವಿರದಿಂದ ₹7 ಲಕ್ಷದವರೆಗೆ ವಿಸ್ತರಿಸಬೇಕು ಎಂದು ಪಿಂಚಣಿ ಪರಿಷತ್ತು ಆಗ್ರಹಿಸಿದೆ.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಸದಸ್ಯರಾದ ಸೌಮ್ಯಾ, ವೀರಯ್ಯ, 'ಪಿಂಚಣಿದಾರರಿಗೆ ₹32 ಸಾವಿರ ಆದಾಯ ಮಿತಿಯನ್ನು ನಿಗದಿಪಡಿಸಿ, ಅರ್ಹರಿಗೆ ಪಿಂಚಣಿ ನೀಡಲು ನಿರಾಕರಿಸಲಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ' ಎಂದು ದೂರಿದರು.

'ಅರ್ಹ ಪಿಂಚಣಿದಾರರು ಸಲ್ಲಿಸಿದ 600ಕ್ಕೂ ಹೆಚ್ಚು ಅರ್ಜಿಗಳನ್ನು ಕಂದಾಯ ಇಲಾಖೆ ಅಧಿಕಾರಿಗಳು ತಿರಸ್ಕರಿಸಿದ್ದಾರೆ. ಈ ಎಲ್ಲ ಅರ್ಜಿಗಳನ್ನು ಪುರಸ್ಕರಿಸಬೇಕು. ಪಿಂಚಣಿಗೆ ಸಂಬಂಧಿಸಿದಂತೆ ನಡೆಯುವ ಅದಾಲತ್‌ಗಳ ಕುರಿತು ಹೆಚ್ಚು ಪ್ರಚಾರ ಮಾಡಬೇಕು. ಎರಡು ತಿಂಗಳಿಗೊಮ್ಮೆ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಕುಂದು ಕೊರತೆ ಸಭೆಗಳನ್ನು ನಡೆಸಬೇಕು' ಎಂದು ಆಗ್ರಹಿಸಿದರು.

'ಇದೇ 23ರಂದು ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗುವುದು' ಎಂದರು.

ಸುದ್ದಿ 2 ನಿಮಿಷ

ಜಲಮಂಡಳಿ 'ನೀಲಿಪಡೆ': ಒಂದೇ ದಿನ 70 ಅಕ್ರಮ ಸಂಪರ್ಕ ಕಡಿತ

ಬೆಂಗಳೂರು: ಬೆಂಗಳೂರು ಜಲಮಂಡಳಿ ಆರಂಭಿಸಿರುವ ನೀಲಿಪಡೆ ಒಂದೇ ತಿಂಗಳಲ್ಲಿ 4,000ಕ್ಕೂ ಹೆಚ್ಚಿನ ಕಡೆ ತಪಾಸಣೆ ನಡೆಸಿ ನೂರಾರು ಅಕ್ರಮ ಸಂಪರ್ಕಗಳನ್ನು ಪತ್ತೆ ಹಚ್ಚಿದೆ.

ಕಳೆದ ತಿಂಗಳ 18ರಂದು ಜಲಮಂಡಳಿಯ ವಿಶೇಷ ಕಾರ್ಯಪಡೆ ಅಸ್ತಿತ್ವಕ್ಕೆ ಬಂದಿದೆ. ಡಿ.20 ರಂದು ನೀಲಿಪಡೆಯ ತಂಡಗಳು ನಗರದ ನಾಲ್ಕು ವಲಯಗಳಲ್ಲಿ 237 ಕಟ್ಟಡಗಳ ಪರಿಶೀಲನೆ ನಡೆಸಿ, ಅಕ್ರಮವಾಗಿ ನೀರು ಬಳಸುತ್ತಿದ್ದ 70 ಸಂಪರ್ಕಗಳನ್ನು ಸ್ಥಳದಲ್ಲೇ ಕಡಿತಗೊಳಿಸಲಾಗಿದೆ.

ದಕ್ಷಿಣ ವಲಯದಲ್ಲಿ ಅತಿ ಹೆಚ್ಚು ಕಾರ್ಯಾಚರಣೆ ನಡೆದಿದ್ದು, 61 ಕಟ್ಟಡಗಳ ತಪಾಸಣೆ ನಡೆಸಿ 33 ಅಕ್ರಮ ಸಂಪರ್ಕಗಳನ್ನು ಕಡಿತಗೊಳಿಸಲಾಗಿದೆ. ಪೂರ್ವ ವಲಯದಲ್ಲಿ 18, ಪಶ್ಚಿಮ ವಲಯದಲ್ಲಿ 15 ಹಾಗೂ ಉತ್ತರ ವಲಯದಲ್ಲಿ 4 ಸಂಪರ್ಕ ಕಡಿತ ಮಾಡಲಾಗಿದೆ.

'ನೀರಿನ ಕಳ್ಳತನ ಮತ್ತು ಅನಧಿಕೃತ ಸಂಪರ್ಕಗಳಿಂದ ಮಂಡಳಿಗೆ ಆಗುತ್ತಿರುವ ಆದಾಯ ಸೋರಿಕೆ ತಡೆಗಟ್ಟಲು ನೀಲಿಪಡೆ ರಚಿಸಲಾಗಿದೆ. ಅಕ್ರಮ ಸಂಪರ್ಕ ಹೊಂದಿರುವವರು ಕೂಡಲೇ ಸಕ್ರಮಗೊಳಿಸಿಕೊಳ್ಳಬೇಕು. ಇಲ್ಲದಿದ್ದರೆ ದಂಡ ಮತ್ತು ಕಾನೂನು ಕ್ರಮ ಎದುರಿಸಬೇಕಾಗುತ್ತದೆ' ಎಂದು ಮಂಡಳಿ ಅಧ್ಯಕ್ಷ ರಾಮಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಚಿರತೆ ದಾಳಿ: ಮೇಕೆ ಸಾವು

ದಾಬಸ್‌ಪೇಟೆ: ಸೋಂಪುರ ಹೋಬಳಿ ಶಿವಗಂಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುರಿಯಪ್ಪನಪಾಳ್ಯದಲ್ಲಿ ಚಿರತೆ ದಾಳಿಯಿಂದ ಮೇಕೆ ಮೃತಪಟ್ಟಿದೆ.

ಗಂಗಯ್ಯ ಎಂಬುವವರಿಗೆ ಸೇರಿದ ಮೇಕೆ ಹೊಲದಲ್ಲಿ ಮೇಯುತ್ತಿದ್ದಾಗ ಚಿರತೆ ದಾಳಿ ಮಾಡಿದೆ. 'ನಮ್ಮ ಸಿಬ್ಬಂದಿಯನ್ನು ಕಳುಹಿಸಿ ವರದಿ ಪಡೆದುಕೊಂಡಿದ್ದು, ಮೇಕೆ ಕಳೆದುಕೊಂಡ ರೈತರಿಗೆ ಸರ್ಕಾರದಿಂದ ಆನ್‌ಲೈನ್ ಮೂಲಕ ಪರಿಹಾರ ಒದಗಿಸಲಾಗುತ್ತದೆ' ಎಂದು ವಲಯ ಅರಣ್ಯಾಧಿಕಾರಿ ಮಂಜುನಾಥ್ ಹೇಳಿದರು.

ಸೀಗೇಪಾಳ್ಯ, ಕಂಬಾಳು ಗೊಲ್ಲರಹಟ್ಟಿ, ಹುರಿಯಪ್ಪನಪಾಳ್ಯ ಈ ಗ್ರಾಮಗಳು ಅರಣ್ಯದ ಅಂಚಿನಲ್ಲಿವೆ. ಕಾಡು ಪ್ರಾಣಿಗಳು ಊರಿಗೆ ನುಗ್ಗಿ ಮನುಷ್ಯರು, ಮತ್ತು ಸಾಕು ಪ್ರಾಣಿಗಳ ಮೇಲೆ ದಾಳಿ ಮಾಡುತ್ತಾ ಬಂದಿವೆ. ಕೃಷಿ ಹಾಗೂ ಹೈನುಗಾರಿಕೆಯಿಂದ ಜೀವನ ಮಾಡುತ್ತಿರುವ ಇಲ್ಲಿನ ಜನ ಜೀವನಕ್ಕೆ ಸಮಸ್ಯೆಯಾಗಿದೆ. ಕಾಡು ಪ್ರಾಣಿಗಳ ಹಾವಳಿ ತಪ್ಪಿಸಿ ಇದಕ್ಕೆ ಪರಿಹಾರ ಒದಗಿಸಬೇಕು ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಸೀಗೇಪಾಳ್ಯದ ಶ್ರೀನಿವಾಸ್ ಆಗ್ರಹಿಸಿದರು.

ಹಳದಿ ಮಾರ್ಗ: 6ನೇ ಮೆಟ್ರೊ ಸಂಚಾರ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಹಳದಿ ಮಾರ್ಗದಲ್ಲಿ ಆರನೇ ರೈಲು ಸಂಚಾರ ಡಿ.23ರಂದು ಆರಂಭಗೊಳ್ಳಲಿದೆ. ಭಾನುವಾರ ಹೊರತುಪಡಿಸಿ ಉಳಿದ ದಿನಗಳಲ್ಲಿ ಪ್ರತಿ 13 ನಿಮಿಷಕ್ಕೊಂದು ರೈಲು ಸಂಚರಿಸಲಿದೆ.

ಪಶ್ಚಿಮ ಬಂಗಾಳದ ಟಿಟಾಗಢ ರೈಲ್ ಸಿಸ್ಟಂ ಲಿಮಿಟೆಡ್ ಕಾರ್ಯಾಗಾರದಿಂದ ರವಾನೆಯಾಗಿದ್ದ ಆರನೇ ರೈಲಿನ ಆರು ಬೋಗಿಗಳು ಡಿಸೆಂಬರ್ ಮೊದಲ ವಾರದಲ್ಲಿ ಹೆಬ್ಬಗೋಡಿ ಮೆಟ್ರೊ ಡಿಪೊಗೆ ತಲುಪಿದ್ದವು. ಇನ್‌ಸ್ಪೆಕ್ಷನ್ ಬೇ ಲೈನ್‌ನಲ್ಲಿ ಆರಂಭಿಕ ಪರೀಕ್ಷೆಗಳು ನಡೆದಿದ್ದವು. ಬಳಿಕ ರಾತ್ರಿ ವೇಳೆಯಲ್ಲಿ ಪರೀಕ್ಷಾರ್ಥ ಸಂಚಾರ ನಡೆಸಲಾಗಿತ್ತು.

ಆರ್.ವಿ. ರಸ್ತೆ–ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರ ನಡುವೆ ಆಗಸ್ಟ್ 11ಕ್ಕೆ ಆರಂಭವಾಗಿರುವ ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಸದ್ಯ ಐದು ರೈಲುಗಳು ಪ್ರತಿ 15 ನಿಮಿಷಕ್ಕೊಂದು ಟ್ರಿಪ್‌ನಂತೆ ಸಂಚರಿಸುತ್ತಿವೆ. ಐಟಿ ಹಬ್ ಆಗಿರುವ ಎಲೆಕ್ಟ್ರಾನಿಕ್ ಸಿಟಿಯನ್ನು ಈ ಮಾರ್ಗ ಹಾದು ಹೋಗುತ್ತಿರುವುದರಿಂದ ನಿರೀಕ್ಷೆ ಮೀರಿ ಪ್ರಯಾಣಿಕರು ಮೆಟ್ರೊದಲ್ಲಿ ಸಂಚರಿಸುತ್ತಿದ್ದಾರೆ.

ಆರ್.ವಿ. ರಸ್ತೆ ಮತ್ತು ಬೊಮ್ಮಸಂದ್ರ ಟರ್ಮಿನಲ್ ನಿಲ್ದಾಣಗಳಿಂದ ಹೊರಡುವ ಮೊದಲ ಮತ್ತು ಕೊನೆಯ ರೈಲುಗಳ ವೇಳಾಪಟ್ಟಿಯಲ್ಲಿ ಯಾವುದೇ ಬಲಾವಣೆ ಇಲ್ಲ. ಪ್ರತಿ ಭಾನುವಾರ 15 ನಿಮಿಷಕ್ಕೊಂದು ರೈಲು ಸಂಚರಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೊತ್ತನೂರು ತಲುಪಿದ ರೈಲು: ನಮ್ಮ ಮೆಟ್ರೊ ಗುಲಾಬಿ ಮಾರ್ಗದ ಮೊದಲ ರೈಲು ಕೊತ್ತನೂರು ಡಿಪೊ ತಲುಪಿದೆ. ಇದು ಬೆಮೆಲ್‌ನಿಂದ ರವಾನೆ ಆಗಿತ್ತು. ಕಾಳೇನ ಅಗ್ರಹಾರ–ನಾಗವಾರ ನಡುವಿನ ಈ ಮಾರ್ಗದಲ್ಲಿ ಆರಂಭಿಕ ಹಂತದಲ್ಲಿ ಕಾಳೇನ ಅಗ್ರಹಾರದಿಂದ ತಾವರೆಕೆರೆ ವರೆಗಿನ ಎತ್ತರಿಸಿದ ಮಾರ್ಗದಲ್ಲಿ ಇನ್ನು ಆರು ತಿಂಗಳ ಒಳಗೆ ಸಂಚಾರ ಆರಂಭಗೊಳ್ಳಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕ್ರೀಡಾಂಗಣಕ್ಕೆ ಭೇಟಿ: ಮಾರ್ಗಸೂಚಿಗಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳ ಆಯೋಜನೆ ಸಂಬಂಧ ನಗರ ಪೊಲೀಸ್ ಕಮಿಷನರ್, ಜಿಬಿಎ ಮುಖ್ಯ ಆಯುಕ್ತರ ನೇತೃತ್ವದ ತಂಡ ಸೋಮವಾರ ಎಂ.ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿತು.

ಸುಮಾರು ಅರ್ಧ ತಾಸು ಕ್ರೀಡಾಂಗಣ ಪರಿಶೀಲಿಸಿದ ತಂಡದ ಸದಸ್ಯರು ಬಳಿಕ ಕೆಎಸ್‌ಸಿಎ ಅಧಿಕಾರಿಗಳ ಜತೆ ಸಭೆ ನಡೆಸಿದರು.

ಕೆಲ ತಿಂಗಳ ಹಿಂದೆ ನಡೆದ ಕಾಲ್ತುಳಿತ ಪ್ರಕರಣದ ಬಳಿಕ ಪೊಲೀಸ್ ಇಲಾಖೆ 17 ಅಂಶಗಳ ಸಲಹೆ, ಸೂಚನೆಗಳನ್ನು ನೀಡಿತ್ತು. ಆದರೆ, ಇವುಗಳ ಪೈಕಿ ಯಾವ ಸೂಚನೆಗಳನ್ನೂ ಪಾಲಿಸಿಲ್ಲ ಎಂದು ಪೊಲೀಸ್ ಕಮಿಷನರ್ ಬೇಸರ ವ್ಯಕ್ತಪಡಿಸಿದರು.

ಅಗ್ನಿಶಾಮಕ ದಳದ ಹಿರಿಯ ಅಧಿಕಾರಿಗಳು ಸಹ ಕೆಎಸ್‌ಸಿಎ ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಕ್ರೀಡಾಂಗಣದಲ್ಲಿ ಅಗ್ನಿ ನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ಮಾರ್ಪಾಡುಗಳ ಬಗ್ಗೆ 2022ರಲ್ಲೇ ಸಲಹೆ ನೀಡಲಾಗಿತ್ತು ಆದರೆ, ಈವರೆಗೂ ಯಾವುದೇ ಕ್ರಮಕೈಗೊಂಡಿಲ್ಲ. ಕಾಲ್ತುಳಿತದಂತಹ ಅವಘಡ ನಡೆದರೂ ಎಚ್ಚೆತ್ತುಕೊಂಡಿಲ್ಲ. ಕಾಲ್ತುಳಿತದ ಬದಲು ಅಗ್ನಿ ಅವಘಡ ನಡೆದಿದ್ದರೆ ಯಾರು ಹೊಣೆ ಆಗುತ್ತಿದ್ದರು? ಎಂದು ಕೆಎಸ್‌ಸಿಎ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಸಭೆಯಲ್ಲಿ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಅಗ್ನಿಶಾಮಕ ದಳದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ವಂಶಿಕೃಷ್ಣ, ಆರೋಗ್ಯ ಇಲಾಖೆ ಆಯುಕ್ತರು, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು, ಲೋಕೋಪಯೋಗಿ ಇಲಾಖೆ ಮುಖ್ಯ ಎಂಜಿನಿಯರ್ ಹಾಗೂ ಇತರೆ ಹಿರಿಯ ಅಧಿಕಾರಿಗಳು ಇದ್ದರು.

ವಿವಿಧೆಡೆ ಇಂದು ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಉಪ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ ಡಿ. 23ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆ ವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಭೀಮನಕುಪ್ಪೆ ಗ್ರಾಮ, ವಿನಾಯಕ ನಗರ, ಫೀಶ್ ಫ್ಯಾಕ್ಟರಿ, ಗೇರುಪಾಳ್ಯ ಒಂದನೇ ಮೈಲುಕಲ್ಲು, ಅಂಚೆಪಾಳ್ಯ, ಪ್ರಾವಿಡೆಂಟ್, ಹೊಸಪಾಳ್ಯ, ಕಣ್ಮಿಣಿಕೆ, ಕುಂಬಳಗೋಡು ಕೈಗಾರಿಕಾ ಪ್ರದೇಶ, ಕಂಬಿಪುರ, ಕಾರುಬೆಲೆ, ತಗಚಗುಪ್ಪೆ, ದೇವಗೆರೆ, ಗಂಗಸಂದ್ರ, ಆನೆಪಾಳ್ಯ, ದೊಡ್ಡಿಪಾಳ್ಯ, ಗೋಣಿಪುರ, ಗೊಲ್ಲಹಳ್ಳಿ, ತಿಟ್ಟೂರು, ಚಿನ್ನಕುರ್ಚಿ, ದೊಡ್ಡಬೆಲೆ.

ಟಿಸಿಎಸ್, ಹಾಲಿಡೇ ಇನ್, ಶೇಷಾದ್ರಿ ರಸ್ತೆ, ಕುರುಬರ ಸಂಘ ವೃತ್ತ, ಗಾಂಧಿನಗರ ಒಂದನೇ ಮುಖ್ಯ ರಸ್ತೆ, ಕ್ರೆಸೆಂಟ್ ರಸ್ತೆ, ಇಂಧನ ಹಾಗೂ ಗೃಹ ಸಚಿವರ ನಿವಾಸಗಳು, ವೆಸ್ಟ್ ಎಂಡ್ ಹೋಟೆಲ್, ಎಲ್‌ಎಲ್‌ಆರ್, ಬಿ.ಡಬ್ಲ್ಯು.ಎಸ್.ಎಸ್.ಬಿ, ಶಿವಾನಂದ ಉದ್ಯಾನ, ಶೇಷಾದ್ರಿಪುರ, ವಿನಾಯಕ ವೃತ್ತ, ಕುಮಾರ ಪಾರ್ಕ್ ಈಸ್ಟ್, ಕಾವೇರಿ ಭವನ, ಕಂದಾಯ ಭವನ, ಗಾಂಧಿನಗರದ ಚಿತ್ರಮಂದಿರಗಳು, ಟ್ಯಾಂಕ್ ಬಂಡ್ ರಸ್ತೆ, ಎಸ್.ಸಿ. ರಸ್ತೆ, ಕೆ.ಜಿ. ರಸ್ತೆಯ ಭಾಗ, ಲಕ್ಷ್ಮಣಪುರಿ ಪ್ರದೇಶ, ಆನಂದ ರಾವ್ ವೃತ್ತದಲ್ಲಿರುವ ಕೆಪಿಟಿಸಿಎಲ್ ಕಚೇರಿಗಳು, ರೇಸ್‌ಕೋರ್ಸ್ ರಸ್ತೆ, ಅವಿನಾಶ್ ಪೆಟ್ರೋಲ್ ಬಂಕ್ ಪ್ರದೇಶ, ವಸಂತನಗರ, ಪಿಡಬ್ಲ್ಯುಡಿ ಕಚೇರಿ ಹಾಗೂ ಪೊಲೀಸ್ ವಸತಿ ಪ್ರದೇಶ, ಬ್ರಿಗೇಡ್ ಪ್ಲಾಜಾ, ಖನಿಜ ಭವನ, ಚಾಲುಕ್ಯ ವೃತ್ತ, ಹೈ ಗ್ರೌಂಡ್ಸ್, ಮಾಧವನಗರ, ತುಳಸಿತೋಟ, ಬಿವಿಕೆ ಅಯ್ಯಂಗಾರ್ ರಸ್ತೆ, ಚಿಕ್ಕಪೇಟೆ, ಮಜೆಸ್ಟಿಕ್, ಆರ್.ಟಿ. ರಸ್ತೆ, ಮಿಲ್ಲರ್ಸ್ ರಸ್ತೆ, ಕೆ.ಆರ್. ವೃತ್ತ, ನೃಪತುಂಗ ರಸ್ತೆ, ಬನ್ನಪ್ಪ ಪಾರ್ಕ್, ಸಿ.ಟಿ. ರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು

ವಿದ್ಯುತ್ ವ್ಯತ್ಯಯ ನಾಳೆ

ವಿಜಯನಗರ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ ಡಿ. 24ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಬಸವೇಶ್ವರನಗರ, ವಿಜಯನಗರ, ಗೋವಿಂದರಾಜನಗರ, ಕಾಮಾಕ್ಷಿಪಾಳ್ಯ, ಆರ್.ಪಿ.ಸಿ. ಲೇಔಟ್, ಬಿನ್ನಿ ಲೇಔಟ್, ಪ್ರಶಾಂತನಗರ, ಎಂ.ಸಿ. ಲೇಔಟ್, ಮಾರೇನಹಳ್ಳಿ, ಹೊಸಹಳ್ಳಿ, ತಿಮ್ಮೇನಹಳ್ಳಿ, ವಿನಾಯಕ ಲೇಔಟ್, ಕಾವೇರಿಪುರ, ರಂಗನಾಥಪುರ, ಸಿಂಡಿಕೇಟ್ ಬ್ಯಾಂಕ್ ಕಾಲೋನಿ, ನಾಗರಬಾವಿ, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಎಚ್.ಬಿ. ಕಾಲೊನಿ, ಮಾಗಡಿ ಮುಖ್ಯರಸ್ತೆ, ಎಚ್.ವಿ.ಆರ್. ಲೇಔಟ್, ದಾಸರಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಕರ ವಸೂಲಿಗಾರನ ಮೇಲೆ ಕಾಡಾನೆ ದಾಳಿ

ಕನಕಪುರ: ಯಡಮಾರನಹಳ್ಳಿ ಕೆಇಬಿ ಸ್ಟೇಷನ್ ಮುಂಭಾಗದ ಸಾತನೂರು ಮುಖ್ಯ ರಸ್ತೆಯ ತಿರುವಿನಲ್ಲಿ ಸೋಮವಾರ ಬೆಳಗ್ಗೆ ಒಂಟಿ ಕಾಡಾನೆಯೊಂದು ಬೈಕ್ ಮೇಲೆ ಹೊರಟಿದ್ದ ಕರ ವಸೂಲಿಗಾರನ ಮೇಲೆ ದಾಳಿ ನಡೆಸಿದೆ.

ಅಚ್ಚಲು ಗ್ರಾಮ ಪಂಚಾಯಿತಿ ಕರ ವಸೂಲಿಗಾರ ರುದ್ರಸ್ವಾಮಿ(50) ಅವರ ತಲೆಗೆ ಆನೆ ಸೊಂಡಿಲಿನಿಂದ ಹೊಡೆದಿದ್ದರಿಂದ ಕೆಳಗೆ ಬಿದ್ದ ಅವರಿಗೆ ತಲೆ ಮತ್ತು ಮುಖಕ್ಕೆ ತೀವ್ರ ಪೆಟ್ಟಾಗಿದೆ. ತಲೆ ಮತ್ತು ಮೂಗು ಬಾಯಿಯಲ್ಲಿ ರಕ್ತ ಸೋರಿದೆ.

ಯಡಮಾರನಹಳ್ಳಿ ಗ್ರಾಮದ ರುದ್ರಸ್ವಾಮಿ ಸೋಮವಾರ ಬೆಳಗ್ಗೆ ಬೈಕಿನಲ್ಲಿ ಸಾತನೂರು ಕಡೆಗೆ ಹೋಗುತ್ತಿದ್ದಾಗ ಮುಖ್ಯ ರಸ್ತೆ ತಿರುವಿನಲ್ಲಿ ಏಕಾಏಕಿ ಆನೆ ದಾಳಿ ನಡೆಸಿದೆ. ಅಚ್ಚಲು ಬೆಟ್ಟದಲ್ಲಿದ್ದ ಆನೆ ಬೆಳಗ್ಗೆ ಮುತ್ತತ್ತಿ ಅರಣ್ಯ ಪ್ರದೇಶಕ್ಕೆ ಹೋಗುವಾಗ ಈ ಘಟನೆ ನಡೆದಿದೆ ಎನ್ನಲಾಗಿದೆ.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್ಸ್ (ಎಲ್.ಇ.ಒ.ಎಸ್.) ಪ್ರಯೋಗಾಲಯ
ಪೀಣ್ಯ, ಬೆಂಗಳೂರು - 560058. ಎಲ್.ಇ.ಒ.ಎಸ್. ನಿರ್ಮಾಣ ಮತ್ತು ನಿರ್ವಹಣಾ ವಿಭಾಗ (ಎಲ್.ಸಿ.ಎಂ.ಡಿ.)
[ದೂರವಾಣಿ : (080)-22685088, 5047, 5045, 5088, 5086, (080)-28392310]
ಸಂಕ್ಷಿಪ್ತ ಇ-ಟೆಂಡರ್ (NIET) ಆಹ್ವಾನ ಪ್ರಕಟಣೆ
ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರ ಇ-ಟೆಂಡರ್ ಆಹ್ವಾನಿಸಲಾಗಿದೆ.
ಕೆಲಸದ ಹೆಸರು : ಎನ್.ಐ.ಟಿ. ನಂ. & ದಿನಾಂಕ : ಎಲ್.ಇ.ಒ.ಎಸ್. ಕ್ಯಾಂಪಸಸ್, ಪೀಣ್ಯ, ಬೆಂಗಳೂರು – 560058 ಇಲ್ಲಿ ಐದು ವರ್ಷಗಳ ಎಲ್.ಇ.ಡಿ. [illegible] LEOS/CMG/EMW-06/2025-26; ದಿನಾಂಕ : 17-12-2025 [illegible]
ಅಂದಾಜು ವೆಚ್ಚ ರೂ.ಗಳಲ್ಲಿ 18.77 ಲಕ್ಷ; ಇ.ಎಂ.ಡಿ. ರೂ. 37,540/-; ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ : 05 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ : ತೆರೆಯುವ ದಿನಾಂಕ : 23-12-2025; ಮುಕ್ತಾಯದ ದಿನಾಂಕ : 09-01-2026.
ಆಸಕ್ತ ಟೆಂಡರ್‌ಗಳು ಅರ್ಹತಾ ಮಾನದಂಡಗಳು ಮತ್ತು ಇತರ ವಿವರಗಳಿಗಾಗಿ ದಯವಿಟ್ಟು ವೆಬ್‌ಸೈಟ್ : www.isro.gov.in ನಲ್ಲಿ ವಿವರವಾದ ಇ-ಟೆಂಡರ್ ಆಹ್ವಾನ ಸೂಚನೆ (NIET) ಅನ್ನು ನೋಡಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/-
ಸಮೂಹ ನಿರ್ದೇಶಕರು
ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಸಿ & ಎಂ.ಜಿ.)
ಯು.ಆರ್.ಎಸ್.ಸಿ., ಬೆಂಗಳೂರು.

ಕಾಂಡ ಕೋಶ ವಿಜ್ಞಾನ ಮತ್ತು ಪುನರುತ್ಪಾದಕ ಔಷಧ ಸಂಸ್ಥೆ (ಬ್ರಿಕ್-ಇನ್‌ಸ್ಟೆಮ್)
(ಭಾರತ ಸರ್ಕಾರದ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ, ಜೈವಿಕ ತಂತ್ರಜ್ಞಾನ ಇಲಾಖೆಯ, ಜೈವಿಕ ತಂತ್ರಜ್ಞಾನ ಸಂಶೋಧನೆ ಮತ್ತು ಆವಿಷ್ಕಾರ ಪರಿಷತ್ ಅಡಿಯಲ್ಲಿನ ಒಂದು ಸ್ವಾಯತ್ತ ಸಂಸ್ಥೆ)
ಜಿಕೆವಿಕೆ ಅಂಚೆ, ಬಳ್ಳಾರಿ ರಸ್ತೆ, ಬೆಂಗಳೂರು-560065. ಫೋನ್: 080-61948217 (www.instem.res.in)
ಜಾಹೀರಾತು ಸಂ.: ಬ್ರಿಕ್-ಇನ್‌ಸ್ಟೆಮ್/02/2025
ಕಾಂಡ ಕೋಶ ವಿಜ್ಞಾನ ಮತ್ತು ಪುನರುತ್ಪಾದಕ ಔಷಧ ಸಂಸ್ಥೆ (ಬ್ರಿಕ್-ಇನ್‌ಸ್ಟೆಮ್) ಇಲ್ಲಿನ ಕೆಳಕಂಡ ವಿಜ್ಞಾನ ವೃಂದದ ಹುದ್ದೆಗಳನ್ನು ನೇರ ನೇಮಕಾತಿ ಆಧಾರದಲ್ಲಿ, ಇಲ್ಲವಾದಲ್ಲಿ ಡೆಪ್ಯುಟೇಶನ್/ಅಬ್ಸಾರ್ಪ್ಷನ್ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು, ಸೂಕ್ತ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗಳಿಗೆ, ಬೆಂಗಳೂರಿನಲ್ಲಿನ ಕೇಂದ್ರೀಯ ಸ್ವಾಯತ್ತ ಸಂಸ್ಥೆಗಳಿಗೆ ನಿಯೋಜನೆಗೊಳ್ಳುವ ಅಭ್ಯರ್ಥಿಗಳಿಗೆ ಅನ್ವಯವಾಗುವ ಎಲ್ಲಾ ಅರ್ಹ ಭತ್ಯೆಗಳು ಲಭ್ಯವಿರುತ್ತವೆ.

ಕ್ರ. ಸಂ.	ಹುದ್ದೆ ಸಂಕೇತ	ಹುದ್ದೆಯ ಹೆಸರು	ವೇತನ ಶ್ರೇಣಿ ಹಂತ (7ನೇ ಸಿಪಿಸಿ ಪ್ರಕಾರ)	ಪ್ರವರ್ಗ	ಖಾಲಿ ಹುದ್ದೆಗಳ ಸಂಖ್ಯೆ
1	02/25	ಸೀನಿಯರ್ ಪ್ರೊಫೆಸರ್ (ಸೈಂಟಿಸ್ಟ್-ಹೆಚ್)	ಪಿಎಲ್–15	ಅನ್‌ರಿಸರ್ವ್ಡ್ (ಯುಆರ್)	02 (ಎರಡು)
2	03/25	ಸೀನಿಯರ್ ಪ್ರೊಫೆಸರ್ (ಸೈಂಟಿಸ್ಟ್-ಹೆಚ್)	ಪಿಎಲ್–15	ಒಬಿಸಿ (ಎನ್‌ಸಿಎಲ್)	01 (ಒಂದು)
3	04/25	ಪ್ರೊಫೆಸರ್/ಇನ್ವೆಸ್ಟಿಗೇಟರ್ (ಸೈಂಟಿಸ್ಟ್–ಜಿ)	ಪಿಎಲ್–14	ಅನ್‌ರಿಸರ್ವ್ಡ್ (ಯುಆರ್)	03 (ಮೂರು)
4	05/25	ರೀಡರ್/ಅಸಿಸ್ಟೆಂಟ್ ಪ್ರೊಫೆಸರ್/ ಅಸಿಸ್ಟೆಂಟ್ ಇನ್ವೆಸ್ಟಿಗೇಟರ್ (ಸೈಂಟಿಸ್ಟ್–ಇ)	ಪಿಎಲ್–13	ಒಬಿಸಿ (ಎನ್‌ಸಿಎಲ್)	01 (ಒಂದು)
5	06/25	ರೀಡರ್/ಅಸಿಸ್ಟೆಂಟ್ ಪ್ರೊಫೆಸರ್/ ಅಸಿಸ್ಟೆಂಟ್ ಇನ್ವೆಸ್ಟಿಗೇಟರ್ (ಸೈಂಟಿಸ್ಟ್–ಇ)	ಪಿಎಲ್–13	ಷೆಡ್ಯೂಲ್ಡ್ ಟ್ರೈಬ್ (ಎಸ್.ಟಿ)	01 (ಒಂದು)
6	07/25	ಫೆಲೋ ಇ (ಸೈಂಟಿಸ್ಟ್–ಡಿ)	ಪಿಎಲ್–12	ಅನ್‌ರಿಸರ್ವ್ಡ್ (ಯುಆರ್)	01 (ಒಂದು)
				ಒಟ್ಟು	09 (ಒಂಬತ್ತು)

ಸಂಪೂರ್ಣ ಜಾಹೀರಾತಿಗಾಗಿ, ಅರ್ಜಿ ಸಲ್ಲಿಸುವ ವಿಧಾನ ತಿಳಿಯಲು, ಇನ್ನಿತರ ನಿಬಂಧನೆಗಳಿಗಾಗಿ ಹಾಗೂ ಕ್ರಮಾನುಗತ ಪರಿಷ್ಕರಣೆಗಳು/ತಿದ್ದುಪಡಿಗಾಗಿ https://www.instem.res.in/facultypositions/ ವೆಬ್‌ಸೈಟ್‌ಗೆ ಭೇಟಿ ಕೊಡಿ. ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 15.01.2026.
ನಿರ್ದೇಶಕರು
ಬ್ರಿಕ್-ಇನ್‌ಸ್ಟೆಮ್
CBC 36304/12/0002/2526

ರೈಲ್ವೆ ಸಚಿವಾಲಯ
(ನೈಋತ್ಯ ರೈಲ್ವೆ ನಿರ್ಮಾಣ ಸಂಸ್ಥೆ)
ಅಧಿಸೂಚನೆ
ಬೆಂಗಳೂರು, 11 ಡಿಸೆಂಬರ್, 2025

ಎಸ್.ಓ. 5748(ಅ) -- ರೈಲ್ವೆ ಕಾಯ್ದೆ–1989 (1989 ರ 24)ರ ಕಲಂ 20ಎ ರಡಿ, ಕೇಂದ್ರ ಸರ್ಕಾರವು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ "ವಿಶೇಷ ರೈಲ್ವೆ ಯೋಜನೆಯ ಲೆವೆಲ್ ಕ್ರಾಸಿಂಗ್ ಸಂಖ್ಯೆ: 44 (ಹೆಗ್ಗೆರೆ ಗೇಟ್) ರ ತುಮಕೂರು – ಮಲ್ಲಸಂದ್ರ ನಡುವೆ ಚೈನೇಜ್:75/300–400 ರಲ್ಲಿ ಮೆಲ್ಸೇತುವೆ ಮತ್ತು ಕೆಳಸೇತುವೆ ನಿರ್ಮಾಣ ಸಂಬಂಧ ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿ ಸದರಿ ಅಧಿಸೂಚನೆ ಘೋಷಿಸಿರುತ್ತದೆ.

ಸದರಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಆಸ್ತಕಿಯುಳ್ಳವರು ತಮ್ಮಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 30 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ರೈಲ್ವೆ ಕಾಯ್ದೆ–1989ರ ಕಲಂ 20ಡಿ(1) ರಂತೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇ ಮಾಡಲಾಗುವುದು.

ಅಂತಹ ಆಕ್ಷೇಪಣೆಗಳನ್ನು ಲೆವೆಲ್ ಕ್ರಾಸಿಂಗ್ ಸಂಖ್ಯೆ 44 (ಹೆಗ್ಗೆರೆ ಗೇಟ್)ರ ತುಮಕೂರು – ಮಲ್ಲಸಂದ್ರ ನಡುವೆ ಚೈನೇಜ್:75/300–400 ರಲ್ಲಿ ಮೆಲ್ಸೇತುವೆ ಮತ್ತು ಕೆಳಸೇತುವೆ ನಿರ್ಮಾಣ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ, ತುಮಕೂರು–ರಾಯದುರ್ಗ ಹಾಗೂ ತುಮಕೂರು–ದಾವಣಗೆರೆ ರೈಲ್ವೆ ಯೋಜನೆ, ತುಮಕೂರು ರವರಿಗೆ ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಿ ಸಲ್ಲಿಸಿದ್ದ ಆಕ್ಷೇಪಣೆಗಳನ್ನು ವಿಚಾರಣೆ ನಡೆಸಿ, ಮುಂದಿನ ಕ್ರಮ ವಹಿಸಲಾಗುವುದು.

ಸಕ್ಷಮ ಪ್ರಾಧಿಕಾರವು ರೈಲ್ವೆ ಕಾಯ್ದೆ–1989 ರ ಕಲಂ 20ಡಿ(2) ರಂತೆ ನೀಡಿರುವ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಗೆ ಸಂಬಂಧಿಸಿದ ನಕ್ಷೆ ಹಾಗೂ ಜಮೀನಿನ ವಿವರಗಳನ್ನು ಸಕ್ಷಮ ಪ್ರಾಧಿಕಾರ ವಿಶೇಷ ಭೂಸ್ವಾಧೀನಾಧಿಕಾರಿ, ತುಮಕೂರು–ರಾಯದುರ್ಗ ಹಾಗೂ ತುಮಕೂರು – ದಾವಣಗೆರೆ ರೈಲ್ವೆ ಯೋಜನೆ, ತುಮಕೂರು ರವರ ಕಾರ್ಯಾಲಯದಲ್ಲಿ ಪರಿಶೀಲಿಸಬಹುದು.

ಅನುಸೂಚಿ
ಲೆವೆಲ್ ಕ್ರಾಸಿಂಗ್ ಸಂಖ್ಯೆ 44 (ಹೆಗ್ಗೆರೆ ಗೇಟ್)ರ ತುಮಕೂರು – ಮಲ್ಲಸಂದ್ರ ನಡುವೆ ಚೈನೇಜ್:75/300–400 ರಲ್ಲಿ ಮೆಲ್ಸೇತುವೆ ಮತ್ತು ಕೆಳಸೇತುವೆ ನಿರ್ಮಾಣ ಸಂಬಂಧಿಸಿದ ಜಮೀನಿನ ವಿವರ ಈ ಕೆಳಕಂಡಂತಿದೆ.
ಜಿಲ್ಲೆ: ತುಮಕೂರು | ತಾಲೂಕು: ತುಮಕೂರು
ಹೋಬಳಿ: ಉರ್ಡಿಗೆರೆ | ಗ್ರಾಮ: ಹೆಗ್ಗೆರೆ

ಕ್ರ. ಸಂ.	ಸ. ನಂ.	ಭೂಮಾಲೀಕರ ಹೆಸರು	ಭೂ ಸ್ವಾಧೀನ ವಿಸ್ತೀರ್ಣ (ಎಕರೆಗಳಲ್ಲಿ – ಗುಂಟಾಗಳಲ್ಲಿ) ಒಟ್ಟು (A-G)	ಎ ಖರಾಬು (A-G)	ಬಿ ಖರಾಬು (A-G)	ಬಾಕಿ (A-G)	ತರಹೆ
1	8/1ಅ	ಮೊಹಮದ್ದೀನ್ ಖಾನ್, ರಹಮತುನ್ನಿಸಾ ಕೋಂ ಅಬ್ದುಲ್ ರೆಹಮಾನ್	0–02 1/2	–	–	0–02 1/2	ನಿವೇಶನ
2	183	ತಲವರಿಕೆ ಇನಾಂ	0–01 1/2			0–01 1/2	ಖುಷ್ಕಿ
3	184/1	ಸರ್ಕಾರಿ (ಸರ್ಕಾರಿ ಶಾಲೆ ಮತ್ತು ಕ್ಷೇತ್ರ)	0–02	–	–	0–02	ಸರ್ಕಾರಿ
4	ಗ್ರಾಮ	ಗ್ರಾಮಠಾನ	0–00 1/4	–	–	0–00 1/4	ಗ್ರಾಮಠಾನ
5	ರಸ್ತೆ	ಎನ್.ಹೆಚ್–04 ಮುಖ್ಯ ರಸ್ತೆಯಿಂದ ಕುಂಕುಮನಹಳ್ಳಿಗೆ ಹೋಗುವ ರಸ್ತೆ (ಹದ್ದಿಗಿಡಿದ ರಸ್ತೆ)	1–10	–	–	1–10	ರಸ್ತೆ
		ಒಟ್ಟು	1–16 1/4	–	–	1–16 1/4	–

ಘೋಶ್ವಾರೆ

ನಿವೇಶನ	ಖುಷ್ಕಿ	ಸರ್ಕಾರಿ	ಗ್ರಾಮಠಾನ	ರಸ್ತೆ	ಒಟ್ಟು
0-02 1/2	0-02 1/2	0-00 1/4	0-02	1-10	1-16 1/4

ನಂ. ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2025–26/ಲ್ಯಾಂಡ್ ಎಸ್‌ಆರ್‌ಪಿ/1727
(ಪ್ರದೀಪ್ ಪುರಿ)
ಮುಖ್ಯ ಇಂಜಿನೀಯರ್-III/ನಿರ್ಮಾಣ/ಸಾಮಾನ್ಯ
ನೈಋತ್ಯ ರೈಲ್ವೆ, ಬೆಂಗಳೂರು ಕಂಟೋನ್ಮೆಂಟ್
PUB/755/AAF/PRB/SWR/2025-26
South Western Railway - SWR | SWRRLY | SWRAILWAYHQ | sw_railways

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಚಿಕ್ಕಬಳ್ಳಾಪುರ–562 101 ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427
ಇಮೇಲ್ : eemidcbpura@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:20/2025–26/ದಿನಾಂಕ: 18/12/2025
ಸಂಖ್ಯೆ : ಕಾಸಬ/ಸ.ನೀ ಮತ್ತು ಅ.ಅ.ವಿ/ಚಿ.ಪುರ/ತಾಂಶಾ/ತಾಂಸ/ಟೆಂಡರ್ ಪ್ರಕಟಣೆ / ../2025–26ದಿನಾಂಕ :
[illegible] www.kppp.karnataka.gov.in [illegible]
ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಕರ್ನಾಟಕ ಸರ್ಕಾರ
ಕರ್ನಾಟಕ ಮೋಟಾರು ರಹಿತ ಸಾರಿಗೆ ಸಂಸ್ಥೆ
ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027, ದೂರವಾಣಿ : 080-22226627/6628,
ಫ್ಯಾಕ್ಸ್ : 080-22226630, ಈಮೇಲ್ : dultbangalore@gmail.com, dult@karnataka.gov.in
ಸಂಖ್ಯೆ: KNMTA-ACT/1/2024 ದಿನಾಂಕ : 22.12.2025
ಪ್ರಕಟಣೆ
ಕರ್ನಾಟಕ ಮೋಟಾರು ರಹಿತ ಸಾರಿಗೆ ಸಂಸ್ಥೆಯ ಹೆಚ್ಚುವರಿ ನಿಧಿಯ ನಿರ್ವಹಣೆಗಾಗಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಂದ ಇ-ಹರಾಜು ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಇ-ಹರಾಜನ್ನು (ಉಲ್ಲೇಖ ಸಂಖ್ಯೆ: KNMTA/2025-26/AUCTION5) ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಡೆಸಲಾಗುತ್ತದೆ. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 03.01.2026, ಸಂಜೆ 5.30 ಬಿಡ್‌ದಾರರು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಹರಾಜು ದಾಖಲೆಗಳು ಮತ್ತು ವಿವರಗಳನ್ನು ಪಡೆಯಬಹುದು. https://kppp.karnataka.gov.in
ಸಹಿ/– ಮುಖ್ಯ ಕಾರ್ಯನಿರ್ವಾಹಣಾಧಿಕಾರಿ
ಕರ್ನಾಟಕ ಮೋಟಾರು ರಹಿತ ಸಾರಿಗೆ ಸಂಸ್ಥೆ
ವಾಸಾಸಂ/ಪಾತ್ರ/4616/ಎಸ್‌ಐಎಸ್/2025-26

ಭಾರತ ಸರ್ಕಾರ
ಸಾಲ ವಸೂಲಾತಿ ನ್ಯಾಯಾಧಿಕರಣ–2, ಬೆಂಗಳೂರು
ಆರ್‌ಸಿ ನಂ. 1322/2019
ಕರ್ನಾಟಕ ಬ್ಯಾಂಕ್ ಲಿ. [illegible]
ಡಿಮ್ಯಾಂಡ್ ನೋಟೀಸು
[illegible]
ಸಹಿ/– ವಸೂಲಾತಿ ಅಧಿಕಾರಿ– 1
ಸಾಲ ವಸೂಲಾತಿ ನ್ಯಾಯಾಧಿಕರಣ –2 , ಬೆಂಗಳೂರು

ಸಾರ್ವಜನಿಕ ಪ್ರಕಟಣೆ
ನಮ್ಮ ಕಕ್ಷಿದಾರರು ('ಕಕ್ಷಿದಾರರು'), ಕೆಳಕಂಡ 'ಷೆಡ್ಯೂಲ್'ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ 'ಷೆಡ್ಯೂಲ್ ಪ್ರಾಪರ್ಟಿ' ಎನ್ನಲಾಗುವ ಸ್ಥಿರಾಸ್ತಿಗೆ ಸಂಬಂಧಿಸಿದಂತೆ ವೈಜಾಗ್ ಎಜುಕೇಶನಲ್ ಇನ್‌ಸ್ಟಿಟ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ('ಮಾಲೀಕರು') ಇವರೊಂದಿಗೆ ಖರೀದಿ ವ್ಯವಹಾರ ನಡೆಸಲು [illegible]
ಶ್ರೀಮತಿ. ಬ್ರಿಜಾ ಪ್ರಕಾಶ್, ಪಾಲುದಾರರು
ಜೆ. ಸಾಗರ್ ಅಸೋಸಿಯೇಟ್ಸ್
[illegible]
ಫೋನ್ : 080-4350 3600/080-4350 3676
ಈಮೇಲ್ : brijita.prakash@jsalaw.com

ವೈದ್ಯ ವಿದ್ಯಾರ್ಥಿನಿಗೆ ₹1 ಲಕ್ಷ ಸಹಾಯಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರಿ ತಿಗಳ ನೌಕರರ/ ವೃತ್ತಿಪರರ ಸಂಘವು ಭಾನುವಾರ ನಗರದಲ್ಲಿ ಆಯೋಜಿಸಿದ್ದ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಕಾರ್ಯಕ್ರಮದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಹುಸ್ಕೂರಿನ ವೈದ್ಯ ವಿದ್ಯಾರ್ಥಿನಿ ಶಿಲ್ಪಾಶ್ರೀ ಅವರಿಗೆ ₹1 ಲಕ್ಷ ಸಹಾಯಧನ ನೀಡಲಾಯಿತು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್‌ನ ಮಾಜಿ ಸದಸ್ಯ ಪಿ.ಆರ್. ರಮೇಶ್ ಮಾತನಾಡಿ, 'ಹಿಂದುಳಿದ ವರ್ಗಗಳ ಇಲಾಖೆಯಿಂದ ₹5 ಲಕ್ಷದವರೆಗೆ ಹಣಕಾಸಿನ ನೆರವನ್ನು ಸಾಲದ ರೂಪದಲ್ಲಿ ಕೊಡಿಸುತ್ತೇನೆ. ಸಂಘವು ಇಂತಹ ಉತ್ತಮ ಕಾರ್ಯಗಳನ್ನು ಇನ್ನೂ ಹೆಚ್ಚಾಗಿ ಮಾಡಬೇಕು' ಎಂದರು.

ಸಂಘದ ಸಲಹೆಗಾರ ರಾಜ್‌ಕೃಷ್ಣಮೂರ್ತಿ ಮಾತನಾಡಿ, 'ಸಮುದಾಯದ ವಿದ್ಯಾವಂತ ನಿರುದ್ಯೋಗಿಗಳಿಗಾಗಿ ಉದ್ಯೋಗ ಮೇಳವನ್ನು ಆಯೋಜಿಸಬೇಕು. ಇದಕ್ಕಾಗಿ ವಿವಿಧ ಕಂಪನಿಗಳ ಮಾಲೀಕರೊಂದಿಗೆ ಮಾತುಕತೆ ಮಾಡಬೇಕು' ಎಂದು ಸಲಹೆ ನೀಡಿದರು.

ಸಂಘದ ಅಧ್ಯಕ್ಷ ಎಲ್.ಎ. ಮಂಜುನಾಥ್ ಮಾತನಾಡಿ, 'ಶಿಲ್ಪಾಶ್ರೀ ಅವರು ಎರಡನೇ ವರ್ಷದ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದು, ಆರ್ಥಿಕ ಸಂಕಷ್ಟದಿಂದ ವಿದ್ಯಾಭ್ಯಾಸವನ್ನು ಸ್ಥಗಿತಗೊಳಿಸಲು ನಿರ್ಧರಿಸಿದ್ದರು. ನಂತರ ಆರ್ಥಿಕ ಸಹಾಯ ನೀಡುವಂತೆ ನಮ್ಮ ಸಂಘಕ್ಕೆ ಮನವಿ ಸಲ್ಲಿಸಿದ್ದರು. ಅವರ ಮನವಿ ಪರಿಗಣಿಸಿ, ₹1 ಲಕ್ಷ ಸಹಾಯಧನ ನೀಡಲಾಗಿದೆ' ಎಂದು ತಿಳಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪಿ. ಮುನಿರಾಜಪ್ಪ, ಖಜಾಂಚಿ ರಾಜಶೇಖರ್ ಉಪಸ್ಥಿತರಿದ್ದರು.

ಚಿಟಿಕೆ ಸುದ್ದಿ

ರಜತ ಮಹೋತ್ಸವ

ಬೆಂಗಳೂರು: 'ಬಿ.ಕೆ.ಮರಿಯಪ್ಪ ವಿದ್ಯಾರ್ಥಿನಿಯರ ನಿಲಯದ ರಜತ ಮಹೋತ್ಸವ ಮತ್ತು ಸ್ನೇಹ ಸಮ್ಮಿಲನ ಸಮಾರಂಭ ಇದೇ 25ರಂದು ನಡೆಯಲಿದೆ.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿ.ಕೆ. ಮರಿಯಪ್ಪ ಧರ್ಮಸಂಸ್ಥೆಯ ವ್ಯವಸ್ಥಾಪಕ ಸಿ. ರಾಜಶೇಖರ್, 'ಚಾಮರಾಜಪೇಟೆಯ ಶಾರದಾ ಸ್ತ್ರೀ ಸಮಾಜದಲ್ಲಿ ಕಾರ್ಯಕ್ರಮ ನಡೆಯಲಿದ್ದು, ತುಮಕೂರಿನ ಸಿದ್ದಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ನಿವೃತ್ತ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರು, ಅದಮ್ಯ ಚೇತನ ಟ್ರಸ್ಟ್‌ನ ತೇಜಸ್ವಿನಿ ಅನಂತ ಕುಮಾರ್, ಸಾಹಿತಿ ಹಂ.ಪ. ನಾಗರಾಜಯ್ಯ ಮತ್ತು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

ಅಂಧರ ಸಾಹಿತ್ಯ ಸಮ್ಮೇಳನ 27ಕ್ಕೆ

ಬೆಂಗಳೂರು: ಕರ್ನಾಟಕ ಅಂಧರ ಸಾಹಿತ್ಯ ಪರಿಷತ್ತಿನಿಂದ ಇದೇ 27ರಂದು ಎಚ್‌ಎಸ್‌ಆರ್ ಬಡಾವಣೆಯಲ್ಲಿರುವ ಸಮರ್ಥನಂ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಅಂಧರ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ಮುದಿಗೆರೆ ರಮೇಶ್ ಕುಮಾರ್, 'ಆಧುನಿಕ ಕನ್ನಡ ಸಾಹಿತ್ಯಕ್ಕೆ ಅಂಧ ಬರಹಗಾರರ ಕೊಡುಗೆಗಳು, ಅಂಧತ್ವ ಮತ್ತು ಸಾಹಿತ್ಯ ಸಂಕಥನಗಳು ಎಂಬ ಗೋಷ್ಠಿಗಳು ನಡೆಯಲಿವೆ. ವಿಮರ್ಶಕಿ ಎಚ್.ಎಲ್. ಪುಷ್ಪ ಅಧ್ಯಕ್ಷತೆಯಲ್ಲಿ ಅಂಧರ ಕವಿಗೋಷ್ಠಿ ನಡೆಯಲಿದೆ' ಎಂದರು.

ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ, ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಬಂಜಗೆರೆ ಜಯಪ್ರಕಾಶ್, ಸಚಿವ ಶಿವರಾಜ ತಂಗಡಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಕವಿ ಎಲ್. ಹನುಮಂತಯ್ಯ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಕೆಎಸ್‌ಆರ್‌ಟಿಸಿ ಫ್ಲೈ ಬಸ್ಸಿನ ಒಳಾಂಗಣ ನೋಟ

ವಿಮಾನದೊಳಗಿನ ಸೌಲಭ್ಯ ಈಗ ಫ್ಲೈಬಸ್‌ನಲ್ಲೂ ಲಭ್ಯ

ಬಸ್ ಒಳಗೆ ಶೌಚಾಲಯದ ವ್ಯವಸ್ಥೆ • ಪ್ರಯಾಣದ ವೇಳೆ ಲಘು ಉಪಾಹಾರ ವಿತರಣೆ

ಕೆಎಸ್‌ಆರ್‌ಟಿಸಿ ಫ್ಲೈ ಬಸ್ ಪ್ರಜಾವಾಣಿ ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಪ್ರಯಾಣಿಕರಿಗೆ ವಿಮಾನಯಾನದ ಅನುಭವವು ಬಸ್‌ನಲ್ಲಿಯೂ ಸಿಗಬೇಕು ಎಂಬ ಕಾರಣಕ್ಕೆ ಶೌಚಾಲಯದ ವ್ಯವಸ್ಥೆ, ಪ್ರಯಾಣದ ಮಧ್ಯೆ ತಿಂಡಿ ಪೊಟ್ಟಣ ನೀಡುವ ವ್ಯವಸ್ಥೆ ಇನ್ನಿತರ ಆಧುನಿಕ ಸೌಲಭ್ಯಗಳನ್ನು ಒದಗಿಸಿರುವ ಕೆಎಸ್‌ಆರ್‌ಟಿಸಿ ಫ್ಲೈಬಸ್ ಈಗ ವಿಶೇಷ ಆಕರ್ಷಣೆಗೆ ಒಳಗಾಗಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ (ಕೆಐಎ) ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಗೆ ಸಂಚರಿಸುವವರು ಫ್ಲೈಬಸ್‌ಗಳಿಗೆ ಆದ್ಯತೆ ನೀಡುತ್ತಿದ್ದಾರೆ.

ಕೆಐಎ–ಮೈಸೂರು ನಡುವೆ ಫ್ಲೈಬಸ್‌ಗಳು 2013ರಲ್ಲಿಯೇ ಆರಂಭವಾಗಿದ್ದವು. ಆ ನಂತರ ಮಡಿಕೇರಿ ಮತ್ತು ಕುಂದಾಪುರಕ್ಕೆ ಫ್ಲೈಬಸ್ ಶುರು ಮಾಡಲಾಗಿತ್ತು. ಅದರಲ್ಲಿ ಕುರುಕಲು ತಿಂಡಿ ನೀಡುವ ವ್ಯವಸ್ಥೆ ಇರಲಿಲ್ಲ. ತಿಂಗಳ ಹಿಂದೆ ದಾವಣಗೆರೆಗೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಫ್ಲೈಬಸ್ ಶುರುವಾದಾಗ ನಂದಿನಿ ಬ್ರ್ಯಾಂಡ್‌ನ ತಿಂಡಿಯ ಪೊಟ್ಟಣವನ್ನು ಉಚಿತವಾಗಿ ನೀಡಲಾಗುತ್ತಿದೆ. ಪ್ರಯಾಣಿಕರು ಉಪಾಹಾರ ಸೇವಿಸಲು ದಾರಿ ಮಧ್ಯೆ ಬಸ್‌ಗಳನ್ನು ನಿಲ್ಲಿಸಬೇಕಾದ ಪ್ರಮೇಯ ತಪ್ಪಿದೆ.

ಆಧುನಿಕ ಬಸ್: ಫ್ಲೈಬಸ್ ಹವಾನಿಯಂತ್ರಿತವಾಗಿದ್ದು, ಉತ್ತಮ ಗುಣಮಟ್ಟದ ಮಲ್ಟಿ ಆ್ಯಕ್ಸಲ್‌ಗಳನ್ನು ಹೊಂದಿದೆ. ಇದರಿಂದ ರಸ್ತೆಯಲ್ಲಿ ಹೊಂಡ–ಗುಂಡಿಗಳಿದ್ದರೂ ಪ್ರಯಾಣಿಕರಿಗೆ ಅದರ ಅನುಭವ ಆಗದಷ್ಟು ಐಷಾರಾಮಿಯಾಗಿದೆ. ರಿಕ್ಲೈನಿಂಗ್ ಆಸನಗಳು, ಹೆಚ್ಚಿನ ಸ್ಥಳಾವಕಾಶ ಲೆಗ್‌ರೂಮ್, ಹೆಡ್‌ರೆಸ್ಟ್, ಪ್ರತಿಯೊಂದು ಆಸನದಲ್ಲಿಯೂ ಚಾರ್ಜಿಂಗ್ ಪಾಯಿಂಟ್‌ಗಳಿವೆ. ಉಚಿತವಾಗಿ ದಿನ ಪತ್ರಿಕೆಗಳನ್ನು ನೀಡಲಾಗುತ್ತಿದೆ ಎಂದು ಕೆಎಸ್‌ಆರ್‌ಟಿಸಿ ಕೇಂದ್ರ ವಿಭಾಗೀಯ ನಿಯಂತ್ರಣಾಧಿಕಾರಿ ನಾಗರಾಜಮೂರ್ತಿ ತಿಳಿಸಿದರು.

ಹ್ಯಾಟ್ ರ‍್ಯಾಕ್, ವಿದ್ಯುತ್ ದೀಪ, ಲಗೇಜು ಇರಿಸಲು ವಿಶಾಲ ಸ್ಥಳ, ಕಾರ್ಪೆಟಿಂಗ್, ಆರಾಮದಾಯಕ ಲೆದರ್ ಆಸನಗಳಿವೆ ಎಂದು ಘಟಕಾಧಿಕಾರಿ ಸುರೇಶ್ ಮಾಹಿತಿ ನೀಡಿದರು.

ಎಲ್ಲೆಲ್ಲಿ ಸಂಚಾರ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ ಒಂದು ಮತ್ತು ಎರಡರಿಂದ ಫ್ಲೈಬಸ್‌ಗಳು ಹೊರಡುತ್ತವೆ. ಮೈಸೂರು, ಮಡಿಕೇರಿ, ದಾವಣಗೆರೆಗೆ ಸಂಚರಿಸುತ್ತವೆ. ಕುಂದಾಪುರ ದೂರದ ಊರು ಆಗಿರುವುದರಿಂದ ಇಲ್ಲಿಗೆ ಸಂಚರಿಸುತ್ತಿದ್ದ ಫ್ಲೈಬಸ್‌ಗಳನ್ನು ಬದಲಾಯಿಸಲಾಗಿದೆ. ಐಷಾರಾಮಿ ಸ್ಲೀಪರ್ ಅಂಬಾರಿ ಉತ್ಸವ್ ಬಸ್‌ಗಳು ಸಂಚರಿಸುತ್ತಿವೆ. 10.30 ತಾಸು ಬೇಕಿರುವುದರಿಂದ ಕುಳಿತುಕೊಂಡು ಹೋಗುವ ಬದಲು ಮಲಗಿಕೊಂಡು ಹೋಗುವ ಬಸ್ ಒಳ್ಳೆಯದು ಎಂಬ ಕಾರಣಕ್ಕೆ ಈ ಬದಲಾವಣೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ತುರ್ತು ಸಂದರ್ಭದಲ್ಲಿ ಪ್ರಯಾಣಿಕರು ಬಸ್‌ನಿಂದ ತ್ವರಿತವಾಗಿ ಹೊರಬರಲು ಅನುಕೂಲವಾಗುವಂತೆ ಎರಡು ತುರ್ತು ಬಾಗಿಲುಗಳನ್ನು ಇಡಲಾಗಿದೆ. ಗಾಜುಗಳನ್ನು ಒಡೆದು ಬರಲು ಸುತ್ತಿಗೆ (ಹ್ಯಾಮರ್) ಇದೆ. ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡರೆ ಕೂಡಲೇ ಅಲ್ಲೇ ನಂದಿಸುವ ಸಂವೇದನಾ ತಂತ್ರಜ್ಞಾನವನ್ನು ಅಳವಡಿಸಲಾಗಿದೆ ಎಂದರು.

ಕೆಮಿಕಲ್ ಟಾಯ್ಲೆಟ್: ಫ್ಲೈಬಸ್‌ನಲ್ಲಿ ಕೆಮಿಕಲ್ ಟಾಯ್ಲೆಟ್ ಇದೆ. ಇದು ಮೂತ್ರ ವಿಸರ್ಜನೆಗೆ ಮಾತ್ರ ಬಳಸುವ ಶೌಚಾಲಯವಾಗಿದೆ. ನೀರು ಬಳಸದೇ ರಾಸಾಯನಿಕ ಬಳಸಿ ಸ್ವಚ್ಛಗೊಳಿಸಲಾಗುತ್ತದೆ. ಶೌಚಾಲಯ ಇರುವುದರಿಂದ ಬಸ್‌ಗಳನ್ನು ದಾರಿ ಮಧ್ಯೆ ನಿಲ್ಲಿಸುವುದು ತಪ್ಪಿದೆ ಎಂದು ವಿವರಿಸಿದರು.

ಫ್ಲೈಬಸ್ ಸಾರಿಗೆಗಳ ವಿವರ

9	ಮೈಸೂರಿಗೆ ಸಂಚರಿಸುವ ಬಸ್‌ಗಳು
2	ಮಡಿಕೇರಿಗೆ
2	ದಾವಣಗೆರೆಗೆ
2	ಕುಂದಾಪುರಕ್ಕೆ (ಅಂಬಾರಿ ಉತ್ಸವ)
44	ಪ್ರತಿದಿನ ಟ್ರಿಪ್
10,240	ದಿನಕ್ಕೆ ಸಂಚರಿಸುವ ಕಿ.ಮೀ.
₹90	ಪ್ರತಿ ಕಿ.ಮೀ. ಆದಾಯ
27,267	ನ.15ರಿಂದ ಡಿ.7ರವರೆಗೆ ವಿತರಿಸಿದ ತಿಂಡಿ ಪೊಟ್ಟಣಗಳು
1,180	ದಿನಕ್ಕೆ ಸರಾಸರಿ ಪ್ರಯಾಣಿಕರ ಸಂಖ್ಯೆ

ತ್ವರಿತ ಬಸ್

ವಿಮಾನಯಾನಿಗಳು ಬಸ್‌ಗಳಲ್ಲಿ ಸಂಚರಿಸಿದಾಗ ಅವರಿಗೆ ವಿಮಾನದಲ್ಲಿ ಸಂಚರಿಸಿದ ಭಾವನೆ ಕಳೆದುಹೋಗುತ್ತದೆ. ಆದರೆ, ಫ್ಲೈಬಸ್‌ಗಳಲ್ಲಿ ವಿಮಾನಯಾನದ ಅನುಭವ ಪಡೆಯಬಹುದು. ಅಲ್ಲದೇ ತಡೆರಹಿತ ಬಸ್‌ಗಳಾಗಿರುವುದರಿಂದ ವೇಗವಾಗಿ ಅವರು ತಲುಪಬೇಕಾದ ನಿಗದಿತ ಸ್ಥಳಕ್ಕೆ ಹೋಗಲು ಸಾಧ್ಯವಾಗುತ್ತದೆ. ಬೇರೆಡೆಯಿಂದ ವಿಮಾನ ನಿಲ್ದಾಣಕ್ಕೆ ಬರುವವರಿಗೂ ಸಕಾಲದಲ್ಲಿ ಬರಲು ಫ್ಲೈಬಸ್‌ಗಳು ಸೂಕ್ತವಾಗಿವೆ.

ಅಕ್ರಂ ಪಾಷ, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ

ತಿಂಡಿ ಪೊಟ್ಟಣದಲ್ಲಿ ಏನೇನಿದೆ?

ಫ್ಲೈಬಸ್‌ನಲ್ಲಿ ಉಚಿತವಾಗಿ ನೀಡುವ ತಿಂಡಿ ಪೊಟ್ಟಣದಲ್ಲಿ ಒಂದು ನೀರಿನ ಬಾಟಲ್, ನಂದಿನಿಯ ಸುವಾಸನೆಯುಕ್ತ ಹಾಲು, ಸಿಹಿ ಮತ್ತು ಖಾರ ಕುಕ್ಕೀಸ್, ಕೇಕ್, ಕೋಡುಬಳೆ ಪ್ಯಾಕೆಟ್‌ಗಳಿರುತ್ತವೆ.

ಕಿಟ್ ಅನ್ನು ಬ್ರ್ಯಾಂಡ್ ಮಾಡಲಾಗಿದೆ. ಅದರ ಹಿಂಬದಿಯಲ್ಲಿ ಕೆಎಸ್‌ಆರ್‌ಟಿಸಿಯ ಫ್ಲೈಬಸ್ ಮತ್ತು ಇತರ ಪ್ರೀಮಿಯಂ ಬಸ್‌ಗಳ ವಿವರ, ದಕ್ಷಿಣ ಭಾರತದಲ್ಲಿ ಕಾರ್ಯಾಚರಣೆ ಮಾಡುವ ಸ್ಥಳಗಳ ವಿವರ, ಟಿಕೆಟ್ ಬುಕ್ ಮಾಡಲು ಅನುವಾಗುವಂತೆ ಕ್ಯೂಆರ್ ಕೋಡ್ ಸ್ಕ್ಯಾನರ್ ಮುದ್ರಿಸಲಾಗಿದೆ.

ಕೆಐಎಯಿಂದ ಹೊರಡುವ ಬಸ್‌ಗಳ ಅಂಕಿಅಂಶ

ಎಲ್ಲಿಗೆ	ಕಿ.ಮೀ.	ಸಂಚಾರದ ಅವಧಿ	ದರ
ಮೈಸೂರು	175	3.15 ಗಂಟೆ	₹960
ದಾವಣಗೆರೆ	270	5 ಗಂಟೆ	₹1250
ಮಡಿಕೇರಿ	290	6.15 ಗಂಟೆ	₹1267
ಕುಂದಾಪುರ	430	10.30 ಗಂಟೆ	₹2297

ಪ್ರಜಾವಾಣಿ ನೋಡಿಯೊ — ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಾರ್ವಜನಿಕ ಸಾರಿಗೆ ಉತ್ತೇಜನ



ಸಾರ್ವಜನಿಕ ಸಾರಿಗೆಯನ್ನು ಉತ್ತೇಜಿಸಲು ಹೊಸ ಹೊಸ ಸೌಲಭ್ಯಗಳನ್ನು ಪ್ರಯಾಣಿಕರಿಗೆ ಒದಗಿಸುತ್ತಿದ್ದೇವೆ. ವಿಮಾನ ನಿಲ್ದಾಣದಿಂದ ನೇರವಾಗಿ ಮೈಸೂರು, ಮಡಿಕೇರಿ, ದಾವಣಗೆರೆ, ಕುಂದಾಪುರಕ್ಕೆ ಬಸ್ ವ್ಯವಸ್ಥೆ ಮಾಡಿದ್ದೇವೆ. ತಿರುಪತಿ ಮತ್ತು ಅನಂತಪುರಕ್ಕೂ ಫ್ಲೈಬಸ್‌ಗಳ ಅವಶ್ಯಕತೆ ಇದೆ. ಮುಂದೆ ಈ ಎರಡು ಸ್ಥಳಗಳಿಗೆ ಹಾಗೂ ರಾಜ್ಯದ ಕೆಲವು ಜಿಲ್ಲೆಗಳಿಗೆ ನೇರ ಬಸ್ ಕಲ್ಪಿಸುವ ಚಿಂತನೆ ಇದೆ.

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ತಿಂಡಿಯ ಮಹತ್ವ ಗೊತ್ತಾಯಿತು



ವಾರಕ್ಕೆ ಒಂದು ಬಾರಿಯಾದರೂ ವಿಮಾನದಲ್ಲಿ ಹೋಗುತ್ತಿರುತ್ತೇನೆ. ಈ ವಾರವೂ ಮುಂಬೈ ಮತ್ತು ಕೊಲ್ಲಾಪುರಕ್ಕೆ ಭೇಟಿ ಇದೆ. ಫ್ಲೈಬಸ್‌ನಲ್ಲಿ ನೀಡುತ್ತಿರುವ ತಿಂಡಿಯ ಮಹತ್ವ ನನಗೆ ಅಷ್ಟಾಗಿ ಗೊತ್ತಾಗಿರಲಿಲ್ಲ. ವಾರದ ಹಿಂದೆ ಜೈಪುರದಿಂದ ನಾವು ಕುಟುಂಬ ಸಹಿತ ಬರುತ್ತಿದ್ದೆವು. ವಿಮಾನ ಹಾರಾಟದ ಸಮಸ್ಯೆ ಉಂಟಾಗಿದ್ದರಿಂದ ಬರುವುದು ತಡವಾಯಿತು. ವಿಮಾನದಿಂದ ಇಳಿದ ಕೂಡಲೇ ತರಾತುರಿಯಲ್ಲಿ ಬಸ್ ಹತ್ತಿದೆವು. ಊಟ ಕೂಡ ಮಾಡಿರಲಿಲ್ಲ. ಬಸ್‌ನಲ್ಲಿ ನೀರು, ನಂದಿನಿಯ ಕೋಡುಬಳೆ, ಬಿಸ್ಕೆಟ್, ಕೇಕ್ ಇನ್ನಿತರ ತಿಂಡಿಗಳನ್ನು ನೀಡಿದರು. ಇದರಿಂದ ತಕ್ಷಣದ ಹಸಿವು ನೀಗಿತು. ಮೈಸೂರುವರೆಗೆ ಆರಾಮದಾಯಕವಾಗಿ ಹೋದೆವು. ಬಸ್‌ನಲ್ಲಿ ನೀಡುವ ಲಘು ಉಪಾಹಾರದ ಮಹತ್ವ ಆಗ ಗೊತ್ತಾಯಿತು.

ಡಾ. ಟಿ.ಎಸ್. ಸತ್ಯನಾರಾಯಣ ರಾವ್, ದಂತವೈದ್ಯ, ಮೈಸೂರು

ಫ್ಲೈಬಸ್‌ನಲ್ಲಿರುವ ಕೆಮಿಕಲ್ ಶೌಚಾಲಯ

ವನ್ಯಜೀವಿ ಆಂಬುಲೆನ್ಸ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವನ್ಯಜೀವಿ ಆಂಬುಲೆನ್ಸ್ ಸೇವೆಗೆ ವನ್ಯಜೀವಿ ರಾಯಭಾರಿ ಅನಿಲ್ ಕುಂಬ್ಳೆ ಚಾಲನೆ ನೀಡಿದರು.

ನಗರದಲ್ಲಿ ವನ್ಯಜೀವಿಗಳಿಗೆ ಸಮಸ್ಯೆ ಉಂಟಾದಾಗ ತುರ್ತು ಸ್ಪಂದನೆ ನೀಡಲು ಎಐ-ಆಟೋಮೋಟಿವ್ ಪ್ಲಾಟ್‌ಫಾರ್ಮ್ ಸಂಸ್ಥೆ ಟೆಕಿಯಾನ್ ಮತ್ತು ಪ್ರಾಣ ಅನಿಮಲ್ ಫೌಂಡೇಷನ್ ಜಂಟಿ ಯೋಜನೆಯಡಿ ಆಂಬುಲೆನ್ಸ್ ಸೇವೆ ಆರಂಭಗೊಂಡಿದೆ.

ನಗರ ಆವಾಸಸ್ಥಾನಗಳು ಮತ್ತು ವನ್ಯಜೀವಿಗಳು ಓಡಾಡುವ ಸ್ಥಳಗಳ ನಡುವೆ ಹೆಚ್ಚುತ್ತಿರುವ ಅತಿಕ್ರಮಣವು ಮಾನವ-ಪ್ರಾಣಿ ಸಂಘರ್ಷಕ್ಕೆ ಕಾರಣ ಆಗಿದೆ. ವನ್ಯಜೀವಿ ತುರ್ತು ಪರಿಸ್ಥಿತಿಗಳಿಗೆ ತ್ವರಿತವಾಗಿ ಮತ್ತು ಮಾನವೀಯವಾಗಿ ಸ್ಪಂದಿಸುವುದು ಇಂದಿನ ಅಗತ್ಯ. ವನ್ಯಜೀವಿಗಳು ನಗರದಲ್ಲಿ ಕಾಣಿಸಿಕೊಂಡರೆ, ಪ್ರಾಣಿ, ಪಕ್ಷಿಗಳಿಗೆ ಗಾಯವಾಗಿದ್ದರೆ ಅವುಗಳನ್ನು ಸಂರಕ್ಷಿಸುವ ಕೆಲಸವನ್ನು ಮಾಡಲಾಗುವುದು ಎಂದು ಪ್ರಾಣ ಅನಿಮಲ್ ಫೌಂಡೇಷನ್ ಸಂಸ್ಥಾಪಕಿ ಸಂಯುಕ್ತಾ ಹೊರನಾಡು ತಿಳಿಸಿದರು.

ವನ್ಯಜೀವಿಗಳಿಗೆ ತುರ್ತಾಗಿ ಸ್ಪಂದಿಸಲು ಸಿದ್ಧವಾದ ಆಂಬುಲೆನ್ಸ್

ವಲಸೆ ಹಕ್ಕಿಗಳು, ಸರೀಸೃಪಗಳು ಮತ್ತು ಮಂಗಗಳಿಂದ ಹಿಡಿದು ಸಣ್ಣ ಸಸ್ತನಿಗಳ ವರೆಗಿನ ವನ್ಯಜೀವಿಗಳ ಸಾಗಾಟಕ್ಕೆ ಸಮಸ್ಯೆಯಾಗದಂತೆ ಆಂಬುಲೆನ್ಸ್ ವಿನ್ಯಾಸಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು. ಟೆಕಿಯಾನ್ ಹಿರಿಯ ನಿರ್ದೇಶಕ ಅರವಿಂದ್ ಗೌಡ, ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸುಲು ಭಾಗವಹಿಸಿದ್ದರು. ರಕ್ಷಿಸಲಾಗುವ ಪ್ರಾಣಿಗಳನ್ನು ವೃತ್ತಿಪರ ಚಿಕಿತ್ಸೆ ಮತ್ತು ಪುನರ್ವಸತಿಗಾಗಿ ಬನ್ನೇರುಘಟ್ಟ ಜೈವಿಕ ಉದ್ಯಾನ ಅಥವಾ ಬರ್ಡ್ಸ್ ಆಫ್ ಪ್ಯಾರಡೈಸ್ ಪುನರ್ವಸತಿ ಕೇಂದ್ರಕ್ಕೆ ವರ್ಗಾಯಿಸಲಾಗುತ್ತದೆ.

ಸಹಾಯವಾಣಿ: 9108819998

'ದಾಸಸಾಹಿತ್ಯ ಪ್ರಣೀತ ಅಭ್ಯುದಯದ ಆಯಾಮಗಳು', 'ಸಮಾಜಕಾರ್ಯದ ಪಕ್ಷಿನೋಟ', 'ಮನಸ್ಸು ಮುನ್ನುಡಿ' ಕೃತಿಗಳ ಜನಾರ್ಪಣೆ ಕಾರ್ಯಕ್ರಮದಲ್ಲಿ ಗಣ್ಯರು ಭಾಗವಹಿಸಿದ್ದರು

ಮೂರು ಕೃತಿಗಳು ಜನಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಆರ್. ಗೋಪಾಲ್ ಅವರ 'ದಾಸಸಾಹಿತ್ಯ ಪ್ರಣೀತ ಅಭ್ಯುದಯದ ಆಯಾಮಗಳು' ಮತ್ತು 'ಸಮಾಜಕಾರ್ಯದ ಪಕ್ಷಿನೋಟ', ಅಶೋಕ ಆರ್. ಅವರ 'ಮನಸ್ಸು ಮುನ್ನುಡಿ' ಕೃತಿಗಳು ಜನಾರ್ಪಣೆಗೊಂಡವು.

ನಿರುತ ಪಬ್ಲಿಕೇಷನ್ಸ್, ಬೆಂಗಳೂರು ಯೂನಿವರ್ಸಿಟೀಸ್ ಸೋಶಿಯಲ್ ವರ್ಕರ್ಸ್ ಅಲುಮ್ನಿ ಅಸೋಸಿಯೇಷನ್ ಹಾಗೂ ಸಮಾಜಕಾರ್ಯ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾಲಯದ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮೈಸೂರು ವಿಶ್ವವಿದ್ಯಾಲಯ ಪ್ರಸಾರಾಂಗದ ಸಹಾಯಕ ನಿರ್ದೇಶಕ ಅನಿಲ್ ಕುಮಾರ್ ಬೊಮ್ಮಘಟ್ಟ, ಬೆಂಗಳೂರು ನಗರ ವಿಶ್ವವಿದ್ಯಾಲಯ ಸಮಾಜಕಾರ್ಯ ವಿಭಾಗದ ಅಧ್ಯಾಪಕಿ ಸುಜಾತಾ ಎಂ. ಕೃತಿಗಳನ್ನು ಪರಿಚಯಿಸಿದರು. ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಬಿ. ರಮೇಶ್, ಕೃತಿಕಾರರಾದ ಸಿ.ಆರ್. ಗೋಪಾಲ್, ಅಶೋಕ ಆರ್., ನಿರುತ ಪಬ್ಲಿಕೇಷನ್ಸ್‌ನ ರಮೇಶ್ ಎಂ.ಎಚ್, ಬರಹಗಾರರಾದ ಗೀತಾಚಾರ್ಯ, ಜಿ.ಪಿ. ನಾಯಕ, ಶೇಖರ್ ಗಣಗಲೂರು, ಸುಜಾತಾ ಪಾಲ್ಗೊಂಡಿದ್ದರು.

28ರವರೆಗೆ ಸಿಲ್ಕ್ ಇಂಡಿಯಾ 2025

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಪ್ರದಾಯಿಕ, ಆಕರ್ಷಕ, ಅಸಾಧಾರಣ ಕೈಮಗ್ಗ ಬಟ್ಟೆಗಳ 'ಸಿಲ್ಕ್ ಇಂಡಿಯಾ– 2025'ಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಪ್ರದರ್ಶನ ಮತ್ತು ಮಾರಾಟ ಡಿಸೆಂಬರ್ 28ರವರೆಗೆ ನಡೆಯಲಿದೆ.

'ನ್ಯೂ ಕ್ರಾಫ್ಟ್ಸ್ ಸಿಲ್ಕ್ ಇಂಡಿಯಾ –2025' ಜೆ.ಪಿ ನಗರ ವರ್ತುಲ ರಸ್ತೆಯ 1ನೇ ಹಂತ ಸಾರಕ್ಕಿ 15ನೇ ಅಡ್ಡರಸ್ತೆಯಲ್ಲಿರುವ ಸಿಂಧೂರ್ ಸಮಾವೇಶ ಕೇಂದ್ರದಲ್ಲಿ ಡಿ.28ರವರೆಗೆ ನಡೆಯಲಿದೆ. ಹತ್ತಿ, ರೇಷ್ಮೆ ಬಟ್ಟೆಗಳ ಆಕರ್ಷಕ ಸಂಗ್ರಹಗಳಿದ್ದು, ಕಾಶಿ (ಬನಾರಸ್), ಬಂಗಾಳ, ಗುಜರಾತ್, ರಾಜಸ್ಥಾನ, ಅಸ್ಸಾಂ, ಬಿಹಾರದ ಪಾಟಲಿಪುತ್ರ, ತೆಲಂಗಾಣ, ಮಧ್ಯಪ್ರದೇಶ, ಮಣಿಪುರ, ಜಮ್ಮು ಮತ್ತು ಕಾಶ್ಮೀರದ ಕೈಮಗ್ಗದ ಬಟ್ಟೆಗಳು ಇಲ್ಲಿ ಲಭ್ಯವಿವೆ ಎಂದು ಪ್ರಕಟಣೆ ತಿಳಿಸಿದೆ.

'ನ್ಯೂ ಕ್ರಾಫ್ಟ್ಸ್ ಸಿಲ್ಕ್ ಇಂಡಿಯಾ –2025' ಸೀರೆ ವೀಕ್ಷಿಸಿದ ಮಹಿಳೆಯರು

ಚಿತ್ರಾವಳಿ

ಜಿಆರ್‌ಎಸ್ ಸಮೂಹ ಶಿಕ್ಷಣ ಸಂಸ್ಥೆ ಹಮ್ಮಿಕೊಂಡಿದ್ದ 'ಸಂಕಲ್ಪ–2025' ಕಾರ್ಯಕ್ರಮದಲ್ಲಿ ವಾಗ್ಮಿ ಗುರುರಾಜ ಕರಜಗಿ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಶಿವರಾಮಯ್ಯ, ಕಾರ್ಯದರ್ಶಿ ಯೋಗೇಶ್, ಸಿಇಒ ರಶ್ಮಿ ಯೋಗೇಶ್, ಪ್ರಾಚಾರ್ಯ ಬಾಲಕೃಷ್ಣ, ಮುಖ್ಯ ಶಿಕ್ಷಕರಾದ ಮೊಹಮ್ಮದ್ ಸಿದ್ಧಿಕ್, ಸ್ನೇಹಾ ರಾವ್, ಕೆನಡಿಯನ್ ಪಬ್ಲಿಕ್ ಶಾಲೆಯ ಮುಖ್ಯ ಶಿಕ್ಷಕಿ ನಾಝಿಯಾ, ಕೆನಡಿಯನ್ ಕಾಲೇಜಿನ ಪ್ರಾಚಾರ್ಯ ವಿಜಯ್, ಎಸಿಟಿ ಆಪರೇಷನಲ್ ಡೈರೆಕ್ಟರ್ ಎನ್.ಎಂ. ಪಾಟೀಲ್, ಎಸಿಟಿ ಪಿಯು ನಿರ್ದೇಶಕ ವೆಂಕಟೇಶ್ ಭಾಗವಹಿಸಿದ್ದರು

ರಾಜರಾಜೇಶ್ವರಿನಗರ ಹವ್ಯಕ ಪ್ರತಿಷ್ಠಾನ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಸಂಸ್ಕೃತ ವಿದ್ವಾಂಸ ಗಣಪತಿ ಹೆಗಡೆ ಅವರಿಗೆ ಹವ್ಯಕ ಶಿರೋಮಣಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಾ. ಸೋಮೇಶ್ವರ, ಜಿ.ಎಚ್. ರಾಮಚಂದ್ರ, ಪ್ರತಿಷ್ಠಾನದ ಅಧ್ಯಕ್ಷ ಗೋಪಾಲಕೃಷ್ಣ ಹೆಗಡೆ, ಉಪಾಧ್ಯಕ್ಷ ಗಣಪತಿ ಎಸ್. ಹೆಗಡೆ, ಪ್ರಧಾನ ಕಾರ್ಯದರ್ಶಿ ಸತೀಶ್ ಮುಟಗುಪ್ಪೆ, ಉಪಾಧ್ಯಕ್ಷೆ ಅನುಪಮಾ, ಕೋಶಾಧ್ಯಕ್ಷ ರಾಮಕೃಷ್ಣ ಹೆಗಡೆ ಉಪಸ್ಥಿತರಿದ್ದರು

'25 ವರ್ಷದಲ್ಲಿ ನವ ಭಾರತ ರೂಪಿಸಲು ಉತ್ತಮ ಅವಕಾಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '2028ರ ವೇಳೆಗೆ ಭಾರತವು ಜಪಾನ್ ಮತ್ತು ಜರ್ಮನಿಯನ್ನು ಹಿಂದಿಕ್ಕಿ ವಿಶ್ವದ 3ನೇ ಅತಿದೊಡ್ಡ ಆರ್ಥಿಕತೆಯಾಗುವ ನಿರೀಕ್ಷೆಯಿದೆ. 25 ವರ್ಷದಲ್ಲಿ ನವ ಭಾರತ ರೂಪಿಸಲು ಅವಕಾಶವಿದ್ದು, ಇದನ್ನು ಸಮರ್ಥವಾಗಿ ಬಳಕೆ ಮಾಡಿಕೊಳ್ಳಿ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಸೆಂಟರ್ ಫಾರ್ ನ್ಯಾನೋ ಸೈನ್ಸಸ್ ಅಂಡ್ ಎಂಜಿನಿಯರಿಂಗ್ ವಿಭಾಗದ ಡೀನ್ ನವಕಾಂತ ಭಟ್ ಕಿವಿಮಾತು ಹೇಳಿದರು.

ಸೋಮವಾರ ನಗರದಲ್ಲಿ ನಡೆದ ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್‌ನ (ಆರ್‌ಯುಎಎಸ್) ಘಟಿಕೋತ್ಸವದಲ್ಲಿ ಮಾತನಾಡಿದರು.

'2000ರಲ್ಲಿ ವಿಶ್ವದ ಜನಸಂಖ್ಯೆಯ ಶೇ 5ಕ್ಕಿಂತ ಕಡಿಮೆ ಜನರು ಇಂಟರ್‌ನೆಟ್ ಬಳಸುತ್ತಿದ್ದರು. ಈಗ 100ರಲ್ಲಿ 70 ಜನರು ಇಂಟರ್‌ನೆಟ್ ಸಂಪರ್ಕ ಹೊಂದಿದ್ದಾರೆ. ಸ್ಮಾರ್ಟ್ ಫೋನ್, ಇಂಟರ್‌ನೆಟ್, ಸಾಮಾಜಿಕ ಮಾಧ್ಯಮ, ಡಿಜಿಟಲ್ ಬ್ಯಾಂಕಿಂಗ್ ತಂತ್ರಜ್ಞಾನದೊಂದಿಗೆ ಶಿಕ್ಷಣ ಪಡೆದವರಿಗೆ ಈಗ ಅವಕಾಶಗಳು ಹೆಚ್ಚಿವೆ' ಎಂದರು. ಅಧ್ಯಕ್ಷತೆ ವಹಿಸಿದ್ದ ಆರ್‌ಯುಎಎಸ್ ಕುಲಪತಿ ಎಂ.ಆರ್.ಜಯರಾಂ ಮಾತನಾಡಿ, 'ಉದ್ದೇಶ, ಗುರಿ ಹಾಗೂ ವೃತ್ತಿ ಬೆಳವಣಿಗೆ ಮುಂದಿಟ್ಟುಕೊಂಡು ಜ್ಞಾನ, ಪದವಿ ಪಡೆದಿದ್ದೀರಿ. ಪದವಿ ಎಂಬುದು ಕೇವಲ ಶೈಕ್ಷಣಿಕ ಗುರುತಷ್ಟೇ ಅಲ್ಲ. ಯಾರು ವಿಭಿನ್ನವಾಗಿ ಆಲೋಚನೆ ಮಾಡುತ್ತಾರೊ, ಅವರಿಗೆ ಉತ್ತಮ ಭವಿಷ್ಯ ಇದೆ' ಎಂದರು.

ಸಮ ಕುಲಾಧಿಪತಿ ಕುಲ್‌ದೀಪ್ ಕುಮಾರ್ ರೈನಾ ಮಾತನಾಡಿ, 'ಕೌಶಲ ಅಭಿವೃದ್ಧಿ ಮತ್ತು ಉದ್ಯಮ-ಆಧಾರಿತ ಪಠ್ಯಕ್ರಮದ ಮೇಲೆ ಗಮನಹರಿಸಿರುವ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್, ವಿದ್ಯಾರ್ಥಿಗಳನ್ನು ಪ್ರಾಯೋಗಿಕ ಸಾಮರ್ಥ್ಯಗಳೊಂದಿಗೆ ಸಜ್ಜುಗೊಳಿಸುತ್ತಿದೆ' ಎಂದು ತಿಳಿಸಿದರು.

ನಗರದ ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್‌ನ ವಾರ್ಷಿಕ ಘಟಿಕೋತ್ಸವದಲ್ಲಿ ಗಣ್ಯರು ಭಾಗವಹಿಸಿದ್ದರು

ಪದವಿ ಪಡೆದ ಸಂಭ್ರಮ

ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪಡೆದ ಸಡಗರ, ಪೋಷಕರು, ಸ್ನೇಹಿತರು ಕೂಡ ಸಂಭ್ರಮದಲ್ಲಿ ಭಾಗಿಯಾದರು,

ಒಟ್ಟು 2095 ಪದವಿಗಳನ್ನು ವಿತರಣೆ ಮಾಡಲಾಯಿತು. ಈ ಪೈಕಿ 50 ಪಿ.ಎಚ್ ಡಿ., 698 ಸ್ನಾತಕೋತ್ತರ ಹಾಗೂ 1347 ಪದವಿ ಹಂತದ್ದು ಪ್ರದಾನ ಮಾಡಲಾಯಿತು. ಶೈಕ್ಷಣಿಕವಾಗಿ ಅಮೋಘ ಸಾಧನೆ ತೋರಿದ ವಿದ್ಯಾರ್ಥಿಗಳಿಗೆ 107 ಪದಕಗಳನ್ನು ವಿತರಿಸಲಾಯಿತು.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

TEACHER REQUIRED for High School for Hindi and Science Contact The kenmore School Basavanagudi Ph 9901501185

REAL ESTATE SELLING

Industrial & Factory

Jigani

2300 SQ.FT plot at Jigani industrial area, clear title, 100m from main road, priced @90 Lakhs. Call 8310273250

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PERSONAL

Change of Name

CHANGE OF NAME
I, **Shrinivas Chouraddi** S/o Rangappa Chouraddi, R/at No. A3, 704, SNN Raj Greenbay Electronic City Phase-2, Bengaluru-560100, have changed my name to **SHRINIVAS R CHOURADDI** vide affidavit dated 20.12.2025 before notary B.M. Chandrashekar, Bengaluru.
Henceforth I shall be called **SHRINIVAS R CHOURADDI** only

Lost

ದಾಖಲೆಗಳು ಕಳೆದಿದೆ
ಸ್ಕೈ ಎನ್‌ಕ್ಲೇವ್, ಫ್ಲಾಟ್ ನಂ.ಟಿಎಫ್2, ಬಾಲಾಜಿ ಲೇಔಟ್, 7ನೇ ಕ್ರಾಸ್, ಮಲ್ಲತ್ತಹಳ್ಳಿ ಮುಖ್ಯರಸ್ತೆ, ಬೆಂಗಳೂರು 560056 ಇಲ್ಲಿ ವಾಸವಾಗಿರುವ ಬಿ.ಎಸ್.ಭಾಗ್ಯ ಆದ ನಾನು ನನ್ನ ಶುದ್ಧ ಕ್ರಯಪತ್ರ ಸಂಖ್ಯೆ:4217/2012 ವನ್ನು ಬಿಟಿಎಂ ಲೇಔಟ್ ನಲ್ಲಿ ಕಳೆದುಕೊಂಡಿರುತ್ತೇನೆ, ಯಾರಿಗಾದರು ಕಂಡುಬಂದಲ್ಲಿ ಸಂಪರ್ಕಿಸಿ ಮೊ: 9343383332 ಅಥವಾ ಹತ್ತಿರದ ಪೊಲೀಸ್ ಠಾಣೆಯನ್ನು ಸಂಪರ್ಕಿಸಿ.

CONNECT

ಐದೂ ನಗರ ಪಾಲಿಕೆಗಳಲ್ಲಿ ಕಪ್ಪುಬಟ್ಟೆ ಧರಿಸಿ ಕಾರ್ಯನಿರ್ವಹಿಸಿದ ಸಿಬ್ಬಂದಿ

ಮೇಣದ ದೀಪ ಹಚ್ಚಿ, ಮೌನ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ವಿಭಾಗದ ಅಧಿಕಾರಿಗಳನ್ನು ಕಾನೂನು ಬಾಹಿರವಾಗಿ ಅಮಾನತು ಮಾಡಲು ಜಿಬಿಎ ಮುಂದಾಗಿದೆ ಎಂದು ಆರೋಪಿಸಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ– ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪಾಲಿಕೆಗಳ ಸಿಬ್ಬಂದಿ ಸೋಮವಾರ ಮೌನ ಪ್ರತಿಭಟನೆ ನಡೆಸಿದರು.

ಸೋಮವಾರ ಬೆಳಿಗ್ಗೆಯಿಂದ ಐದೂ ನಗರ ಪಾಲಿಕೆಗಳಲ್ಲಿ ತೋಳಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ಪ್ರತಿಭಟನೆ ನಡೆಸಿದ ಪಾಲಿಕೆಗಳ ಸಿಬ್ಬಂದಿ, ಜಿಬಿಎ ಕೇಂದ್ರ ಕಚೇರಿ ಮುಂದೆ ಸಂಜೆ ಮೇಣದ ದೀಪ ಹಚ್ಚಿ, ಮೌನ ಪ್ರತಿಭಟನೆ ಮಾಡಿದರು.

'ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡರು ಎಂಬಂತೆ, ಅಧಿಕಾರಿ, ನೌಕರರನ್ನು ಕಾನೂನು ಬಾಹಿರವಾಗಿ ಮಟ್ಟ ಹಾಕುವುದನ್ನು ಖಂಡಿಸಿ ಮೌನ ಪ್ರತಿಭಟನೆ ಮಾಡುತ್ತಿದ್ದೇವೆ. ಕಂದಾಯ ವಿಭಾಗಕ್ಕೆ ಇಂದು ಕರಾಳ ದಿನವಾಗಿದೆ. ಸಾಂಕೇತಿಕವಾಗಿ ನಮ್ಮ ಹೋರಾಟ ಪ್ರಾರಂಭವಾಗಿದೆ' ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಹೇಳಿದರು.

'ಖಾತಾ ವಿತರಣೆ ಪ್ರಕ್ರಿಯೆಯಲ್ಲಿ ರಾಂಡ್ ರಾಬಿನ್ ಎಂಬ ಅವೈಜ್ಞಾನಿಕ ಪದ್ಧತಿಯಿಂದ ಅಧಿಕಾರಿಗಳು ಕಿರುಕುಳ ಅನುಭವಿಸುತ್ತಿದ್ದಾರೆ. ಲೋಕಾಯುಕ್ತ ತನಿಖೆ, ನ್ಯಾಯಾಲಯದಲ್ಲಿ ಪ್ರಕರಣಗಳಿರುವ ಸಂದರ್ಭದಲ್ಲಿ ಖಾತೆ ಮಾಡಲು ಬರುವುದಿಲ್ಲ. ಆದರೆ, ಅಂತಹ ಸಾವಿರಾರು ಪ್ರಕರಣಗಳಲ್ಲಿ ಖಾತೆ ಆಗಿಲ್ಲ. ಇಂತಹ ಎರಡು ಪ್ರಕರಣಗಳಲ್ಲಿ ಇಬ್ಬರ ಮೇಲೆ ದ್ವೇಷ ಸಾಧಿಸಲು ಅಮಾನತು ಮಾಡುವಂತೆ ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಹಾಗೂ ಜಂಟಿ ಆಯುಕ್ತರು ಶಿಫಾರಸು ಮಾಡಿದ್ದಾರೆ' ಎಂದು ಆರೋಪಿಸಿದರು.

'ಐದು ನಗರ ಪಾಲಿಕೆಗಳಲ್ಲಿ 12 ಸಾವಿರ ಹುದ್ದೆಗಳು ಖಾಲಿ ಉಳಿದಿವೆ. ಮೂರು ವರ್ಷಗಳಿಂದ ಸತತ ಕಿರುಕುಳ ನೀಡಲಾಗುತ್ತಿದೆ. ನಗರದ ಜನರಿಗೆ ತೊಂದರೆಯಾಗಬಾರದು ಎಂದು ಮೌನವಾಗಿ ಕಂದಾಯ ವಿಭಾಗದ ಅಧಿಕಾರಿ– ಸಿಬ್ಬಂದಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ನಮ್ಮ ತಾಳ್ಮೆ ಪರೀಕ್ಷೆ ಮಾಡಬೇಡಿ. ನಾವು ಕೆಲಸ ಮಾಡುತ್ತಿದ್ದೇವೆ, ನಮಗೆ ನ್ಯಾಯ ಕೊಡಬೇಕು, ಅಮಾನತು ಪ್ರಸ್ತಾವ ವಾಪಸ್ ಪಡೆಯಬೇಕು' ಎಂದು ಆಗ್ರಹಿಸಿದರು.

ಜಿಬಿಎ ಕೇಂದ್ರ ಕಚೇರಿ ಮುಂದೆ ಐದೂ ನಗರ ಪಾಲಿಕೆಗಳ ಸಿಬ್ಬಂದಿ ಮೇಣದ ದೀಪ ಹಚ್ಚಿ ಮೌನ ಪ್ರತಿಭಟನೆ ನಡೆಸಿದರು

‘ಜವಾಬ್ದಾರಿಯುತವಾಗಿ ಆಚರಿಸಿ’

ಸಾಮಾಜಿಕ ಜಾಲತಾಣದಲ್ಲಿ ನಗರ ಪೊಲೀಸರ ಅಭಿಯಾನ

ಪ್ರಜಾವಾಣಿ ವಾರ್ತೆ

ಸೀಮಂತ್

ಬೆಂಗಳೂರು: ಹೊಸ ವರ್ಷದ ಆಚರಣೆ ವೇಳೆ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಕ್ರಮ ಕೈಗೊಂಡಿರುವ ನಗರ ಪೊಲೀಸರು, ‘ಜವಾಬ್ದಾರಿಯುತವಾಗಿ ಆಚರಿಸಿ’ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನ ಆರಂಭಿಸಿದ್ದಾರೆ.

ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅಭಿಯಾನಕ್ಕೆ ಚಾಲನೆ ನೀಡಿ, ಕರ್ತವ್ಯ ನಿರತ ಪೊಲೀಸ್ ಅಧಿಕಾರಿ-ಸಿಬ್ಬಂದಿ ನೀಡುವ ಮಾರ್ಗಸೂಚಿ, ಸಲಹೆ-ಸೂಚನೆಗಳನ್ನು ಪಾಲಿಸಬೇಕು. ಪ್ರತಿಯೊಬ್ಬರೂ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಬೇಕು. ಡ್ರಗ್ಸ್ ಪಾರ್ಟಿ, ರೇವ್ ಪಾರ್ಟಿಗೆ ಅವಕಾಶ ಇಲ್ಲ ಎಂದು ಹೇಳಿದರು.

ಹೊಸ ವರ್ಷ

ಜನದಟ್ಟಣೆ ಉಂಟಾದಾಗ ಮೀಸಲಿಟ್ಟ ಸ್ಥಳದಲ್ಲಿ ಸಾರ್ವಜನಿಕರು ಆಶ್ರಯ ಪಡೆಯಬಹುದು. ಬಿಎಂಟಿಸಿ, ಮೆಟ್ರೊ, ಅಗ್ನಿಶಾಮಕ ಇಲಾಖೆ ಸೇರಿ ಸಂಬಂಧಪಟ್ಟ ಇಲಾಖೆಗಳ ಜತೆ ಚರ್ಚೆ ನಡೆಸಲಾಗಿದೆ. ಪಬ್, ರೆಸ್ಟೋರೆಂಟ್‌ಗಳಿಗೂ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಮಹಿಳೆ ಮತ್ತು ಮಕ್ಕಳ ಸುರಕ್ಷತೆ ಪ್ರಮುಖ ಆದ್ಯತೆಯಾಗಿದ್ದು, ಜನದಟ್ಟಣೆ ಪ್ರದೇಶದಲ್ಲಿ ತಕ್ಷಣ ಸಹಾಯಬೇಕಾದರೆ, ಕೆಎಸ್‌ಪಿ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು, ಎಸ್‌ಒಎಸ್ ಫೀಚರ್ ಬಳಸಬೇಕು. ಮಹಿಳೆಯರ ಸುರಕ್ಷತೆಗಾಗಿ ರಾಣಿ ಚೆನ್ನಮ್ಮ ಪಡೆ ನಿಯೋಜಿಸಲಾಗಿದೆ. ಹೊಯ್ಸಳ, ಚೀತಾ ವಾಹನಗಳ ಗಸ್ತು ಹೆಚ್ಚಳ ಮಾಡಲಾಗಿದೆ ಎಂದರು.

ದೂರು ನೀಡಲು ಕ್ಯೂ ಆರ್ ಕೋಡ್: ಪ್ರಯಾಣಿಕರ ಸುರಕ್ಷತೆಗಾಗಿ ಹೊಸ ವ್ಯವಸ್ಥೆಯನ್ನು ಪೊಲೀಸರು ಪರಿಚಯಿಸಿದ್ದಾರೆ. ತುರ್ತು ಸಂದರ್ಭದಲ್ಲಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನಗರ ಪೊಲೀಸರ ಸಂಪರ್ಕದ ಹಲವು ಲಿಂಕ್‌ಗಳನ್ನು ಪಡೆಯಬಹುದು. ಹೊಸ ವರ್ಷದ ಆಚರಣೆಗಳಿಗೆ ಸಂಬಂಧಿಸಿದ ವ್ಯವಸ್ಥೆ, ಸಲಹೆ ಮತ್ತು ಸೂಚನೆಗಳ ಕುರಿತು ಅಪ್‌ಡೇಟ್ ಸಿಗಲಿದೆ. ಬಸ್, ರೈಲು, ಮೆಟ್ರೊ ನಿಲ್ದಾಣ ಹಾಗೂ ಇತರೆ ಸ್ಥಳಗಳಲ್ಲಿ ಈ ಕ್ಯೂಆರ್ ಕೋಡ್ ಅಳವಡಿಸಲಾಗುತ್ತದೆ.

ಕ್ಯಾಬ್ ಪ್ರಯಾಣಿಕರ ಸುರಕ್ಷತೆಗೆ ಕ್ರಮ

ಕ್ಯಾಬ್ ಪ್ರಯಾಣಿಕರ ಸುರಕ್ಷತೆಗೆ ಕ್ರಮ ಕೈಗೊಂಡಿರುವ ನಗರ ಪೊಲೀಸರು, ಓಲಾ ಮತ್ತು ಉಬರ್ ಸಂಸ್ಥೆಗಳ ಜತೆ ಒಪ್ಪಂದ ಮಾಡಿಕೊಂಡಿದ್ದಾರೆ.

ಕ್ಯಾಬ್ ಬುಕ್ಕಿಂಗ್‌ಗೆ ಬಳಸುವ ಮೊಬೈಲ್ ಆ್ಯಪ್‌ನಲ್ಲಿ ತುರ್ತು ಕರೆ ಸೌಲಭ್ಯ ಒದಗಿಸಲಾಗಿದೆ. ತುರ್ತು ಸಂದರ್ಭದಲ್ಲಿ ಪ್ರಯಾಣಿಕರು ಮತ್ತು ಚಾಲಕರು ತಾವು ಇರುವ ಸ್ಥಳ, ಪ್ರಯಾಣದ ವಿವರ ಕುರಿತ ಮಾಹಿತಿಯನ್ನು 112ಕ್ಕೆ ಕರೆ ಮಾಡಿ ಹಂಚಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಕಮಾಂಡ್ ಸೆಂಟರ್‌ಗೆ ಮಾಹಿತಿ ತಲುಪಿದ ಕೂಡಲೇ ಸಮೀಪದ ಹೊಯ್ಸಳ ವಾಹನಕ್ಕೆ ಮಾಹಿತಿ ತಲುಪಿ, ತಕ್ಷಣವೇ ನಿಗದಿತ ಸ್ಥಳಕ್ಕೆ ತೆರಳಲಿದೆ ಎಂದು ಪೊಲೀಸರು ತಿಳಿಸಿದರು.

ಪೊಲೀಸರು ಕೈಗೊಂಡಿರುವ ಕ್ರಮಗಳು

- ಸಾರ್ವಜನಿಕರು ಮನೆಗಳಿಗೆ ತೆರಳಲು ನಮ್ಮ ಮೆಟ್ರೊ ಅವಧಿ ವಿಸ್ತರಿಸಲಾಗಿದೆ. ಬಸ್, ಆಟೊ ರಿಕ್ಷಾ, ಕ್ಯಾಬ್‌ಗಳ ಸಂಖ್ಯೆಗಳನ್ನು ಹೆಚ್ಚಿಸಲಾಗಿದೆ
- ಮಾದಕ ವಸ್ತುಗಳ ಮಾರಾಟ, ಸೇವನೆ ನಿಷೇಧಿಸಿದ್ದು, ನಿಯಮ ಉಲ್ಲಂಘಿಸಿದರೆ ಕಠಿಣ ಕಾನೂನು ಕ್ರಮಕೈಗೊಳ್ಳಲಾಗುತ್ತದೆ
- ಮದ್ಯ ಕುಡಿದು ವಾಹನ ಚಾಲನೆ ಮಾಡಬಾರದು. ಒಂದು ವೇಳೆ ಮದ್ಯ ಕುಡಿದರೆ ಕ್ಯಾಬ್ ಅಥವಾ ಸಾರ್ವಜನಿಕ ಸೇವೆ ವ್ಯವಸ್ಥೆ ಮಾಡಿಕೊಳ್ಳಬೇಕು
- ತುರ್ತು ಸಂದರ್ಭದಲ್ಲಿ 112ಕ್ಕೆ ಕರೆ ಮಾಡಬಹುದು. ಕೇವಲ 8-10 ನಿಮಿಷದಲ್ಲಿ ಹೊಯ್ಸಳ ವಾಹನ ಸಿಬ್ಬಂದಿ ಸ್ಥಳಕ್ಕೆ ಬರಲಿದ್ದಾರೆ
- ಹೆಚ್ಚು ಜನಸಂದಣಿ ಇರುವ ಸ್ಥಳದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಹಾಗೂ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಆಧಾರಿತ ಕ್ಯಾಮೆರಾಗಳ ಬಳಸಿ ನಿಗಾವಹಿಸಲಾಗುತ್ತದೆ

ಪ್ರತಿ ಬೀದಿ ನಾಯಿಗೆ ತಿಂಗಳಿಗೆ ₹3,035

ಆಶ್ರಯ ಕೇಂದ್ರಗಳಲ್ಲಿ ಪ್ರತಿ ದಿನ ಎರಡು ಬಾರಿ ಕೋಳಿ ಮಾಂಸಯುಕ್ತ ಆಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ಆದೇಶದಂತೆ ಬೀದಿ ನಾಯಿಗಳನ್ನು ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸಲು ನಿರ್ಧರಿಸಿರುವ ನಗರ ಪಾಲಿಕೆಗಳು, ಪ್ರತಿಯೊಂದು ಬೀದಿ ನಾಯಿಗೆ ತಿಂಗಳಿಗೆ ₹3,035 ವೆಚ್ಚ ಮಾಡಲು ನಿರ್ಧರಿಸಿವೆ.

ಬೀದಿ ನಾಯಿಗಳನ್ನು ಹಿಡಿದು, ಅವುಗಳನ್ನು ಆಶ್ರಯ ಕೇಂದ್ರಗಳಿಗೆ ಸಾಗಿಸಿ, ಅಲ್ಲಿ ನಿರ್ವಹಣೆ ಮಾಡಲು ಎನ್‌ಜಿಒ ಹಾಗೂ ಸಂಸ್ಥೆಗಳಿಂದ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಟೆಂಡರ್ ಆಹ್ವಾನಿಸಿದೆ.

ಗ್ರೇಟರ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ (ಅಂದಿನ ಬಿಬಿಎಂಪಿ) 2.79 ಲಕ್ಷ ಬೀದಿ ನಾಯಿಗಳಿವೆ ಎಂದು 2023ರ ಅಕ್ಟೋಬರ್‌ನಲ್ಲಿ ಬಿಡುಗಡೆ ಮಾಡಿದ ಅಂಕಿ–ಅಂಶಗಳಿಂದ ತಿಳಿದುಬಂದಿತ್ತು. ಬೆಂಗಳೂರು ದಕ್ಷಿಣ ನಗರ ಪಾಲಿಕೆ 100

ಬೀದಿ ನಾಯಿ

ಬೀದಿ ನಾಯಿಗಳನ್ನು ಹಿಡಿಯುವುದು ಹಾಗೂ ಅವುಗಳಿಗೆ ಆಹಾರ, ಆಶ್ರಯ ಕೇಂದ್ರ ನಿರ್ವಹಣೆಯನ್ನು ಲೆಕ್ಕ ಮಾಡಿ, 500 ಬೀದಿ ನಾಯಿಗಳನ್ನು ಹಿಡಿದು, ನಿರ್ವಹಣೆ ಮಾಡಲು ಟೆಂಡರ್ ಆಹ್ವಾನಿಸಿದೆ.

ಬೀದಿ ನಾಯಿಗಳನ್ನು ಹಿಡಿದು, ಅವುಗಳಿಗೆ ಲಸಿಕೆ ನೀಡಿ, ಆಶ್ರಯ ಕೇಂದ್ರಗಳಿಗೆ ವರ್ಗಾಯಿಸಬೇಕು. ಅದಾದ ಮೇಲೆ, ಆಶ್ರಯ ಕೇಂದ್ರದಲ್ಲಿ ದಿನಕ್ಕೆ ಎರಡು ಬಾರಿ ಆಹಾರ ನೀಡಬೇಕು. ಒಬ್ಬ ಅರೆ ಪಶುವೈದ್ಯ, ನಾಲ್ವರು ಅಟೆಂಡರ್ ಸೇರಿ ಐವರು ಸಿಬ್ಬಂದಿಯ ವೇತನ, ವೈದ್ಯಕೀಯ ವೆಚ್ಚ, ಸ್ವಚ್ಛತಾ ಸಾಮಗ್ರಿ, ಆಡಳಿತ ವೆಚ್ಚವನ್ನು ನಿಗದಿ ಮಾಡಿ ಪ್ರತಿ ಬೀದಿ ನಾಯಿಗೆ ಒಂದು ತಿಂಗಳಿಗಾಗುವ ವೆಚ್ಚವನ್ನು ಅಂದಾಜು ಮಾಡಲಾಗಿದೆ. ಆ ವೆಚ್ಚವನ್ನು ಪ್ರತಿ ವರ್ಷ ಶೇ 5ರಷ್ಟು ಹೆಚ್ಚಿಸಲಾಗುತ್ತದೆ.

367.5 ಗ್ರಾಂ
ಪ್ರತಿ ಬೀದಿ ನಾಯಿಗೆ ನೀಡುವ ಆಹಾರ ಸಾಮಗ್ರಿಗಳ ತೂಕ (150 ಗ್ರಾಂ ಅಕ್ಕಿ, 100 ಗ್ರಾಂ ಕೋಳಿ ಮಾಂಸ, 100 ಗ್ರಾಂ ತರಕಾರಿ, 10 ಗ್ರಾಂ ಅಡುಗೆ ಎಣ್ಣೆ, 5 ಗ್ರಾಂ ಉಪ್ಪು, 2.5 ಗ್ರಾಂ ಅರಿಶಿನ)

ತಿಂಗಳಿಗೆ ಪ್ರತಿ ಬೀದಿ ನಾಯಿಗೆ ಆಗುವ ವೆಚ್ಚ (₹ಗಳಲ್ಲಿ)

ಬೀದಿ ನಾಯಿ ಊಟಕ್ಕೆ	25
ಬೀದಿ ನಾಯಿ ಹಿಡಿಯಲು	300
ಐವರು ಸಿಬ್ಬಂದಿಗೆ ವೇತನ	1,18,483
ವೈದ್ಯಕೀಯ ವೆಚ್ಚ	15,000
ಸ್ವಚ್ಛತಾ ಸಾಮಗ್ರಿ	10,000
ಆಡಳಿತ ವೆಚ್ಚ	10,000

2.80 ಲಕ್ಷ ಐದೂ ಪಾಲಿಕೆ ವ್ಯಾಪ್ತಿಯ ಬೀದಿ ನಾಯಿಗಳು



ನಗರದಲ್ಲಿ ಇಂದು

ರಾಷ್ಟ್ರೀಯ ರೈತರ ದಿನ: ಉದ್ಘಾಟನೆ: ಎನ್. ಚಲುವರಾಯಸ್ವಾಮಿ, ಅತಿಥಿಗಳು: ಎನ್.ಎಚ್. ಶಿವಶಂಕರ್ ರೆಡ್ಡಿ, ಸಿ.ಎನ್. ಶಿವಪ್ರಕಾಶ್, ಟಿ. ಸಾಯಿರಾಮ್ ಪ್ರಸಾದ್, ರೂಪಾರಾಣಿ, ಎಸ್.ವಿ. ಹಿತ್ತಲಮನಿ, ಎಂ.ಸಿ. ರಂಗಸ್ವಾಮಿ, ನರೇಂದ್ರ, ಆಯೋಜನೆ ಮತ್ತು ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 10.30

ಸಿಪಿಐ ಶತಮಾನೋತ್ಸವದ ಸಮಾರೋಪ ಸಮಾರಂಭ: ಅಧ್ಯಕ್ಷತೆ: ದೀಪಕ್ ಎಂ., ಅತಿಥಿಗಳು: ಎಲ್. ಹನುಮಂತಯ್ಯ, ಪ್ರಕಾಶ ಬಾಬು, ಸಿದ್ಧನಗೌಡ ಪಾಟೀಲ, ಜಿ. ರಾಮಕೃಷ್ಣ, ಪಿ.ವಿ. ಲೋಕೇಶ್, ವಿಜಯಭಾಸ್ಕರ ಡಿ.ಎ., ಕೆ. ಪ್ರಕಾಶ್, ಉಮಾ, ಕ್ಲಿಫ್ಟನ್ ಡಿ ರೊಜಾರಿಯೋ, ಜಿ.ಆರ್. ಶಿವಶಂಕರ್, ಬಡಗಲಪುರ ನಾಗೇಂದ್ರ, ಮಾವಳ್ಳಿ ಶಂಕರ್, ಸಾತಿ ಸುಂದರೇಶ್, ಆಯೋಜನೆ: ಸಿಪಿಐ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10.30

ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಬಾಗಲೂರು ಸ್ನಾತಕೋತ್ತರ ಕೇಂದ್ರದ ಉದ್ಘಾಟನೆ: ಡಾ.ಎಂ.ಸಿ. ಸುಧಾಕರ್, ಅಧ್ಯಕ್ಷತೆ: ಕೃಷ್ಣ ಬೈರೇಗೌಡ, ಉಪಸ್ಥಿತಿ: ಬಿ. ರಮೇಶ್, ಸ್ಥಳ: ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಬಾಗಲೂರು, ಮಧ್ಯಾಹ್ನ 12

ಕರ್ನಾಟಕ ರಾಜ್ಯೋತ್ಸವ: ಅತಿಥಿಗಳು: ಡಾ.ವಿ. ರಾಮ್‌ಪ್ರಸಾತ್ ಮನೋಹರ್, ಮದನ್ ಮೋಹನ್, ಜೆ.ಎಸ್. ಸುಬ್ಬರಾಮಯ್ಯ, ಬಿ.ಎಸ್. ದಲಾಯತ್, ಎಂ. ಮಹದೇವಯ್ಯ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಜಲಮಂಡಳಿ, ಮಲ್ಲೇಶ್ವರ, ಮಧ್ಯಾಹ್ನ 2.30

‘ನೆನಪಿನಂಗಳದಲ್ಲಿ ಜಿ.ಎಸ್.ಎಸ್.’ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರಿಗೆ ಗೀತ ಸ್ಮರಣಾಂಜಲಿ: ಅತಿಥಿ: ಕಾ.ವೆಂ. ಶ್ರೀನಿವಾಸಮೂರ್ತಿ, ಗೀತ ಗಾಯನ: ಮೃತ್ಯುಂಜಯ ದೊಡ್ಡವಾಡ, ಭವ್ಯಾ ಹೆಬ್ಬಾಲೆ, ನಿವೇದಿತಾ, ಮೇಘನಾ, ಕೆ.ಎಸ್. ಶ್ರೀಧರ್ ಅಯ್ಯರ್, ಗೀತಾ ಭತ್ತದ್, ವಿಸ್ಮಯ, ಚಿತ್ರಕಲಾ, ಆಯೋಜನೆ: ಸಂಗೀತಧಾಮ, ಹಿರಿಯ ನಾಗರಿಕರ ಸಂಘ, ಸ್ಥಳ: ಯೋಗ ಸಭಾಂಗಣ, ಆರ್‌ಬಿಐ ಲೇಔಟ್, ಸಂಜೆ 5.30

ಸಾರಂಗಿ ವೆಂಕಟರಾಮಯ್ಯ ಪುಟ್ಟಚ್ಚಮ್ಮ ದತ್ತಿ ಪುಸ್ತಕ ಬಹುಮಾನ ಪ್ರದಾನ: ಆರ್. ಲಕ್ಷ್ಮೀನಾರಾಯಣ, ಬಹುಮಾನ ಸ್ವೀಕರಿಸುವವರು: ಅಮ್ಮಸಂದ್ರ ಸುರೇಶ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ. ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಭರತನಾಟ್ಯ ರಂಗಪ್ರವೇಶ: ರುಚಿತಾ ಶಾಸ್ತ್ರಿ, ಅತಿಥಿಗಳು: ಕೆ.ಎನ್. ಫಣೀಂದ್ರ, ರಾಧಾ ಶ್ರೀಧರ್, ಮೈಸೂರು ಎಲ್. ಲೀಲಾ ಕದಂಬಿ, ಆಯೋಜನೆ: ಲೀಲಾ ನಾಟ್ಯ ಕಲಾವೃಂದ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

ಹೊಲಿಗೆ ಯಂತ್ರಗಳ ವಿತರಣೆ: ಅತಿಥಿಗಳು: ಶೋಭಾ ಮಳವಳ್ಳಿ, ಶಿವರಾಮ್, ಉಷಾ ಡೋಂಗ್ರೆ, ಬಾಬು ಶಂಕರ್, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಸಂಜೆ 6

ವೈದ್ಯರ ದಿನ: ಅತಿಥಿಗಳು: ಬಿ.ಎಸ್. ಪಾಟೀಲ, ಡಾ. ಪ್ರತಿಮಾ ಮೂರ್ತಿ, ಅಧ್ಯಕ್ಷತೆ: ಡಾ.ಬಿ. ಮಹಾಲಿಂಗಪ್ಪ, ಆಯೋಜನೆ: ಅಸೋಸಿಯೇಷನ್ ಆಫ್ ಫಿಸಿಶಿಯನ್ಸ್, ಸ್ಥಳ: ಡಾ.ಕೆ.ಎಸ್. ಷಡಾಕ್ಷರಪ್ಪ ಸಭಾಂಗಣ, ಎಪಿಐ ಭವನ, ಸಂಜೆ 6.30

ಮಾರ್ಗಶೀರ್ಷೋತ್ಸವ: ಭರತನಾಟ್ಯ ಪ್ರದರ್ಶನ: ಅನುರಾಧ ವಿಕ್ರಾಂತ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6ರ ಒಳಗೆ) ಕಳುಹಿಸಿ..
nagaradalli_indu@prajavani.co.in

‘2027ರ ಅಂತ್ಯಕ್ಕೆ ನೀರು ಬರದಿದ್ದರೆ ಹೋರಾಟ’

ಪ್ರಜಾವಾಣಿ ವಾರ್ತೆ

ಪ್ರದೀಪ್ ಈಶ್ವರ್

ಚಿಕ್ಕಬಳ್ಳಾಪುರ: ‘ಎತ್ತಿನಹೊಳೆ ಯೋಜನೆಯ ನೀರು 2027ರ ಡಿಸೆಂಬರ್ ಅಂತ್ಯಕ್ಕೆ ಚಿಕ್ಕಬಳ್ಳಾಪುರಕ್ಕೆ ಬರಲಿದೆ. ಇಲ್ಲದಿದ್ದರೆ ನಾನೂ ನೀರಾವರಿ ಹೋರಾಟಗಾರರ ಜೊತೆ ಹೋರಾಟ ನಡೆಸುವೆ’ ಎಂದು ಶಾಸಕ ಪ್ರದೀಪ್ ಈಶ್ವರ್ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಎತ್ತಿನಹೊಳೆ ನೀರಾವರಿ ವಿಚಾರವಾಗಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದೇನೆ. 2027ರ ಡಿಸೆಂಬರ್ ಅಂತ್ಯಕ್ಕೆ ಚಿಕ್ಕಬಳ್ಳಾಪುರಕ್ಕೆ ನೀರು ಹರಿಸಬೇಕು ಎನ್ನುವ ಬೇಡಿಕೆ’ ಇದೆ ಎಂದರು.

‘ಎತ್ತಿನಹೊಳೆ ಯೋಜನೆಯ ನೀರು ಈ ಅವಧಿಯ ಒಳಗೆ ಚಿಕ್ಕಬಳ್ಳಾಪುರಕ್ಕೆ ಬರಲಿದೆ. ನೀರಾವರಿ ಹೋರಾಟಗಾರರ ಬಗ್ಗೆ ಗೌರವವಿದೆ’ ಎಂದು ತಿಳಿಸಿದರು.

ಸುಗುಣಾಂತರಂಗ ಅಭಿನಂದನಾ ಗ್ರಂಥ ಜನಾರ್ಪಣೆ ವೇಳೆ ಎಚ್‌ಎಂ ರೇವಣ್ಣ ಬೇಸರ

‘ಕೈ’ನಲ್ಲಿ ಆರ್. ಕೃಷ್ಣಪ್ಪಗೆ ತಪ್ಪಿದ ಅಧಿಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕುರುಬ ಸಮುದಾಯದ ಸಂಘಟಕರಾಗಿ, ಶಾಸಕ, ಸಚಿವರಾಗಿ ಕೆಲಸ ಮಾಡಿದ ಆರ್.ಕೃಷ್ಣಪ್ಪ ಅವರಿಗೆ ಕಾಂಗ್ರೆಸ್‌ನಲ್ಲಿ ಅಧಿಕಾರ ತಪ್ಪಿಸಲಾಯಿತು’ ಎಂದು ಕರ್ನಾಟಕ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಬೇಸರ ವ್ಯಕ್ತಪಡಿಸಿದರು.

ಆರ್. ಕೃಷ್ಣಪ್ಪ ಅಭಿನಂದನಾ ಸಮಿತಿ, ಮೀಡಿಯಾ ಸಲ್ಯೂಷನ್ಸ್ ನಗರದ ಗಾಂಧಿಭವನದಲ್ಲಿ ಸೋಮವಾರ ಆಯೋಜಿಸಿದ್ದ ‘ಸುಗುಣಾಂತರಂಗ’ ಅಭಿನಂದನಾ ಗ್ರಂಥ ಜನಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಕೃಷ್ಣಪ್ಪ ಅವರು ಎರಡು ಬಾರಿ ಪಾಲಿಕೆ ಸದಸ್ಯ, ಜನತಾದಳದಿಂದ ಶಾಸಕ, ಗ್ರಂಥಾಲಯ, ವಯಸ್ಕರ ಶಿಕ್ಷಣ ಸಚಿವರಾಗಿದ್ದರು. ಆ ನಂತರ ಕಾಂಗ್ರೆಸ್ ಸೇರಿದರೂ ಸರಿಯಾದ ಸ್ಥಾನ ಸಿಗಲಿಲ್ಲ. ಅಹಿಂದ ಅಲ್ಲದೇ ಹಲವು ನಾಯಕರ ಬೆಂಬಲದಿಂದ ಸಿದ್ದರಾಮಯ್ಯ ಅವರು ಬೆಳೆದರೂ ಈಗ ಅವರ ಸುತ್ತ ಹೌದಪ್ಪಗಳು ಸುತ್ತಿಕೊಂಡಿದ್ದಾರೆ. ಇಂತಹ ಸಂಗತಿಗಳನ್ನು ಅವರಿಗೆ ತಿಳಿಸಿಕೊಡಬೇಕಿದೆ. ಕೃಷ್ಣಪ್ಪ ಅವರ ಅಭಿನಂದನಾ ಕಾರ್ಯಕ್ರಮಕ್ಕೆ ಸಿದ್ದರಾಮಯ್ಯ ಬರಬೇಕಿತ್ತು’ ಎಂದು ತಿಳಿಸಿದರು.


ಕಾರ್ಯಕ್ರಮದಲ್ಲಿ ರುಕ್ಮಿಣಿಯಮ್ಮ,ಮಾಜಿ ಸಚಿವ ಆರ್‌.ಕೃಷ್ಣಪ್ಪ , ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್‌.ಎಂ.ರೇವಣ್ಣ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಉಪಸ್ಥಿತರಿದ್ದರು. –ಪ್ರಜಾವಾಣಿ ಚಿತ್ರ

ಕೊಪ್ಪಳ ವಿಶ್ವವಿದ್ಯಾಲಯ ಕುಲಪತಿ ಬಿ.ಕೆ.ರವಿ ಮಾತನಾಡಿ, ‘ಶೋಷಿತ ಸಮುದಾಯಗಳು ಈಗಲೂ ಸೌಲಭ್ಯದಿಂದ ವಂಚಿತವಾಗಿವೆ. ಭಾರತದಲ್ಲಿ ಕುರುಬ ಸಮುದಾಯದ ಜನಸಂಖ್ಯೆ 12 ಕೋಟಿಯಷ್ಟಿದೆ. ಸಮುದಾಯವನ್ನು ಸಂಘಟಿಸಿ ಕನಕಗುರು ಪೀಠ ಸ್ಥಾಪಿಸುವಲ್ಲಿ ಕೃಷ್ಣಪ್ಪ ಅವರ ಪಾತ್ರವೂ ಹಿರಿದಾದುದು. ಸಮುದಾಯಕ್ಕಾಗಿ ಕೆಲಸ ಮಾಡಿದ ನಾಯಕರ ಕುರಿತು ಇಂತಹ ಗ್ರಂಥಗಳು ಬರಬೇಕು’ ಎಂದು ಹೇಳಿದರು.

ಗ್ರಂಥ ಕುರಿತು ಮಾತನಾಡಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ, ‘ರಾಜಕಾರಣ ಈಗ ಸಂಪೂರ್ಣ ಬದಲಾಗಿದೆ. ದುಡ್ಡಿಲ್ಲದೇ ಗೆಲ್ಲಲು ಆಗುವುದಿಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಇದರ ನಡುವೆಯೂ ಕೃಷ್ಣಪ್ಪ ಅವರು ಜನಮುಖಿಯಾಗಿ ಕೆಲಸ ಮಾಡಿರುವುದನ್ನು ಮರೆಯಬಾರದು’ ಎಂದರು.

ಮಾಜಿ ಶಾಸಕರಾದ ಚಂದ್ರಣ್ಣ, ಶಿವರಾಜು, ಪಿ.ಎಸ್.ಪ್ರಕಾಶ್, ವಿಧಾನ ಪರಿಷತ್‌ನ ಮಾಜಿ ಸದಸ್ಯರಾದ ಹುಲಿನಾಯ್ಕರ್, ಆರ್.ವಿ.ವೆಂಕಟೇಶ್, ಮಾಜಿ ಮೇಯರ್ ಹುಚ್ಚಪ್ಪ, ಬಾಗಲಕೋಟೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಬಾಯಕ್ಕ ಮೇಟಿ, ರುಕ್ಮಿಣಿಯಮ್ಮ ಕೃಷ್ಣಪ್ಪ, ಕೃತಿಯ ಸಂಪಾದಕ ಆರ್.ಪಿ.ಸಾಂಬಸದಾಶಿವಾ ರೆಡ್ಡಿ ಹಾಜರಿದ್ದರು.

ಶೆಡ್‌ಗಳು ನೆಲಸಮ: ಸಂಕಷ್ಟ

ಬಿಎಸ್‌ಡಬ್ಲ್ಯುಎಂಎಲ್ ಜಾಗದಲ್ಲಿರುವ ಶೆಡ್ ತೆರವು

• ಡಿ.ಸುರೇಶ್

ವಿವಿಧ ಸಂಘಟನೆಗಳ ಸದಸ್ಯರು ಸಂತ್ರಸ್ತರೊಂದಿಗೆ ಪ್ರತಿಭಟನೆ ನಡೆಸಿದರು

ಯಲಹಂಕ: ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಮನೆಯ ಅವಶೇಷಗಳು, ಪಾತ್ರೆ, ದಿನಸಿ ಪದಾರ್ಥಗಳು, ಬಟ್ಟೆಗಳ ನಡುವೆ ಮಕ್ಕಳಿಗೆ ಊಟ ತಿನಿಸುತ್ತಿರುವ ತಾಯಿ...

ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಯಲಹಂಕ ಹೋಬಳಿ ಕೋಗಿಲು ಬಂಡೆ ಬಳಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಜಾಗದಲ್ಲಿ ನಿರ್ಮಿಸಿದ್ದ ಶೆಡ್‌ಗಳನ್ನು ತೆರವುಗೊಳಿಸಿದ ನಂತರ ಆ ಪ್ರದೇಶದಲ್ಲಿ ಕಂಡುಬಂದ ದೃಶ್ಯಗಳಿವು.

150ಕ್ಕೂ ಹೆಚ್ಚು ಮನೆಗಳನ್ನು ನೆಲಸಮ ಮಾಡಲಾಗಿದ್ದು, 500ಕ್ಕೂ ಹೆಚ್ಚು ಕುಟುಂಬಗಳು ಬೀದಿ ಪಾಲಾಗಿವೆ. ಸಂತ್ರಸ್ತರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸದ ಪರಿಣಾಮ, ಮೈ ಕೊರೆಯುವ ಚಳಿ, ಬಿಸಿಲು ಹಾಗೂ ದೂಳಿನ ನಡುವೆ ಅವಶೇಷಗಳ ಮಧ್ಯದಲ್ಲಿ ಜೀವನ ಸಾಗಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಮಕ್ಕಳು, ವೃದ್ಧರು, ಮಹಿಳೆಯರು, ಬಾಣಂತಿಯರ ಪಾಡು ಹೇಳತೀರದಾಗಿದೆ.

ಮನೆಗಳನ್ನು ಧ್ವಂಸಗೊಳಿಸಿರುವುದರಿಂದ ಮಹಿಳೆಯರು ಶೌಚಾಲಯಗಳಿಲ್ಲದೆ ತೊಂದರೆ ಅನುಭವಿಸುವಂತಾಗಿದೆ. ಮಕ್ಕಳಿಗೆ ಹಾಲುಣಿಸಲು, ಬಟ್ಟೆಗಳನ್ನು ಬದಲಿಸಿಕೊಳ್ಳಲೂ ಸಹ ಸ್ಥಳವಿಲ್ಲದೆ ಸಂಕಷ್ಟ ಪರಿಸ್ಥಿತಿ ಎದುರಿಸುತ್ತಿದ್ದಾರೆ.

ಈ ಪ್ರದೇಶದಲ್ಲಿ ವಾಸಿಸುತ್ತಿದ್ದವರಲ್ಲಿ ಬಹುತೇಕರು ಕೂಲಿಕಾರ್ಮಿಕರಾಗಿದ್ದು, ದಿನನಿತ್ಯದ ಅಗತ್ಯಗಳನ್ನು ಪೂರೈಸಲು ಪಡೆದಿರುವ ಸಾಲಗಳನ್ನು ತೀರಿಸುವುದು ಹೇಗೆಂದು ಚಿಂತೆಗೀಡಾಗಿದ್ದಾರೆ.

‘ನಿತ್ಯದ ಖರ್ಚು, ವೈದ್ಯಕೀಯ ಅಗತ್ಯಗಳು ಹಾಗೂ ತಾತ್ಕಾಲಿಕ ವಸತಿಗಾಗಿ ಹೆಚ್ಚಿನ ಬಡ್ಡಿ ದರದಲ್ಲಿ ಸಾಲ ಪಡೆದಿದ್ದು, ಈ ಪರಿಸ್ಥಿತಿಯನ್ನು ನಿಭಾಯಿಸುವುದು ಹೇಗೆಂದು ದಾರಿಕಾಣದೆ ದಿಕ್ಕು ತೋಚದಂತಾಗಿದೆ. ಶಾಲಾ-ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಲವು ವಿದ್ಯಾರ್ಥಿಗಳು ಬಿಎ, ಬಿ.ಕಾಂ, ಎಲ್‌ಎಲ್‌ಬಿ ತರಗತಿಗಳಲ್ಲಿ ಕಲಿಯುತ್ತಿದ್ದಾರೆ. ಅವರ ಶಿಕ್ಷಣಕ್ಕೂ ತೊಂದರೆಯಾಗಿದೆ. ಮನೆಗಳನ್ನು ಧ್ವಂಸಗೊಳಿಸಿರುವುದರಿಂದ ವೈಯಕ್ತಿಕ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದ ದಾಖಲೆಗಳೆಲ್ಲವೂ ಅವಶೇಷಗಳಡಿಯಲ್ಲಿ ಮುಚ್ಚಿಹೋಗಿವೆ’ ಎಂದು ಹಲವರು ದೂರಿದರು.

‘ಶುಕ್ರವಾರ ಬೆಳಗಿನ ಜಾವ ಮನೆಯಲ್ಲಿ ವಿದ್ಯುತ್ ಪೂರೈಕೆ ಇರಲಿಲ್ಲ. ಏಕಾಏಕಿ ಹಲವು ಜೆಸಿಬಿಗಳ ಸಮೇತ ನೂರಾರು ಪೊಲೀಸರೊಂದಿಗೆ ಬಂದ ಅಧಿಕಾರಿಗಳು, ಮನೆಯಲ್ಲಿ ಮಲಗಿದ್ದ ಮಕ್ಕಳನ್ನು ಎಬ್ಬಿಸಿ, ಅಡುಗೆ ಅನಿಲದ ಸಿಲಿಂಡರ್ ಆಫ್ ಮಾಡಲು ಹೇಳಿದರು. ನಂತರ ನಮ್ಮ ಮನೆಗಳನ್ನು ಉರುಳಿಸಿದರು. 25 ವರ್ಷಗಳಿಂದ ಇಲ್ಲಿ ವಾಸಿಸುತ್ತಿದ್ದೇವೆ. ನಮಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು’ ಎಂದು ಫಾತಿಮಾ ಒತ್ತಾಯಿಸಿದರು.

‘ಯಾವುದೇ ನೋಟಿಸ್ ನೀಡದೆ ರಾತ್ರಿ 3 ಗಂಟೆಗೆ ಏಕಾಏಕಿ ಜೆಸಿಬಿಗಳು, ನೂರಾರು ಪೊಲೀಸರು, ಫೈರ್ ಎಂಜಿನ್ ಹಾಗೂ ಆಂಬುಲೆನ್ಸ್‌ಗಳು ಬಂದವು. ಇದ್ದಕ್ಕಿದ್ದಂತೆ ನಮ್ಮ ಮನೆಗಳನ್ನು ನಾಶಗೊಳಿಸಿದರು. ಊಟ ಯಾರೋ ಕೊಡುತ್ತಾರೆ; ಆದರೆ ಉಡಲು ಬಟ್ಟೆ, ಮಲಗಲು ಜಾಗವಿಲ್ಲ. ಕೊರೆವ ಚಳಿಗಾಲದಲ್ಲಿ ನಮ್ಮ ಪರಿಸ್ಥಿತಿಯನ್ನು ಕೇಳುವವರಿಲ್ಲದಂತಾಗಿದೆ. ವೋಟ್‌ಗಾಗಿ ಎಲ್ಲರೂ ಬರುತ್ತಾರೆ. ಈಗ ಯಾರೂ ಇಲ್ಲ’ ಎಂದು ಹಸೀನಾ ಆಕ್ರೋಶ ವ್ಯಕ್ತಪಡಿಸಿದರು.

‘ಎಲ್ಲ ದಾಖಲೆ ಇದ್ದರೂ ಅಕ್ರಮವೇ?’

‘ಹಲವಾರು ರಾಜಕಾರಣಿಗಳು, ನೂರಾರು ಎಕರೆ ಜಾಗಗಳನ್ನು ಒತ್ತುವರಿ ಮಾಡಿಕೊಂಡು ರೆಸಾರ್ಟ್, ಫಾರ್ಮ್‌ಹೌಸ್, ಗೆಸ್ಟ್‌ಹೌಸ್‌ಗಳನ್ನು ನಿರ್ಮಿಸಿಕೊಂಡಿದ್ದಾರೆ. ಆದರೆ ನಾವು ಕೇವಲ 10X15 ಅಡಿ ಅಥವಾ 15X15 ಅಡಿ ಜಾಗದಲ್ಲಿ ಶೀಟ್ ಮನೆಗಳನ್ನು ನಿರ್ಮಿಸಿಕೊಂಡು ಕಷ್ಟದಲ್ಲಿ ಜೀವನ ನಡೆಸುತ್ತಿರುವ ಸಂದರ್ಭದಲ್ಲಿ ಬೀದಿಗೆ ತಳ್ಳಿದ್ದಾರೆ’ ಎಂದು ಶ್ರೀನಿವಾಸಬಾಬು ದೂರಿದರು.

‘94ಸಿಸಿ ಹಕ್ಕುಪತ್ರ, ಆಧಾರ್, ರೇಷನ್‌ಕಾರ್ಡ್, ಮತದಾರರ ಗುರುತಿನ ಚೀಟಿ ಸೇರಿ ಎಲ್ಲ ದಾಖಲೆಗಳನ್ನು ಹೊಂದಿದ್ದರೂ ಸಹ ನಮ್ಮ ಮನೆಗಳನ್ನು ಕೆಡವಿದ್ದಾರೆ. ಸರ್ಕಾರಕ್ಕೆ ಬಾಬಾಸಾಹೇಬ್ ಅಂಬೇಡ್ಕರ್‌ರವರ ಸಂವಿಧಾನದ ಅರಿವಿದ್ದರೆ ಇಂತಹ ಮಟ್ಟಕ್ಕೆ ಇಳಿಯುತ್ತಿರಲಿಲ್ಲ. ಮತ್ತೆ ಮನೆಗಳನ್ನು ನಿರ್ಮಿಸಿಕೊಡುತ್ತೇವೆಂದು ಆಶ್ವಾಸನೆ ನೀಡಿದ್ದಾರೆಂದು ಕೆಲವು ನಾಯಕರು ಹೇಳಿದ್ದಾರೆ. ಮನೆಗಳನ್ನು ನಿರ್ಮಿಸಿಕೊಡುವವರೆಗೂ ನಮ್ಮ ಹೋರಾಟ ಮುಂದುವರಿಯುತ್ತದೆ’ ಎಂದು ಎಚ್ಚರಿಕೆ ನೀಡಿದರು. ಹಲವು ಸಂಘಟನೆಗಳು ಹೋರಾಟಕ್ಕೆ ಬೆಂಬಲ ಸೂಚಿಸಿವೆ.

ಮಗುವಿಗೆ ಊಟ ತಿನಿಸುತ್ತಿರುವ ತಾಯಿ

ಅಪರಾಧ ಸುದ್ದಿಗಳು

ಇನ್‌ಸ್ಟಾಗ್ರಾಂ ಖಾತೆಗಳ ವಿರುದ್ಧ ಎಫ್‌ಐಆರ್ ದಾಖಲು

ಬೆಂಗಳೂರು: ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದ ಅಶ್ಲೀಲ ವಿಡಿಯೊಗಳನ್ನು ಪ್ರಚಾರ ಮಾಡುತ್ತಿದ್ದ ಆರೋಪದ ಮೇಲೆ 28 ಇನ್‌ಸ್ಟಾಗ್ರಾಂ ಖಾತೆಗಳ ವಿರುದ್ಧ ಕೇಂದ್ರ ವಿಭಾಗದ ಸೆನ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಶೇಷಾದ್ರಿಪುರ ನಿವಾಸಿ ಹರ್ಷ ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಒಂದು ತಿಂಗಳಿನಿಂದ ಹರ್ಷ ಅವರಿಗೆ ಅಪರಿಚಿತ ವ್ಯಕ್ತಿಗಳು, ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಯೂಟ್ಯೂಬ್‌ಗಳಲ್ಲಿ ಹುಡುಗ, ಹುಡುಗಿಯರ ಫೋಟೊಗಳನ್ನು ಹಾಕಿ ಅಶ್ಲೀಲ ಕಂಟೆಂಟ್ ಹಾಕುತ್ತಿದ್ದರು. ‘ಲಿಂಕ್ಡ್ ಇನ್, ಬಯೋ, ಡಿಎಂ ಫಾರ್ ವಿಡಿಯೊ ಲಿಂಕ್ ಬೇಕಿದ್ದರೆ ಲಿಂಕ್’ ಎಂಬುದಾಗಿ ಕಮೆಂಟ್ ಮಾಡಿ ಎಂದು ಪೋಸ್ಟ್ ಹಾಕಿ, ಅಶ್ಲೀಲ ವಿಡಿಯೊ ಶೇರ್ ಮಾಡುವುದು ಹಾಗೂ ಜನರನ್ನು ಅಶ್ಲೀಲ ವೆಬ್‌ಸೈಟ್ ಕಡೆಗೆ ಆಕರ್ಷಿಸುವಂತಹ ಪೋಸ್ಟ್‌ಗಳನ್ನು ಹಾಕುವುದು ಕಂಡು ಬಂದಿದೆ. ಈ ರೀತಿ ಹಂಚಿಕೆ ಮಾಡುತ್ತಿದ್ದ ಇನ್‌ಸ್ಟ್ರಾಗ್ರಾಂ ಖಾತೆಗಳನ್ನು ನಿರ್ವಹಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಇನ್‌ಸ್ಟ್ರಾಗ್ರಾಂ ಖಾತೆಗಳನ್ನು ನಿರ್ವಹಿಸುತ್ತಿರುವ ವ್ಯಕ್ತಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು. ಕಾನೂನು ಸಲಹೆ ಪಡೆದು ಖಾತೆಗಳನ್ನು ಸಂಪೂರ್ಣವಾಗಿ ನಿಷ್ಕ್ರಿಯಗೊಳಿಸಲಾಗುತ್ತದೆ ಎಂದು ಪೊಲೀಸರು ಹೇಳಿದ್ದಾರೆ.

ಆರೋಪಿಗಳು ಅಶ್ಲೀಲ ವಿಡಿಯೊ ತುಣುಕುಗಳು, ಸ್ಕ್ರೀನ್ ಶಾಟ್‌ಗಳನ್ನು ತಮ್ಮ ಖಾತೆಯಲ್ಲಿ ಪೋಸ್ಟ್ ಮಾಡುತ್ತಿದ್ದಾರೆ. 19 ನಿಮಿಷ, 40, ನಿಮಿಷ, 55 ನಿಮಿಷ ವಿಡಿಯೊ ಎಂದು ಉತ್ತೇಜಿಸುತ್ತಿದ್ದಾರೆ. ವಿಡಿಯೊಗಳು ಬೇಕಿದ್ದರೆ, ಕಮೆಂಟ್, ಡೈರೆಕ್ಟ್ ಮೆಸೇಜ್ ಮಾಡಿ ಎಂದು ಪೋಸ್ಟ್ ಮಾಡುತ್ತಿದ್ದಾರೆ. ಅಪ್‌ಲೋಡ್ ಆಗಿರುವ ಲಿಂಕ್ ಕ್ಲಿಕ್ ಮಾಡಿದರೆ ಅಶ್ಲೀಲ ವೆಬ್‌ಸೈಟ್‌ಗಳು ತೆರೆದುಕೊಳ್ಳುತ್ತಿವೆ ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಅಶ್ಲೀಲ ವಿಡಿಯೊ: ದೂರು ನೀಡಿ

ಅಶ್ಲೀಲ ವಿಡಿಯೊಗಳನ್ನು ಪ್ರಚಾರ ಮಾಡಿ, ಡೈರೆಕ್ಟ್ ಮೆಸೇಜ್ ಮಾಡಿ ಎಂದು ಕಮೆಂಟ್ ಮಾಡುವ ಖಾತೆಗಳ ಬಗ್ಗೆ ಜಾಲತಾಣಗಳ ಬಳಕೆದಾರರು ಪೊಲೀಸರಿಗೆ ಮಾಹಿತಿ ನೀಡಬಹುದು ಎಂದು ಸೆನ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ತಲೆ ಮೇಲೆ ಕಲ್ಲು ಹಾಕಿ ಪತ್ನಿ ಕೊಲೆ

ಬೆಂಗಳೂರು: ಕೌಟುಂಬಿಕ ವಿಚಾರಕ್ಕೆ ಜಗಳ ನಡೆದು ಪತ್ನಿಯ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ ಆರೋಪದ ಮೇಲೆ ಪತಿಯನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಿಟ್ಟಗಾನಹಳ್ಳಿಯ ನಿವಾಸಿ ಗಾಯತ್ರಿ (55) ಕೊಲೆಯಾದ ಶಿಕ್ಷಕಿ. ಸರ್ಕಾರಿ ಶಾಲೆಯೊಂದರಲ್ಲಿ ದೈಹಿಕ ಶಿಕ್ಷಣ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಗಾಯತ್ರಿ-ಅನಂತ್ ದಂಪತಿಗೆ ಪಿಯುಸಿ ಓದುತ್ತಿರುವ ಮಗಳಿದ್ದಾಳೆ.

‘ದಂಪತಿ ನಡುವೆ ಆಗಾಗ್ಗೆ ಕೌಟುಂಬಿಕ ವಿಚಾರವಾಗಿ ಜಗಳ ನಡೆಯುತ್ತಿತ್ತು. ಪತ್ನಿಯನ್ನು ಕೊಲೆ ಮಾಡಲು ಆರೋಪಿ ಅನಂತ್ ಸಂಚು ರೂಪಿಸಿದ್ದ. ಮನೆ ಕಟ್ಟಲು ನಿರ್ಧರಿಸಿದ್ದು, ನಿವೇಶನ ತೋರಿಸುವುದಾಗಿ ಆಕೆಯನ್ನು ದ್ವಿಚಕ್ರ ವಾಹನದಲ್ಲಿ ಕರೆದೊಯ್ದಿದ್ದ.

ನಿವೇಶನದ ಬಳಿ ಹೋಗುತ್ತಿದ್ದಂತೆ ಪತ್ನಿಯ ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿ, ನಂತರ ಅಪಘಾತದಲ್ಲಿ ಮೃತಪಟ್ಟಿದ್ದಾಳೆಂದು ಸ್ಥಳೀಯ ನಿವಾಸಿಗಳನ್ನು ನಂಬಿಸಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಸ್ಥಳಕ್ಕೆ ಸಂಚಾರ ವಿಭಾಗದ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಕೂಟಿಯಲ್ಲಿ ಹಿಂಬದಿ ಕುಳಿತಿದ್ದ ಪತ್ನಿ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಕೆಳಗೆ ಬಿದ್ದಳು. ಆಗ ಆಕೆಯ ತಲೆ ಮೇಲೆ ಬೈಕ್‌ನ ಚಕ್ರ ಹರಿದ ಪರಿಣಾಮ ಮೃತಪಟ್ಟಳು ಎಂದು ಹೇಳಿದ್ದ. ಪೊಲೀಸರು ಮೃತದೇಹ ಪರಿಶೀಲಿಸಿದಾಗ ತಲೆಗೆ ಗಂಭೀರ ಗಾಯವಾಗಿರುವುದು ಕಂಡು ಬಂದಿದ್ದು, ಅಪಘಾತದಿಂದ ಆಗಿರುವುದಲ್ಲ ಎಂಬ ಶಂಕೆ ಮೂಡಿದೆ. ನಂತರ ಸಂಚಾರ ಪೊಲೀಸರು ಬಾಗಲೂರು ಠಾಣೆ ಪೊಲೀಸರಿಗೆ ವಿಷಯ ತಿಳಿಸಿದರು’ ಎಂದರು.

ಬಾಗಲೂರು ಠಾಣೆ ಪೊಲೀಸರು ಅನಂತ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ. ಆರೋಪಿಯನ್ನು ಬಂಧಿಸಿದ್ದು, ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದರು.

ಬಸ್ ಹರಿದು ವ್ಯಕ್ತಿ ಸಾವು: ಚಾಲಕ ಸೆರೆ

ಬೆಂಗಳೂರು: ಮದ್ಯದ ಅಮಲಿನಲ್ಲಿ ನಿಯಂತ್ರಣ ತಪ್ಪಿ ರಸ್ತೆಯಲ್ಲಿ ಬಿದ್ದ ವ್ಯಕ್ತಿಯ ಮೇಲೆ ಬಸ್ ಹರಿದ ಪರಿಣಾಮ ಆತ ಮೃತಪಟ್ಟಿರುವ ಘಟನೆ ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಘಟನೆ ಬಳಿಕ ಪರಾರಿಯಾಗಿದ್ದ ಬಸ್ ಚಾಲಕನನ್ನು ಪೊಲೀಸರು ಬಂಧಿಸಿದ್ದಾರೆ.

ಮದ್ಯ ಕುಡಿದು ಡಿಸೆಂಬರ್ 13ರ ರಾತ್ರಿ ಹೆಗ್ಗನಹಳ್ಳಿ ಮುಖ್ಯ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಚೇತನ್ ಕುಮಾರ್ ಎಂಬುವರು ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದಾರೆ. ಅದೇ ವೇಳೆ ಹಿಂಬದಿಯಿಂದ ಬಂದ ಖಾಸಗಿ ಬಸ್ ಅವರ ಮೇಲೆ ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟರು.

ಅಪಘಾತ ನಡೆದ ಬಳಿಕ ಬಸ್ ಚಾಲಕ ನರೇಂದ್ರ ಸ್ಥಳದಿಂದ ಪರಾರಿಯಾಗಿದ್ದರು. ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಗಳ ಪರಿಶೀಲನೆ ನಡೆಸಿ, ಪೀಣ್ಯದಲ್ಲಿ ಚಾಲಕನನ್ನು ಪತ್ತೆ ಹಚ್ಚಿ ಬಂಧಿಸಲಾಗಿದೆ

ಘಟನೆಗೆ ಸಂಬಂಧಿಸಿದಂತೆ ಬಸ್ ಜಪ್ತಿ ಮಾಡಲಾಗಿದ್ದು, ಪ್ರಕರಣ ದಾಖಲಾಗಿದೆ ಎಂದು ಪಶ್ಚಿಮ ವಿಭಾಗದ (ಸಂಚಾರ) ಡಿಸಿಪಿ ಅನೂಪ್ ಎ. ಶೆಟ್ಟಿ ತಿಳಿಸಿದ್ದಾರೆ.

ಅಡ್ಡಾದಿಡ್ಡಿ ಕಾರು ಚಾಲನೆ: ಹೋಟೆಲ್ ಕ್ಯಾಷಿಯರ್ ಸಾವು

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್‌ನಲ್ಲಿ ವಿದ್ಯಾರ್ಥಿಯು ಅಡ್ಡಾದಿಡ್ಡಿ ಕಾರು ಚಾಲನೆ ಮಾಡಿದ ಪರಿಣಾಮ ಅಪಘಾತ ಸಂಭವಿಸಿ, ಹೋಟೆಲ್‌ನ ಕ್ಯಾಷಿಯರ್ ಮೃತಪಟ್ಟಿದ್ದಾರೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಸಂತೋಷ್ (28), ಎಚ್‌ಎಸ್‌ಆರ್ ಲೇಔಟ್‌ನ ಹೋಟೆಲ್‌ನಲ್ಲಿ ಕ್ಯಾಷಿಯರ್ ಆಗಿದ್ದರು. ರಾಜೀವ್‌ಗಾಂಧಿ ನಗರದ ಪೇಯಿಂಗ್ ಗೆಸ್ಟ್‌ನಲ್ಲಿ ವಾಸವಾಗಿದ್ದ ಅವರು ಸ್ನೇಹಿತರ ಜತೆ ಊಟ ಮಾಡಿ ಪಿ.ಜಿಗೆ ನಡೆದು ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ.

‘ಎಚ್‌ಎಸ್‌ಆರ್ ಲೇಔಟ್ 7ನೇ ಸೆಕ್ಟರ್‌ನ ಅಬ್ದುಲ್ ರೆಹಮಾನ್ (23) ಎಂಬಾತ ಭಾನುವಾರ ರಾತ್ರಿ ಅಡ್ಡಾದಿಡ್ಡಿಯಾಗಿ ಕಾರು ಚಾಲನೆ ಮಾಡಿಕೊಂಡು ಬಂದು, ರಸ್ತೆ ಬದಿಯಲ್ಲಿ ನಡೆದು ಹೋಗುತ್ತಿದ್ದ ಸಂತೋಷ್‌ಗೆ ಡಿಕ್ಕಿ ಹೊಡೆದು, ಬಳಿಕ ರಸ್ತೆ ಬದಿಯಲ್ಲಿ ನಿಂತಿದ್ದ ಮತ್ತೊಂದು ಕಾರಿಗೂ ಡಿಕ್ಕಿ ಹೊಡೆದಿದ್ದಾರೆ. ಅಪಘಾತದ ರಭಸಕ್ಕೆ ನಾಲ್ಕೈದು ಅಡಿ ದೂರ ಹೋಗಿ ಬಿದ್ದ ಸಂತೋಷ್‌ಗೆ ತೀವ್ರ ಪೆಟ್ಟಾಗಿ, ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಬಿಬಿಎ ವಿದ್ಯಾರ್ಥಿಯಾದ ಅಬ್ದುಲ್ ರೆಹಮಾನ್, ತನ್ನ ತಾಯಿಯ ಕಾರು ಚಾಲನೆ ಮಾಡಿಕೊಂಡು ಬಂದಿದ್ದರು. ಘಟನೆ ನಡೆದಾಗ ಸ್ನೇಹಿತ ಸಹ ಕಾರಿನಲ್ಲಿದ್ದ. ಮದ್ಯ ಕುಡಿದು ಕಾರು ಚಲಾಯಿಸುತ್ತಿದ್ದರೇ ಎಂಬುದರ ಬಗ್ಗೆ ತನಿಖೆ ಮಾಡಲಾಗುತ್ತಿದೆ. ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದು, ವರದಿ ಬಂದ ಬಳಿಕ ಹೆಚ್ಚಿನ ಮಾಹಿತಿ ಸಿಗಲಿದೆ’ ಎಂದು ಪೊಲೀಸರು ಹೇಳಿದ್ದಾರೆ.

ಅಪಘಾತದಲ್ಲಿ ಎರಡು ಕಾರುಗಳು ಜಖಂಗೊಂಡಿವೆ. ಎಚ್‌ಎಸ್‌ಆರ್ ಲೇಔಟ್ ಸಂಚಾರ ಠಾಣೆ ಪೊಲೀಸರು, ಆರೋಪಿಯನ್ನು ಬಂಧಿಸಿ, ಕಾರು ಜಪ್ತಿ ಮಾಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಜಮೀನು ಕಬಳಿಸಲು ನ್ಯಾಯಾಧೀಶರ ಸಹಿಯೇ ನಕಲು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಚಿಂತಲ ಮಡಿವಾಳದ ಮಹಿಳೆಯೊಬ್ಬರಿಗೆ ಸೇರಿದ 14 ಗುಂಟೆ ಜಾಗವನ್ನು ಕಬಳಿಸಲು ನ್ಯಾಯಾಧೀಶರು, ಭೂಮಾಲೀಕ ಮಹಿಳೆ ಮತ್ತು ಅವರ ಮಕ್ಕಳ ಸಹಿಗಳನ್ನು ನಕಲು ಮಾಡಿದ ಆರೋಪದ ಮೇಲೆ ಏಳು ಮಂದಿ ವಿರುದ್ಧ ಆನೇಕಲ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಒಟ್ಟು 16 ಸಹಿಗಳನ್ನು ನಕಲು ಮಾಡಿ ವಂಚಿಸಿದ ಆರೋಪ ಎಫ್‌ಐಆರ್‌ನಲ್ಲಿದೆ. ಪ್ರಮುಖ ಆರೋಪಿ ಹಾಗೂ ಸಹಿ ನಕಲು ಮಾಡಲು ಸಹಕರಿಸಿದ ಆರು ಆರೋಪಿಗಳು ಪರಾರಿಯಾಗಿದ್ದಾರೆ.

ಸಹಿ ನಕಲು ಮಾಡಿದ ಪ್ರಮುಖ ಆರೋಪಿ ಕೋರಮಂಗಲದ ಮುನಿರಾಜ ರಾಘವ ಅಲಿಯಾಸ್ ಮುರಾರಿ ಮುನೇಶ್ವರ ರಾವ್, ನಕಲಿ ದಾಖಲೆಗೆ ಸಹಕರಿಸಿದ ಆಂಜಿನಪ್ಪ, ಅರುಣಾಕ್ಷಿ, ಪವಿತ್ರ, ಪೂಜಾರಿ ಮತ್ತು ಸುಶ್ಮಿತಾ ತಲೆಮರೆಸಿಕೊಂಡಿದ್ದಾರೆ.

‘ಆನೇಕಲ್ ತಾಲ್ಲೂಕಿನ ಚಿಂತಲ ಮಡಿವಾಳ ಗ್ರಾಮದ ಸರ್ವೆ ನಂಬರ್ 43/2ರ 28.8 ಎಕರೆ ಜಮೀನಿನ ಪೈಕಿ 14 ಗುಂಟೆ ಜಾಗವನ್ನು ನಕಲಿ ಸಹಿ ಮತ್ತು ನಕಲಿ ದಾಖಲೆಗಳನ್ನು ಸೃಷ್ಟಿಸಿ ಕಬಳಿಕೆ ಮಾಡಿದ್ದಾರೆ. ಚಿಂತಲ ಮಡಿವಾಳದ ಸರ್ವೆ ನಂಬರ್ 43/2 ರ ಜಮೀನಿನ ಮಾಲೀಕ ವೆಂಕಟಸ್ವಾಮಿ ಮೃತಪಟ್ಟಿದ್ದರು. ಗೂಳಿಮಂಗಲದ ವೆಂಕಟಸ್ವಾಮಿ ಅವರ ಪತ್ನಿ ಜ್ಯೋತಮ್ಮ ಹೆಸರಿಗೆ ಜಮೀನಿನ ದಾಖಲೆಗಳನ್ನು ಮಾಡಿಕೊಡುತ್ತೇವೆ ಎಂದು ಸಂಬಂಧಿಯಾದ ಮುನಿ ರಾಘವ ಮತ್ತು ತಂಡದವರು ನ್ಯಾಯಾಧೀಶರ ಸಹಿಯನ್ನೇ ನಕಲು ಮಾಡಿ ವಂಚನೆ ಮಾಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಬಂಧಿಯಿಂದಲೇ ವಂಚನೆ

‘ಚಿಂತಲ ಮಡಿವಾಳದ ನಮ್ಮ ಜಾಗದ ಭಾಗಾಂಶವನ್ನು ನೀಡುವುದಾಗಿ ವಂಚಿಸಿದ್ದಾರೆ. ಇದೇ ಜಮೀನಿನಲ್ಲಿ ನನ್ನ ಪತಿಯ ಸಮಾಧಿ ಇದೆ. ಆರೋಪಿಗಳು ಕಬಳಿಸಿರುವ ಜಮೀನನ್ನು ಮರಳಿಸಬೇಕು. ಇದೇ ಜಾಗದಲ್ಲಿದ್ದ ನಮ್ಮ ಪೂರ್ವಿಕರ ಸಮಾಧಿಗಳನ್ನು ಜೆಸಿಬಿ ಮೂಲಕ ಧ್ವಂಸ ಮಾಡಲಾಗಿದೆ. ಮೋಸ ಮಾಡಿ ಜಮೀನಿನ ನಕಲಿ ದಾಖಲೆ ಸೃಷ್ಟಿಸಿ ಜಮೀನನ್ನು ಮಾರಾಟ ಮಾಡಿದ್ದಾರೆ’ ಎಂದು ಜಮೀನಿನ ಮಾಲೀಕರಾದ ಜ್ಯೋತಮ್ಮ ಆರೋಪಿಸಿದ್ದಾರೆ.

ಮರ್ಯಾದೆಗೇಡು ಹತ್ಯೆ: ಮೂವರ ವಶ

ಗರ್ಭಿಣಿ ಮಗಳನ್ನೇ ಕೊಂದಿದ್ದ ತಂದೆ, ಕುಟುಂಬಸ್ಥರು, 14 ಮಂದಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದಲ್ಲಿ ಅನ್ಯಜಾತಿ ಯುವಕನ ಮದುವೆಯಾಗಿದ್ದಕ್ಕೆ ಗರ್ಭಿಣಿ ಮೇಲೆ ತಂದೆ, ಕುಟುಂಬಸ್ಥರು ಭಾನುವಾರ ನಡೆಸಿದ್ದ ಮರ್ಯಾದೆಗೇಡು ಹತ್ಯೆ ಕೃತ್ಯದ ಸಂಬಂಧ 14ಕ್ಕೂ ಹೆಚ್ಚು ಜನರ ವಿರುದ್ಧ ಪ್ರಕರಣ ದಾಖಲಾಗಿದೆ.



ಮಾನ್ಯಾ

6 ತಿಂಗಳ ಗರ್ಭಿಣಿ ಮಾನ್ಯಾ ದೊಡ್ಡಮನಿ (19) ಮೃತರು. ಅವರ ಪತಿ ವಿವೇಕಾನಂದ ದೊಡ್ಡಮನಿ ಅವರು ಮಾನ್ಯಾ ತಂದೆ ಪ್ರಕಾಶಗೌಡ ಪಾಟೀಲ ಹಾಗೂ ಅವರ ಕುಟುಂಬದವರ ವಿರುದ್ಧ ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಹಲ್ಲೆಯಿಂದಾಗಿ ವಿವೇಕಾನಂದ ಅವರ ತಾಯಿ ರೇಣವ್ವ ಹಾಗೂ ದೊಡ್ಡಪ್ಪ ಯಲ್ಲಪ್ಪ ಅವರು ಗಂಭೀರವಾಗಿ ಗಾಯಗೊಂಡಿದ್ದು, ನಗರದ ವಿವೇಕಾನಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಏನಿದು ಪ್ರಕರಣ: ಇನಾಂ ವೀರಾಪುರ ಗ್ರಾಮದ ರೆಡ್ಡಿ ಲಿಂಗಾಯತ ಸಮುದಾಯದ ಮಾನ್ಯಾ, ಅದೇ ಗ್ರಾಮದ ಪರಿಶಿಷ್ಟ ಸಮುದಾಯದ ವಿವೇಕಾನಂದರನ್ನು ಪ್ರೀತಿಸಿ, ಮದುವೆಯಾಗಿದ್ದರು. ಜೀವ ಬೆದರಿಕೆ ಕಾರಣ ಅವರು ಧಾರವಾಡ ತಾಲ್ಲೂಕಿನ ಶಿವಳ್ಳಿಯಲ್ಲಿ ವಾಸವಿದ್ದರು.

ಡಿ.8ರಂದು ಅವರು ಇನಾಂ ವೀರಾಪುರಕ್ಕೆ ಬಂದಿದ್ದರು. ವಿಷಯ ತಿಳಿದ ಮಾನ್ಯಾ ಅವರ ತಂದೆ, ಕುಟುಂಬಸ್ಥರು, ಹೊಲದಲ್ಲಿದ್ದ ವಿವೇಕಾನಂದ ಹಾಗೂ ಅವರ ತಂದೆ ಮೇಲೆ ಹಲ್ಲೆ ನಡೆಸಿದ್ದಾರೆ. ಅವರ ಮನೆಗೆ ತೆರಳಿ ಮಾನ್ಯಾ, ಕುಟುಂಬಸ್ಥರ ಮೇಲೂ ಹಲ್ಲೆ ಮಾಡಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಮಾನ್ಯಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಗರ್ಭದಲ್ಲಿದ್ದ ಶಿಶುವೂ ಸಾವಿಗೀಡಾಗಿದೆ.

ಕೆಎಂಸಿ-ಆರ್‌ಐ ಆಸ್ಪತ್ರೆಯಲ್ಲಿ ಸೋಮವಾರ ಮಾನ್ಯಾ ಅವರ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಶವ ಹಸ್ತಾಂತರಿಸಲಾಯಿತು. ಈ ವೇಳೆ ರಾಜ್ಯ ದಲಿತ ವಿಮೋಚನಾ ಸಮಿತಿ ಕಾರ್ಯಕರ್ತರು, 'ಮಾನ್ಯಾ ಸಾವಿಗೆ ನ್ಯಾಯ ಸಿಗಬೇಕು' ಎಂದು ಘೋಷಣೆ ಕೂಗಿದರು.

'ಮದುವೆಗೆ ಮಾನ್ಯಾ ಅವರ ಪಾಲಕರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಆಗಾಗ್ಗೆ ಜೀವ ಬೆದರಿಕೆ ಹಾಕುತ್ತಿದ್ದರು. ಆರೋಪಿಗಳಿಗೆ ಗಲ್ಲು ಶಿಕ್ಷೆ ವಿಧಿಸಬೇಕು' ಎಂದು ವಿವೇಕಾನಂದ ಆಗ್ರಹಿಸಿದರು. ಬಿಗಿ ಭದ್ರತೆಯಲ್ಲಿ ಸೋಮವಾರ ಮಾನ್ಯಾ ಅಂತ್ಯಕ್ರಿಯೆ ನಡೆಯಿತು.

ಮುಖ್ಯಾಂಶಗಳು
- ಪರಿಶಿಷ್ಟ ಸಮುದಾಯದ ಯುವಕನನ್ನು ಪ್ರೀತಿಸಿ ವರಿಸಿದ್ದ ಮಾನ್ಯಾ
- ಡಿ.8ರಂದು ಇನಾಂ ವೀರಾಪುರಕ್ಕೆ ಬಂದಿದ್ದಾಗ ಕುಟುಂಬಸ್ಥರಿಂದ ಹಲ್ಲೆ
- ಆಸ್ಪತ್ರೆಯಲ್ಲಿ ಸಾವು

ಪ್ರಕರಣ ಸಂಬಂಧ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದೇವೆ. ಉಳಿದ ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ

ಗುಂಜನ್ ಆರ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಧಾರವಾಡ

ಮಾನ್ಯಾ ದೊಡ್ಡಮನಿ ಹತ್ಯೆ ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಹುಬ್ಬಳ್ಳಿಯ ಅಂಬೇಡ್ಕರ್ ವೃತ್ತದಲ್ಲಿ ದಲಿತ ವಿಮೋಚನಾ ಸಮಿತಿಯವರು ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು

'ಡೆವಿಲ್'ಗೆ ತಟ್ಟಿದ ಪೈರಸಿ ಬಿಸಿ

ಬೆಂಗಳೂರು: ನಟ ದರ್ಶನ್ ನಟನೆಯ ಡಿ.11ರಂದು ತೆರೆಕಂಡಿದ್ದ ಪ್ರಕಾಶ್ ವೀರ್ ನಿರ್ದೇಶನದ ದಿ ಡೆವಿಲ್ ಸಿನಿಮಾಕ್ಕೆ ಪೈರಸಿ ಸಮಸ್ಯೆ ಎದುರಾಗಿದೆ.

ಈವರೆಗೂ 10,500ಕ್ಕೂ ಅಧಿಕ ಪೈರಸಿ ಲಿಂಕ್ ತೆಗೆದಿರುವುದಾಗಿ ಚಿತ್ರನಿರ್ಮಾಣ ಸಂಸ್ಥೆ ಶ್ರೀ ಜೈ ಮಾತಾ ಕಂಬೈನ್ಸ್ ತಿಳಿಸಿದೆ. 'ಈ ಪೈಕಿ ಇನ್‌ಸ್ಟಾಗ್ರಾಂನಲ್ಲಿ 4 ಸಾವಿರಕ್ಕೂ ಅಧಿಕ, ಯೂಟ್ಯೂಬ್‌ನಲ್ಲಿ 2 ಸಾವಿರಕ್ಕೂ ಅಧಿಕ ಹಾಗೂ ಟೆಲಿಗ್ರಾಂನಲ್ಲಿ 200ಕ್ಕೂ ಅಧಿಕ ಲಿಂಕ್‌ಗಳಿದ್ದವು. ಪೈರಸಿ ವಿರುದ್ಧ ನಾವು ಯುದ್ಧ ಮಾಡುತ್ತಲೇ ಇದ್ದೇವೆ' ಎಂದಿದೆ.

'ಶಾಗೆ ಶರಣಾದ ಎಐಎಡಿಎಂಕೆ'

ಚೆನ್ನೈ (ಪಿಟಿಐ): ಎಸ್‌ಐಆರ್ ಅಡ್ಡದಾರಿಯ ಮೂಲಕ ಬಿಜೆಪಿಯು ಡಿಎಂಕೆ ಪಕ್ಷದ ಮತದಾರರ ಹೆಸರುಗಳನ್ನು ತೆಗೆದುಹಾಕಲು ಯತ್ನಿಸುತ್ತಿದೆ ಎಂದು ತಮಿಳುನಾಡಿನ ಡಿಸಿಎಂ ಉದಯನಿಧಿ ಸ್ಟಾಲಿನ್ ಆರೋಪಿಸಿದ್ದಾರೆ. ಜತೆಗೆ 'ವಿರೋಧ ಪಕ್ಷದ ನಾಯಕ ಎಡಪ್ಪಾಡಿ ಕೆ. ಪಳನಿಸ್ವಾಮಿ ಕೇಂದ್ರ ಸಚಿವ ಅಮಿತ್ ಶಾ ಅವರಿಗೆ ಶರಣಾಗಿದ್ದಾರೆ' ಎಂದಿದ್ದಾರೆ.

ವೈದಿಕ ಪದ್ಧತಿಯಡಿ ಮಹಿಳೆಯರ ಶೋಷಣೆ: ನಾಗಲಕ್ಷ್ಮಿ ಚೌಧರಿ

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ): 'ಅಮಾನವೀಯವಾಗಿರುವ ವೈದಿಕ ಪದ್ಧತಿಯಿಂದಾಗಿ ಶೂದ್ರ ವರ್ಗದವರ ಜೊತೆಗೆ ಮಹಿಳೆಯರ ಶೋಷಣೆ ಎಗ್ಗಿಲ್ಲದೆ ನಡೆದಿದೆ' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಸೋಮವಾರ ಇಲ್ಲಿ ಹೇಳಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ಸ್ಥಳೀಯ ಘಟಕ, ಸ್ಫೂರ್ತಿ ಚಾರಿಟಬಲ್ ಟ್ರಸ್ಟ್ ಇಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಮಹಾಪರಿನಿರ್ವಾಣ ದಿನದ ನಿಮಿತ್ತ ಆಯೋಜಿಸಿದ್ದ 'ಸದ್ಭಾವನ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

'ವೈದಿಕ ಪದ್ಧತಿ ಜಾರಿಯಲ್ಲಿದ್ದ ಕಾರಣಕ್ಕೆ ಈ ಹಿಂದೆ ಶೂದ್ರ ವರ್ಗದವರು ಗ್ರಾಮ ಪ್ರವೇಶಿಸುವಾಗ ತಮ್ಮ ಹಿಂದೆ ಪೊರಕೆ ಕಟ್ಟಿಕೊಳ್ಳಬೇಕಿತ್ತು. ಎಂದು ತಿಳಿಸಿದರು.

'ಸಂವಿಧಾನದ ಕಾರಣದಿಂದ ಶೂದ್ರ ವರ್ಗದವರ ಜೊತೆಗೆ ಎಲ್ಲ ಸಮುದಾಯದ ಮಹಿಳೆಯರಿಗೂ ನಿಜವಾದ ಸ್ವಾತಂತ್ರ್ಯ ಸಿಕ್ಕಿದೆ. ಹೆಣ್ಣು ಮಕ್ಕಳಿಗೆ ಸಮಾನ ಅವಕಾಶ ಕಲ್ಪಿಸಿರುವುದರಿಂದಲೇ ಅವರು ಸಾಂವಿಧಾನಿಕ ಹುದ್ದೆಗಳನ್ನು ಪಡೆಯಲು ಸಾಧ್ಯವಾಗಿದೆ' ಎಂದರು.

ಶಿಕ್ಷಣ, ಆರೋಗ್ಯ, ಧರ್ಮಾಚರಣೆಯಿಂದ ದೂರ ಇಡಲಾಗಿತ್ತು. ಎಲ್ಲ ಸಮುದಾಯದ ಮಹಿಳೆಯರನ್ನೂ ವೈದಿಕ ಪದ್ಧತಿಯಡಿ ಗುಲಾಮಗಿರಿಗೆ ತಳ್ಳಿ ಕೀಳಾಗಿ ಕಾಣಲಾಗುತ್ತಿತ್ತು

ನಾಗಲಕ್ಷ್ಮಿ ಚೌಧರಿ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ

'ಕಿರು ಸಂಸ್ಕರಣಾ ಘಟಕ: ಪ್ರಮಾಣಪತ್ರ ವಿನಾಯಿತ್ತಿ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆ ಯೋಜನೆ (ಪಿಎಂಎಫ್‌ಎಂಇ) ಅಡಿ ಸ್ಥಾಪಿಸಲು ಉದ್ದೇಶಿಸಿರುವ ಕಿರು ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆ ಹಾಗೂ ಕಾರ್ಯಾಚರಣೆಗೆ ಅನುಮತಿ ಪ್ರಮಾಣ ಪತ್ರದಿಂದ ವಿನಾಯಿತಿ ನೀಡಲು ಕ್ರಮವಹಿಸುವಂತೆ ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪತ್ರ ಬರೆದಿದ್ದಾರೆ.

ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ ಅವರಿಗೆ ಬರೆದಿರುವ ಪತ್ರದಲ್ಲಿ, ಈ ಬಗ್ಗೆ ಸುತ್ತೋಲೆ ಹೊರಡಿಸುವಂತೆ ಮನವಿ ಮಾಡಿದ್ದಾರೆ.

ಯೋಜನೆಯಡಿ ಸಿರಿಧಾನ್ಯ ಸಂಸ್ಕರಣಾ ಘಟಕಗಳು, ಎಣ್ಣೆ ಗಾಣಗಳು, ಬೇಕರಿ ಉತ್ಪನ್ನಗಳು, ಬೆಲ್ಲ ತಯಾರಿಸುವ ಘಟಕಗಳು, ಮಸಾಲಾ ಉತ್ಪನ್ನಗಳ ಘಟಕಗಳು, ಮೆಣಸಿನಕಾಯಿ ಹಾಗೂ ಕಾಫಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಇದರ ಯೋಜನಾ ಬಂಡವಾಳ ₹ 9 ಲಕ್ಷ ಎಂದು ಅವರು ವಿವರಿಸಿದ್ದಾರೆ.

ಈ ಘಟಕಗಳು ಪರಿಸರಕ್ಕೆ ಯಾವುದೇ ರೀತಿಯಲ್ಲಿ ಹಾನಿ ಮಾಡುವುದಿಲ್ಲ. ಪಿಎಂಎಫ್‌ಎಂಇ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶ ಕಲ್ಪಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ ಎಂದು ಅವರು ಹೇಳಿದ್ದಾರೆ.

ಕಂದಾಯ ಆಯುಕ್ತಾಲಯ, ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
1ನೇ ಮಹಡಿ, ಎಸ್.ಎಸ್.ಎಲ್.ಆರ್.ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001.
ಇ–ಮೇಲ್: bhoomi.bmc01@gmail.com ದೂರವಾಣಿ ಸಂ: 080–22113255

No: BMC/2025-26/IND0025 Date: 22/12/2025

ಇ–ಟೆಂಡರ್ ಅಧಿಸೂಚನೆ

ಭೂಮಿ ಉಸ್ತುವಾರಿ ಕೋಶ ಕಛೇರಿಯಿಂದ ಭೂಮಿ ಕೇಂದ್ರಗಳು, ಎ.ಜೆ.ಎಸ್.ಕೆ, ಮತ್ತು ಮೋಜಣಿ ಕೇಂದ್ರಕ್ಕೆ 6066 ANTI VIRUS SOFTWARE ಗಳನ್ನು ಸರಬರಾಜು ಮಾಡಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: 23/01/2026 ರ ಸಂಜೆ 5.30 ಗಂಟೆಯೊಳಗೆ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/– ಸಹಾಯಕ ಆಯುಕ್ತರು,
ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ
ವಾಸಾಸಂಇ/ವಾಪ್ರ/4620/ಸ್ಕ್ಯಾನ್/2025–26

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಚಾಮರಾಜಪೇಟೆ ವಿಭಾಗ, ಬೆಂ.ಕೇ.ನ.ಪಾಲಿಕೆ
ಅಂಗನವಾಡಿ ಕೇಂದ್ರ, 2ನೇ ಮುಖ್ಯ, ಟಿ.ಆರ್.ಮಿಲ್ ರಸ್ತೆ, ಬೆಂಗಳೂರು – 18
ಸಂಖ್ಯೆ: ಕಾಪಾಅ/ಚಾಪೇ/ಟೆಂಡರ್/ಇ–ಪ್ರೊಕ್/17/2025–26 ದಿನಾಂಕ: 22–12–2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

ದ್ವಿಲಕೋಟೆ ಪದ್ಧತಿ (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ 4) 2ನೇ ಕರೆ
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬೆಂ.ಕೇ.ನ.ಪಾಲಿಕೆ ವಲಯ–2, ಇವರು ಆಯುಕ್ತರು, ಬೆಂ.ಕೇ.ನ.ಪಾಲಿಕೆ, ಬೆಂಗಳೂರು ಕೆಪಿಡಬ್ಲ್ಯೂಡಿ/ಬೆಂ.ಕೇ.ನ.ಪಾಲಿಕೆ ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ 1ನೇ ದರ್ಜೆಯಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು/2ನೇ ಕರೆ
1	ವಾರ್ಡ್ ಸಂಖ್ಯೆ–153 ಪಾದರಾಯನಪುರದ ವಾರ್ಡ್ ವ್ಯಾಪ್ತಿಯ ಅರಾಫತ್‌ನಗರ, ಸಂಗಮ್ ವೃತ್ತ ಹಾಗೂ ಸುತ್ತಮುತ್ತ ಕಾಂಕ್ರೀಟ್ ರಸ್ತೆಗಳಲ್ಲಿ ಹದಗೆಟ್ಟ ರೀಚಸ್‌ಗಳಿಗೆ ಸಮಗ್ರ ಅಭಿವೃದ್ಧಿ ಹಾಗೂ ಚರಂಡಿಗಳು, ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮಾಡುವುದು ಮತ್ತು ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿಯನ್ನು ಹೊರತುಪಡಿಸಿ) ₹.200.00 ಲಕ್ಷಗಳು ಇಎಂಡಿ ಮೊತ್ತ: ₹.3.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**
2	ವಾರ್ಡ್ ಸಂಖ್ಯೆ–154 ರಾಯಪುರಂನ ವಾರ್ಡ್ ವ್ಯಾಪ್ತಿಯ ವಿಎಸ್ ಗಾರ್ಡನ್, ಜೆಜೆಆರ್ ನಗರ, ಹರಿಕುಂಟೆಯಲ್ಲಿ ಹದಗೆಟ್ಟ ರೀಚಸ್‌ಗಳಲ್ಲಿ ಕಾಂಕ್ರೀಟ್ ರಸ್ತೆಗಳು ಚರಂಡಿಗಳು, ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು ಮತ್ತು ಜೆಜೆಆರ್ ನಗರ, ರಂಗನಾಥ ಕಾಲೋನಿಯಲ್ಲಿ ಡಾಂಬರು ರಸ್ತೆಗಳ ಹದಗೆಟ್ಟ ರೀಚಸ್‌ಗಳನ್ನು ರೀಸರ್ಫೇಸಿಂಗ್ ಮಾಡುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿಯನ್ನು ಹೊರತುಪಡಿಸಿ) ₹.200.00 ಲಕ್ಷಗಳು ಇಎಂಡಿ ಮೊತ್ತ: ₹.3.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**
3	ವಾರ್ಡ್ ಸಂಖ್ಯೆ–155 ದೇವರಾಜಅರಸು ನಗರದ ವಾರ್ಡ್ ವ್ಯಾಪ್ತಿಯ, ಹೊಸಹಳ್ಳಿ ಮುಖ್ಯ ರಸ್ತೆ ಹಾಗೂ ವಿನಾಯಕನಗರ ಸುತ್ತಮುತ್ತ ಕಾಂಕ್ರೀಟ್ ರಸ್ತೆಗಳಲ್ಲಿ ಹದಗೆಟ್ಟ ರೀಚಸ್‌ಗಳಿಗೆ ಸಮಗ್ರ ಅಭಿವೃದ್ಧಿ ಹಾಗೂ ಚರಂಡಿಗಳು, ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮಾಡುವುದು ಮತ್ತು ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿಯನ್ನು ಹೊರತುಪಡಿಸಿ) ₹.200.00 ಲಕ್ಷಗಳು ಇಎಂಡಿ ಮೊತ್ತ: ₹.3.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**
4	ವಾರ್ಡ್ ಸಂಖ್ಯೆ–157 ಕೃಷ್ಣ ರಾಜೇಂದ್ರ ಮಾರ್ಕೆಟ್ ವಾರ್ಡ್ ವ್ಯಾಪ್ತಿಯ ಸುತ್ತಮುತ್ತ ಕಾಂಕ್ರೀಟ್ ರಸ್ತೆಗಳಲ್ಲಿ ಹದಗೆಟ್ಟ ರೀಚಸ್‌ಗಳಿಗೆ ಸಮಗ್ರ ಅಭಿವೃದ್ಧಿ ಹಾಗೂ ಚರಂಡಿಗಳು, ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮಾಡುವುದು ಮತ್ತು ಸಂಬಂಧಿತ ಕಾಮಗಾರಿಗಳು, ಮಳೆನೀರು ಕೊಯ್ಲು ಗುಂಡಿಗಳನ್ನು ಒದಗಿಸುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿಯನ್ನು ಹೊರತುಪಡಿಸಿ) ₹.200.00 ಲಕ್ಷಗಳು ಇಎಂಡಿ ಮೊತ್ತ: ₹.3.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**
5	ವಾರ್ಡ್ ಸಂಖ್ಯೆ–158 ಚಾಮರಾಜಪೇಟೆಯ ವಾರ್ಡ್ ವ್ಯಾಪ್ತಿಯ ಎಂ.ಡಿ. ಬ್ಲಾಕ್, ಶಂಕರ್ ಬಡಾವಣೆ ಹಾಗೂ ದಾಸಪ್ಪ ಗಾರ್ಡನ್ ರಸ್ತೆಗಳಲ್ಲಿ ಹದಗೆಟ್ಟ ರೀಚಸ್‌ಗಳಿಗೆ ಸಮಗ್ರ ಅಭಿವೃದ್ಧಿ ಹಾಗೂ ಚರಂಡಿಗಳು, ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮಾಡುವುದು ಮತ್ತು ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿಯನ್ನು ಹೊರತುಪಡಿಸಿ) ₹.200.00 ಲಕ್ಷಗಳು ಇಎಂಡಿ ಮೊತ್ತ: ₹.3.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**
6	ವಾರ್ಡ್ ಸಂಖ್ಯೆ–159 ಆಜಾದ್‌ನಗರದ ವಾರ್ಡ್ ವ್ಯಾಪ್ತಿಯ, ಕಸ್ತೂರಬಾನಗರ, ರುದ್ರಪ್ಪ ಗಾರ್ಡನ್ ಹಾಗೂ ವಿಠ್ಠಲ್‌ನಗರ ರಸ್ತೆಗಳಲ್ಲಿ ಹದಗೆಟ್ಟ ರೀಚಸ್‌ಗಳಿಗೆ ಸಮಗ್ರ ಅಭಿವೃದ್ಧಿ ಹಾಗೂ ಚರಂಡಿಗಳು, ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮಾಡುವುದು ಮತ್ತು ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿಯನ್ನು ಹೊರತುಪಡಿಸಿ) ₹.200.00 ಲಕ್ಷಗಳು ಇಎಂಡಿ ಮೊತ್ತ: ₹.3.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: 24–12–2025ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: 06–01–2026ರ ಸಂಜೆ 4:00 ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: 29–12–2025ರ ಬೆಳಗ್ಗೆ 11:00 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, (ಕೇಂದ್ರ, ವಲಯ–2) ಅನೆಕ್ಸರ್–3 ಜಿಬಿಎ ಮುಖ್ಯ ಕಚೇರಿ, ಬೆಂಗಳೂರು ಇಲ್ಲಿ ನಡೆಸಲಾಗುವುದು (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 07–01–2026ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (5) ತಾಂತ್ರಿಕ ಬಿಡ್ ಅನುಮೋದನೆಯ ನಂತರ ಆರ್ಥಿಕ ಬಿಡ್ ತೆರೆಯಲಾಗುತ್ತದೆ. (ಸಾಧ್ಯವಾದಲ್ಲಿ)

ಸಹಿ/– ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ

ಕರ್ನಾಟಕ ಉಚ್ಚ ನ್ಯಾಯಾಲಯ,
ಬೆಂಗಳೂರು–560001
ಸಂಖ್ಯೆ: ಹೆಚ್‌ಸಿಆರ್‌ಬಿ/ಸಿಜೆಆರ್–1/2024 ದಿನಾಂಕ : 20.12.2025

ಸಿವಿಲ್ ನ್ಯಾಯಾಧೀಶರ ನೇಮಕಾತಿಯ ಸಂಕ್ಷಿಪ್ತ ಅಧಿಸೂಚನೆ

ದಿನಾಂಕ 06.12.2025 ಮತ್ತು 07.12.2025 ರಂದು ನಡೆದಿರುವ ಸಿವಿಲ್ ನ್ಯಾಯಾಧೀಶರ ಹುದ್ದೆಯ ಮುಖ್ಯ ಲಿಖಿತ ಪರೀಕ್ಷೆಯಲ್ಲಿ ಅರ್ಹರಾಗಿರುವ ಅಭ್ಯರ್ಥಿಗಳನ್ನು ಮತ್ತು ಮೌಖಿಕ ಸಂದರ್ಶನಕ್ಕೆ ಅರ್ಹರಾಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ಸೂಚನಾ ಪತ್ರ ಸಂಖ್ಯೆ: ಹೆಚ್‌ಸಿಆರ್‌ಬಿ/ಸಿಜೆಆರ್–1/2024 ದಿನಾಂಕ 20.12.2025 ಅನ್ನು ಕರ್ನಾಟಕ ಹೈಕೋರ್ಟ್‌ನ ಅಧಿಕೃತ ವೆಬ್‌ಸೈಟ್‌ನಲ್ಲಿ https://judiciary.karnataka.gov.in ಪ್ರಕಟಿಸಲಾಗಿದೆ.

ಸಹಿ/–
ಮಹಾವಿಲೇಖನಾಧಿಕಾರಿ ಹಾಗೂ ಕಾರ್ಯದರ್ಶಿ,
ಸಿವಿಲ್ ನ್ಯಾಯಾಧೀಶರುಗಳ ನೇಮಕಾತಿ ಸಮಿತಿ,
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು,
DIPR/CP/4598/Zen/2025-26

ಕಾರ್ಕಳ ಪುರಸಭೆ
ಕಾರ್ಕಳ–574104 ಉಡುಪಿ ಜಿಲ್ಲೆ
Azadi Ka Amrit Mahotsav
TOWN MUNICIPAL COUNCIL, KARKALA, UDUPI DIST
Website: www.karkalatown.mrc.gov.in,
Email: itstaff_ulb_karkala@yahoo.co.in, tmckarkala@yahoo.co.in
Ph: 08258-230292, 08258- 231023, Fax: 08258-235664
ಕಾಪುಸ:ತಾಂತ್ರಿಕ ವಿಭಾಗ: ಸಿಆರ್: 116:2025–26 ದಿನಾಂಕ: 17.12.2025

ಕಾರ್ಕಳ ಪುರಸಭೆ
ಇ–ಟೆಂಡರ್ ಪ್ರಕಟಣೆ

ಕಾರ್ಕಳ ಪುರಸಭೆಯ 2025–26 ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನಡಿ ಈ ಕೆಳಗಿನ ಕಾಮಗಾರಿಯನ್ನು ನಿರ್ವಹಿಸಲು ಅರ್ಹ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್ ದಸ್ತಾವೇಜಿನಲ್ಲಿ (Standard tender document) ಟೆಂಡರನ್ನು KPPP ಪೋರ್ಟಲ್ (Website: kppp.karnataka.gov.in/) ಮುಖಾಂತರ ಆಹ್ವಾನಿಸಲಾಗಿದೆ.

1. DMA/2025-26/OW/WORK_INDENT52735- ರೂ. 22.95 ಲಕ್ಷ (ST)

ಪೋರ್ಟಲ್ ಮುಖಾಂತರ ಸ್ವೀಕರಿಸುವ ಕೊನೆಯ ದಿನಾಂಕ: 01/01/2026 ಅಪರಾಹ್ನ 4: 30 ಗಂಟೆ
ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 03/01/2026 ಪೂರ್ವಾಹ್ನ 10.30 ಗಂಟೆ
ಹಣಕಾಸಿನ ಬಿಡ್ಡನ್ನು ತೆರೆಯುವ ದಿನಾಂಕ: 05/01/2026 ಪೂರ್ವಾಹ್ನ 11:00 ಗಂಟೆ

ಸಹಿ/– ಮುಖ್ಯಾಧಿಕಾರಿ,
ಪುರಸಭೆ ಕಾರ್ಕಳ, ಉಡುಪಿ ಜಿಲ್ಲೆ.

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
ಆಯುಕ್ತರ ಕಛೇರಿ, ಪಶುಪಾಲನಾ ಭವನ, ಹೆಬ್ಬಾಳ, ಬೆಂಗಳೂರು–560024
ಇ–ಮೇಲ್: commissionerahvs@gmail.com ದೂರವಾಣಿ : 080-23414988
ಸಂಖ್ಯೆ: ಆಪಸಂ/ಅನಿ(ಜಾಆ)/ಉನಿ(ಜಾರೋಕಯೋ)/ವಿವ–14A/2025–26 ದಿನಾಂಕ: 22.12.2025

ಟೆಂಡರ್ ಪ್ರಕಟಣೆ
("ಕೆಪಿಪಿ ಪೋರ್ಟಲ್" ಮೂಲಕ ಮಾತ್ರ)

2025–26ನೇ ಸಾಲಿನಲ್ಲಿ LHDCP ಕಾರ್ಯಕ್ರಮದ ASCAD ಯೋಜನೆಯಡಿಯಲ್ಲಿ ಜಂತು ನಾಶಕ ಔಷಧಿಗಳನ್ನು ಖರೀದಿಸಿ, ಸರಬರಾಜು ಮಾಡಲು KPP Portal ನ ಮೂಲಕ ಒಂದು ವರ್ಷದ ಅವಧಿಗೆ ಅಲ್ಪಾವಧಿ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗಧಿಪಡಿಸಿದ ಮೊತ್ತ ರೂ. 250.00 ಲಕ್ಷಗಳು.

ಪೂರ್ಣ ಟೆಂಡರ್ ದಾಖಲೆಯನ್ನು https://kppp.karnataka.gov.in ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 22–12–2025 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು KPP Portal ನಲ್ಲಿ ದಿನಾಂಕ: 22–12–2025 ರಿಂದ ದಿನಾಂಕ: 05–01–2026 ರವರೆಗೆ 17.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ KPP Portal ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಉಪನಿರ್ದೇಶಕರು(ಎಡಿಎಸ್‌ಎಸ್)
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
DIPR/CP/4610/SA/2025-26

ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ,
ಹಂಪನಕಟ್ಟಾ, ಮಂಗಳೂರು ದ.ಕ., ಪಿನ್‌ಕೋಡ್ – 575 001.
ಇ–ಮೇಲ್ : dsdkannada@gmail.com
ಸಂಖ್ಯೆ: ಎಸ್‌ಯುಪಿ(3)/2/ಸ್ವಚ್ಛತಾ ಸಾಮಾಗ್ರಿ/25–26 ದಿನಾಂಕ: 18–12–2025

ಟೆಂಡರ್ ಅಧಿಸೂಚನೆ (ದ್ವಿ-ಲಕೋಟೆ ಪದ್ಧತಿಯಲ್ಲಿ)
(ಕೆ.ಪಿ.ಪಿ. ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)

ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು ಇಲ್ಲಿಗೆ ವಿವಿಧ ವಿಭಾಗಗಳಿಗೆ ಬೇಕಾದ ಲೇಖನ ಸಾಮಾಗ್ರಿ ಮತ್ತು ಸ್ವಚ್ಛತಾ ಸಾಮಾಗ್ರಿಗಳ ಸರಬರಾಜು ಮಾಡುವ ಬಗ್ಗೆ ಟೆಂಡರ್ ಕರೆಯಲಾಗಿದೆ. ಕೆ.ಪಿ.ಪಿ. ಕರ್ನಾಟಕ ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ : 26–12–2025 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ : kppp.karnataka.gov.in ನ್ನು ಸಂಪರ್ಕಿಸಲು ಕೋರಿದೆ.

ಟೆಂಡರ್ ನಂ. : DHFWS/2025-26/IND1722/CALL-2.

ಸಹಿ/– ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ
ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು,
ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು.
ಡಿಐಪಿಆರ್/ಮಂಗಳೂರು/1281/ಮಣಿಪಾಲ್/2025–26

ನಗರಸಭಾ ಕಾರ್ಯಾಲಯ, ದಾಂಡೇಲಿ
ಕಛೇರಿ ವಿಳಾಸ: ಸಿವಿಕ್ ಸೆಂಟರ ಏರಿಯಾ, ಜೆ.ಎನ್ ರಸ್ತೆ, ದಾಂಡೇಲಿ–581325
ಕಚೇರಿ ದೂರವಾಣಿ ಸಂಖ್ಯೆ: 08284–231482/230561 ಜನಹಿತ ದೂರವಾಣಿ ಸಂಖ್ಯೆ: 080–23108108
www.dandelicity.mrc.gov.in E-mail id: ka.dandeli.cmc@gmail.com
ಸಂಖ್ಯೆ:ದಾನಸ/ತಾಂತ್ರಿಕ/ವಿವ/ಟೆಂಡರು/2025–26 ದಿನಾಂಕ: 22–12–2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ದಾಂಡೇಲಿ ನಗರಸಭೆ 2025–26 ನೇ ಸಾಲಿನ ನಗರಸಭೆ ನಿಧಿ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಪಾರದರ್ಶಕ ಕಾಯ್ದೆ ಹಾಗೂ ನಿಯಮಾವಳಿ–2000 KPPP Portal ಮೂಲಕ ದ್ವೀ–ಲಕೋಟೆ ಪದ್ಧತಿಯಲ್ಲಿ ಐಟಂವಾರಿ KC-8 ಬಿಡ್ ಕರಾರಿನಂತೆ ಲೋಕೋಪಯೋಗಿ ಇಲಾಖೆ ನೊಂದಾಯಿತ ಹಾಗೂ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ ಸಂಖ್ಯೆ: DMA/2024-25/INDSE4761 (ಇತರೆ) ಟೆಂಡರನ್ನು ಆಹ್ವಾನಿಸಲಾಗಿದೆ. www.kppp.karnataka.gov.in ಮೂಲಕ ಟೆಂಡರ್ ಫಾರ್ಮಗಳನ್ನು ಭರ್ತಿ ಮಾಡಿ ಅರ್ಜಿಗಳನ್ನು ಸಲ್ಲಿಸುವುದು. ಹೆಚ್ಚಿನ ಮಾಹಿತಿಯನ್ನು ನಗರಸಭೆಯ ವೆಬ್‌ಸೈಟ್ www.dandelicity.mrc.gov.in ನಲ್ಲಿ ಪಡೆಯಬಹುದು.

ಟೆಂಡರು ವಿವರ: (1) ಟೆಂಡರ ಕುರಿತು ವಿಚಾರಣೆಗಾಗಿ ದಿನಾಂಕ: 06–01–2026 16:30 ಗಂಟೆಗೆ (2) ಟೆಂಡರು ಸಲ್ಲಿಸುವ ಕೊನೆಯ ದಿನಾಂಕ: 07–01–2026 16:30 ಗಂಟೆಗೆ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 08–01–2026 17:00 ಗಂಟೆಗೆ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 12–01–2026 11:00 ಗಂಟೆಗೆ

ಸಹಿ/– (ಶ್ರೀ ವಿವೇಕ ಬನ್ನೆ)KMAS
ಪೌರಾಯುಕ್ತರು, ನಗರಸಭೆ, ದಾಂಡೇಲಿ
DIPR/ADK/KSMCA/862/25-26 dt.22.12.2025

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಾರ್ಯಪಾಲಕ ಅಭಿಯಂತರರವರ ವಿಭಾಗ, ಕಛೇರಿ ಕೋಟೆ, ಬಳ್ಳಾರಿ–583 102.
ದೂರವಾಣಿ: 08392 267762 Email: eekwbbellary@gmail.com

ಟೆಂಡರ್ ಪ್ರಕಟಣೆ

ಬಿಡ್ ದಾಖಲೆಯಲ್ಲಿ ವಿವರಿಸಲಾದ ಅರ್ಹತಾ ಅವಶ್ಯಕತೆಗಳನ್ನು ಪೂರೈಸುವ ಗುತ್ತಿಗೆದಾರರು/ಫರ್ಮ್ಸ್ ರವರಿಂದ ಕೆಳಕಂಡ ಕಾಮಗಾರಿಯ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಮತ್ತು ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://kppp.karnataka.gov.in) ನಲ್ಲಿ ಪಡೆಯಬಹುದಾಗಿರುತ್ತದೆ.

ಕೆ.ಪಿ.ಪಿ. ಪೋರ್ಟಲ್ ಇಂಡೆಂಟ್ ನಂ.: 1.KUWSDB/2025-26/WS/WORK_INDENT400/Call-2. ಟೆಂಡರ್‌ಗಿಟ್ಟ ಮೊತ್ತ ರೂ. (ಜಿಎಸ್‌ಟಿ ಹೊರತುಪಡಿಸಿ): 81,67,983–00. ಇಎಂಡಿ ಮೊತ್ತ ರೂ: 1,63,000–00. ಟೆಂಡರ್ ಅವಧಿ: 04 ತಿಂಗಳು.

ಸಹಿ/–ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/826/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

1. KMCRI/SUP(5)/General Surgery /Tender-01/284/2025-26 Date: 22 -12 -2025.
2. KMCRI/SUP(5)/General Surgery /Tender-01/287/2025-26 Date: 22 -12 -2025.
3. KMCRI/SUP(5)/General Surgery /Tender-01/288/2025-26 Date: 22 -12 -2025.
4. KMCRI/SUP(5)/General Surgery /Tender-01/289/2025-26 Date: 22 -12 -2025.
5. KMCRI/SUP(5)/General Surgery /Tender-01/412/2025-26 Date: 22 -12 -2025.

ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿ ಇವರು ಅರ್ಹ ಟೆಂಡರದಾರರು, ಉತ್ಪಾದಕರು, ಅಧಿಕೃತ ಏಜೆಂಟ್ಸ್ ಮತ್ತು ಅಧಿಕೃತ ವಿತರಕರಿಂದ ಕೆ.ಎಂ.ಸಿ.&ಆರ್.ಐ. ಆಸ್ಪತ್ರೆಗೆ 1) General Surgery ವಿಭಾಗದ 1) 4K Laparoscopic set with ICG, Laparoscopy Instrument sets & Radio frequency generator with vessel sealing and bipolar resection, 2) VAAFT Fistulectomy set, 3) Laser Triple wavelength diode 4) HD Video Endoscopy, Colonoscopy & ERCP Instruments, 5) Ultrasonic with Advance Bipolar Instruments ಒಟ್ಟು 5 ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ಪಾರದರ್ಶಕ ಸಾರ್ವಜನಿಕ ಪೂರೈಕೆ ಕಾಯ್ದೆ 1999 ಶಾಸನ 2000 ಅನ್ವಯ ಇ–ಟೆಂಡರ್ ಹೊರಡಿಸಲಾಗಿದೆ. ಈ ದಾಖಲೆಗಳನ್ನು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.kppp.karnataka.gov.in ನಲ್ಲಿ ಪಡೆಯಬಹುದು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– (ನಿರ್ದೇಶಕರು),
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಅರಣ್ಯ ಪಡೆ ಮುಖ್ಯಸ್ಥರು)ರವರ ಕಛೇರಿ,
ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003
ಅಧಿಸೂಚನೆ ಸಂಖ್ಯೆ:ಬಿ9–ನೇಮಕಾತಿ–ವಿವ–1/2022–23 ದಿನಾಂಕ:19.12.2025

ಅಧಿಸೂಚನೆ
ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಆರು ತಿಂಗಳ ಅವಧಿಗೆ ನೇಮಕಾತಿ

ಸರ್ಕಾರದ ಆದೇಶ ಸಂಖ್ಯೆ : ಅಪಜೀ 171 ಅಪಸೆ 2018, ಬೆಂಗಳೂರು ದಿನಾಂಕ: 31.07.2019 ರಂತೆ ಅರಣ್ಯ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ಮೂರು(3) ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗೆ ನಿವೃತ್ತರಾದ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಗಳ ಸೇವೆಯನ್ನು [ನಿವೃತ್ತ ಸಹಾಯಕ ಆಯುಕ್ತರು(ಕಂದಾಯ)] ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಗರಿಷ್ಠ ಆರು ತಿಂಗಳ ಅವಧಿಗೆ ನೇಮಕ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನೋಂದಾಯಿತ ಅಂಚೆ / ಸ್ಪೀಡ್ ಪೋಸ್ಟ್/ಅಧಿಕೃತ ಕೊರಿಯರ್ ಮುಖಾಂತರ "ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003" ಎಂದು ವಿಳಾಸಿಸಿ "ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ ಅರ್ಜಿ" ಎಂದು ಮುಚ್ಚಿದ ಲಕೋಟೆಯಲ್ಲಿ ನಮೂದಿಸಿ ದಿನಾಂಕ 20.12.2025 ರಿಂದ 15.01.2026 ರ ಅಪರಾಹ್ನ 5.30 ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ.

ಈ ಕುರಿತು ಅರ್ಜಿ ಮತ್ತು ಅಧಿಸೂಚನೆಯನ್ನು ಕರ್ನಾಟಕ ಅರಣ್ಯ ಇಲಾಖಾ ವೆಬ್‌ಸೈಟ್ https://aranya.gov.in ದ ಮುಖಪುಟದ ಕೆಳಭಾಗದಲ್ಲಿ ಇರುವ "ನೇಮಕಾತಿ" ಶೀರ್ಷಿಕೆಯಡಿ ಪ್ರಕಟಿಸಲಾಗಿದೆ.

ಸಹಿ/–
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)
ವಾಸಾಸಂಇ/ವಾಪ್ರ/ಜಿಎ/4597/2025–26

ನಗರಾಭಿವೃದ್ಧಿ ಪ್ರಾಧಿಕಾರ ತುಮಕೂರು
ಬೆಳಗುಂಬ ರಸ್ತೆ, ತುಮಕೂರು–572103.
ಫ್ಯಾಕ್ಸ್ : 0816–2255761 ದೂರವಾಣಿ : 2272280
email: tudatmk2009@yahoo.co.in Website: tuda.co.in,
ಸಂಖ್ಯೆ:ಟಿಯುಡಿಎ/ತಾಂತ್ರಿಕ–ಎಇಇ/ಟೆಂಡರ್–01/2025–26
ದಿನಾಂಕ: 19.12.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ ಹಾಗೂ KW-1, ಮತ್ತು KW-2, ಸ್ಟಾಂಡರ್ಡ್ ಬಿಡ್ ಡಾಕ್ಯುಮೆಂಟ್ ರೀತ್ಯಾ ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆ ಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (ವೆಬ್ ವಿಳಾಸ : https//kppp.karnataka.gov.in) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಟೆಂಡರ್ ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕವೇ ನಿಗಧಿಪಡಿಸಿದ ದಿನಾಂಕ ಹಾಗೂ ಸಮಯದೊಳಗೆ ಸಲ್ಲಿಸುವುದು.

ಖಾಲಿ ಟೆಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸುವ ದಿನಾಂಕ: 20–12–2025 ರಿಂದ ದಿ. 05–01–2026 ವೇಳೆ 17–30 ಗಂಟೆಯವರೆಗೆ. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 05–01–2026 ವೇಳೆ 17–30 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ಸಮಯ ಮತ್ತು ದಿನಾಂಕ : 07–01–2026 ಬೆಳಿಗ್ಗೆ 11–30 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆಯ ನಂತರ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದು.

ಸಹಿ/– ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.
DIPR/TUM/385/KSMCA/2025-26

ಪುರಸಭೆ ಕಾರ್ಯಾಲಯ ಚಿಕ್ಕೋಡಿ
ಕ್ರ.ಸಂ:ಪುಸಚಿ:ಡಿಯುಎಲ್‌ಟಿ:2025–26 ದಿನಾಂಕ:–19.12.2025.

("ಕೆಪಿಪಿ ಪೋರ್ಟಲ್") ಟೆಂಡರ ಪ್ರಕಟಣೆ
(Notice inviting tender through KPP Portal)

ಚಿಕ್ಕೋಡಿ ಪುರಸಭೆ ವ್ಯಾಪ್ತಿಯಲ್ಲಿ ರಾಜ್ಯ ನಗರ ಸಾರಿಗೆ ಅನುದಾನದಲ್ಲಿ ಹಾಗೂ ಪುರಸಭೆ ಅನುದಾನದಲ್ಲಿ ಅಭಿವೃಧಿ ಕಾಮಗಾರಿಗಳನ್ನು ಕೈಕೋಳ್ಳುವ ಸಲುವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ದರ್ಜೆ ಗುತ್ತಿಗೆದಾರರಿಂದ ಐಟಂವಾರು ಶೀಲ ಬಂದ ಟೆಂಡರಗಳನ್ನು KW-4 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ 3, ವಿವರಗಳು 1) ಇಂಡೆಂಟ್ ಸಂಖ್ಯೆ :– 51220/call-2 ರೂ. 487.15 ಲಕ್ಷ, 2) ಇಂಡೆಂಟ್ ಸಂಖ್ಯೆ 53036 ರೂ. 2.20 ಲಕ್ಷ, 3) ಇಂಡೆಂಟ್ ಸಂಖ್ಯೆ 53035 ರೂ. 2.60 ಲಕ್ಷ, ಈ ಮೇಲೆ ತಿಳಿಸಿದ ಕಾಮಗಾರಿಯ ಕಾಲಮಿತಿ 11 ತಿಂಗಳು.

ಅ.ನಂ:1:ಖಾಲಿ ಟೆಂಡರಗಳನ್ನು On line ಮುಖಾಂತರ ಡೌನಲೋಡ ಮಾಡುವ ದಿನಾಂಕ:20.12.2025, ಅ.ನಂ:2:ಭರ್ತಿ ಮಾಡಿದ ಟೆಂಡರಗಳನ್ನು On line ಮುಖಾಂತರ ಸ್ವೀಕರಿಸುವ ಕೊನೆಯ ದಿನಾಂಕ: 05.01.2026 @ 4.00 PM, ಅ.ನಂ:3:Technical Bidನ್ನು ತೆರೆಯುವ ದಿನಾಂಕ:07.01.2026 @ 4.00 PM, ಅ.ನಂ:4:Financial Bidನ್ನು ತೆರೆಯುವ ದಿನಾಂಕ:08.01.2026 @ 11.00 AM, ಅ.ನಂ:5:Number of days to extend: 2 ದಿನಗಳು.

ಮೇಲ್ಕಾಣಿಸಿದ ಕಾಮಗಾರಿಗಳ ಎಲ್ಲಾ ವಿವರಗಳಿಗಾಗಿ ಈ–ಪ್ರೋಕ್ಯೂರಮೆಂಟ ವೇಬ ಸೈಟ www.eproc.karnataka.gov.in ನಲ್ಲಿ ಅಥವಾ ಪುರಸಭೆ ವೇಬ ಸೈಟ www.chikkoditown.mrc.gov.in ರಿಂದ ಮಾಹಿತಿ ಪಡೆಯಬಹುದಾಗಿದೆ.

ಸಹಿ/–ಮುಖ್ಯಾಧಿಕಾರಿ
ಪುರಸಭೆ, ಚಿಕ್ಕೋಡಿ
DIPR/BGM/RO-NO-1520/KSMCA/2025-26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು

ಟೆಂಡರ್ ಅಧಿಸೂಚನೆ ಸಂಖ್ಯೆ: 26/2025–26, ದಿನಾಂಕ: 18.12.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು –570010 ರವರು ಕೆ.ಡಬ್ಲ್ಯು–1 ಮತ್ತು ಕೆ.ಡಬ್ಲ್ಯು–2ರ ರೀತ್ಯ ಒಟ್ಟು 65 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಕನಿಷ್ಠ ಮೊತ್ತ ರೂ.5.00 ಲಕ್ಷಗಳು, ಮತ್ತು ಗರಿಷ್ಟ ಮೊತ್ತ ರೂ.50.00 ಲಕ್ಷಗಳು, ಇ.ಎಂ.ಡಿ ಕನಿಷ್ಠ ರೂ.0.062 ಲಕ್ಷಗಳು ಮತ್ತ ಗರಿಷ್ಟ ರೂ.1.25 ಲಕ್ಷಗಳಾಗಿರುತ್ತದೆ. ಈ ಕಾಮಗಾರಿಗಳಿಗೆ ಐಟಂವಾರು ಅಲ್ಪಾವದಿ ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್"ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕೆ.ಪಿ.ಪಿ. ಪೋರ್ಟಲ್‌ನಲ್ಲಿ" ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ. ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿರುತ್ತದೆ.: 26.12.2025 ಸಂಜೆ 12.30 ಗಂಟೆ. ಭರ್ತಿ ಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡ್‌ನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿ: 26.12.2025 ಸಂಜೆ 5.30 ಗಂಟೆ. ಬಿಡ್ ತೆರೆಯುವ ದಿ: 29.12.2025ರ ಬೆಳಿಗ್ಗೆ 11.00 ಗಂಟೆ ನಂತರ ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ "https://kppp.karnataka.gov.in" ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಕಾಮಗಾರಿಯ ಟೆಂಡರ್‌ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡ್‌ನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
DIPR/DDMYS/1401/KSMCA/797/2025-26

ಸಿಟಿ ಸಿವಿಲ್ ನ್ಯಾಯಾಲಯ,
ಬೆಂಗಳೂರು
ಸಂಖ್ಯೆ: ಸಿಸಿಸಿ.ಎಡಿಎಂ–II.43/2025/ಕ್ಲೀನಿಂಗ್ ಸಿಬ್ಬಂದಿಗಳು ದಿನಾಂಕ: 20.12.2025

ಇ–ಟೆಂಡರ್ ಪ್ರಕಟಣೆ–ಮರು ಟೆಂಡರ್

ಸಿಟಿ ಸಿವಿಲ್ ನ್ಯಾಯಾಲಯವು ಕೆಳಕಂಡ ಸೇವಾ ಗುತ್ತಿಗೆ ಒದಗಿಸಲು ಅರ್ಹ ಸಂಸ್ಥೆಗಳು/ಏಜೆನ್ಸಿಗಳು/ವ್ಯವಹಾರ ಹೊಂದಿರುವ ನಿರ್ವಾಹಕರು/ಬೆಂಗಳೂರು ನಗರದಲ್ಲಿ ಮಾತ್ರ ಶಾಖಾ ಕಚೇರಿ ಹೊಂದಿರುವ ಮಾನವ ಸಿಬ್ಬಂದಿ ಸೇವೆಗಳನ್ನು ಒದಗಿಸುವವರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in/#/portal/Auctions/live) ಮೂಲಕ ಇ–ಬಿಡ್ಡಿಂಗ್ ಪ್ರಸ್ತಾವನೆ (ಕೊಟೇಶನ್‌ಗಳು) ಗಳನ್ನು ಆಹ್ವಾನಿಸಿದೆ.

ಟೆಂಡರ್ ಸಂಖ್ಯೆ: ಎಡಿಎಂ–II.43/2025/ಅರೆಕಾಲಿಕ ಸೇವಕರು (Part Time Menials) ದಿನಾಂಕ: 20.12.2025. ಟೆಂಡರ್ ಸಂಖ್ಯೆ (ಕೆಪಿಪಿಪಿ ಇಂದ ನೀಡಿದಂತೆ): ಹೆಚ್‌ಸಿಕೆ/2025–26/ಎಸ್‌ಇ0097/ಕರೆ–2 ದಿನಾಂಕ: 20.12.2025. ಟೆಂಡರ್/ಸೇವೆಯ ಹೆಸರು: **ಬೆಂಗಳೂರು ನಗರದ ಸಿಟಿ ಸಿವಿಲ್ ನ್ಯಾಯಾಲಯ ಮತ್ತು ಅದರ ಘಟಕಗಳಿಗೆ ಸೇವಾ ಒಪ್ಪಂದದ ಆಧಾರದ ಮೇಲೆ ಹೊರಗುತ್ತಿಗೆ ಮೂಲಕ ಆವರಣದ ಒಟ್ಟು ವಿಸ್ತೀರ್ಣ ಅಂದರೆ 1,34,631.21 ಚದರ ಮೀಟರ್‌ಗೆ ಕ್ಲೀನಿಂಗ್ ಉದ್ದೇಶಕ್ಕಾಗಿ ಕ್ಲೀನಿಂಗ್ ಸಿಬ್ಬಂದಿಗಳನ್ನು ಒದಗಿಸುವುದು.** ಟೆಂಡರ್ ಗುತ್ತಿಗೆಯ ಕಾಲಾವಧಿ: **3 ವರ್ಷಗಳು,** ತೃಪ್ತಿಕರ ಗುಣಮಟ್ಟ/ಕಾರ್ಯಕ್ಷಮತೆಗೆ ಒಳಪಟ್ಟು ಅಥವಾ ಕರ್ನಾಟಕ ಸರ್ಕಾರವು ಸದರಿ ಸೇವೆಗಳನ್ನು ಸ್ಥಗಿತಗೊಳಿಸುವವರೆಗೆ ಪ್ರತಿ ವರ್ಷ ನವೀಕರಿಸಬಹುದಾಗಿದೆ. ಟೆಂಡರ್‌ಗಿಟ್ಟ ಒಟ್ಟಾರೆ ಅಂದಾಜು ಮೊತ್ತ: **ವರ್ಷಕ್ಕೆ ಸದರಿ ಸೇವೆಗಳಿಗೆ ಲೆಕ್ಕಹಾಕಿರುವುದು ಕಂಡುಬಂದಿಲ್ಲವಾದ್ದರಿಂದ ಯಾವುದೇ ಅಂದಾಜು ಮಾಡಲಾಗಿಲ್ಲ. ಕೆಪಿಪಿ ವೆಬ್‌ಸೈಟ್‌ನಲ್ಲಿ ನಮೂದಿಸಬೇಕಾದ ಅವಶ್ಯಕತೆಯಿಂದ ಟೆಂಡರ್ ವೆಚ್ಚವಾಗಿ ರೂ.50,00,000/–ಗಳನ್ನು ತೆಗೆದುಕೊಳ್ಳಲಾಗಿದೆ.** ಇಎಂಡಿ ಮೊತ್ತ: **ರೂ.50,000/–** (ಇಎಂಡಿಯು ಟೆಂಡರ್ ಅಂದಾಜು ವೆಚ್ಚಕ್ಕೆ ಯಾವುದೇ ಸಂಬಂಧಿಸಿರುವುದಿಲ್ಲ) ಪಿಬಿಜಿಯು ಟೆಂಡರ್‌ಗೆ ನೀಡಲಾದ ಮೌಲ್ಯವನ್ನು ಆಧರಿಸಿರುತ್ತದೆ. ಸ್ಪಷ್ಟೀಕರಣಕ್ಕೆ ಕೊನೆಯ **ದಿನಾಂಕ: 26.12.2025, ಮಧ್ಯಾಹ್ನ 2.00 ಗಂಟೆ.** ಟೆಂಡರ್ ಪ್ರಸ್ತಾವನೆ ಸಲ್ಲಿಸುವ ಕಡೆಯ **ದಿನಾಂಕ ಮತ್ತು ಸಮಯ: 27.12.2025, ಸಂಜೆ 5.00 ಗಂಟೆಗೆ.** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್: **29.12.2025, ಬೆಳಿಗ್ಗೆ 10.01 ಗಂಟೆ.** ಆರ್ಥಿಕ ಬಿಡ್: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.** ಬಿಡ್ ಪೂರ್ವ ಸಭೆ ದಿನಾಂಕ: **ಮೇಲ್ಕಂಡ ಕಚೇರಿಯಲ್ಲಿ 26.12.2025ರಂದು ಮಧ್ಯಾಹ್ನ 01.30 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಸದರಿ ನ್ಯಾಯಾಲಯದ ಸಂಪರ್ಕ ಸಂಖ್ಯೆ: 080–22939220, ಇ–ಮೇಲ್ ಐಡಿ: cccadm2@gmail.com ಸಂಪರ್ಕಿಸಿ.

ಸಹಿ/– ರಿಜಿಸ್ಟ್ರಾರ್, ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು.
ವಾಸಾಸಂಇ/ಉನಿ–ಸಿ.ಪಿ/4601/ಕೆಎಸ್‌ಎಂಸಿಎ/2025–26

ಬಿಸಿಯೂಟಕ್ಕೆ ಹುಳು ತಿಂದ ಗೋಧಿ

ಸಿರುಗುಪ್ಪ (ಬಳ್ಳಾರಿ ಜಿಲ್ಲೆ): ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ತಾಲ್ಲೂಕಿನ ಎಂಟಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿಗೆ ಹುಳು ತಿಂದ ಗೋಧಿ ಮತ್ತು ಇತರ ಆಹಾರ ಧಾನ್ಯ ಪೂರೈಸಲಾಗಿದೆ.

ಕಳಪೆ ದರ್ಜೆಯ ಗೋಧಿಯನ್ನು ಬಳಸಿದರೆ ಮಕ್ಕಳ ಆರೋಗ್ಯ ಹದಗೆಡಬಹುದು ಎಂದು ಶಿಕ್ಷಕರು ಅದನ್ನು ಬಳಸಿರಲಿಲ್ಲ. ವಾಪಸು ತೆಗೆದುಕೊಂಡು ಹೋಗಲು ತಿಳಿಸಿದರೂ ಪೂರೈಕೆದಾರರು ಕ್ರಮ ವಹಿಸಿಲ್ಲ ಎಂದು ಶಿಕ್ಷಕರು ಅಳಲು ತೋಡಿಕೊಂಡಿದ್ದಾರೆ.

ಶನಿವಾರ ಶಾಲೆಗಳಲ್ಲಿ ಉಪ್ಪಿಟ್ಟು, ಪಾಯಸ ಮಾಡಲಾಗುತ್ತದೆ. ಇದಕ್ಕಾಗಿ ಡಿಸೆಂಬರ್ ತಿಂಗಳಲ್ಲಿ ಪೂರೈಸಿದ್ದ ಗೋಧಿ ಹುಳು ಹಿಡಿದಿದ್ದು, ವಾಸನೆ ಬರುತ್ತಿದೆ. ಕಳಪೆ ಗೋಧಿ ಪೂರೈಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಪೋಷಕರು ಒತ್ತಾಯಿಸಿದ್ದಾರೆ.

ಸದ್ಯ ಶಾಲೆಗಳಿಗೆ ಪೂರೈಕೆಯಾಗಿರುವ ಹುಳು ಬಿದ್ದಿರುವ ಹಾಗೂ ಮುಗ್ಗಲು ಗೋಧಿಯನ್ನು ಬಳಸದಂತೆ ಎಲ್ಲಾ ಶಾಲೆಗಳ ಮುಖ್ಯ-ಶಿಕ್ಷಕರಿಗೆ ಸೂಚನೆ ನೀಡಲಾಗುವುದು ಎಂದು ಸಿರುಗುಪ್ಪ ಬಿಇಒ ಎಚ್.ಗುರಪ್ಪ ಅವರು ತಿಳಿಸಿದ್ದಾರೆ.

‘ನಮ್ಮಲ್ಲಿ ಯಾವುದೇ ಸಮಸ್ಯೆ ಇಲ್ಲ’

ಬಗೆಹರಿಸಿಕೊಳ್ಳುವಂಥದ್ದು ಏನಿದೆ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮಲ್ಲಿ ಯಾವುದೇ ಸಮಸ್ಯೆ ಇಲ್ಲ. ಇದರಲ್ಲಿ ಬಗೆಹರಿಸಿಕೊಳ್ಳುವಂಥದ್ದು ಏನಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

‘ಗೊಂದಲಗಳನ್ನು ಸ್ಥಳೀಯ ನಾಯಕರೇ ಪರಿಹರಿಸಿಕೊಳ್ಳಬೇಕು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಭಾನುವಾರ ನೀಡಿದ್ದ ಹೇಳಿಕೆಗೆ ಶಿವಕುಮಾರ್ ಪ್ರತಿಕ್ರಿಯಿಸಿದ್ದು ಹೀಗೆ.

‘ನಾನು, ಮುಖ್ಯಮಂತ್ರಿಯವರು ಹಾಗೂ ಮಲ್ಲಿಕಾರ್ಜುನ ಖರ್ಗೆಯವರು ಏನು ಹೇಳಬೇಕೋ ಹೇಳಿದ್ದೇವೆ’ ಎಂದರು.

‘ಸಮಸ್ಯೆ ಸೃಷ್ಟಿ ಮಾಡುತ್ತಿರುವವರು ನೀವೇ (ಮಾಧ್ಯಮಗಳು)’ ಎಂದೂ ಹೇಳಿದರು.

ಖರ್ಗೆ– ಎಚ್.ಕೆ. ಪಾಟೀಲ ಚರ್ಚೆ: ಮಲ್ಲಿಕಾರ್ಜುನ ಖರ್ಗೆ ಅವರನ್ನು ಸದಾಶಿವನಗರದಲ್ಲಿರುವ ಮನೆಯಲ್ಲಿ ಕಾನೂನು ಸಚಿವ ಎಚ್.ಕೆ. ಪಾಟೀಲ ಅವರು ಸೋಮವಾರ ರಾತ್ರಿ ಭೇಟಿ ಮಾಡಿ ಕೆಲಹೊತ್ತು ಮಾತುಕತೆ ನಡೆಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಪಾಟೀಲ, ‘ಖರ್ಗೆಯವರ ಜೊತೆ ರಾಜ್ಯದ ಸದ್ಯದ ರಾಜಕೀಯ ವಿದ್ಯಮಾನಗಳ ಕುರಿತು ವಿಚಾರ ವಿನಿಮಯ ನಡೆಸಿದ್ದೇನೆ. ಅದರಲ್ಲಿ ವಿಶೇಷ ಏನೂ ಇಲ್ಲ’ ಎಂದರು.

‘ಗೊಂದಲಗಳಿಂದ ಪರಿಣಾಮ’

‘ಗೊಂದಲಗಳಿಂದ ಆಡಳಿತದ ಮೇಲೆ ಪರಿಣಾಮ ಉಂಟಾಗುತ್ತದೆ. ಇದ್ದರೆ ಬಗೆಹರಿಸಿಕೊಳ್ಳಬೇಕು. ಅಧಿಕಾರಿಗಳಿಗೂ ಈ ಬಗ್ಗೆ ಸಂದೇಶ ಹೋಗಬೇಕು ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಇಲ್ಲೇ ಗೊಂದಲ ಬಗೆಹರಿಸಿಕೊಳ್ಳಿ ಎಂದು ಖರ್ಗೆಯವರು ಹೇಳಿದ್ದಾರೆ. ಹೀಗಾಗಿ, ಇಲ್ಲಿಯೇ ಬಗೆಹರಿಸಿ-ಕೊಳ್ಳಬೇಕು’ ಎಂದರು.

ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ದೆಹಲಿ ಪ್ರವಾಸದ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ, ‘ಇದೇ 27ರಂದು ಸಿಡಬ್ಲ್ಯುಸಿ ಸಭೆ ಇದೆ. ಆ ಸಭೆಯಲ್ಲಿ ಭಾಗವಹಿಸಲು ಇಬ್ಬರೂ ದೆಹಲಿಗೆ ಹೋಗುತ್ತಾರೆ. ಆ ವೇಳೆ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲೂಬಹುದು’ ಎಂದರು.

‘ಇಬ್ಬರ ಕಿತ್ತಾಟ: ಸೊರಗಿದ ಕರ್ನಾಟಕ’

ಬೆಂಗಳೂರು: ‘ಗಂಡ–ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎಂಬಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕುರ್ಚಿ ಕಿತ್ತಾಟದಲ್ಲಿ ಕರ್ನಾಟಕ ಅಭಿವೃದ್ಧಿ ಇಲ್ಲದೇ ಸೊರಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

ಈ ಕುರಿತು ‘ಎಕ್ಸ್’ ಮಾಡಿರುವ ಅವರು, ‘ಒಂದು ಕಡೆ ಸಿದ್ದರಾಮಯ್ಯ ಅವರೇನೋ ಹೈಕಮಾಂಡ್ ಬಯಸುವವರೆಗೂ ನಾನೇ ಸಿ.ಎಂ ಎಂದು ಪದೇ ಪದೇ ಪುನರುಚ್ಚಾರ ಮಾಡುತ್ತಿದ್ದಾರೆ. ಮತ್ತೊಂದು ಕಡೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೈಕಮಾಂಡ್ ಬಳಿ ಒಪ್ಪಂದ ಆಗಿದೆ, ಅಧಿಕಾರ ಹಂಚಿಕೆ ವಿಷಯ ದೆಹಲಿಯಲ್ಲಿ 5–6 ನಾಯಕರ ನಡುವೆ ನಡೆದಿರುವ ‘ಗುಟ್ಟಿನ ವ್ಯಾಪಾರ’ ಎಂದು ಹೇಳುತ್ತಾ ತಮ್ಮ ಕನಸು ನೆರವೇರಿಸಿಕೊಳ್ಳಲು ಗುಡಿ–ಗೋಪುರ ಸುತ್ತುತ್ತಿದ್ದಾರೆ’ ಎಂದು ಕಾಲೆಳೆದಿದ್ದಾರೆ.

‘ಆದರೆ, ಹೈಕಮಾಂಡ್ ಮಾತ್ರ ಇದು ರಾಜ್ಯ ಮಟ್ಟದಲ್ಲಿ ಸೃಷ್ಟಿ ಆಗಿರುವ ಗೊಂದಲ, ನೀವೇ ಬಗೆಹರಿಸಿಕೊಳ್ಳಿ ಎಂದು ಜಾರುತ್ತಿದೆ’ ಎಂದು ಹೇಳಿದ್ದಾರೆ.

6 ತಿಂಗಳಿಂದ ಸಂಬಳವಿಲ್ಲ: ‘ದಕ್ಷಿಣಕನ್ನಡ ಜಿಲ್ಲೆಯ ಕೊಲ್ಲಮೊಗ್ರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಗುತ್ತಿಗೆ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಡಾ.ಕುಲದೀಪ್ ಅವರು ಕಳೆದ ಆರು ತಿಂಗಳಿಂದ ಸಂಬಳ ದೊರೆಯದ ಕಾರಣಕ್ಕೆ ರಾಜೀನಾಮೆ ನೀಡಿರುವ ಘಟನೆ ಕಾಂಗ್ರೆಸ್ ಸರ್ಕಾರ ಎಷ್ಟು ದಿವಾಳಿ ಆಗಿದೆ ಎನ್ನುವುದಕ್ಕೆ ಮತ್ತೊಂದು ತಾಜಾ ಉದಾಹರಣೆ’ ಎಂದು ಅಶೋಕ ಹೇಳಿದ್ದಾರೆ.

‘ಹಳ್ಳಿಗಾಡಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವೈದ್ಯರು ಸಿಗುವುದೇ ಕಷ್ಟ. ಪರಿಸ್ಥಿತಿ ಹೀಗಿರುವಾಗ, ಇರುವ ವೈದ್ಯರಿಗೆ ಸಂಬಳ ಕೊಡದೆ ರಾಜೀನಾಮೆ ನೀಡುವ ಪರಿಸ್ಥಿತಿ ತಂದಿಟ್ಟರೆ, ಗ್ರಾಮೀಣ ಪ್ರದೇಶದ ಬಡ ಜನರು ಆರೋಗ್ಯ ಸೇವೆ ಪಡೆಯಲು ಏನು ಮಾಡಬೇಕು ಸ್ವಾಮಿ’ ಎಂದು ‘ಎಕ್ಸ್’ ನಲ್ಲಿ ಪ್ರಶ್ನಿಸಿದ್ದಾರೆ.

‘ಸಚಿವ ದಿನೇಶ್ ಗುಂಡೂರಾವ್ ಅವರು ಆರೋಗ್ಯ ಇಲಾಖೆ ಜವಾಬ್ದಾರಿ ವಹಿಸಿಕೊಂಡಾಗಿನಿಂದ ಇಲಾಖೆ ಅನಾರೋಗ್ಯ ಪೀಡಿತವಾಗಿದೆ. ಬರೀ ಡಿನ್ನರ್ ಮೀಟಿಂಗ್‌ಗಳಲ್ಲೇ ಕಾಲ ಕಳೆಯುತ್ತಾ ಟೈಂಪಾಸ್ ಮಾಡುತ್ತಿದ್ದಾರೆ’ ಎಂದು ಅವರು ಟೀಕಿಸಿದ್ದಾರೆ.

ಸುದ್ದಿ 2 ನಿಮಿಷ

ಸಿದ್ದರಾಮಯ್ಯ ಅವರು ಟ್ರಂಪ್‌ಗೆ ಆರ್ಥಿಕ ಸಲಹೆಗಾರರಾಗಲಿ

ಚಿಕ್ಕಮಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೊಸ ತೆರಿಗೆ ಹಾಕುವುದರಲ್ಲಿ ನಿಪುಣರು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಸಲಹೆಗಾರರಾಗಿ ಹೋಗಲಿ. ಟ್ರಂಪ್ ಅವರಿಗೆ ನೆರವಾಗುತ್ತದೆ, ರಾಜ್ಯಕ್ಕೂ ಒಳ್ಳೆಯದಾಗುತ್ತದೆ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಬಾಳೆಹೊನ್ನೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ತೆರಿಗೆ ವಿಷಯದಲ್ಲಿ ಟ್ರಂಪ್ ತಲೆಕೆಡಿಸಿಕೊಂಡಿದ್ದಾರೆ. ತಜ್ಞರು ಸಿಗದೆ ಹಿಂಸೆ ಅನುಭವಿಸುತ್ತಿದ್ದಾರೆ. ಸಿದ್ದರಾಮಯ್ಯ ಅವರ ಆರ್ಥಿಕ ಜ್ಞಾನಕ್ಕೆ ಕರ್ನಾಟಕ ರಾಜ್ಯ ಅತ್ಯಂತ ಚಿಕ್ಕದು. ಟ್ರಂಪ್ ಇಡೀ ಜಗತ್ತಿಗೆ ಏನಾದರೂ ಮಾಡಬೇಕು ಎಂದು ಹೊರಟಿದ್ದಾರೆ. ಸಿದ್ದರಾಮಯ್ಯ ಅವರು ಟ್ರಂಪ್ ಜತೆಗಿದ್ದರೆ ಎಲ್ಲರಿಗೂ ಒಳ್ಳೆಯದಾಗಲಿದೆ’ ಎಂದು ಲೇವಡಿ ಮಾಡಿದರು.

‘ಬಜೆಟ್ ನಾನೇ ಮಂಡಿಸುವೆ ಎಂದು ಸಿದ್ದರಾಮಯ್ಯ ಹೇಳುತ್ತಿದ್ದರೆ, ದೇವರ ಜತೆ ಮಾತನಾಡಿದ್ದೇನೆ ಎಂದು ಮತ್ತೊಬ್ಬರು ಹೇಳುತ್ತಾರೆ. 45 ದಿನದಲ್ಲಿ ಏನಾಗಲಿದೆಯೋ ನೋಡೋಣ. ಯಾರು ಸಿ.ಎಂ ಆದರೆ ನಮಗೇನು? ನನಗೆ ಬೇಕಿರುವುದು ರಾಜ್ಯದ ಅಭಿವೃದ್ಧಿ’ ಎಂದರು.



‘ತೆರಿಗೆ ಹಣ ಲೂಟಿಯಾಗುತ್ತಿದೆ. ಹೆಲಿಕಾಪ್ಟರ್‌ನಲ್ಲಿ ಓಡಾಡಲು ₹47 ಕೋಟಿ ಖರ್ಚು ಮಾಡಿದ್ದಾರೆ. ನನಗೆ ಆರೋಗ್ಯ ಸರಿಯಿಲ್ಲದಿದ್ದರೂ ರಸ್ತೆ ಮೂಲಕವೇ ಬಾಳೆಹೊನ್ನೂರಿಗೆ ಬಂದಿದ್ದೇನೆ. ಹೆಲಿಕಾಪ್ಟರ್‌ನಲ್ಲಿ ಓಡಾಡುವುದು ತಪ್ಪು ಎಂದಲ್ಲ. ಮೈಸೂರಿನಿಂದ ಚಾಮರಾಜನಗರಕ್ಕೆ ಅರ್ಧ ಗಂಟೆಯ ಪ್ರಯಾಣ. ಅಲ್ಲಿಗೂ ಹೆಲಿಕಾಪ್ಟರ್‌ನಲ್ಲಿ ತೆರಳುವುದು ಎಂದರೆ ಏನರ್ಥ’ ಎಂದು ಪ್ರಶ್ನಿಸಿದರು.

ಮಂಗಳೂರು: ಮುಚ್ಚಲಿವೆ 22 ಖಾಸಗಿ ಕಾಲೇಜುಗಳು

ಮಂಗಳೂರು: ಮಂಗಳೂರು ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದ್ದ 22 ಖಾಸಗಿ ಪದವಿ ಶಿಕ್ಷಣ ಕಾಲೇಜುಗಳು ಸಲ್ಲಿಸಿದ್ದ ಸ್ವಯಂ ಮುಚ್ಚುವ ಪ್ರಸ್ತಾವಗಳಿಗೆ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಸೋಮವಾರ ಅನುಮೋದನೆ ನೀಡಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ.ಪಿ.ಎಲ್.ಧರ್ಮ, ‘ಕಾಲೇಜುಗಳನ್ನು ಮುಚ್ಚಲು ಆಡಳಿತ ಮಂಡಳಿಗಳು ನಿರ್ಧರಿಸಿವೆ. ಈಗ ಪ್ರವೇಶ ಪಡೆದು ಬೇರೆ ಬೇರೆ ತರಗತಿಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗಾಗಿ ಶೈಕ್ಷಣಿಕ ಚಟುವಟಿಕೆ ಮುಂದುವರಿಸಲಿವೆ. ಅಂಕಪಟ್ಟಿ ಪರಿಶೀಲನೆ ಸೇರಿ ವಿದ್ಯಾರ್ಥಿಗಳಿಗೆ ಎಲ್ಲ ಅಗತ್ಯ ಸೇವೆಗಳನ್ನು ಒದಗಿಸಲು ಆಯಾ ಕಾಲೇಜುಗಳಿಗೆ ಸೂಚನೆ ನೀಡಲಾಗಿದೆ‘ ಎಂದರು.

ವಿದ್ಯಾರ್ಥಿಗಳ ಪ್ರವೇಶಾತಿ ಸ್ಥಗಿತ ಮತ್ತಿತರ ಕಾರಣಗಳಿಂದಾಗಿ ಈ ಕಾಲೇಜುಗಳು ಮಾನ್ಯತೆ ನವೀಕರಣಕ್ಕೆ ಅರ್ಜಿ ಸಲ್ಲಿಸಿರಲಿಲ್ಲ. 22 ಕಾಲೇಜುಗಳು ಮುಚ್ಚಿದ ಬಳಿಕ ವಿಶ್ವವಿದ್ಯಾನಿಲಯದ ಮಾನ್ಯತೆ ಹೊಂದಿರುವ ಕಾಲೇಜುಗಳ ಸಂಖ್ಯೆ 167ಕ್ಕೆ ಇಳಿಯಲಿದೆ.

ಇವುಗಳಲ್ಲಿ 109 ಖಾಸಗಿ, 32 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳು ಹಾಗೂ 9 ಸ್ವಾಯತ್ತ ಕಾಲೇಜುಗಳು, 13 ಬಿ.ಇಡಿ ಕಾಲೇಜುಗಳು ಹಾಗೂ 4 ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳು.

ಯುವಜನೋತ್ಸವ

ಚಿತ್ರ: ತಾಜುದ್ದೀನ್ ಆಜಾದ್

ಗುಲಬರ್ಗಾ ವಿಶ್ವವಿದ್ಯಾಲಯದ ಯುವಜನೋತ್ಸವದ ಸಮಾರೋಪ ಸಮಾರಂಭದಲ್ಲಿ ವಿದ್ಯಾರ್ಥಿಗಳು ಬಂಜಾರ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು

ಬಿಜೆಪಿಯವರೇಕೆ ಹೆಗಲು ಮುಟ್ಟಿ ನೋಡಿಕೊಳ್ತಾರೆ: ಸಿ.ಎಂ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಪ್ರಚೋದನಕಾರಿ ಭಾಷಣ ಮಾಡುವವರು ಮಾತ್ರ ದ್ವೇಷ ಭಾಷಣ ತಡೆ ಮಸೂದೆಯನ್ನು ವಿರೋಧಿಸುತ್ತಾರೆ. ಕುಂಬಳಕಾಯಿ ಕಳ್ಳ ಎಂದರೆ ಬಿಜೆಪಿಯವರೇಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಸೋಮವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, ‘ಸುಮ್ಮನೆ ಪ್ರಕರಣ ದಾಖಲಿಸುವುದಿಲ್ಲ’ ಎಂದು ಸ್ಪಷ್ಟಪಡಿಸಿದರು. ‘ಸಮಾಜದಲ್ಲಿ ಶಾಂತಿ ಹಾಗೂ ಸಹೋದರತ್ವ ರಕ್ಷಣೆಗೆ ಕಾಯ್ದೆ ರೂಪಿಸಲಾಗಿದೆ. ದ್ವೇಷ ಭಾಷಣ ನಿಯಂತ್ರಿಸಲೆಂದೇ ಕ್ರಮ ಕೈಗೊಂಡಿದ್ದೇವೆ. ತಾವು ದ್ವೇಷಭಾಷಣ ಮಾಡುತ್ತೇವೆಂಬ ಕಾರಣಕ್ಕೇ ಬಿಜೆಪಿಯವರು ಅದನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ’ ಎಂದು ಪ್ರತಿಪಾದಿಸಿದರು.

‘ಕೆಲವರನ್ನು ಗುರಿಯಾಗಿಸಿ ದ್ವೇಷ ಭಾಷಣ ತಡೆ ಮಸೂದೆ ರೂಪಿಸಲಾಗಿದೆ’ ಎಂಬ ಬಿಜೆಪಿ ಆರೋಪಕ್ಕೆ, ‘ಕಾಯ್ದೆ ಎಲ್ಲರಿಗೂ ಅನ್ವಯವಾಗುತ್ತದೆ. ಬಿಜೆಪಿಯವರಷ್ಟೇ ಏಕೆ ವಿರೋಧಿಸುತ್ತಾರೆ? ದ್ವೇಷ ಭಾಷಣದಿಂದ ಸಮಾಜದಲ್ಲಿ ಶಾಂತಿ ನೆಲಸುತ್ತದೆಯೇ’ ಎಂದು ಪ್ರಶ್ನಿಸಿದರು.

ಲಪಟಾಯಿಸೋದಲ್ಲ, ಹಣ ಬಿಡುಗಡೆಯಾಗಿಲ್ಲ: ‘ಗೃಹಲಕ್ಷ್ಮಿ ಯೋಜನೆಯ ಹಣ ಲಪಟಾಯಿಸಲಾಗಿದೆ’ ಎಂಬ ಬಿಜೆಪಿಯವರ ಆರೋಪಕ್ಕೆ, ‘ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ವರ್ಗಾವಣೆ ಆಗುವಾಗ ಲಪಟಾಯಿಸುವ ಪ್ರಶ್ನೆ ಎಲ್ಲಿಂದ ಬರುತ್ತದೆ? ಆ ಹಣವನ್ನು ಬೇರಾರೂ ತೆಗೆದುಕೊಳ್ಳಲಾಗುವುದಿಲ್ಲ’ ಎಂದು ತಿಳಿಸಿದರು.

‘ಫೆಬ್ರುವರಿ, ಮಾರ್ಚ್ ತಿಂಗಳ ಗೃಹಲಕ್ಷ್ಮಿ ಹಣ ಬಿಡುಗಡೆಯಾಗಿಲ್ಲ. ಪರಿಶೀಲಿಸಿ ಬಿಡುಗಡೆ ಮಾಡಲಾಗುವುದು. ಈವರೆಗೆ 23 ತಿಂಗಳ ಹಣವನ್ನು ಕೊಟ್ಟಿದ್ದೇವೆ. ಹಣವಿಲ್ಲದಿದ್ದರೆ ಇಷ್ಟೆಲ್ಲ ಕೊಡುವುದಕ್ಕೆ ಸಾಧ್ಯವಾಗುತ್ತಿತ್ತೇ?’ ಎಂದು ಅವರು ಹೇಳಿದರು.

ರಾಜ್ಯಪಾಲರಿಗೆ ಶಾಸಕ ಯತ್ನಾಳ ಪತ್ರ

ವಿಜಯಪುರ: ‘ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆ-2025’ ಅಂಗೀಕರಿಸಬಾರದೆಂದು ಕೋರಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ರಾಜ್ಯಪಾಲರಿಗೆ ಶನಿವಾರ ಪತ್ರ ಬರೆದಿದ್ದಾರೆ.

ಭಾರತೀಯ ನ್ಯಾಯ ಸಂಹಿತೆಯಲ್ಲಿ ಕ್ರಮಕ್ಕೆ ಅವಕಾಶವಿದ್ದು, ದ್ವೇಷ ಭಾಷಣ ಮಾಡಿದವರ ವಿರುದ್ಧ ಕ್ರಮಕ್ಕೆ ಪ್ರತ್ಯೇಕ ಮಸೂದೆ ಅವಶ್ಯವಿಲ್ಲ. ಆದರೆ, ಕಾಂಗ್ರೆಸ್ ಸರ್ಕಾರ ಇದನ್ನೆ ಬಳಸಿ ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲು ಮುಂದಾಗಿದೆ ಎಂದು ಆರೋಪಿಸಿದರು.

ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯಲು ಮತ್ತು ನ್ಯಾಯದ ಹಿತದೃಷ್ಟಿಯಿಂದ ಈ ಮಸೂದೆ ತಡೆಹಿಡಿಯುವುದು ಸೂಕ್ತ ಎಂದಿದ್ದಾರೆ.

‘ದ್ವೇಷ ಭಾಷಣ: ವ್ಯಾಪಕ ಚರ್ಚೆ ಬಳಿಕ ಅಂಗೀಕಾರ’

ಬೆಂಗಳೂರು: ಬೆಳಗಾವಿ ಅಧಿವೇಶನದಲ್ಲಿ ದ್ವೇಷ ಭಾಷಣ ಮಸೂದೆ ಕುರಿತು ವ್ಯಾಪಕ ಚರ್ಚೆಗೆ ಅವಕಾಶ ನೀಡಲಾಗಿತ್ತು ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ತಿಳಿಸಿದರು.

ಯು.ಟಿ. ಖಾದರ್

ಈ ಮಸೂದೆಯನ್ನು ತರಾತುರಿಯಲ್ಲಿ ಅಂಗೀಕರಿಸಿಲ್ಲ. ವಿರೋಧ ಪಕ್ಷಗಳು ಬಯಸಿದ ರೀತಿಯಲ್ಲೇ ಚರ್ಚೆಗೆ ಅವಕಾಶ ನೀಡಿದ್ದಾಗಿ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಸಚಿವರೊಬ್ಬರು ನೀಡಿದ ಹೇಳಿಕೆಯನ್ನು ಆಧರಿಸಿ ಬಿಜೆಪಿ ಸದಸ್ಯರು ಪೀಠದ ಮುಂದೆ ಬಂದು ಪ್ರತಿಭಟನೆ ನಡೆಸಿದರು. ಇದು ಎಷ್ಟರ ಮಟ್ಟಿಗೆ ಸರಿ? ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವ ಸಂದರ್ಭದಲ್ಲಿ ಈ ರೀತಿ ವರ್ತಿಸಿದ್ದು ಸರಿಯೇ’ ಎಂದು ಅವರು ಪ್ರಶ್ನಿಸಿದರು.

ಬೆಳಗಾವಿಯಲ್ಲಿ ಚಳಿಗಾಲದ ಬದಲು ಮುಂಗಾರು ಅಧಿವೇಶನ ನಡೆಸಬೇಕು ಎಂಬ ಚರ್ಚೆ ನಡೆಯುತ್ತಿದೆ. ಡಿಸೆಂಬರ್‌ನಲ್ಲಿ ಮದುವೆ ಮತ್ತು ಇತರ ಕಾರ್ಯಕ್ರಮಗಳು ನಡೆಯುತ್ತವೆ. ಆಗ ಲಾಡ್ಜ್ ಮತ್ತು ಹೋಟೆಲ್ ರೂಮ್‌ಗಳೂ ಬುಕ್ ಆಗಿರುತ್ತವೆ. ಇದರಿಂದ ಸಮಸ್ಯೆ ಆಗುತ್ತಿದೆ. ಹೀಗಾಗಿ ಮಳೆಗಾಲದಲ್ಲಿ ಅಧಿವೇಶನ ನಡೆಸಬಹುದು ಎಂಬ ಸಲಹೆಗಳು ಬಂದಿವೆ ಎಂದು ಅವರು ಹೇಳಿದರು.

‘ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು ತಪ್ಪು ಉತ್ತರ ನೀಡಿದ್ದರಿಂದ ಸದನವನ್ನು ತಪ್ಪು ದಾರಿಗೆ ಎಳೆದಂತಾಗಿದೆಯಲ್ಲವೇ’ ಎಂಬ ಪ್ರಶ್ನೆಗೆ, ‘ತಪ್ಪು ಮಾಹಿತಿ ನೀಡಿದ ಕಾರಣಕ್ಕೆ ಕ್ಷಮೆ ಕೇಳಿದ್ದಾರಲ್ಲ’ ಎಂದು ಖಾದರ್ ಹೇಳಿದರು.

ಈ ಬಾರಿ ಒಟ್ಟು 30,010 ಜನ ಕಲಾಪವನ್ನು ವೀಕ್ಷಣೆ ಮಾಡಿದ್ದು, ಈ ಪೈಕಿ 14,462 ಮಂದಿ ಶಾಲಾ ವಿದ್ಯಾರ್ಥಿಗಳು ಬಂದಿದ್ದರು ಎಂದು ಅವರು ತಿಳಿಸಿದರು.

ಚಿಟಿಕೆ ಸುದ್ದಿ

ಹಲ್ಲೆ: ಸ್ವಯಂಪ್ರೇರಿತ ಪ್ರಕರಣ ದಾಖಲು

ಬಾಗಲಕೋಟೆ: ಇಲ್ಲಿನ ದಿವ್ಯಜ್ಯೋತಿ ಅಂಧ ಮಕ್ಕಳ ಶಾಲೆಯಲ್ಲಿ ಬಾಲಕನ ಮೇಲೆ ಹಲ್ಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

‘ಮಕ್ಕಳ ಮೇಲೆ ಹಲ್ಲೆ ನಡೆಸಿರುವುದು ಬಾಲ ನ್ಯಾಯ ಕಾಯ್ದೆ ಅನ್ವಯ ಶಿಕ್ಷಾರ್ಹ ಅಪರಾಧ. ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ಸಂಬಂಧಿಸಿದವರಿಗೆ ಸೂಚಿಸಲಾಗಿದೆ’ ಎಂದು ಆಯೋಗದ ಅಧ್ಯಕ್ಷ ಶಶಿಧರ ಕೋಸುಂಬೆ ತಿಳಿಸಿದ್ದಾರೆ.

ಲೋಕಾ ಬಲೆಗೆ ಮುಖ್ಯಶಿಕ್ಷಕ

ಗಜೇಂದ್ರಗಡ (ಗದಗ ಜಿಲ್ಲೆ): ಕರಾಟೆ ತರಬೇತುದಾರನಿಗೆ ಗೌರವಧನ ಮಂಜೂರು ಮಾಡಲು ₹5 ಸಾವಿರ ಲಂಚ ಕೇಳಿದ್ದ ಮುಶಿಗೇರಿ ಗ್ರಾಮದ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಯ ಮುಖ್ಯಶಿಕ್ಷಕ ಕಳಕಪ್ಪ ರಾಜೂರ ಸೋಮವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಕಳಕಪ್ಪ ರಾಜೂರ

ಕರಾಟೆ ತರಬೇತುದಾರ ಆನಂದ ವಿರುಪಾಕ್ಷಪ್ಪ ವಾಲ್ಮೀಕಿ ವಿದ್ಯಾರ್ಥಿನಿಯರಿಗೆ ಕರಾಟೆ ತರಬೇತಿ ನೀಡಿದ್ದರು. ಗೌರವಧನ ₹9 ಸಾವಿರ ಮಂಜೂರು ಮಾಡಲು ಕೋರಿದ್ದರು.

ಅದಕ್ಕಾಗಿ ಲಂಚ ಕೇಳಿದ್ದ ಕಳಕಪ್ಪ, ಸೋಮವಾರ ₹4 ಸಾವಿರ ಲಂಚ ಪಡೆಯುವಾಗ ಸಿಕ್ಕಿಬಿದ್ದಿದ್ದಾರೆ.

ಬಿಕ್ಲು ಕೊಲೆ: 4,236 ಪುಟದ ದೋಷಾರೋಪ ಪಟ್ಟಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ 18 ಜನ ಆರೋಪಿಗಳ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ.

ಈ ಕುರಿತಂತೆ ಪ್ರಕರಣದ ಪ್ರಾಸಿಕ್ಯೂಟರ್ ಅಶೋಕ್ ಎನ್.ನಾಯಕ್ ಅವರು, ‘ಶಾಸಕರು–ಸಂಸದರ ವಿರುದ್ಧ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ಮ್ಯಾಜಿಸ್ಟ್ರೇಟ್ ಕೋರ್ಟ್ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಅವರಿಗೆ 4,236 ಪುಟಗಳಿರುವ ದೋಷಾರೋಪ ಪಟ್ಟಿಯನ್ನು ಸೋಮವಾರ ಸಲ್ಲಿಸಿದರು.

ಪ್ರಕರಣದ ಐದನೇ ಆರೋಪಿಯಾಗಿರುವ ಕೆ.ಆರ್. ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರು ಮಧ್ಯಂತರ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿರುವ ಹಿನ್ನೆಲೆ ಹಾಗೂ ತನಿಖೆ ಬಾಕಿ ಇರುವ ಕಾರಣ ಸದ್ಯದ ದೋಷಾರೋಪ ಪಟ್ಟಿಯಿಂದ ಅವರ ಹೆಸರನ್ನು ಹೊರಗಿಡಲಾಗಿದೆ. ಬೈರತಿ ಅವರ ಮಧ್ಯಂತರ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆ ಮಂಗಳವಾರ (ಡಿ.23) ಬೆಳಿಗ್ಗೆ ನಡೆಯಲಿದೆ.

ತಲೆಮರೆಸಿಕೊಂಡಿರುವ ಬೈರತಿ ಬಸವರಾಜ ಬಂಧನಕ್ಕೆ ಮೂರು ತಂಡಗಳನ್ನು ರಚಿಸಲಾಗಿದ್ದು, ಗೋವಾ, ಪುಣೆಯಲ್ಲಿ ಸಿಐಡಿ ಅಧಿಕಾರಿಗಳು ಶೋಧ ಕಾರ್ಯ ನಡೆಸುತ್ತಿದ್ದಾರೆ. ವಿಮಾನ ನಿಲ್ದಾಣಗಳಲ್ಲೂ ಕಣ್ಣಿಟ್ಟಿರುವ ಪೊಲೀಸರು, ಶಾಸಕರ ಬಂಧನಕ್ಕೆ ಕಾರ್ಯಾಚರಣೆ ತೀವ್ರಗೊಳಿಸಿದ್ದಾರೆ.

ಪ್ರಕರಣವೇನು?: ಭಾರತಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನ ಮಿನಿ ಅವೆನ್ಯೂ ರಸ್ತೆಯಲ್ಲಿರುವ ಸೇಫ್ ಮೆಡಿಕಲ್ ಸ್ಟೋರ್ ಮುಂಭಾಗ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವುನನ್ನು 2025ರ ಜುಲೈ 15ರಂದು 8 ರಿಂದ 9 ಜನರಿದ್ದ ಗುಂಪು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿತ್ತು.

ಬಳ್ಳಾರಿ ಜೈಲಿನಲ್ಲಿ 6 ಮೊಬೈಲ್ ಪತ್ತೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ನಿಷೇಧಿತ ವಸ್ತುಗಳ ಪತ್ತೆ ಕಾರ್ಯಾಚರಣೆ ಮುಂದುವರಿದಿದ್ದು, ಮತ್ತೆ 6 ಮೊಬೈಲ್ ಫೋನ್‌ಗಳು ಪತ್ತೆಯಾಗಿವೆ.

ಡಿ.20ರ ರಾತ್ರಿ 10ರಿಂದ 12ರವರೆಗೆ ಜೈಲು ಅಧೀಕ್ಷಕರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು. ಈ ವೇಳೆ ಮೂರನೇ ಬ್ಯಾರಕ್‌ನ ನೆಲದಡಿ 3 ಕೀಪ್ಯಾಡ್ ಮೊಬೈಲ್ ಫೋನ್‌ಗಳು, ಒಂದು ಚಾರ್ಜರ್, ಜನರಲ್ ಶೌಚಾಲಯದ ಮುಂಭಾಗದ ಗಿಡಗಳ ಮರೆಯಲ್ಲಿ ಮೂರು ಕೀಪ್ಯಾಡ್ ಫೋನ್‌ಗಳು ಮತ್ತು ಒಂದು ಚಾರ್ಜರ್ ಪತ್ತೆಯಾಗಿವೆ.

ಜೈಲಿನಲ್ಲಿ ಮೊಬೈಲ್ ಫೋನ್‌ಗಳು ನಿಷೇಧಿತ ವಸ್ತುಗಳಾಗಿದ್ದು, ಈ ಬಗ್ಗೆ ಅಪರಿಚಿತರ ವಿರುದ್ಧ ಬ್ರೂಸ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ. ಡಿ.17ರ ರಾತ್ರಿ ನಡೆದಿದ್ದ ತಪಾಸಣೆ ವೇಳೆ 4 ಕೀಪ್ಯಾಡ್ ಮೊಬೈಲ್ ಫೋನ್‌ಗಳು ಸಿಕ್ಕಿದ್ದವು ಎಂದು ಕಾರಾಗೃಹದ ಅಧಿಕಾರಿಗಳು ತಿಳಿಸಿದ್ದಾರೆ.

‘ಎಸ್‌ಐಆರ್‌ನಲ್ಲಿ ಭಾರಿ ತಪ್ಪು’

ಕೋಲ್ಕತ್ತ (ಪಿಟಿಐ): ಚುನಾವಣಾ ಆಯೋಗವು ಪಶ್ಚಿಮ ಬಂಗಾಳದಲ್ಲಿ ಈವರೆಗೆ ನಡೆಸಿದ ಎಸ್‌ಐಆರ್ ಪ್ರಕ್ರಿಯೆಯಲ್ಲಿ ‘ಭಾರಿ ತಪ್ಪು’ಗಳಾಗಿವೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಲ್ಲಿನ ನೇತಾಜಿ ಒಳಾಂಗಣ ಸ್ಟೇಡಿಯಂನಲ್ಲಿ ಟಿಎಂಸಿಯ ಬೂತ್ ಮಟ್ಟದ ಏಜೆಂಟ್‌ಗಳ ಸಭೆಯಲ್ಲಿ ಮಾತನಾಡಿದ ಅವರು, ‘ರಾಜ್ಯ ಸರ್ಕಾರದ ಗಮನಕ್ಕೆ ತರದೆ ಚುನಾವಣಾ ಆಯೋಗವು ವೀಕ್ಷಕರನ್ನು ನೇಮಿಸುತ್ತಿದೆ. ಅದು ಬಿಜೆಪಿಯ ಹಿತಾಸಕ್ತಿಗಳನ್ನು ಪೋಷಿಸಲು, ಅದರ ನಿರ್ದೇಶನದಂತೆ ಮಾತ್ರ ಕೆಲಸ ಮಾಡುತ್ತಿದೆ’ ಎಂದು ಆರೋಪಿಸಿದ್ದಾರೆ.

‘ಎಸ್‌ಐಆರ್ ವಿಚಾರಣೆಗಳಿಗೆ ವೀಕ್ಷಕರಾಗಿ ನೇಮಕಗೊಂಡಿರುವ ಕೇಂದ್ರದ ಅಧಿಕಾರಿಗಳಿಗೆ ಸ್ಥಳೀಯ ಭಾಷೆಯ ಬಗ್ಗೆ ಸರಿಯಾದ ಜ್ಞಾನವಿಲ್ಲ. ಪರಿಶೀಲನೆಗಳನ್ನು ನಡೆಸಲು ಅವರು ಅನರ್ಹರು’ ಎಂದು ಪ್ರತಿಪಾದಿಸಿದ್ದಾರೆ.

ಪ್ರಜಾವಾಣಿ ಸಾಧಕಿಯರು

ನಾಮ ನಿರ್ದೇಶನಗಳಿಗೆ ಆಹ್ವಾನ

ಪ್ರಜಾವಾಣಿ ಸಾಧಕಿಯರು

‘ಪ್ರಜಾವಾಣಿ ಸಾಧಕಿಯರು’ ಪ್ರಶಸ್ತಿಗೆ ನಾಮ ನಿರ್ದೇಶನಗಳನ್ನು ಆಹ್ವಾನಿಸಲಾಗಿದೆ. ತಮ್ಮ ವೃತ್ತಿ ಅಥವಾ ಪ್ರವೃತ್ತಿ ಮೂಲಕ ಸುತ್ತಲಿನ ಜನರ ಬದುಕು ಪರಿವರ್ತನೆಗೊಳ್ಳಲು, ಇನ್ನಷ್ಟು ಉತ್ತಮಗೊಳ್ಳಲು ಕಾರಣರಾದ ಅಸಾಮಾನ್ಯ ಮಹಿಳೆಯರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ನೀವು ಅಂಥವರಲ್ಲಿ ಒಬ್ಬರಾಗಿದ್ದರೆ ಅಥವಾ ನಿಮ್ಮ ಪರಿಚಿತ ವಲಯದಲ್ಲಿ ಅಂತಹ ಅಪೂರ್ವ ಮಹಿಳೆಯರು ಇದ್ದರೆ ಅವರ ವಿವರಗಳನ್ನು ನಮಗೆ ಕಳುಹಿಸಿ ಕೊಡಿ.

ವಿವರ ನಮ್ಮ ಕೈಸೇರಬೇಕಾದ ಕೊನೆಯ ದಿನಾಂಕ

ಜನವರಿ 05, 2026

ಕಳುಹಿಸಬೇಕಾದ ವಿಳಾಸ

pv@prajavani.co.in

(ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕವೂ ನಾಮ ನಿರ್ದೇಶನಗಳನ್ನು ಕಳುಹಿಸಬಹುದು)

ಮಂಗಳೂರಿನ ನವಮಂಗಳೂರು ಬಂದರಿಗೆ ಬಹಮಾಸ್‌ನ ‘ಮೆ.ಸೆವೆನ್ ಸೀಸ್ ನೇವಿಗೇಟರ್’ ಐಷಾರಾಮಿ ಪ್ರವಾಸಿ ಹಡಗು ಸೋಮವಾರ ತಲುಪಿತು. ಹಡಗಿನಲ್ಲಿ 450 ಪ್ರಯಾಣಿಕರು ಹಾಗೂ 360 ಸಿಬ್ಬಂದಿ ಇದ್ದರು

ಅಮೃತ ವಿಶ್ವವಿದ್ಯಾಪೀಠದಿಂದ ಎಐ ಸಂಶೋಧನಾ ವರದಿ

ಕೇರಳದ ಕೊಲ್ಲಂನ ಅಮೃತಪುರಿಯಲ್ಲಿ 'ಪ್ರಿನ್ಸಿಪಲ್ಸ್ ಫಾರ್ ಎಥಿಕಲ್ ಆ್ಯಂಡ್ ಸೇಫ್ ಏಜೆಂಟಿಕ್ ಎಐ ಆರ್ಕೇಸ್ಟ್ರೇಷನ್ ಅಕ್ರೋಸ್ ಇನ್‌ಫ್ರಾಸ್ಟ್ರಕ್ಚರ್ ಗ್ರೇಡಿಯಂಟ್ಸ್' ಶೀರ್ಷಿಕೆಯಡಿ ಎಐ ಸಂಶೋಧನಾ ವರದಿ ಬಿಡುಗಡೆ!

ಬೆಂಗಳೂರು : ಕೇರಳದ ಕೊಲ್ಲಂ ಜಿಲ್ಲೆಯ ಅಮೃತಪುರಿಯ ಅಮೃತ ವಿಶ್ವ ವಿದ್ಯಾಪೀಠದಿಂದ 'ಪ್ರಿನ್ಸಿಪಲ್ಸ್ ಫಾರ್ ಎಥಿಕಲ್ ಆ್ಯಂಡ್ ಸೇಫ್ ಏಜೆಂಟಿಕ್ ಎಐ ಆರ್ಕೇಸ್ಟ್ರೇಷನ್ ಅಕ್ರೋಸ್ ಇನ್‌ಫ್ರಾಸ್ಟ್ರಕ್ಚರ್ ಗ್ರೇಡಿಯಂಟ್ಸ್' ಶೀರ್ಷಿಕೆಯ ಎಐ ಸಂಶೋಧನಾ ವರದಿ ಬಿಡುಗಡೆಗೊಳಿಸಲಾಯಿತು. ಕೇಂದ್ರದ ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದಿಂದ ಆಯೋಜಿಸಲಾಗುವ 2026ರ ಎಐ ಇಂಪಾಕ್ಟ್ ಶೃಂಗಸಭೆಯ ಪೂರ್ವಭಾವಿಯಾಗಿ ಅಮೃತಪುರಿ ಕ್ಯಾಂಪಸ್‌ನಲ್ಲಿ 'ಎಐ ಸುರಕ್ಷತಾ ಸಮಾವೇಶ'ವನ್ನು ಆಯೋಜಿಸಲಾಗಿತ್ತು. ಸಮಾವೇಶದಲ್ಲಿ 'ಸೇಫ್ ಎಐ ಫಾರ್ ಗ್ಲೋಬಲ್ ಸೌತ್' ಎಂಬ ಥೀಮ್‌ನಡಿ ಸಂವಾದ ಕಾರ್ಯಕ್ರಮ ನಡೆಯಿತು. ಅಮೃತಪುರಿಯ ಅಮೃತ ವಿಶ್ವ ವಿದ್ಯಾಪೀಠದಲ್ಲಿ ಶ್ವೇತಪತ್ರವನ್ನು ಬಿಡುಗಡೆ ಮಾಡುವ ಮೂಲಕ ದೃಢ ಮತ್ತು ಜವಾಬ್ದಾರಿಯುತ ಎಐ ವ್ಯವಸ್ಥೆ ನಿರ್ಮಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಎಂದು ವಿಶ್ವವಿದ್ಯಾಲಯದ ಗಣ್ಯರು ತಿಳಿಸಿದ್ದಾರೆ. ಭಾರತ ಮತ್ತು ಜಾಗತಿಕ ವಲಯದ ಸಾಮಾಜಿಕ, ಆರ್ಥಿಕ ಮತ್ತು ಮೂಲಸೌಕರ್ಯ ವಿಭಾಗಗಳ ಅಭಿವೃದ್ಧಿಗೆ ಎಐ ಕಾರ್ಯನಿರ್ವಹಣೆಗೆ ಇದೊಂದು ಮಾರ್ಗಸೂಚಿಯಾಗಲಿದೆ ಎಂದು ಅಭಿಪ್ರಾಯ ವ್ಯಕ್ತವಾಯಿತು.

ಏನಿದು ಎಐ ಸಂಶೋಧನಾ ವರದಿ? : ಪ್ರಸ್ತುತ ಸಮಾಜದಲ್ಲಿ ಅಗತ್ಯವೆನಿಸಿರುವ ಆರೋಗ್ಯ, ರಕ್ಷಣೆ, ಶಿಕ್ಷಣ, ಹಣಕಾಸು, ಇಂಧನ ಮತ್ತು ಸಾರ್ವಜನಿಕ ಸೇವೆಗಳಂತಹಾ ನಿರ್ಣಾಯಕ ವಲಯಗಳಲ್ಲಿ ಎಐನ ಜವಾಬ್ದಾರಿಯುತ ಬಳಕೆಗೆ ಕೆಲವೊಂದು ನಿಬಂಧನೆಗಳು, ಚೌಕಟ್ಟುಗಳು ಬೇಕಾಗುತ್ತವೆ. ಇಂತಹ ಮಾನದಂಡಗಳನ್ನು ಒಳಗೊಂಡ ಅಂಶಗಳನ್ನು ಕೇಂದ್ರೀಕರಿಸಿ ಈ ವರದಿ ಸಿದ್ಧಪಡಿಸಲಾಗಿದೆ. ಈ ವರದಿ ಎಐ ಬಳಕೆಯಲ್ಲಿ ಸುರಕ್ಷತೆ, ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಮಾನವನ ಮೇಲ್ವಿಚಾರಣೆ ಸೇರಿ ಕೆಲ ಪ್ರಮುಖ ಅಂಶಗಳನ್ನು ಎತ್ತಿಹಿಡಿದಿದೆ. ಜತೆಗೆ, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಈ ಬಗ್ಗೆ ರಚನಾತ್ಮಕ ಮಾರ್ಗದರ್ಶನ ಮಾಡಲಿದೆ. ಸಂಶೋಧನಾ ವರದಿ ಬಿಡುಗಡೆಯೊಂದಿಗೆ, ಆರೋಗ್ಯ, ರಕ್ಷಣೆ, ಶಿಕ್ಷಣ ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಎಐ ಬಳಕೆಯ ಕುರಿತು ತೆಗೆದುಕೊಳ್ಳಬೇಕಿರುವ ಸುರಕ್ಷತಾ ಕ್ರಮಗಳ ಕುರಿತು ಸಂವಾದವನ್ನು ಏರ್ಪಡಿಸಲಾಗಿತ್ತು. ಸಮಾವೇಶದಲ್ಲಿ 300 ಪ್ರತಿನಿಧಿಗಳು ಪಾಲ್ಗೊಂಡು ಸಮರ್ಥವಾದ ಚರ್ಚೆ ನಡೆಸಿದರು. ಒಟ್ಟಾರೆ, ಜಾಗತಿಕ ಬೆಳವಣಿಗೆಯಲ್ಲಿ ಎಐ ಪಾತ್ರ ಮತ್ತು ಕೈಗೊಳ್ಳಬೇಕಿರುವ ಸುರಕ್ಷತಾ ಕ್ರಮಗಳ ಕುರಿತ ಚರ್ಚೆಗೆ ಸಮಾವೇಶ ಸಾಕ್ಷಿಯಾಯಿತು.

ಜಾಗತಿಕ ಗಣ್ಯರ ಸಮಾಗಮ: ಸಮಾವೇಶದಲ್ಲಿ ಜಾಗತಿಕ ಮತ್ತು ರಾಷ್ಟ್ರೀಯ ನಾಯಕರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕೇಂದ್ರ ಐಟಿ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮತ್ತು ಇಂಡಿಯಾ ಎಐ ಮಿಷನ್‌ನ ಸಿಇಒ ಅಭಿಷೇಕ್ ಸಿಂಗ್, ಯುನೆಸ್ಕೋದ ಸಹಾಯಕ ಮಹಾನಿರ್ದೇಶಕಿ ಗೇಬ್ರಿಯೆಲಾ ರಾಮೋಸ್, ಮಾರಿಷಸ್‌ನ ಐಸಿಟಿ ಸಚಿವ ಡಾ.ಅವಿನಾಶ್ ರಾಮ್ತೋಹುಲ್, ಎನ್‌ಪಿಒಎಲ್ ಡಿಆರ್‌ಡಿಒ ನಿರ್ದೇಶಕ ಮತ್ತು ವಿಜ್ಞಾನಿ ಡಾ.ಡಿ.ಶೇಷಗಿರಿ, ನಾಸ್ಕಾಮ್‌ನ ಎಐ ಮುಖ್ಯಸ್ಥ ಅಂಕಿತ್ ಬೋಸ್, ಮಿಡಲ್ ಈಸ್ಟ್‌ನ ಮೆಕೆನ್ಸೆ ಎಐ ಕ್ವಾಂಟಮ್ ಬ್ಲಾಕ್‌ನ ಪಾಲುದಾರ ವಿನಯ್ ಚಂದ್ರನ್, ವಿಶ್ವವಿದ್ಯಾಲಯದ ಪ್ರೊ.ವೈಸ್ ಚಾನ್ಸಲರ್ ಡಾ.ಮನೀಷಾ ವಿ. ರಮೇಶ್, ಡೀನ್ ಡಾ.ಕೃಷ್ಣಶ್ರೀ ಅಚ್ಯುತನ್, ಎಂಜಿನಿಯರಿಂಗ್ ವಿಭಾಗದ ಅಸೋಸಿಯೇಟ್ ಡೀನ್ ಡಾ. ಎಸ್.ಎನ್.ಜ್ಯೋತಿ, ಎಐ ಸೇಫ್ಟಿ ರಿಸರ್ಚ್ ಲ್ಯಾಬ್ ಮುಖ್ಯಸ್ಥ ಡಾ.ಶಿವರಾಮಕೃಷ್ಣನ್ ಆರ್. ಗುರುವಾಯೂರ್ ಸೇರಿದಂತೆ ಇನ್ನಿತರ ಗಣ್ಯರು ಇದ್ದರು.

ಕೇರಳದ ಕೊಲ್ಲಂ ಜಿಲ್ಲೆಯ ಅಮೃತಪುರಿಯ ಅಮೃತ ವಿಶ್ವವಿದ್ಯಾಪೀಠದಲ್ಲಿ ಎಐ ಸಂಶೋಧನಾ ವರದಿ ಬಿಡುಗಡೆಗೊಳಿಸಲಾಯಿತು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಅಕ್ಕಿ ಆಲೂರಿನಲ್ಲಿ ಹಳೇ ವಿದ್ಯಾರ್ಥಿಗಳು– ಅಭಿಮಾನಿಗಳಿಂದ ಗುರುವಂದನೆ

ನಿವೃತ್ತ ಶಿಕ್ಷಕಗೆ 43 ಲೀ. ರಕ್ತದ ತುಲಾಭಾರ

ಪ್ರಜಾವಾಣಿ ವಾರ್ತೆ

ಹಾವೇರಿ: ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದ ಪಿ.ಆರ್. ಮಠ ಅವರ 80ನೇ ಜನ್ಮದಿನವನ್ನು ಹಾನಗಲ್ ತಾಲ್ಲೂಕು ಅಕ್ಕಿಆಲೂರುನಲ್ಲಿ ಅರ್ಥಪೂರ್ಣವಾಗಿ ಆಚರಿಸಿದ ಹಳೇ ವಿದ್ಯಾರ್ಥಿಗಳು, ಅಭಿಮಾನಿಗಳು, 43 ಲೀಟರ್ ರಕ್ತ ಮತ್ತು ಪುಸ್ತಕದಿಂದ ತುಲಾಭಾರ ಮಾಡಿದ್ದಾರೆ.

ಗ್ರಾಮದ ನರಸಿಂಗರಾವ್ ದೇಸಾಯಿ ಪ್ರೌಢಶಾಲೆ ಹಾಗೂ ಸಿಂಧೂರು ಸಿದ್ದಪ್ಪ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಪಿ.ಆರ್.ಮಠ ಅವರು ಇಂಗ್ಲಿಷ್ ವಿಷಯದ ಶಿಕ್ಷಕರಾಗಿ 35 ವರ್ಷ ಕೆಲಸ ಮಾಡಿದ್ದರು. ಅವರ ಶಿಷ್ಯರು ಸರ್ಕಾರಿ ಉದ್ಯೋಗ ಸೇರಿ, ವಿವಿಧ ಕೆಲಸಗಳಲ್ಲಿದ್ದಾರೆ.

ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಅಕ್ಕಿಆಲೂರಿನಲ್ಲಿ ನಿವೃತ್ತ ಶಿಕ್ಷಕ ಪಿ.ಆರ್ ಮಠ ಅವರಿಗೆ ಹಳೇ ವಿದ್ಯಾರ್ಥಿಗಳು ರಕ್ತದ ತುಲಾಭಾರ ಮಾಡಿದರು

ನೆಚ್ಚಿನ ಶಿಕ್ಷಕರ 80ನೇ ಜನ್ಮದಿನ ಆಚರಿಸಲು ಶಿಷ್ಯ ವೃಂದ ಮತ್ತು ಅಭಿಮಾನಿ ಬಳಗ ರಚಿಸಿ, ದುಂಡಿ ಬಸವೇಶ್ವರ ಜನಪದ ಕಲಾ ಸಂಘ, ಸ್ನೇಹ ಮೈತ್ರಿ ಬ್ಲಡ್ ಆರ್ಮಿ, ಜಿಲ್ಲಾ ರಕ್ತನಿಧಿ ಕೇಂದ್ರದ ಸಹಕಾರದೊಂದಿಗೆ ಕುಮಾರೇಶ್ವರ ಕಲ್ಯಾಣ ಮಂಟಪದಲ್ಲಿ ಶನಿವಾರ (ಡಿ. 20) ರಕ್ತದಾನ ಶಿಬಿರ ಏರ್ಪಡಿಸಿದ್ದರು.

ಹಳೆ ವಿದ್ಯಾರ್ಥಿಗಳು ಹಾಗೂ ಅಭಿಮಾನಿಗಳು ಸೇರಿ 108 ಮಂದಿ (35 ಮಹಿಳೆಯರು) ರಕ್ತದಾನ ಮಾಡಿದ್ದು, 43 ಲೀಟರ್ ರಕ್ತ ಸಂಗ್ರಹವಾಗಿತ್ತು. ರಕ್ತದ ಬಾಕ್ಸ್ ಇಟ್ಟು ತುಲಾಭಾರ ಮಾಡಿದರು.

‘ಅಕ್ಕಿಆಲೂರು ರಕ್ತದಾನಕ್ಕೆ ಹೆಸರಾಗಿದ್ದು, ಗುರುಗಳಿಗೆ ಭಿನ್ನವಾಗಿ ನಮನ ಸಲ್ಲಿಸಿ ರಕ್ತವನ್ನು ರಕ್ತನಿಧಿಗೆ ನೀಡಲಾಗಿದೆ. ಪುಸ್ತಕಗಳಿಂದಲೂ ತುಲಾಭಾರ ನಡೆಸಿದ್ದು, 80 ಸಸಿಗಳನ್ನು ನೆಡಲಾಗಿದೆ’ ಎಂದು ದುಂಡಿ ಬಸವೇಶ್ವರ ಜನಪದ ಕಲಾ ಸಂಘದ ಅಧ್ಯಕ್ಷ ಬಸವರಾಜ ಕೋರಿ ತಿಳಿಸಿದರು.

ಕಾಂಗ್ರೆಸ್‌ಗಿಂತ 12 ಪಟ್ಟು ದೇಣಿಗೆ ಬಿಜೆಪಿಗೆ

ಬಿಜೆಪಿಗೆ ಕಳೆದ ವರ್ಷಕ್ಕಿಂತಲೂ ಶೇ 53ರಷ್ಟು ಹೆಚ್ಚು ದೇಣಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಸೇರಿದಂತೆ ಹಲವು ಪ್ರಮುಖ ರಾಜಕೀಯ ಪಕ್ಷಗಳು 2023–24ನೇ ಸಾಲಿನಲ್ಲಿ ಪಡೆದಿದ್ದಕ್ಕಿಂತಲೂ ಕಡಿಮೆ ದೇಣಿಗೆಯನ್ನು 2024–25ರಲ್ಲಿ ಪಡೆದುಕೊಂಡಿವೆ. ಆದರೆ, ಆಡಳಿತಾರೂಢ ಪಕ್ಷವಾಗಿರುವ ಬಿಜೆಪಿ ಇದೇ ಅವಧಿಯಲ್ಲಿ ಕಳೆದ ವರ್ಷಕ್ಕಿಂತಲೂ ಶೇ53ರಷ್ಟು ಹೆಚ್ಚು ದೇಣಿಗೆ ಪಡೆದಿದೆ.

ದೇಣಿಗೆ ಸಂಗ್ರಹ ಮತ್ತು ಲೆಕ್ಕ ಪರಿಶೋಧನಾ ವರದಿಯನ್ನು ರಾಜಕೀಯ ಪಕ್ಷಗಳು ಚುನಾವಣಾ ಆಯೋಗಕ್ಕೆ ಸಲ್ಲಿಸಿವೆ. ಆ ಪ್ರಕಾರ, 2024ರ ಲೋಕಸಭಾ ಚುನಾವಣೆ ಸಮೀಪದಲ್ಲೇ ಅಂದರೆ, 2023–24ನೇ ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕ ಹಾಗೂ 2024–25ರ ಮೊದಲ ತ್ರೈಮಾಸಿಕದ ಅವಧಿಯಲ್ಲಿ ರಾಜಕೀಯ ಪಕ್ಷಗಳು ಹೆಚ್ಚು ದೇಣಿಗೆ ಪಡೆದಿರುವುದು ವರದಿಯಾಗಿದೆ.

ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ವೈಎಸ್‌ಆರ್ ಕಾಂಗ್ರೆಸ್, ಬಿಜೆಡಿ, ಟಿಡಿಪಿ ಹಾಗೂ ಬಿಆರ್‌ಎಸ್ ಪಕ್ಷಗಳ ದೇಣಿಗೆ ಸಂಗ್ರಹದಲ್ಲಿ ಇಳಿಕೆ ದಾಖಲಾಗಿದೆ. ಇತ್ತ ಬಿಜೆಪಿ, ಜೆಡಿ(ಯು), ಸಮಾಜವಾದಿ ಪಕ್ಷ, ಸಿಪಿಐ (ಎಂಎಲ್) ಸೇರಿ ಇನ್ನೂ ಕೆಲವು ಪಕ್ಷಗಳ ದೇಣಿಗೆ ಹೆಚ್ಚಳವಾಗಿದೆ.

ಕಾಂಗ್ರೆಸ್‌ಗೆ ದೊರೆತಿರುವ ದೇಣಿಗೆಗಿಂತಲೂ ಬಿಜೆಪಿ ಪಡೆದಿರುವ ದೇಣಿಗೆ 12 ಪಟ್ಟು ಹೆಚ್ಚಾಗಿದೆ. ಕಾಂಗ್ರೆಸ್ ಪಡೆದ ಒಟ್ಟು ದೇಣಿಗೆಯಲ್ಲಿ ರಾಹುಲ್ ಗಾಂಧಿ ಅವರು ಪಕ್ಷಕ್ಕೆ ನೀಡಿದ ₹2.30 ಲಕ್ಷ, ಪಿ. ಚಿದಂಬರಂ ಕೊಟ್ಟ ₹3 ಕೋಟಿ, ಪ್ರಿಯಾಂಕಾ ಗಾಂಧಿ ವಾದ್ರಾ ನೀಡಿರುವ ₹2.30 ಲಕ್ಷ, ಕೆ.ಸಿ. ವೇಣುಗೋಪಾಲ್ ಅವರು ನೀಡಿದ ₹1.90 ಲಕ್ಷವೂ ಸೇರಿದೆ.

ದೇಣಿಗೆ ಸಂಗ್ರಹ ಮಾಹಿತಿ

ಕೋಟಿಗಳಲ್ಲಿ

ಪಕ್ಷ	2023-24	2024-25
ಬಿಜೆಪಿ	3,967	6,088
ಕಾಂಗ್ರೆಸ್	1,129.66	522.13
ಟಿಎಂಸಿ	646.39	184.08
ವೈಎಸ್‌ಆರ್ ಕಾಂಗ್ರೆಸ್	184.11	140.05
ಟಿಡಿಪಿ	274.65	85.20
ಬಿಜೆಡಿ	245.5	60
ಜೆಡಿಯು	4.35	18.69

‘ತನಿಖೆಯಲ್ಲಿ ಹಸ್ತಕ್ಷೇಪ’

ಕೊಚ್ಚಿ (ಪಿಟಿಐ): ‘ಶಬರಿಮಲೆ ದೇಗುಲದ ಚಿನ್ನ ಕಳವು ಪ್ರಕರಣದ ಕುರಿತು ನಡೆಯುತ್ತಿರುವ ಎಸ್‌ಐಟಿ ತನಿಖೆಯನ್ನು ರಾಜ್ಯ ಗೃಹ ಇಲಾಖೆ ನಿಯಂತ್ರಿಸುತ್ತಿದೆ’ ಎಂದು ವಿರೋಧ ಪಕ್ಷ ಕಾಂಗ್ರೆಸ್ ಸೋಮವಾರ ಆರೋಪಿಸಿದೆ.

ಪುರಿ ಜಗನ್ನಾಥ ದೇವಾಲಯ (ಪಿಟಿಐ ಚಿತ್ರ)

ಇಸ್ಕಾನ್ ರಥಯಾತ್ರೆ: ಪುರಿ ಜಗನ್ನಾಥ ದೇವಾಲಯ ವಿರೋಧ

ಭುವನೇಶ್ವರ (ಪಿಟಿಐ): ಇಸ್ಕಾನ್ ಸಂಸ್ಥೆಯು ‘ಶ್ರೀ ಜಗನ್ನಾಥ ಸಂಸ್ಕೃತಿ’ಯ ವಿರುದ್ಧ ತಪ್ಪು ಮಾಹಿತಿ ಹರಡುತ್ತಿದೆ ಎಂದು ಪುರಿಯ ಶ್ರೀ ಜಗನ್ನಾಥ ದೇವಾಲಯ ವ್ಯವಸ್ಥಾಪನಾ ಸಮಿತಿಯ (ಎಸ್‌ಜೆಟಿಎಂಸಿ) ಅಧ್ಯಕ್ಷ ಗಜಪತಿ ಮಹಾರಾಜ ದಿಬ್ಯಾಸಿಂಘ ದೇಬ್ ಅವರು ಸೋಮವಾರ ಆರೋಪಿಸಿದ್ದಾರೆ.

‘ಜಗನ್ನಾಥ ಸಂಸ್ಕೃತಿ’ ಎಂದರೆ ಒಡಿಶಾದ ಪುರಿ ಜಗನ್ನಾಥ ದೇವಾಲಯದ ಆರಾಧನೆಯ ಸಂಪ್ರದಾಯ, ಆಚರಣೆಗಳು ಮತ್ತು ತಾತ್ತ್ವಿಕ ನಂಬಿಕೆಗಳಾಗಿವೆ. ಪುರಿ ದೇವಾಲಯದ ನಿರ್ಧಾರ ತೆಗೆದುಕೊಳ್ಳುವ ಸಮಿತಿಯಾದ ಎಸ್‌ಜೆಟಿಎಂಸಿ ಅಧ್ಯಕ್ಷರೂ, ಪುರಿಯ ನಾಮಕಾವಸ್ಥೆ ರಾಜರೂ ಆಗಿರುವ ದಿಬ್ಯಾಸಿಂಘ ದೇಬ್, ಇಸ್ಕಾನ್ ನಡೆಸುವ ಅಕಾಲಿಕ ರಥಯಾತ್ರೆಯನ್ನು ವಿರೋಧಿಸುವಂತೆ ಭಕ್ತರು ಮತ್ತು ಧಾರ್ಮಿಕ ಮುಖಂಡರಿಗೆ ಕರೆ ನೀಡಿದ್ದಾರೆ.

‘ಧರ್ಮಗ್ರಂಥಗಳಿಂದ ಅನುಮೋದಿಸದ ದಿನಾಂಕಗಳಂದು ರಥಯಾತ್ರೆ ನಡೆಸುವುದು ಸಂಪ್ರದಾಯ ವಿರೋಧಿಯಾಗಿದ್ದು, ಇದು ಜಗನ್ನಾಥ ಸಂಸ್ಕೃತಿಯ ಪಾವಿತ್ರ್ಯಕ್ಕೆ ಅಪಾಯವನ್ನುಂಟು ಮಾಡಿದೆ’ ಎಂದು ಅವರು ಆರೋಪಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ತಿರುಪತಿಯಲ್ಲಿ ‘ಇಸ್ರೊ’ ಅಧ್ಯಕ್ಷ ಪೂಜೆ

ತಿರುಪತಿ (ಪಿಟಿಐ): ಅಮೆರಿಕದ ಎಎಸ್‌ಟಿ ಸ್ಪೇಸ್‌ಮೊಬೈಲ್‌ನ ‘ಬ್ಲೂಬರ್ಡ್ ಬ್ಲಾಕ್–2’ ಸಂವಹನ ಉಪಗ್ರಹವನ್ನು ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೊ) ಡಿಸೆಂಬರ್ 24ರಂದು ಉಡ್ಡಯನ ಮಾಡಲಿದ್ದು, ಇದಕ್ಕೂ ಮುನ್ನ ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ಅವರು ತಿರುಪತಿ ದೇವಸ್ಥಾನದಲ್ಲಿ ಸೋಮವಾರ ಪೂಜೆ ಸಲ್ಲಿಸಿದರು.

‘ಎಲ್‌ವಿಎಂ3–ಎಂ6/ಬ್ಲ್ಯೂಬರ್ಡ್ ಬ್ಲಾಕ್–2 ಮಿಷನ್’ ಎಂಬ ವಾಣಿಜ್ಯ ಕಾರ್ಯಾಚರಣೆ ಇದಾಗಿದೆ. ಎಲ್‌ವಿಎಂ–3 ಉಡಾವಣಾ ವಾಹಕದ ಮೂಲಕ ಉಪಗ್ರಹವನ್ನು ಉಡ್ಡಯನ ಮಾಡಲು ನಿರ್ಧರಿಸಲಾಗಿದೆ. ನಾರಾಯಣನ್ ಅವರು ಅಧಿಕಾರಿಗಳ ಜತೆಗೂಡಿ ಪೂಜೆ ಸಲ್ಲಿಸುವ ವೇಳೆ ಉಡ್ಡಯನ ವಾಹಕದ ಪ್ರತಿಕೃತಿಯನ್ನೂ ಕೊಂಡೊಯ್ದಿದ್ದರು ಎನ್ನಲಾಗಿದೆ.

ನಾರಾಯಣನ್

‘ನಾವು ಬಾಹುಬಲಿ ರಾಕೆಟ್ ಬಳಸಿ ಡಿ.24ರಂದು ‘ಬ್ಲೂಬರ್ಡ್ ಬ್ಲಾಕ್–2’ ಉಪಗ್ರಹವನ್ನು ಉಡಾವಣೆ ಮಾಡಲಿದ್ದೇವೆ. ಇದು ಭಾರತದ ನೆಲದಿಂದ ಉಡಾವಣೆ ಮಾಡುವ ಅತ್ಯಂತ ಭಾರವಾದ ಉಪಗ್ರಹವಾಗಿದೆ. 4ಜಿ ಮತ್ತು 5ಜಿ ಸಂವಹನ ಉದ್ದೇಶಗಳಿಗಾಗಿ ಉಡ್ಡಯನ ಮಾಡಲಾಗುತ್ತಿದೆ’ ಎಂದು ನಾರಾಯಣನ್ ಅವರು ತಿಳಿಸಿದ್ದಾರೆ.

‘ಜಿ ರಾಮ್ ಜಿ’: ಜ.16ರಂದು ಪ್ರತಿಭಟನೆ

ನವದೆಹಲಿ (ಪಿಟಿಐ): ನರೇಗಾಕ್ಕೆ ಮರುನಾಮಕರಣ ಮಾಡಿ ಹೊಸ ಕಾಯ್ದೆ ರೂಪಿಸಿರುವುದನ್ನು ಖಂಡಿಸಿ ಜನವರಿ 16ರಂದು ‘ಅಖಿಲ ಭಾರತ ಪ್ರತಿರೋಧ ದಿನ’ ಹೆಸರಿನಲ್ಲಿ ಪ್ರತಿಭಟನೆ ನಡೆಸುವುದಾಗಿ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಸೋಮವಾರ ಘೋಷಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್‌ಕೆಎಂ ನಾಯಕರು, ‘ವಿಬಿ–ಜಿ ರಾಮ್ ಜಿ’ ಕಾಯ್ದೆಯನ್ನು ರದ್ದುಗೊಳಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಮುಂದಿನ ನಡೆಯ ಬಗ್ಗೆ ನಿರ್ಧರಿಸಲು ಜನವರಿ 11ರಂದು ದೆಹಲಿಯಲ್ಲಿ ಸಭೆ ನಡೆಸುವುದಾಗಿ ತಿಳಿಸಿದ್ದಾರೆ.

ಸಜ್ಜನ್ ಕುಮಾರ್ ವಿರುದ್ಧದ ಪ್ರಕರಣ ತೀರ್ಪು ಕಾಯ್ದಿರಿಸಿದ ಕೋರ್ಟ್

ನವದೆಹಲಿ (ಪಿಟಿಐ): 1984ರ ಸಿಖ್ ವಿರೋಧಿ ದಂಗೆ ವೇಳೆ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್‌ನ ಮಾಜಿ ಸಂಸದ ಸಜ್ಜನ್ ಕುಮಾರ್ ವಿರುದ್ಧ ದಾಖಲಾಗಿರುವ ಪ್ರಕರಣದ ತೀರ್ಪನ್ನು ದೆಹಲಿಯ ನ್ಯಾಯಾಲಯವೊಂದು ಕಾಯ್ದಿರಿಸಿದೆ.

ದೆಹಲಿಯ ಜನಕಪುರಿ ಮತ್ತು ವಿಕಾಸಪುರಿ ಪ್ರದೇಶಗಳಲ್ಲಿ ನಡೆದ ಹಿಂಸಾಚಾರ ಪ್ರಕರಣದಲ್ಲಿ ಸಜ್ಜನ್ ಆರೋಪಿಯಾಗಿದ್ದು, ಇದಕ್ಕೆ ಸಂಬಂಧಿಸಿದ ವಿಚಾರಣೆ, ವಾದ–ಪ್ರತಿವಾದಗಳು ಮುಕ್ತಾಯಗೊಂಡಿವೆ.

ಹೀಗಾಗಿ ವಿಶೇಷ ನ್ಯಾಯಾಧೀಶರಾದ ದಿಗ್ ವಿನಯ್ ಸಿಂಗ್ ಅವರು ಜನವರಿ 22ಕ್ಕೆ ಪ್ರಕರಣದ ತೀರ್ಪು ಕಾಯ್ದಿರಿಸಿದ್ದಾರೆ.

ಸೋಮವಾರ ಬಿಗಿ ಭದ್ರತೆಯೊಂದಿಗೆ ಸಜ್ಜನ್ ಕುಮಾರ್ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು.

ಗಂಭೀರ ಚರ್ಚೆಯಾದಾಗ ದೇಶ ತೊರೆಯುವ ‘ನಮೂನೆ’ಗಳು: ಯೋಗಿ

ಲಖನೌ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಸಮಾಜವಾದಿ ಪಕ್ಷದ (ಎಸ್‌ಪಿ) ನಾಯಕ ಅಖಿಲೇಶ್ ಯಾದವ್ ಅವರ ಹೆಸರನ್ನು ಉಲ್ಲೇಖಿಸಿದೆ, ಅವರನ್ನು ‘ಎರಡು ನಮೂನೆಗಳು’ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸೋಮವಾರ ವ್ಯಂಗ್ಯವಾಡಿದರು.

ದೇಶದಲ್ಲಿ ಗಂಭೀರ ವಿಷಯಗಳು ಬಂದಾಗೆಲ್ಲ ಈ ಇಬ್ಬರೂ ದೇಶ ಬಿಟ್ಟು ಓಡಿ ಹೋಗುತ್ತಾರೆ ಎಂದು ಅವರು ಟೀಕಿಸಿದರು. ಕೊಡೈನ್ ಕೆಮ್ಮಿನ ಸಿರಪ್ ಅಕ್ರಮ ವ್ಯಾಪಾರದ ಕುರಿತು ಎಸ್‌ಪಿ ಮಾಡಿದ ಆರೋಪಗಳಿಗೆ ಚಳಿಗಾಲದ ಅಧಿವೇಶನದಲ್ಲಿ ಉತ್ತರಿಸುವಾಗ ಅವರು ಈ ಹೇಳಿಕೆಗಳನ್ನು ನೀಡಿದರು.

‘ಸಿರಪ್ ಪ್ರಕರಣದ ವ್ಯವಹಾರದ ಕುರಿತು ಆಳವಾಗಿ ಅಧ್ಯಯನ ನಡೆಸಿದರೆ, ಸಮಾಜವಾದಿ ಪಕ್ಷದ ಜತೆಗಿನ ಸಂಬಂಧಗಳು ಹೊರಬರುತ್ತವೆ’ ಎಂದು ಎಚ್ಚರಿಸಿದ ಅವರು, ‘ಎಸ್‌ಪಿಯ ಲೋಹಿಯಾ ವಾಹಿನಿಯ ಪದಾಧಿಕಾರಿ ಖಾತೆಯ ಮೂಲಕವೂ ವ್ಯವಹಾರ ನಡೆದಿದೆ. ಎಸ್‌ಟಿಎಫ್ ಈ ಬಗ್ಗೆ ತನಿಖೆ ನಡೆಸುತ್ತಿದೆ’ ಎಂದು ಸದನಕ್ಕೆ ತಿಳಿಸಿದರು.

ಅಖಿಲೇಶ್ ಪ್ರತಿಕ್ರಿಯೆ: ಬ್ರಿಟನ್ ಪ್ರವಾಸದಲ್ಲಿರುವ ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರು, ಮುಖ್ಯಮಂತ್ರಿ ಹೇಳಿಕೆಗೆ ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿದ್ದಾರೆ. ‘ಸಿ.ಎಂ ಹೇಳಿಕೆಯು ಬಿಜೆಪಿಯೊಳಗಿನ ಆಂತರಿಕ ಭಿನ್ನಾಭಿಪ್ರಾಯವನ್ನು ಬಹಿರಂಗಪಡಿಸಿದೆ. ದೆಹಲಿ ಮತ್ತು ಲಖನೌ ನಡುವಿನ ಅಂತರ ಹೆಚ್ಚುತ್ತಿರುವುದನ್ನು ತೋರಿಸುತ್ತದೆ. ಸಾಂವಿಧಾನಿಕ ಹುದ್ದೆಯಲ್ಲಿ ಇರುವವರು ತಮ್ಮ ನಡುವಿನ ಆಂತರಿಕ ಜಗಳವನ್ನು ಹೀಗೆಲ್ಲ ಬಹಿರಂಗಪಡಿಸಬಾರದು. ಕನಿಷ್ಠ ಔಚಿತ್ಯ ಕಾಪಾಡಿಕೊಳ್ಳಬೇಕು. ಸಭ್ಯತೆ ಮೀರಬಾರದು’ ಎಂದು ವ್ಯಂಗ್ಯವಾಡಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರವರ ಕಛೇರಿ, ನೀಸ&ಒಚ (ಪಶ್ಚಿಮ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು–570020

ಟೆಂಡರ್ ಪ್ರಕಟಣೆ ಸಂಖ್ಯೆ:ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಸ.ಅ/ಟಿಎನ್–20/836/2025–26 ದಿನಾಂಕ: 22.12.2025

ಪೂರ್ಣಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ)	ಸಂಜೆ 5.30 ಗಂಟೆ ನಂತರ ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಸಂಜೆ 4.30 ಗಂಟೆ ಒಳಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 4.30 ಗಂಟೆ ನಂತರ ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	kw-1 & kw-2	12 ಸಂಖ್ಯೆಗಳು	353.97	24.12.2025	08.01.2026	09.01.2026
2	Service Tenders	06 ಸಂಖ್ಯೆಗಳು	175.22	24.12.2025	08.01.2026	09.01.2026

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ನೀಸ&ಒಚ (ಪಶ್ಚಿಮ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/1413/ಶಿರಡಿಸಾಯಿ/2025–26

ಕರ್ನಾಟಕ ಸರ್ಕಾರ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN Website: www.hims-hassan.org
Phone/Fax No.08172-231699, 231599, Email:directorhims@yahoo.com

ಇ–ಟೆಂಡರ್ ಪ್ರಕಟಣೆ

ಕ್ರ. ಸಂ.ಟೆಂಡರ್ ಅಧಿಸೂಚನೆ ಸಂಖ್ಯೆ 01)ಹಿಮ್ಸ್/ಪಿಹೆಚ್‌ಎಸ್/ಪಿಯುಆರ್(ಟಿಡಿಆರ್)/4/2025 ವಿವರ ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ವಿಭಾಗಗಳಿಗೆ ಅವಶ್ಯವಿರುವ Dialysis items, Vaccines & Immunologicalsಗಳನ್ನು ಮರು ಇ–ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ದಿನಾಂಕ 23.12.2025 ರಿಂದ 07.01.2026 ರವರೆಗೆ ಅಂದಾಜು ಮೊತ್ತ (ಲಕ್ಷಗಳಲ್ಲಿ)41.23 ಇ.ಎಂ.ಡಿ ಮೊತ್ತ (ಲಕ್ಷಗಳಲ್ಲಿ)01.00 02)ಹಿಮ್ಸ್/ಪಿಹೆಚ್‌ಎಸ್/ಪಿಯುಆರ್(ಟಿಡಿಆರ್)/5/2025 ವಿವರ ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ವಿಭಾಗಗಳಿಗೆ ಅವಶ್ಯವಿರುವ ಔಷಧ(Tablets & Injections)ಗಳನ್ನು ಮರು ಇ–ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ದಿನಾಂಕ 23.12.2025 ರಿಂದ 07.01.2026 ರವರೆಗೆ ಅಂದಾಜು ಮೊತ್ತ (ಲಕ್ಷಗಳಲ್ಲಿ)70.10 ಇ.ಎಂ.ಡಿ ಮೊತ್ತ (ಲಕ್ಷಗಳಲ್ಲಿ)01.00 03)ಹಿಮ್ಸ್/ಪಿಹೆಚ್‌ಎಸ್/ಪಿಯುಆರ್(ಟಿಡಿಆರ್)/6/2025 ವಿವರ ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ವಿಭಾಗಗಳಿಗೆ ಅವಶ್ಯವಿರುವ ಔಷಧಸಾಮಗಿæ(Miscellaneous items & Sutures)ಗಳನ್ನು ಮರು ಇ–ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ದಿನಾಂಕ 23.12.2025 ರಿಂದ 07.01.2026 ರವರೆಗೆ ಅಂದಾಜು ಮೊತ್ತ (ಲಕ್ಷಗಳಲ್ಲಿ)50.47 ಇ.ಎಂ.ಡಿ ಮೊತ್ತ (ಲಕ್ಷಗಳಲ್ಲಿ)01.00 ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕರ್ನಾಟಕ ಸಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಂ ಮುಖಾಂತರ kppp.karnataka.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಬಹುದಾಗಿದೆ.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು, ಹಾಸನ
ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/864/ಕೆಎಸ್‌ಎಂಸಿಎ/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–68/3005/2025–26 ದಿನಾಂಕ: 20.12.2025

ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಕೆಪಿಡಬ್ಲ್ಯುಡಿ ದರ್ಜೆ–1 (ಸಿವಿಲ್) ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : (1) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ತಾಲ್ಲೂಕಿನಲ್ಲಿ ಜ್ಞಾನ, ಯೋಗಕ್ಷೇಮ ಮತ್ತು ಇನೋವೇಷನ್ ಸಿಟಿ (KWIN ಸಿಟಿ)ಯ ಸ್ಥಾಪನೆ ಮಾಡುವ ಕಾಮಗಾರಿ. (ಹಂತ–2 ರ ಸೆಕ್ಟರ್–1). (2) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ತಾಲ್ಲೂಕಿನಲ್ಲಿ ಜ್ಞಾನ, ಯೋಗಕ್ಷೇಮ ಮತ್ತು ಇನೋವೇಷನ್ ಸಿಟಿ (KWIN ಸಿಟಿ)ಯ ಸ್ಥಾಪನೆ ಮಾಡುವ ಕಾಮಗಾರಿ. (ಹಂತ–2ರ ಸೆಕ್ಟರ್–2).

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 27.01.2026 ಸಂಜೆ 4.00 ಗಂಟೆಯವರೆಗೆ

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/4596/Zen/2025-26

ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜನೀಯರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.

ಸಂಖ್ಯೆ.ಲೋಇ:ಬಾವಿ:ಪಿಬಿ:ಕೆಡಬ್ಲು:CMIDP:GNM-S:2025-26/03659 ದಿನಾಂಕ: 22–12–2025

ಟೆಂಡರ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ ಕೆ/ಡಬ್ಲೂ–1,2,3,4 & ಕೆ/ಸಿ–6 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹಗುತ್ತಿಗೆದಾರರಿಂದ ಏಕಕಕ ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದ ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಗಳ ಹಾಗೂ ಸರ್ವೀಸ್ ಮಾದರಿಯ ಟೆಂಡರ್ ಆಹ್ವಾನಿಸಲಾಗಿದೆ.

ವರ್ಕಇಂಡೆಂಟ್ ನಂ: ಸಾಮಾನ್ಯ: **29157, 29159, 29160, 30480, 29163, 30477, 30487, 29161, 30475, 31096, 31117, 31119, 31116, 31120, 31113, 31111, 31108, 31104, 31102, 29687, 29688, 29689, 29693, 29692, 31086, 31105, 31093, 31110, 31107, 31118 , 30583, 30590, 30934, 31062, 30983, 30984, 31085, 30666, 31144, 30966, 30964, 30840, 30838, 30808, 30973, 31114, 30977, 31123, 30986, 31126, 31124, 30975, 30987, 31125,31087,30576,30578**

ವರ್ಕಇಂಡೆಂಟ್ ನಂ: ಪರಿಶಿಷ್ಟ ಜಾತಿ : **31103, 31112, 31100, 31121,** ವರ್ಕಇಂಡೆಂಟ್ ನಂ: ಪರಿಶಿಷ್ಟ ಪಂಗಡ : **31106, 29684**
ವರ್ಕಇಂಡೆಂಟ್ ನಂ: ಕ್ಯಾಟಗರಿ 2ಎ: **29690, 31109, 31133, 31097** ವರ್ಕಇಂಡೆಂಟ್ ನಂ: ಕ್ಯಾಟಗರಿ–1: **31115,**

ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ.700.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ.20.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ್ ಆಹ್ವಾನಿಸಲಾಗಿದೆ.

ಅ) ಪ್ರೀಬಿಡ್ ಮೀಟಿಂಗ್	:	27–01–2026 ರಂದು ಬೆಳಿಗ್ಗೆ 11:30 ಗಂಟೆಯವರೆಗೆ
ಆ) ಟೆಂಡರ್ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ	:	28–01–2026 ರಂದು ಸಂಜೆ 5:30 ಗಂಟೆಯವರೆಗೆ
ಬ) ಟೆಂಡರ್ ಸ್ವೀಕರಿಸುವ ದಿನಾಂಕ	:	29–01–2026 ರಂದು ಸಂಜೆ 4:00 ಗಂಟೆಯವರೆಗೆ
ಕ) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ	:	30–01–2026 ರಂದು ಸಂಜೆ 4:30 ಗಂಟೆಯವರೆಗೆ
ಡ) ಆರ್ಥಿಕ ಬಿಡ್‌ತೆರೆಯುವ ದಿನಾಂಕ	:	31–01–2026 ರಂದು ಸಂಜೆ 4:30 ಗಂಟೆಯವರೆಗೆ

ವರ್ಕ ಇಂಡೆಂಟ್ ನಂ: ಸಾಮಾನ್ಯ: **SE0544, SE0568,**

ಈ ಎಲ್ಲ ಕಾಮಗಾರಿಯ ಸರ್ವೀಸ್ ಮಾದರಿಯ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.23.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ.12.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ್ ಆಹ್ವಾನಿಸಲಾಗಿದೆ.

ಅ) ಟೆಂಡರ್ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ	:	29–12–2025 ರಂದು ಸಂಜೆ 5:30 ಗಂಟೆಯವರೆಗೆ
ಬ) ಟೆಂಡರ್ ಸ್ವೀಕರಿಸುವ ದಿನಾಂಕ	:	30–12–2025 ರಂದು ಸಂಜೆ 4:00 ಗಂಟೆಯವರೆಗೆ
ಕ) ಆರ್ಥಿಕ ಬಿಡ್ ತೆರೆಯುವ ದಿನಾಂಕ	:	31–12–2025 ರಂದು ಸಂಜೆ 4:30 ಗಂಟೆಯವರೆಗೆ

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/463/ಮಣಿಪಾಲ್/2025–26

ಕರ್ನಾಟಕ ಸರಕಾರ

ಉಪ ನಿರ್ದೇಶಕರ ಕಾರ್ಯಾಲಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,

ಧಡೇದ ಹಾಸ್ಪೀಟಲ್ ಹತ್ತಿರ, ರೈಲ್ವೆ ಸ್ಟೇಷನ್ (ಐವಾನ–ಇ–ಶಾಹಿ) ರೋಡ, ಕಲಬರಗಿ–585 102
Telephone No.08472-278659, E-mail ID: ddwcdglb@gmail.com

ಸಂಖ್ಯೆ:ಮಮಅಇ/ಉ.ನಿ.ಕ./ಸಕ್ಷಮ.ಅಂ/ಶು.ಶೇ.ಸೌ/ಪ.ಖ./ಇ.ಟೆ.ಪ್ರ./2025–26 ದಿನಾಂಕ :17.12.2025

ಇ–ಟೆಂಡರ ಪ್ರಕಟಣೆ

ವಿಷಯ : 2024–25ನೇ ಸಾಲಿಗಾಗಿ ಕಲಬುರಗಿ ಜಿಲ್ಲೆಯ ಸಕ್ಷಮ ಅಂಗನವಾಡಿ ಕೇಂದ್ರಗಳಲ್ಲಿ ಶುದ್ಧ ಶೇಖರಣಾ ಸೌಲಭ್ಯ "Clean Storage Facility" ದಡಿ ಅಂಗನವಾಡಿ ಕೇಂದ್ರಗಳಿಗೆ ಪರಿಕರಗಳನ್ನು ಖರೀದಿಸಲು ಇ–ಟೆಂಡರ್ ಹೊರಡಿಸಿರುವ ಬಗ್ಗೆ **(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)**
ಉಲ್ಲೇಖ : ಮಾನ್ಯ ಜಂಟಿ ನಿರ್ದೇಶಕರು (ಐ.ಸಿ.ಡಿ.ಎಸ್.) ವಿಭಾಗ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು ರವರ ಪತ್ರ ಸಂಖ್ಯೆ: WCD/ICDS/BLD/6/2025/EN:1724063 Dated:/12/2025

2024–25ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಲಬುರಗಿ ಜಿಲ್ಲೆಯ 542 ಸ್ವಂತ ಅಂಗನವಾಡಿ ಕೇಂದ್ರಗಳನ್ನು ಸಕ್ಷಮ ಅಂಗನವಾಡಿ ಮತ್ತು ಪೋಷಣ್ 2.0 ಯೋಜನೆಯಡಿ "ಸಕ್ಷಮ್" ಅಂಗನವಾಡಿಗಳನ್ನಾಗಿ ಉನ್ನತೀಕರಿಸುವ ಸಂಬಂಧ ಸದರಿ ಕೇಂದ್ರಗಳಿಗೆ ಶುದ್ಧ ಶೇಖರಣಾ ಸೌಲಭ್ಯ "Clean Storage Facility" ಅಡಿ ಪರಿಕರಗಳನ್ನು ಖರಿದಿಸಲು ನಿಯಮಾನುಸಾರ ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್ ಪ್ರಕಟಣೆ ಆಹ್ವಾನಿಸಲಾಗಿದೆ. ಟೆಂಡರಿಗೆ ಸಂಬಂಧಿಸಿದ ಸಂಪೂರ್ಣವಾದ ವಿವರಗಳನ್ನು ಇಲಾಖೆಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವಿಳಾಸ website http://kppp.karnataka.gov.in ನಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಕ್ರ.ಸಂ. ವಿವರ : ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ : **17.12.2025** ರಂದು ಸಾಯಂಕಾಲ 4.30 ಗಂಟೆಗೆ, ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : ದಿನಾಂಕ : **09.01.2026** ರಂದು ಸಾಯಂಕಾಲ 05.30 ಗಂಟೆಯೊಳಗೆ, 2) ಟೆಂಡರಿನ ಅಂದಾಜು ಮೊತ್ತ **ರೂ.54,20,000/–** ಮಾತ್ರ 3) ಇ.ಎಮ್.ಡಿ. ಮೊತ್ತ :**ರೂ.1,08,400/–** (ರೂಪಾಯಿ ಒಂದು ಲಕ್ಷದ ಎಂಟು ಸಾವಿರದ ನಾಲ್ಕು ನೂರು) ಮಾತ್ರ, 4) ಇ–ಪ್ರೋರ್ಟಲ್‌ನಲ್ಲಿ ದಾಖಲಾತಿಗಳ/ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **12.01.2026** ರಂದು ಬೆಳಿಗ್ಗೆ 11.00 ಗಂಟೆಗೆ, 5) ಇ–ಪೋರ್ಟನಲ್ಲಿ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **19.01.2026** ರಂದು ಬೆಳಿಗ್ಗೆ 11.00 ಗಂಟೆಗೆ, 6) ಈ ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಕಚೇರಿ ವಿವರ: ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯಾಲಯ, ಆನಂದ ರಾಶಿ ಕಟ್ಟಡ, ರೈಲು ನಿಲ್ದಾಣ ಎದುರುಗಡೆ, ವಿ.ಜಿ.ವುಮೇನ್ಸ್ ಕಾಲೇಜ್ ರೋಡ, ಕಲಬುರಗಿ, E-mail: ddwcdglb@gmail.com ದೂರವಾಣಿ: 08472–278659 ಟೆಂಡರ್ ಬಿಡ್ ಪೂರ್ವ ಸಭೆ ದಿನಂಕ: **29.12.2025 ಅಪರಾಹ್ನ 3.00** ಗಂಟೆಗೆ, ಹೆಚ್ಚಿನ ವಿವರಗಳಿಗೆ ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಲಬುರಗಿ ಇವರ ಕಚೇರಿಗೆ ಅಥವಾ ಕಚೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ 08472–278659 ಮೂಲಕ ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ನಿರೂಪಣಾಧಿಕಾರಿಗಳು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/879/2025–26/ದೇಶಪಾಂಡೆ ಪಬ್ಲಿಸಿಟಿ

रजिस्ट्री सं. डी.एल. 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.- 17122025-268578
CG-DL-E- 17122025-268578
असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. 5623] नई दिल्ली, मंगलवार, दिसम्बर 16 2025/ अग्रहायण 25, 1947
No.5623] NEW DELHI, TUESDAY, DECEMBER 16, 2025/AGRAHAYANA 25, 1947

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 16ನೇ ಡಿಸೆಂಬರ್, 2025

ಎಸ್.ಓ. ನಂ. 5818(ಇ), ದಿನಾಂಕ: 16.12.2025 – ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿನ ವಿವರಿಸಿರುವ ಜಮೀನುಗಳನ್ನು **ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ನಂ. 150ಎ ರಲ್ಲಿ ಕಿಮೀ. 673.66 ರಲ್ಲಿ (ಮೈಸೂರು – ಚಾಮರಾಜನಗರ ಸೆಕ್ಷನ್) ರಸ್ತೆ ನಿರ್ಮಾಣ, (ಅಗಲೀಕರಣ, ದ್ವಿಪಥ/ನಾಲ್ಕು ಪಥ ಇತ್ಯಾದಿ),** ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಚಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (1) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿದೆ.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು **ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು–150ಎ, ಪಿ.ಡಬ್ಲ್ಯುಡಿ ಆವರಣ, ಕೆ.ಆರ್. ವೃತ್ತ, ಬೆಂಗಳೂರು–01,** ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರರವರ ಕಚೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ನಂ. 150ಎ ರಲ್ಲಿ ಕಿಮೀ. 673.66 ರಲ್ಲಿ (ಮೈಸೂರು – ಚಾಮರಾಜನಗರ ಸೆಕ್ಷನ್) ರಸ್ತೆ ನಿರ್ಮಾಣ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ಚಾಮರಾಜನಗರ

ಕ್ರ. ಸಂ.	ಸರ್ವೆ / ಫ್ಲಾಟ್ ನಂಬರ್	ಜಮೀನಿನ ತಹರೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಮಾಪನದಲ್ಲಿ) (ಚ.ಮೀ.ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2	3	4	5	6
ತಾಲ್ಲೂಕು : ಚಾಮರಾಜನಗರ					
ಗ್ರಾಮ : ಬದನಗುಪ್ಪೆ					
1	338/2ಎ	ಖಾಸಗಿ	ಖುಷ್ಕಿ	25.293	0.0025293
2	338/2ಬಿ	ಖಾಸಗಿ	ಖುಷ್ಕಿ	50.586	0.0050586
3	338/3	ಖಾಸಗಿ	ಖುಷ್ಕಿ	50.586	0.0050586
4	338/4	ಖಾಸಗಿ	ಖುಷ್ಕಿ	25.293	0.0025293
5	338/7	ಖಾಸಗಿ	ಖುಷ್ಕಿ	25.293	0.0025293
6	338/8	ಖಾಸಗಿ	ಖುಷ್ಕಿ	227.635	0.0227635
7	339/1	ಖಾಸಗಿ	ಎನ್‌ಎಕೆ	50.586	0.0050586
8	339/7	ಖಾಸಗಿ	ಖುಷ್ಕಿ	25.293	0.0025293
9	344(344/2,344/35)	ಖಾಸಗಿ	ಖುಷ್ಕಿ	50.586	0.0050586
ಗ್ರಾಮ : ಮುತ್ತಿಗೆ					
10	4028/1ಎ	ಖಾಸಗಿ	ಖುಷ್ಕಿ	531.147	0.0531147
11	405/5	ಖಾಸಗಿ	ಖುಷ್ಕಿ	101.17	0.010117
12	408/1	ಖಾಸಗಿ	ಖುಷ್ಕಿ	252.927	0.0252927
13	408/20	ಖಾಸಗಿ	ಖುಷ್ಕಿ	75.878	0.0075878
14	409/30	ಖಾಸಗಿ	ಖುಷ್ಕಿ	50.586	0.0050586
15	409/31	ಖಾಸಗಿ	ಖುಷ್ಕಿ	50.586	0.0050586
16	409/3ಎ	ಖಾಸಗಿ	ಎನ್‌ಎಕೆ	151.756	0.0151756
17	409/3ಬಿ1	ಖಾಸಗಿ	ಖುಷ್ಕಿ	50.586	0.0050586
18	409/3ಬಿ3	ಖಾಸಗಿ	ಖುಷ್ಕಿ	126.464	0.0126464
19	409/3ಬಿ4	ಖಾಸಗಿ	ಖುಷ್ಕಿ	101.171	0.0101171
20	409/4	ಖಾಸಗಿ	ಖುಷ್ಕಿ	151.755	0.0151755
21	409/5	ಖಾಸಗಿ	ತರಿ	50.586	0.0050586
22	409/6	ಖಾಸಗಿ	ಖುಷ್ಕಿ	50.586	0.0050586
23	409/7	ಖಾಸಗಿ	ಖುಷ್ಕಿ	50.586	0.0050586
24	424/2	ಖಾಸಗಿ	ಖುಷ್ಕಿ	25.293	0.0025293
25	424/4	ಖಾಸಗಿ	ಖುಷ್ಕಿ	303.51	0.030351
26	425	ಸರ್ಕಾರಿ	ಎನ್‌ಎಕೆ	505.855	0.0505855
27	426/1ಎ1	ಖಾಸಗಿ	ಖುಷ್ಕಿ	278.21	0.027821
28	428/1ಬಿ	ಖಾಸಗಿ	ಖುಷ್ಕಿ	101.171	0.0101171
				ಒಟ್ಟು	0.3540974

[F. No. RW/BNG/NH-150A/ROB/Km.49/600-700/70/2023/3A]

ಶೇಖ್ ಅಮೀನ್‌ಖಾನ್, ನಿರ್ದೇಶಕರು



ರೋಗನಿರೋಧ ಶಕ್ತಿ ಎಂಬ 'ಆಂತರಿಕ ಸೈನ್ಯ'

• ಡಾ. ಕಿರಣ್ ವಿ. ಎಸ್.

ಯಾವುದಾದರೂ ಕಾರಣಗಳಿಗೆ ಶರೀರದ ರಕ್ಷಕ ವ್ಯವಸ್ಥೆ ದುರ್ಬಲಗೊಂಡಾಗ ದೇಹವು ರೋಗಾಣುಗಳ ದಾಳಿಗೆ ಸುಲಭವಾಗಿ ತುತ್ತಾಗುತ್ತದೆ. ಇದರಿಂದ ಸಣ್ಣಪುಟ್ಟ ಹವಾಮಾನ ಬದಲಾವಣೆಗಳಿಗೂ ಶೀತ, ಕೆಮ್ಮು, ಜ್ವರದಂತಹ ಸಮಸ್ಯೆಗಳು, ಸೋಂಕುಗಳು ಆಗಾಗ ಕಾಡುತ್ತವೆ.

'ನಿಮಗೆ ಇಮ್ಯುನಿಟಿ ಕೊರತೆಯಿದೆ. ನೀವು ಸರಿಯಾಗಿ ಊಟ ಮಾಡಬೇಕು. ದಿನವೂ ವ್ಯಾಯಾಮ ಮಾಡಬೇಕು. ಇಲ್ಲವಾದರೆ ಹೀಗೆಯೇ ಪದೇ ಪದೇ ಕಾಯಿಲೆ ಬೀಳುತ್ತೀರಿ' – ಎಂದು ವೈದ್ಯರು ಎಚ್ಚರಿಸುವುದು ಹೊಸತಲ್ಲ. ಅದರಲ್ಲೂ ವೃದ್ಧರಿಗೆ, ಬೆಳೆಯುತ್ತಿರುವ ಮಕ್ಕಳಿಗೆ, ಮಧುಮೇಹದಂತಹ ದೀರ್ಘಕಾಲಿಕ ಅನಾರೋಗ್ಯಗಳಿಂದ ಬಳಲುತ್ತಿರುವವರಿಗೆ ಇಂತಹ ಸೂಚನೆಗಳು ಆಗಾಗ ಬರುತ್ತವೆ. 'ಇಮ್ಯುನಿಟಿ' ಅಥವಾ ದೇಹದ ರೋಗನಿರೋಧ ಶಕ್ತಿ ಎಂದರೇನು? ಅದನ್ನು ಬೆಳೆಸಿಕೊಳ್ಳುವುದು ಹೇಗೆ? ಅದು ಕಡಿಮೆಯಾದರೆ ಯಾವ ತೊಂದರೆಗಳಾಗುತ್ತವೆ? ಈ ಪ್ರಶ್ನೆಗಳಿಗೆ ಉತ್ತರಗಳು ಇಲ್ಲಿವೆ:

ಭೂಮಿಯ ಸೃಷ್ಟಿವೈವಿಧ್ಯದಲ್ಲಿ ಮಾನವಪ್ರಾಣಿಯೂ ಒಂದು. ನಮ್ಮ ಪರಿಸರದಲ್ಲಿ ಕಣ್ಣಿಗೆ ಕಾಣದ ಲಕ್ಷಾಂತರ ವೈರಸ್, ಬ್ಯಾಕ್ಟೀರಿಯಾ, ಶಿಲೀಂಧ್ರ, ಏಕಕೋಶ ರೋಗಕಾರಕಗಳು ಮತ್ತು ಪರಾವಲಂಬಿ ಜೀವಿಗಳಿವೆ. ನಮ್ಮಂತೆಯೇ ಅವುಗಳಿಗೂ ಪ್ರಪಂಚದಲ್ಲಿ ಬದುಕಲು ಹೋರಾಟ ಅಗತ್ಯ. ಅವುಗಳ ನಿರಂತರ ದಾಳಿಯ ನಡುವೆಯೂ ನಾವು ಆರೋಗ್ಯವಾಗಿ ಇರಲು ಸಾಧ್ಯವಾಗಿರುವುದು ನಮ್ಮ 'ರೋಗನಿರೋಧ ಶಕ್ತಿ'ಯಿಂದ. ಹೊರಗಿನಿಂದ ದೇಹದೊಳಗೆ ನುಗ್ಗುವ ರೋಗಾಣುಗಳನ್ನು ಗುರುತಿಸಿ, ಅವುಗಳನ್ನು ನಾಶಪಡಿಸುವ ದೇಹದ ಭದ್ರತೆಯ ವ್ಯವಸ್ಥೆಯೇ ರೋಗನಿರೋಧ ಶಕ್ತಿ. ಒಂದು ರೀತಿಯಲ್ಲಿ ಇದು ನಮ್ಮ ದೇಹದ 'ಆಂತರಿಕ ಸೈನ್ಯ'. ದೇಹದೊಳಗೆ ಪ್ರವೇಶಿಸುವ ಯಾವುದೇ ಪ್ರತಿಜನಕವನ್ನು ತಕ್ಷಣವೇ ಗುರುತಿಸಿ, ಅದರ ವಿರುದ್ಧ ಹೋರಾಟ ಆರಂಭಿಸಬಲ್ಲ ಬಿಳಿರಕ್ತ ಕಣಗಳು, ಪ್ರತಿಕಾಯಗಳು, ದುಗ್ಧರಸ ವ್ಯವಸ್ಥೆ ಮತ್ತು ವಿವಿಧ ಅಂಗಾಂಶಗಳ ಸಂಕೀರ್ಣ ಜಾಲವಾದ ರೋಗನಿರೋಧ ಶಕ್ತಿ, ಕೇವಲ ರೋಗಗಳನ್ನು ತಡೆಯುವುದಕ್ಕಷ್ಟೇ ಸೀಮಿತವಲ್ಲ, ಬದಲಿಗೆ ಶರೀರದ ಕಾರ್ಯಕ್ಷಮತೆಯ ಸಮತೋಲನವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ರೋಗನಿರೋಧ ಶಕ್ತಿ ಹಲವಾರು ಕಾರಣಗಳಿಂದ ಕುಂಠಿತವಾಗುತ್ತದೆ. ಸಣ್ಣ ವಯಸ್ಸಿನ ಮಕ್ಕಳಲ್ಲಿ ರೋಗನಿರೋಧ ಶಕ್ತಿ ಇನ್ನೂ ಪೂರ್ಣವಾಗಿ ಬೆಳವಣಿಗೆ ಆಗಿರುವುದಿಲ್ಲ. ಅಂತೆಯೇ, ವೃದ್ಧರಲ್ಲಿ ವಯೋಸಹಜವಾಗಿ ಈ ಶಕ್ತಿ ತನ್ನ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ. ಮಧುಮೇಹ, ಸ್ಟೀರಾಯ್ಡ್ ಔಷಧ ಸೇವನೆ, ಅಂಗಕಸಿ, ಕ್ಯಾನ್ಸರ್ ಮೊದಲಾದ ಸಂದರ್ಭಗಳಲ್ಲಿ ಕೂಡ ರೋಗನಿರೋಧ ಶಕ್ತಿ ಇಳಿಮುಖವಾಗುತ್ತದೆ. ಇಷ್ಟೇ ಅಲ್ಲದೆ, ವೈಯಕ್ತಿಕ ಮಟ್ಟದಲ್ಲಿ ಮಾನಸಿಕ ಒತ್ತಡ, ಋತುಬದಲಾವಣೆ, ಜೀವನಶೈಲಿ, ಪ್ರಯಾಣ, ಆಹಾರದಲ್ಲಿನ ಅಶಿಸ್ತು, ಸೋಮಾರಿತನ ಮೊದಲಾದುವುಗಳಿಂದಲೂ ರೋಗನಿರೋಧ ಶಕ್ತಿ ಏರುಪೇರಾಗುತ್ತದೆ.

ಯಾವುದೇ ಕಾರಣಕ್ಕೆ ಶರೀರದ ರಕ್ಷಕ ವ್ಯವಸ್ಥೆ ದುರ್ಬಲಗೊಂಡಾಗ ದೇಹವು ರೋಗಾಣುಗಳ ಸುಲಭ ತುತ್ತಾಗುತ್ತದೆ. ಇದರಿಂದ ಸಣ್ಣಪುಟ್ಟ ಹವಾಮಾನ ಬದಲಾವಣೆಗಳಿಗೂ ಶೀತ, ಕೆಮ್ಮು, ಜ್ವರದಂತಹ ಸಮಸ್ಯೆಗಳು, ಸೋಂಕುಗಳು ಆಗಾಗ ಕಾಡುತ್ತವೆ. ಸುಸ್ತು ಮತ್ತು ನಿಶ್ಯಕ್ತಿಗಳು ಆವರಿಸುತ್ತವೆ. ದೇಹದ ಅಂಗಾಂಶಗಳ ಪುನರುತ್ಪಾದನೆಯ ಸಾಮರ್ಥ್ಯ ಕಡಿಮೆಯಾಗಿ, ಸಣ್ಣಪುಟ್ಟ ಗಾಯಗಳು ಗುಣವಾಗಲೂ ದೀರ್ಘಕಾಲತೆಗೆದು ಕೊಳ್ಳುತ್ತವೆ. ಶರೀರದ ಶೇ. 70ರಷ್ಟು ರೋಗನಿರೋಧ ಕೋಶಗಳು ಜೀರ್ಣಾಂಗವ್ಯೂಹದಲ್ಲಿ ಇರುವುದರಿಂದ, ರೋಗನಿರೋಧ ಶಕ್ತಿ ಕಡಿಮೆಯಾದಾಗ ಅತಿಸಾರ ಅಥವಾ ಮಲಬದ್ಧತೆಯಂತಹ ಸಮಸ್ಯೆಗಳು ಕಾಣಿಸಿಕೊಳ್ಳಬಹುದು.

> **ಶಿಸ್ತುಬದ್ಧ ಜೀವನಶೈಲಿ ಮತ್ತು ಸಮತೋಲಿತ ಆಹಾರದ ಫಲಶ್ರುತಿಯೇ ರೋಗನಿರೋಧ ಶಕ್ತಿ.**

ಕುಸಿಯುತ್ತಿರುವ ರೋಗನಿರೋಧ ಶಕ್ತಿಯನ್ನು ಮರಳಿ ಪಡೆಯಲು ಸಮಗ್ರ ಬದಲಾವಣೆ ಅಗತ್ಯ. ವಿಟಮಿನ್ ಸಿ (ಕಿತ್ತಳೆ, ನೆಲ್ಲಿಕಾಯಿ), ವಿಟಮಿನ್ ಡಿ ಮತ್ತು ಸತುವಿನ ಅಂಶಗಳಿರುವ ಆಹಾರಗಳ ಸೇವನೆ ಲಾಭದಾಯಕ. ಹಸಿರುಎಲೆಗಳ ತರಕಾರಿಗಳು, ಪ್ರೋಟೀನ್‌ಯುಕ್ತ ಆಹಾರಗಳು, ಬೇಳೆ-ಕಾಳುಗಳನ್ನು ದೈನಂದಿನ ಸೇವನೆಯಲ್ಲಿ ಸೇರಿಸಿಕೊಳ್ಳಬೇಕು. ಅರಿಶಿನ, ಶುಂಠಿ, ಬೆಳ್ಳುಳ್ಳಿಯಂತಹ ಸಾಂಪ್ರದಾಯಿಕ ಮಸಾಲೆ ಪದಾರ್ಥಗಳು ನೈಸರ್ಗಿಕ ರೋಗನಿರೋಧ ವರ್ಧಕಗಳಾಗಿರುತ್ತವೆ.

ಒಳ್ಳೆಯ ಆಹಾರದ ಜೊತೆಗೆ ದೈಹಿಕ ಚಟುವಟಿಕೆಯು ರಕ್ತಪರಿಚಲನೆಯನ್ನು ಸುಧಾರಿಸಿ, ಬಿಳಿರಕ್ತಕಣಗಳ ಸಾಮರ್ಥ್ಯವನ್ನು ಅಧಿಕಗೊಳಿಸುತ್ತದೆ. ಕ್ರಮಬದ್ಧ ವ್ಯಾಯಾಮ, ಯೋಗ ಮತ್ತು ಪ್ರಾಣಾಯಾಮಗಳು ದೇಹದ ಆಂತರಿಕ ಅಂಗಗಳಿಗೆ ಚೈತನ್ಯ ನೀಡುತ್ತವೆ. ದೇಹವು ತನ್ನನ್ನು ತಾನು ಪುನಶ್ಚೇತನಗೊಳಿಸಲು ಪ್ರತಿ ದಿನ 7-8 ಗಂಟೆಗಳ ನಿದ್ರೆಯ ಅಗತ್ಯವಿದೆ. ರೋಗನಿರೋಧ ಕೋಶಗಳ ಉತ್ಪಾದನೆಗೆ ನಿಶ್ಚಿಂತೆಯ ನಿದ್ರೆ ಪೂರಕವಾಗಿರುತ್ತದೆ. ಅತಿಯಾದ ಮಾನಸಿಕ ಒತ್ತಡವು 'ಕಾರ್ಟಿಸೋಲ್' ಮೊದಲಾದ ಹಾರ್ಮೋನುಗಳ ಉತ್ಪತ್ತಿಯನ್ನು ಹೆಚ್ಚಿಸುತ್ತದೆ. ಇವುಗಳು ರೋಗನಿರೋಧ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತದೆ. ಇದನ್ನು ತಡೆಗಟ್ಟಲು ಮನಸ್ಸಿನ ಶಾಂತಿ ಮುಖ್ಯ. ಧ್ಯಾನ ಮತ್ತು ಸಕಾರಾತ್ಮಕ ಚಿಂತನೆಗಳು ಮಾನಸಿಕ ನೆಮ್ಮದಿಗೆ ಪೂರಕ.

ಪ್ರಕೃತಿಸಹಜವಾಗಿ ಬಂದ ರೋಗನಿರೋಧ ಶಕ್ತಿಯ ಜೊತೆಗೆ, ಅವುಗಳ ಸಾಮರ್ಥ್ಯವನ್ನು ಒಂದು ನಿರ್ದಿಷ್ಟ ನಿಟ್ಟಿನಲ್ಲಿ ಹೆಚ್ಚಿಸಿ ಕೊಂಡು, ಕೆಲವು ಸೋಂಕುಗಳು ಕಾಡದಂತೆಯೂ ಬಳಸಿಕೊಳ್ಳಬಹುದು. ಲಸಿಕೆಗಳು ಪ್ರಯೋಗಿಸುವುದು ಈ ತಂತ್ರವನ್ನೇ. ಯಾವುದೇ ರೋಗಕಾರಕ ಜೀವಿಯನ್ನು ಪ್ರಯೋಗಾಲಯದಲ್ಲಿ ದುರ್ಬಲಗೊಳಿಸಿದರೆ, ಅವುಗಳು ರೋಗವನ್ನು ಉಂಟುಮಾಡುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೆ. ಆದರೆ, ಶರೀರದ ರಕ್ಷಕ ವ್ಯವಸ್ಥೆಯನ್ನು ಪ್ರಚೋದಿಸುವಷ್ಟು ಬಲ ಅವುಗಳಿಗೆ ಇನ್ನೂ ಉಳಿದಿರುತ್ತದೆ. ಈ ಹಂತದಲ್ಲಿ ಅವುಗಳಿಂದ ತಯಾರಿಸಿದ ಲಸಿಕೆಗಳು ನಮ್ಮ ದೇಹವನ್ನು ಆಯಾ ರೋಗದ ವಿರುದ್ಧ ಸನ್ನದ್ಧವಾಗಿ ಇಡುತ್ತವೆ. ಒಂದು ವೇಳೆ ರೋಗಕಾರಕ ಜೀವಿಗಳು ದೇಹವನ್ನು ಹೊಕ್ಕರೂ, ರೋಗ ಉಲ್ಬಣವಾಗದಂತೆ ನಮ್ಮ ಶರೀರವನ್ನು ಕಾಪಾಡುತ್ತವೆ. ಮನುಕುಲವನ್ನು ಸುರಕ್ಷಿತವಾಗಿಸುವಲ್ಲಿ ಲಸಿಕೆಗಳು ಮಹಾಕ್ರಾಂತಿಯನ್ನೇ ಮಾಡಿವೆ.

'ಆರೋಗ್ಯವೇ ಭಾಗ್ಯ' ಎಂಬ ಮಾತು ಕೇವಲ ನಾಣ್ಣುಡಿಯಲ್ಲ; ಅದು ನಮ್ಮ ಬದುಕಿನ ಆವಶ್ಯಕತೆ. ಆರೋಗ್ಯದ ರಕ್ಷಣೆ ನಮ್ಮ ಕೈಯಲ್ಲೇ ಇದೆ. ರೋಗನಿರೋಧಕ ಶಕ್ತಿಯು ರಾತ್ರೋರಾತ್ರಿ ಬರುವಂಥದ್ದಲ್ಲ; ಇದು ಶಿಸ್ತುಬದ್ಧ ಜೀವನಶೈಲಿ ಮತ್ತು ಸಮತೋಲಿತ ಆಹಾರದ ಫಲಶ್ರುತಿ. ರೋಗನಿರೋಧ ಶಕ್ತಿಯ ವರ್ಧನೆಯಲ್ಲಿ ಯಾವ ಕೃತಕ ಔಷಧಗಳೂ ನೈಸರ್ಗಿಕ ಜೀವನ ಪದ್ಧತಿಗಿಂತ ಹೆಚ್ಚು ಪರಿಣಾಮಕಾರಿಯಲ್ಲ. ಸಬಲವಾದ ರೋಗನಿರೋಧ ಶಕ್ತಿ ಆರೋಗ್ಯವಂತ ಬದುಕಿನ ಪ್ರಮುಖ ಭಾಗ. ❖

ಸೂರ್ಯ: ಆರೋಗ್ಯದ ಬೆಳಕು

> **ಭಾಸ್ಕರನಿಂದ ಆರೋಗ್ಯವನ್ನು ಪಡೆಯುವ ಪರಿಕಲ್ಪನೆಯು ಸೂರ್ಯೋಪಾಸನೆಯ ಮೊದಲ ಮಜಲು. ಸೂರ್ಯನಮಸ್ಕಾರದಡಿ ಯೋಗದ ಸಕಲ ಭಂಗಿಗಳು ಅಡಕವಾಗಿವೆ**

• ಡಾ. ಸತ್ಯನಾರಾಯಣ ಭಟ್ ಪಿ.

'ಆರೋಗ್ಯಂ ಭಾಸ್ಕರಾದಿಚ್ಛೇತ್' ಎಂಬ ಮಾತಿದೆ. ಅಂದರೆ ನಮಗೆ ಆರೋಗ್ಯ ಬೇಕೇ? ಅದನ್ನು ನೀಡುವಾತನು ಸೂರ್ಯ ಅಥವಾ ಭಾಸ್ಕರ! ಅದು ಹೇಗೆ? ಆಯುರ್ವೇದದ ಪ್ರಕಾರ ಸೋಮ ಮತ್ತು ಸೂರ್ಯ ಎಂಬ ಶಕ್ತಿಗಳಿಂದ ಇಡೀ ಜಗದ ಸಕಲ ವ್ಯಾಪಾರ ಘಟಿಸುತ್ತವೆ. ಮೂರನೆಯ ಅತ್ಯಂತ ಪ್ರಖರ ಶಕ್ತಿ ವಾಯು. ಇವನ್ನೇ ಆಯುರ್ವೇದವು ತ್ರಿದೋಷ ಎಂದು ಸಕಲ ಜೀವರಾಶಿಯಲ್ಲಿ ಗುರುತಿಸುತ್ತದೆ. ವಾಯುವೇ ವಾತ. ಸೋಮ ಶಕ್ತಿ ಎಂದರೆ ಚಂದ್ರನ ಶೀತ ತತ್ವ. ಅದು ಕಫ. ಮೂರನೆಯದು ರವಿ. ಪ್ರಖರ ಕಿರಣಗಳೂ ದಯಪಾಲಿಸುವ ರವಿಯಿಂದ ಜೀವರಾಶಿಗಳ 'ಮೆಟಬಾಲಿಸಂ', ಎಂದರೆ ಜೀವಕೋಶದಲ್ಲಿ ಜರಗುವ ಸೃಷ್ಟಿ, ಸ್ಥಿತಿ ಮತ್ತು ವಿನಾಶ ಪ್ರಕ್ರಿಯೆ ನಿರಂತರತೆಯದು.

ಸೂರ್ಯನ ಬೆಳಕಿನಡಿ ನಡೆಯುವ ಜೀವನ ವ್ಯಾಪಾರ ಮತ್ತು ಉಪಕಾರಗಳನ್ನು ನೆನೆಯೋಣ. ಇದೀಗ ಧನುರ್ಮಾಸ. ಸುದೀರ್ಘ ಇರುಳು. ಮುಂಜಾನೆ ಬೇಗ ಎದ್ದು ಸೂರ್ಯನಿಗೆ ಮೈ ಒಡ್ಡೋಣ. ವೈಕುಂಠ ಏಕಾದಶಿಯ ಸಂದರ್ಭ ಎಂದರೆ ರವಿಯುದಯದ ಸಂಗಡ ಆತನ ಪ್ರಖರತೆ ಏರುವ ಹೊತ್ತು. ಅನಂತರದ ದಿನಗಳಲ್ಲಿ ಬಿಸಿಯೇರುವ, ಬಿಸಿಲೇ ಆಳುವ ಮಕರ ಮಾಸದುದಯ! ಉತ್ತರಾಯಣದಿಂದ ಮತ್ತೆ ದೇಹದ 'ಚಯಾಪಚಯ' (ಮೆಟಬಾಲಿಸಂ) ಬದಲಾಗುತ್ತದೆ. ಅಂತಹ ಸೌರಮಂಡಲದ ಪ್ರಭಾವ ಮತ್ತು ಆರೋಗ್ಯದ ಮಜಲುಗಳನ್ನು ನಮ್ಮ ಆರೋಗ್ಯ ಸಂಹಿತೆಗಳು ಹಾಗೂ ಇಂದಿನ ಆಧುನಿಕ ವಿಜ್ಞಾನ ಗುರುತಿಸಿವೆ; ಅವನ್ನು ತಿಳಿಯಿರಿ. ಅದು ನಮ್ಮ ದೇಹಾರೋಗ್ಯಕ್ಕೆ ಪೂರಕ. 'ಆತಪ' ಎಂದರೆ ಬಿಸಿಲು. ಅದು ಬೆವರಿಳಿಸುವ ಒಂದು ಬಗೆಯ ಚಿಕಿತ್ಸೆಯ ವಿಧಾನ. 'ಸೌನಾ ಬಾತ್' ಎಂಬ ಪ್ರಕೃತಿ ಚಿಕಿತ್ಸೆಯಂತೂ ಸೂರ್ಯನ ಮೂಲಕ ಆರೋಗ್ಯವನ್ನು ಸಾಧಿಸುವ ಸುಲಭ ವಿಧಾನ; ಬೊಜ್ಜು ತಡೆಯುವ ಬೆವರಿಳಿಸುವ ಕ್ರಮ.

ಪ್ರತಿ ಬಾರಿಯ ವಾರ್ಷಿಕ ಅಥವಾ ನಿಯತಕಾಲಿಕ ರಕ್ತತಪಾಸಣೆಯ ಸಂದರ್ಭದಲ್ಲಿ ಕಂಡು ಬರುವ ದೊಡ್ಡ ಕೊರತೆ ಡಿ ವಿಟಮಿನ್ ಕೊರತೆ! ನಾಲ್ಕೈದು ದಶಕಗಳ ಹಿಂದೆ ಈ ಪ್ರಸಂಗಗಳೇ ಇರಲಿಲ್ಲ. ಬಿ1, ಬಿ6, ಬಿ12 ಇತ್ಯಾದಿ ನ್ಯೂನತೆಗಳು, ಕ್ಯಾಲ್ಸಿಯಂ ಕೊರತೆಗಳು ಇಂದು ಥಾಳಾಗಿ ತಪಾಸಣೆ ವರದಿಗಳಲ್ಲಿ ದಪ್ಪಕ್ಷರಗಳಡಿ ನಮೂದಿತ. ಹೊಸ ಬಗೆಯ ಹಲವಾರು ಮಾತ್ರೆಗಳ ಚಲಾವಣೆಯಂತೂ ಹೊಸ ಯುಗದಲ್ಲಿ ನಿಚ್ಚಳವಾಗುತ್ತಿದೆ. ಬಾಟಲೀಕೃತ ನೀರಿನ ಬಳಕೆಯಿಂದ, ಕೊಳವೆ ಬಾವಿಯ ನೀರಿನ ಬಹು ಬಳಕೆ ಇದೀಗ ಏರುಮುಖ. ಅಷ್ಟೆ ಅಲ್ಲ, ಯೂರಿಯಾದಂತಹ ರಸಗೊಬ್ಬರಗಳು, ಕೀಟನಾಶಕಗಳು ಹಾಗೂ ಕಳೆನಾಶಕಗಳು ಜಲ ಮೂಲಗಳನ್ನು ಹಾಳುಗೆಡವುವು. ಆಹಾರದ ಕಲಬೆರಕೆಗೆ ಇವು ಹೆದ್ದಾರಿ. ಅತಿ ಪ್ಲಾಸ್ಟಿಕ್ ಬಳಕೆಯ ಗೀಳು ಮತ್ತು ಅದರ 'ಥಯಲೇಟ್' ಎಂಬ ರಾಸಾಯನಿಕದ ಕಣಕಣಗಳು ನಮ್ಮ ಜೀವನ ವ್ಯಾಪಾರದ ಏರುಪೇರುಗಳಿಗೆ ಮೂಲಕಾರಣ ಎಂಬ ಕೆಲವು ವರದಿಗಳಿವೆ.

> **ಚರ್ಮ –ಮೂಳೆಗಳ ಆರೋಗ್ಯವನ್ನು ಕಾಪಾಡಲು ಸೂರ್ಯನ ಬೆಳಕು ಮುಖ್ಯವಾಗಿ ಬೇಕು**

ಭಾಸ್ಕರನಿಂದ ಆರೋಗ್ಯವನ್ನು ಪಡೆಯುವ ಪರಿಕಲ್ಪನೆಯು ಸೂರ್ಯೋಪಾಸನೆಯ ಮೊದಲ ಮಜಲು. ಸೂರ್ಯನಮಸ್ಕಾರದಡಿ ಯೋಗದ ಸಕಲ ಭಂಗಿಗಳು ಅಡಕವಾಗಿವೆ.

ಸೂರ್ಯನ ಕಿರಣಗಳ ಅಲ್ಟ್ರಾ ವಯಲೆಟ್ ರೇಡಿಯೇಷನ್ ದೇಹದ ಡಿ3 ಅನ್ನಾಂಗದ ಪರಿವರ್ತನೆ ಮತ್ತು ಚರ್ಮಾರೋಗ್ಯದ ಮತ್ತು ಮೂಳೆಗಳ ಹಾಗೂ ಮಜ್ಜೆಯ ಸಾಂದ್ರತೆ ಹೆಚ್ಚಳದ ಸುಲಭದ ಹಾದಿ. ಹುಟ್ಟಿದ ಶಿಶುವಿನ ಕಾಮಾಲೆಯನ್ನು ಗುಣಪಡಿಸಲು ಮಗುವನ್ನು ಸೂರ್ಯನ ಶಾಖದಡಿ ಕೆಲಹೊತ್ತು ಇಡುವ ಪರಿಪಾಠ ಸರ್ವೇ ಸಾಮಾನ್ಯ. ಇದು ಕಾಮಾಲೆಕಾರಿ ಲಿವರನ್ನು ಸರಿ ಪಡಿಸುವ ಸುಲಭದ ಹಾದಿ ಕೂಡ.

ಧನುರ್ಮಾಸ ಬಂದಿದೆ. ಬೇಗನೆ ಏಳಿರಿ. ಮೈಗೆಣ್ಣೆಹದ ಬಿಸಿ ಎಳ್ಳೆಣ್ಣೆ ಸವರಿಕೊಳ್ಳಿರಿ. ಹೊತ್ತೇರುವ ಹೊತ್ತಿಗೆ ಸೂರ್ಯನ ಎಳೆ ಕಿರಣಗಳಿಗೆ ಮೈ ಒಡ್ಡಿಕೊಳ್ಳಿರಿ. ದೇಹಾರೋಗ್ಯದ ಸಂಗಡ ರೋಗನಿರೋಧಕ ಶಕ್ತಿ ಏರಿಸಲು ಇದು ಹೆದ್ದಾರಿ. ಮೂಳೆ, ಮಜ್ಜೆಯ ಗಟ್ಟಿಗತನಕ್ಕಿದುವೆ ಸುಲಭ ಉಪಾಯ. ಬೆಳಗಿನ ಹೊತ್ತು ಕಷ್ಟವೇ? ಸಂಜೆಯ ಸೂರ್ಯಪಾದವಾದರೂ ಸೈ. ಸಂಜೆ ನಾಲ್ಕರ ಅನಂತರದ ರವಿರಶ್ಮಿಯಿಂದ ಕೂಡ ಚರ್ಮ ಮತ್ತು ಮೂಳೆಯ ಗಟ್ಟಿಗತನ ಹಾಗೂ ರೋಗನಿರೋಧಕ ಶಕ್ತಿ ಹೆಚ್ಚಳವಾಗುತ್ತವೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–5 ಸಮಾಂತರ ಶ್ರೇಢಿ

ಅಭ್ಯಾಸ 5.2

4) ಮೊತ್ತ ಕಂಡುಹಿಡಿಯಿರಿ:

(ii) ಮೊದಲ n ಧನ ಪೂರ್ಣಾಂಕಗಳು

ಪರಿಹಾರ: (...ಹಿಂದಿನ ಸಂಚಿಕೆಯಿಂದ)

(ii) $S_n = 1 + 2 + 3 + ... + n$ ಆಗಿರಲಿ

ಇಲ್ಲಿ $a = 1$ ಮತ್ತು ಕೊನೆಯ ಪದ $l = n$ ಆಗಿದೆ

ಆದ್ದರಿಂದ $S_n = \frac{n(1+n)}{2}$ ಅಥವಾ $S_n = \frac{n(n+1)}{2}$

ಹಾಗಾದರೆ ಮೊದಲ ಧನ ಪೂರ್ಣಾಂಕಗಳ ಮೊತ್ತವು

$S_n = \frac{n(n+1)}{2}$ ಆಗಿದೆ

5) n ನೇ ಪದ $a_n = 3 + 2n$ ಇರುವ ಸಂಖ್ಯಾ ಸರಣಿಯ ಮೊದಲ 24 ಪದಗಳ ಮೊತ್ತ ಕಂಡುಹಿಡಿಯಿರಿ.

ಪರಿಹಾರ: ಅಂದರೆ $a_n = 3 + 2n$

ಆದರೆ $a_1 = 3 + 2 = 5$

$a_2 = 3 + 2x\ 2 = 7$

$a_3 = 3 + 2\ x\ 3 = 3 + 6 = 9$

ಆ ಸಂಖ್ಯಾ ಸರಣಿ 5, 7, 9, 11 ....

ಇಲ್ಲಿ, 7 – 5 = 9 – 7 = 11 – 9 = 2 ....

ಆದ್ದರಿಂದ ಇದು ಸಾಮಾನ್ಯ ವ್ಯತ್ಯಾಸ d = 2 ಇರುವ ಸಮಾಂತರ ಶ್ರೇಢಿಯನ್ನು ಉಂಟು ಮಾಡುತ್ತದೆ.

S_{24} ನ್ನು ಕಂಡುಹಿಡಿಯಲು n = 24, a = 5, d = 2

ಆದ್ದರಿಂದ,

$S_{24} = \frac{24}{2}[2x5 + (24-1)x2 = 12(10+46) = 672$

ಆದ್ದರಿಂದ ಆ ಸಂಖ್ಯಾ ಸರಣಿಯ ಮೊದಲ 24 ಪದಗಳ ಮೊತ್ತವು 672

6) ಟೆಲಿವಿಷನ್ ಸೆಟ್‌ಗಳ ತಯಾರಕರೊಬ್ಬರು ಮೂರನೇ ವರ್ಷದಲ್ಲಿ 600 ಸೆಟ್‌ಗಳನ್ನು ಮತ್ತು ಏಳನೇ ವರ್ಷದಲ್ಲಿ 700 ಸೆಟ್‌ಗಳನ್ನು ತಯಾರಿಸುತ್ತಾರೆ. ಪ್ರತಿ ವರ್ಷ ಅವರ ಉತ್ಪಾದನೆ ಸ್ಥಿರವಾದ ಸಂಖ್ಯೆಯಿಂದ ಹೆಚ್ಚಾಗುತ್ತದೆ ಎಂದು ಭಾವಿಸಿ.

(i) ಮೊದಲ ವರ್ಷದ ಉತ್ಪಾದನೆ (ii) 10ನೇ ವರ್ಷದ ಉತ್ಪಾದನೆ

(iii) 7 ವರ್ಷಗಳ ಒಟ್ಟು ಉತ್ಪಾದನೆಗಳನ್ನು ಕಂಡುಹಿಡಿಯಿರಿ

ಪರಿಹಾರ: (i) ಉತ್ಪಾದನೆ ಪ್ರತಿವರ್ಷ ಒಂದು ಸ್ಥಿರವಾದ ಸಂಖ್ಯೆಯ ಪ್ರಕಾರ ಹೆಚ್ಚಾಗುವ ಕಾರಣ 1ನೇ, 2ನೇ, 3ನೇ .... ವರ್ಷಗಳಲ್ಲಿ ಉತ್ಪಾದಿಸುವ ಟೆಲಿವಿಷನ್ ಸೆಟ್‌ಗಳ ಸಂಖ್ಯೆ ಸಮಾಂತರ ಶ್ರೇಢಿಯನ್ನುಂಟು ಮಾಡುತ್ತದೆ.

nನೇ ವರ್ಷದಲ್ಲಿ ಉತ್ಪಾದಿಸಿದ ಟೆಲಿವಿಷನ್ ಸೆಟ್‌ಗಳ ಸಂಖ್ಯೆಯನ್ನು a_n ಎಂದು ಸೂಚಿಸುವ

ಆದರೆ a_3 = 600 ಮತ್ತು a_7 = 700

ಅಥವಾ a + 2d = 600

ಮತ್ತು a + 6d = 700

ಈ ಸಮೀಕರಣಗಳನ್ನು ಬಿಡಿಸಿದಾಗ d = 25 ಮತ್ತು a=550 ಪಡೆಯುತ್ತೇವೆ. ಆದ್ದರಿಂದ ಮೊದಲ ವರ್ಷದಲ್ಲಿ ಉತ್ಪಾದಿಸಿದ ಟೆಲಿವಿಷನ್ ಸೆಟ್‌ಗಳ ಸಂಖ್ಯೆ = 550

ii) ಈಗ $a_{10} = a + 9d = 550 + 9 \times 25 = 775$

ಆದ್ದರಿಂದ 10ನೇ ವರ್ಷದಲ್ಲಿ ಉತ್ಪಾದಿಸಿದ ಟೆಲಿವಿಷನ್ ಸೆಟ್‌ಗಳ ಸಂಖ್ಯೆ = 775

iii) S_7 = 72

$$S_n = \frac{n}{2}[2a+(n-1)d]$$

$$78 = \frac{7}{2}[2x550+(7-1)(25)]$$

$$\Rightarrow = \frac{7}{2}[1100+50]$$

$$= 4375$$

7 ವರ್ಷಗಳಲ್ಲಿ ಉತ್ಪಾದಿಸಿದ ಟೆಲಿವಿಷನ್ ಸೆಟ್‌ಗಳ ಸಂಖ್ಯೆ = 4375

ಅಭ್ಯಾಸ – 5.3

1. ಕೆಳಗಿನ ಸಮಾಂತರ ಶ್ರೇಢಿಗಳ ಮೊತ್ತವನ್ನು ಕಂಡುಹಿಡಿಯಿರಿ

i) 2, 7, 12 ...... ರ 10 ಪದಗಳವರೆಗೆ

ii) –37, –33, –29 ...... ರ 12 ಪದಗಳವರೆಗೆ

iii) 0.6, 1.7, 2.5 ..... ರ 100 ಪದಗಳವರೆಗೆ

(iv) $\frac{1}{15}, \frac{1}{12}, \frac{1}{10}$.............. ರ 100 ಪದಗಳವರೆಗೆ

ಪರಿಹಾರ: (i) 2, 7, 12 ...... ರ 10 ಪದಗಳವರೆಗೆ

ಇಲ್ಲಿ a= 2 d= 7-2= 5 n= 10

$$S_n = \frac{n}{2}[2a+(n-1)d]$$

$$S_{10} = \frac{10}{2}[2x2+(10-1)5]$$

$$S_{10} = 5[4+45] = 245$$

2, 7, 12 .... ರ 10 ಪದಗಳವರೆಗೆ ಸಮಾಂತರ ಶ್ರೇಢಿಗಳ ಮೊತ್ತ 245

ii) –37, –33, –29 ...... ರ 12 ಪದಗಳವರೆಗೆ

ಇಲ್ಲಿ a= - 37 d= -33 –(-37) = 4 n= 12

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$S_{12} = \frac{12}{2}[2(-37)+(12-1)4]$$

$$S_{12} = 6[-74+44]$$

$$= 6(-30) = -180$$

–37, –33, –29 .. ರ 12 ಪದಗಳವರೆಗಿನ ಸಮಾಂತರ ಶ್ರೇಢಿಗಳ ಮೊತ್ತ –180

iii) 0.6, 1.7, 2.5 ..... ರ 100 ಪದಗಳವರೆಗೆ

ಇಲ್ಲಿ a= 0.6 d = 1.7–(0.6) = 1.1 n= 100

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$S_{100} = \frac{100}{2}[2(0.6)+(100-1)(1.1)]$$

$$S_{100} = 50[1.2+108.9]$$

$$= 50(110.1)$$

$$= 5505$$

0.6, 1.7, 2.5 ..... ರ 100 ಪದಗಳವರೆಗಿನ ಸಮಾಂತರ ಶ್ರೇಢಿಗಳ ಮೊತ್ತ 5505

(iv) $\frac{1}{15}, \frac{1}{12}, \frac{1}{10}$.............. ರ 100 ಪದಗಳವರೆಗೆ

ಇಲ್ಲಿ a= 1/15, n= 11, $d = \frac{1}{12}, -\frac{1}{15} = \frac{1}{60}$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$S_{11} = \frac{11}{2}\left[2\left(\frac{1}{15}\right)+(11-1)\left(\frac{1}{60}\right)\right]$$

$$S_{11} = \frac{11}{2}\left(\frac{2}{15}+\frac{1}{6}\right)$$

$$S_{11} = \frac{11}{2}\left(\frac{3}{10}\right)$$

$$S_{11} = \frac{33}{20}$$

$\frac{1}{15}, \frac{1}{12}, \frac{1}{10}$.............. ರ 100ಪದಗಳವರೆಗಿನ ಸಮಾಂತರ ಶ್ರೇಢಿಗಳ ಮೊತ್ತ 33/20

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

INTEGRALS

Basics

59. Mention some simple rules of integration.

Ans:- Simple rules of integration are –

(1) If u is a function of x; k any constant, then

$$\int kudx = k\int udx$$

(2) If u & v are the functions of x, then $\int (u+v)dx = \int udx + \int vdx$

60. Evaluate $\int \frac{ax^2+bx+c}{\sqrt{x}}dx$

Soln :– Consider $\int \frac{ax^2+bx+c}{\sqrt{x}}dx$

$$\Rightarrow a\int \frac{x^2}{\sqrt{x}}dx + b\int \frac{bx}{\sqrt{x}}dx + c\int \frac{1}{\sqrt{x}}dx$$

$$\Rightarrow a\int x^{3/2}dx + b\int x^{1/2}dx + c\int x^{-(1/2)}dx$$

we know that

$$\int x^n dx = \frac{x^{n+1}}{n+1} + c\ (n \neq 1)$$

$$\therefore \int \frac{ax^2+bx+c}{\sqrt{x}}dx = a\left(\frac{x^{5/2}}{5/2}\right) + b\left(\frac{x^{3/2}}{3/2}\right) + c\left(\frac{x^{1/2}}{1/2}\right)$$

$$\Rightarrow \frac{2a}{5}.x^{5/2} + \frac{2b}{3}.x^{3/2} + 2c.x^{1/2} + c'$$

61. Evaluate $\int \left(x^5 + 5^x + \frac{6}{x}\right)dx$

Soln :– Consider $\int \left(x^5 + 5^x + \frac{6}{x}\right)dx$

$$= \int x^5.dx + \int 5^x.dx + \int \frac{6}{x}dx$$

But $\int x^n dx = \frac{x^{n+1}}{n+1} + c\ (n \neq 1)$,

$$\int a^x dx = \frac{a^x}{\log a} + c$$

and $\int \frac{a}{x}dx = a\log x + c$

$$\therefore \int \left(x^5 + 5^x + \frac{6}{x}\right)dx = \frac{x^6}{6} + \frac{5^x}{\log 5} + 6\log x + c$$

62. Evaluate $\int \left(\text{sech}^2 4x + \cosh 3x\right)dx$

Soln :–Consider $\int \left(\text{sech}^2 4x + \cosh 3x\right)dx$

But $\int \cosh ax\,dx = \frac{1}{a}\sinh ax$ and

$$\int \text{sech}^2 ax\,dx = \frac{1}{a}\tanh ax$$

$$\Rightarrow \int \left(\text{sech}^2 4x + \cosh 3x\right)dx$$

$$= \int \text{sech}^2 4x\,dx + \int \cosh 3x\,dx$$

$$= \frac{1}{4}\tanh 4x + \frac{1}{3}\sinh 3x + c$$

63. Evaluate $\int \cos 3x.\cos 2x dx$

Soln:- Consider $\int \cos 3x.\cos 2x dx$

we know that

$$\cos A\cos B = \frac{1}{2}[\cos(A+B) + \cos(A-B)]$$

$$\cos 3x.\cos 2x = \frac{1}{2}[\cos(3x+2x) + \cos(3x-2x)]$$

$$= \frac{1}{2}[\cos(5x) + \cos(x)]$$

$$\therefore \int \cos 3x.\cos 2x\,dx = \int \frac{1}{2}(\cos 5x + \cos x)dx$$

$$\Rightarrow \frac{1}{2}\int \cos 5x dx + \frac{1}{2}\int \cos x\,dx$$

$$\Rightarrow \frac{1}{2}\left(\frac{\sin 5x}{5} + \sin x\right) + c$$

64. Evaluate $\int \sin^3 x \cos x\,dx$

Soln :– Consider $\int \sin^3 x \cos x\,dx$

let $\sin x = t$

differentiating w.r.t x, we get

$$\cos x\frac{dx}{dt} = 1$$

$$\Rightarrow \cos x\,dx = dt$$

$$\therefore \int \sin^3 x \cos x\,dx = \int t^3 dt$$

$$= \frac{t^4}{4} = \frac{\sin^4 x}{4} + c$$

65. Evaluate $\left(x^2 - 2x + 3\right)^5 (x-1)dx$

Soln :–Consider $\int \left(x^2 - 2x + 3\right)^5 (x-1)dx$

Let $x^2 - 2x + 3 = t$

differentiating wrt x, we get

$$(2x-2)\frac{dx}{dt} = 1 \Rightarrow 2(x-1)\frac{dx}{dt} = 1$$

$$\Rightarrow (x-1)dx = \frac{dt}{2}$$

$$\therefore \int \left(x^2 - 2x + 3\right)^5 (x-1)dx = \int t^5 \frac{dt}{2}$$

$$\Rightarrow \frac{1}{2}\int t^5.dt = \frac{1}{2}.\frac{t^6}{6} = \frac{\left(x^2 - 2x + 3\right)^6}{12} + c$$

Contd/-

ಬೀದರ್, ಕಲಬುರಗಿ ಭಾಗದಲ್ಲಿ ಶೀತಗಾಳಿ

ಬೆಂಗಳೂರು: ಕಲಬುರಗಿ, ಬೀದರ್ ಜಿಲ್ಲೆಯಲ್ಲಿ ಮಂಗಳವಾರ (ಡಿ.23) ಶೀತಗಾಳಿ ಬೀಸುವ ಸಾಧ್ಯತೆ ಇದೆ. ಉತ್ತರ ಮತ್ತು ದಕ್ಷಿಣ ಒಳನಾಡಿನ ಕೆಲವು ಭಾಗಗಳಲ್ಲಿ ಈ ವಾರ ಕನಿಷ್ಠ ಉಷ್ಣಾಂಶದಲ್ಲಿ 2–3 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಕರ್ನಾಟಕದ ಹಲವು ನಗರಗಳಲ್ಲಿ 3–4 ದಿನಗಳಿಂದ ತಾಪಮಾನದಲ್ಲಿ ಕುಸಿತ ಕಂಡು ಬಂದಿದೆ. ಸೋಮವಾರ ಬೀದರ್‌ನಲ್ಲಿ ಕನಿಷ್ಠ ತಾಪಮಾನ 7.1 ಡಿಗ್ರಿ ಸೆಲ್ಸಿಯಸ್, ವಿಜಯಪುರ ಹಾಗೂ ದಾವಣಗೆರೆಯಲ್ಲಿ 10.5 ಡಿಗ್ರಿ ಸೆಲ್ಸಿಯಸ್, ಧಾರವಾಡದಲ್ಲಿ 10.6 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಚಿಂತಾಮಣಿ, ಮೈಸೂರು, ಮಂಡ್ಯ, ಹಾಸನದಲ್ಲಿ ಕನಿಷ್ಠ ತಾಪಮಾನ 12 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಬೆಂಗಳೂರು ನಗರ, ಸುತ್ತಮುತ್ತ ಮುಂಜಾನೆ ದಟ್ಟ ಮಂಜು ಕಂಡು ಬರುವ ಸಾಧ್ಯತೆಯಿದೆ. ಗರಿಷ್ಠ ಹಾಗೂ ಕನಿಷ್ಠ ತಾಪಮಾನ ಕ್ರಮವಾಗಿ 26 ಹಾಗೂ 16 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

‘ಒಪಿಎಸ್ ಮರು ಜಾರಿ: ತಿಂಗಳಲ್ಲಿ ವರದಿ’

ಐಎಎಸ್ ಅಧಿಕಾರಿಗಳ ಸಮಿತಿ ಭರವಸೆ: ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಷಡಾಕ್ಷರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎನ್‌ಪಿಎಸ್ ಯೋಜನೆ ರದ್ದು ಮಾಡಿ ಹಳೆ ಪಿಂಚಣಿ ಯೋಜನೆಯನ್ನು (ಒಪಿಎಸ್) ಮರು ಜಾರಿಗೊಳಿಸುವ ಸಂಬಂಧ ಸಮಗ್ರ ಶಿಫಾರಸು ಒಳಗೊಂಡ ಪರಿಶೀಲನಾ ವರದಿಯನ್ನು ಒಂದು ತಿಂಗಳಲ್ಲಿ ಸರ್ಕಾರಕ್ಕೆ ಸಲ್ಲಿಸುವುದಾಗಿ ಐಎಎಸ್ ಅಧಿಕಾರಿಗಳ ಸಮಿತಿ ಭರವಸೆ ನೀಡಿದೆ’ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ತಿಳಿಸಿದ್ದಾರೆ.

‘ಸಮಿತಿಯ ಅಧ್ಯಕ್ಷೆ ಉಮಾ ಮಹಾದೇವನ್ ಮತ್ತು ಆರ್ಥಿಕ ಇಲಾಖೆ ಕಾರ್ಯದರ್ಶಿ ಎಂ.ಟಿ.ರೇಜು ಅವರನ್ನು ಭೇಟಿ ಮಾಡಿ ಈ ಕುರಿತು ಚರ್ಚೆ ನಡೆಸಲಾಯಿತು ಎಂದು ಅವರು ಹೇಳಿದರು.

ಸರ್ಕಾರ ಪ್ರತಿ ವರ್ಷ ಪಾವತಿ ಮಾಡುತ್ತಿರುವ ಎನ್‌ಪಿಎಸ್ ವಂತಿಕೆ ಮೊತ್ತ ₹3,000 ಕೋಟಿ. 2010 ರಿಂದ 2024 ರವರೆಗೆ ಸುಮಾರು ₹25,000 ಕೋಟಿ ಎನ್‌ಪಿಎಸ್ ವಂತಿಕೆ ಪಾವತಿ ಮಾಡಲಾಗಿದೆ. ರಾಜ್ಯದಲ್ಲಿರುವ ಭರ್ತಿ ಆಗದೇ ಇರುವ ಹುದ್ದೆಗಳ ಕಾರಣದಿಂದ ವರ್ಷಕ್ಕೆ ಅಂದಾಜು ₹1,914.68 ಕೋಟಿ ಎನ್‌ಪಿಎಸ್ ವಂತಿಕೆ ಉಳಿತಾಯ ವಾಗುತ್ತಿದೆ ಎಂದು ಷಡಾಕ್ಷರಿ ಅವರು ಸಮಿತಿ ಗಮನಕ್ಕೆ ತಂದರು.

> **ಕಾಂಗ್ರೆಸ್ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹಳೆಯ ಪಿಂಚಣಿ ಯೋಜನೆ ಜಾರಿ ತರುವ ಕುರಿತು ಭರವಸೆ ನೀಡಿದೆ. ಒಂದು ವೇಳೆ ಜಾರಿ ಮಾಡದೇ ಇದ್ದರೆ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ**
> **ಸಿ.ಎಸ್. ಷಡಾಕ್ಷರಿ**
> ಅಧ್ಯಕ್ಷ, ಸರ್ಕಾರಿ ನೌಕರರ ಸಂಘ

ಅಲ್ಲದೇ, ರಾಜ್ಯದಲ್ಲಿ ಈಗ ಖಾಲಿ ಇರುವ 2,76,386 ಹುದ್ದೆಗಳಿಂದ ಸರ್ಕಾರಕ್ಕೆ ಪ್ರತಿ ತಿಂಗಳ ವೇತನ ಮತ್ತು ಭತ್ಯೆಗಳಿಗೆ ಅಂದಾಜು ₹15,590 ಕೋಟಿ ಉಳಿತಾಯವಾಗುತ್ತಿದೆ. ವರ್ಷಕ್ಕೆ ಅಂದಾಜು ₹1,87,080 ಕೋಟಿ ಸರ್ಕಾರಕ್ಕೆ ಉಳಿತಾಯವಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.

ಈಗ ಕಾರ್ಯನಿರ್ವಹಿಸುತ್ತಿರುವ ಎನ್‌ಪಿಎಸ್ ನೌಕರರಲ್ಲಿ ಬಹುತೇಕರು 15 ರಿಂದ 20 ವರ್ಷಗಳಲ್ಲಿ ನಿವೃತ್ತಿ ಆಗಲಿದ್ದಾರೆ. ಹೀಗಾಗಿ ಹಳೆ ಪಿಂಚಣಿ ಯೋಜನೆಯನ್ನು ಜಾರಿ ತರುವುದರಿಂದ ಸರ್ಕಾರಕ್ಕೆ ಹೊರೆಯಾಗುವುದಿಲ್ಲ. ಆದ್ದರಿಂದ ಒಳ್ಳೆಯ ವರದಿಯನ್ನೇ ನೀಡಬೇಕು. ಎನ್‌ಪಿಎಸ್ ರದ್ದು ಮಾಡುವುದರಿಂದ ಉಳಿಯುವ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಬಹುದು ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳು ಭಾರತೀಯ ಆಡಳಿತ ಸೇವೆಯ ಅಧಿಕಾರಿಗಳ ಸಮಿತಿ ಅಧ್ಯಕ್ಷೆ ಉಮಾ ಮಹಾದೇವನ್ ಅವರನ್ನು ಭೇಟಿ ಮಾಡಿ ಪೂರಕ ಮಾಹಿತಿಯನ್ನು ಒಳಗೊಂಡ ಮನವಿ ಸಲ್ಲಿಸಿದರು

ಛತ್ತೀಸಗಡ, ಹಿಮಾಚಲ ಪ್ರದೇಶ, ಪಂಜಾಬ್, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳು ಹಳೆ ಪಿಂಚಣಿ ಯೋಜನೆಯನ್ನು ಜಾರಿ ಮಾಡಿವೆ. ರಾಜಸ್ಥಾನ ಮತ್ತು ಜಾರ್ಖಂಡ್ ರಾಜ್ಯಗಳು ಹಳೆ ಪಿಂಚಣಿ ಯೋಜನೆ ಜಾರಿ ಮಾಡುವುದಾಗಿ ಘೋಷಿಸಿವೆ. ಕೇಂದ್ರ ಸರ್ಕಾರವು ಯುಪಿಎಸ್ ಅಥವಾ ಎನ್‌ಪಿಎಸ್ ಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳಲು ನೌಕರರಿಗೆ ಅವಕಾಶ ನೀಡಿದೆ. ರಾಜ್ಯದಲ್ಲೂ ಇದೇ ರೀತಿ ಅವಕಾಶ ನೀಡಬಹುದು ಎಂದು ಷಡಾಕ್ಷರಿ ಅವರು ಸಮಿತಿಗೆಯ ಮುಖ್ಯಸ್ಥರಿಗೆ ಮನವರಿಕೆ ಮಾಡಿಕೊಟ್ಟರು.

ಅರಾವಳಿ ಶ್ರೇಣಿಯಲ್ಲಿ 100 ಮೀ.ಗಿಂತ ಕಡಿಮೆ ಎತ್ತರದ ಬೆಟ್ಟಗಳಲ್ಲಿ ಗಣಿಗಾರಿಕೆಗೆ ಅವಕಾಶ ನೀಡಿರುವುದು ಸರಿಯೇ?

ಸರಿ ತಪ್ಪು ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಪ್ರಶಸ್ತಿಗೆ ಕಾದಂಬರಿ ಆಹ್ವಾನ

ಬೆಂಗಳೂರು: ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನವು ರಾಜ್ಯಮಟ್ಟದ ಅತ್ಯುತ್ತಮ ಕಾದಂಬರಿ ಪ್ರಶಸ್ತಿಗಾಗಿ ಲೇಖಕರು ಮತ್ತು ಪ್ರಕಾಶಕರಿಂದ ಕೃತಿಗಳನ್ನು ಆಹ್ವಾನಿಸಿದೆ.

ಪ್ರಶಸ್ತಿಯು ₹25 ಸಾವಿರ ನಗದು ಬಹುಮಾನ, ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಕಾದಂಬರಿಗಳು 2025 ರಲ್ಲಿ ಪ್ರಕಟವಾಗಿರಬೇಕು. ಕಾದಂಬರಿಯ 3 ಪ್ರತಿಗಳನ್ನು ಜನವರಿ 30ರ ಒಳಗೆ ಈ ಕೆಳಗೆ ನೀಡಿರುವ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್ ತಿಳಿಸಿದ್ದಾರೆ. ವಿಳಾಸ: ಅಧ್ಯಕ್ಷರು, ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ, ನಂ. 118, ‘ಹೊಂಬೆಳಕು’, 5ನೇ ಕ್ರಾಸ್, ಒಂದನೇ ಬ್ಲಾಕ್, ಎಚ್.ಎಂ.ಟಿ. ಲೇಔಟ್, ನಾಗಸಂದ್ರ ಅಂಚೆ, ಬೆಂಗಳೂರು 560073. ಮಾಹಿತಿಗೆ: 96860 73837, 77603 50244.

ಇದೇ 16ರಂದು ನಡೆದ ಸಂಘದ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಒಮ್ಮತದಿಂದ ನಿರ್ಣಯ

ಶನಿವಾರವೂ ಕಲಾಪ: ಎಎಬಿ ತಿರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ತಿಂಗಳ ಎರಡು ಶನಿವಾರಗಳಂದು ಹೈಕೋರ್ಟ್‌ನ ಪೂರ್ಣ ಕಲಾಪ ನಡೆಸುವ ಮತ್ತು 2026ರ ಜನವರಿಯಿಂದಲೇ ಆರಂಭಿಸಲು ಉದ್ದೇಶಿಸಿರುವ ಪ್ರಸ್ತಾವವನ್ನು ಬೆಂಗಳೂರು ವಕೀಲರ ಸಂಘ (ಎಎಬಿ) ಸ್ಪಷ್ಟವಾಗಿ ತಿರಸ್ಕರಿಸಿದೆ.

‘ಈ ಕುರಿತು ಇದೇ 16ರಂದು ನಡೆಸಲಾದ ಸಂಘದ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಒಮ್ಮತದಿಂದ ನಿರ್ಣಯ ಕೈಗೊಳ್ಳಲಾಗಿದೆ ಮತ್ತು ಈ ನಿರ್ಧಾರವನ್ನು ಅನುಷ್ಠಾನಗೊಳಿಸಲು ಮುಂದಾದರೆ ಯಾವುದೇ ವಕೀಲರು ಕಲಾಪಗಳಿಗೆ ಹಾಜರಾಗುವುದಿಲ್ಲ’ ಎಂದು ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಎಡಬಿಡದೆ ದುಡಿಯುವುದರಿಂದ ವಕೀಲರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಲಿದೆ. ಈ ನಿಟ್ಟಿನಲ್ಲಿ ಸಂಘದ ಅವಲೋಕಿತ ಅಂಶಗಳನ್ನು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರು ಪರಿಗಣಿಸದೇ ಇರುವುದು ದುರದೃಷ್ಟಕರ. ಅವರ ಈ ನಿರ್ಧಾರ ವಕೀಲರ ಜೊತೆಗಿನ ಅನಗತ್ಯ ಮುಖಾಮುಖಿಗೆ ಕಾರಣವಾಗಲಿದೆ’ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

‘ಒಂದು ವೇಳೆ ಯಾವುದೇ ಸಕಾರಾತ್ಮಕ ನಿರ್ಧಾರ ಕಂಡು ಬಾರದೇ ಹೋದರೆ ಶನಿವಾರ ಕಲಾಪ ನಡೆಸುವ ತೀರ್ಮಾನ ಪ್ರಕಟವಾಗುವ ವಾರದಲ್ಲೇ ಸಂಘದ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಕರೆಯಲಾಗುವುದು ಮತ್ತು ಧರಣಿ ಹೊರತುಪಡಿಸಿದಂತೆ ಮುಂದಿನ ಹೋರಾಟದ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುವುದು’ ಎಂದು ತಿಳಿಸಲಾಗಿದೆ.

ನೇಮಕಾತಿ ಶಿಫಾರಸಿಗೆ ವಿಳಂಬ: ‘ಮುಂದಿನ ಎರಡು ತಿಂಗಳ ಒಳಗಾಗಿ ಕರ್ನಾಟಕ ಹೈಕೋರ್ಟ್‌ಗೆ ವಕೀಲ ವೃಂದದ ವತಿಯಿಂದ ನ್ಯಾಯಮೂರ್ತಿಗಳನ್ನು ನೇಮಕ ಮಾಡುವುದಕ್ಕೆ ಕರ್ನಾಟಕ ಹೈಕೋರ್ಟ್ ಕೊಲಿಜಿಯಂ ಶಿಫಾರಸು ಮಾಡುವ ಬಗ್ಗೆ ಮುಂದಡಿ ಇಡದೇ ಹೋದಲ್ಲಿ ವಕೀಲರ ಸಂಘ ಧರಣಿ ಹಮ್ಮಿಕೊಳ್ಳಲಿದೆ’ ಎಂದು ಸಂಘವು ಇದೇ ವೇಳೆ ಎಚ್ಚರಿಸಿದೆ.

‘ನ್ಯಾಯಮೂರ್ತಿಗಳ ನೇಮಕಾತಿಯಲ್ಲಿ ವಿಳಂಬ ತೋರುತ್ತಿರುವುದು ಒಂದು ತಲೆಮಾರಿನ ಪ್ರಾತಿನಿಧ್ಯಕ್ಕೆ ಸಂಚಕಾರ ತಂದಂತಾಗಿದೆ’ ಎಂದು ನಿರ್ಣಯದಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

‘ನ್ಯಾಯಮೂರ್ತಿಗಳ ನೇಮಕ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು, ಧಾರವಾಡ ಮತ್ತು ಕಲಬುರ್ಗಿ ಪೀಠಗಳ ವಕೀಲರ ಸಂಘದ ಪ್ರತಿನಿಧಿಗಳು ಶೀಘ್ರವೇ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಹಾಗೂ ನ್ಯಾಯಮೂರ್ತಿ ಅರವಿಂದ ಕುಮಾರ್ ಅವರನ್ನು ಶೀಘ್ರವೇ ಭೇಟಿ ಮಾಡಿ ಚರ್ಚಿಸಲಿದೆ’ ಎಂದು ತಿಳಿಸಲಾಗಿದೆ.

ಎಂಜಿನಿಯರ್‌ಗೆ ₹50 ಸಾವಿರ ದಂಡ

ಒಂದೇ ಕಾಮಗಾರಿಗೆ ಎರಡು ಬಾರಿ ಟೆಂಡರ್ ಅಧಿಸೂಚನೆ ಹೊರಡಿಸಿದ್ದ ಹಾವೇರಿಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಯನಿರ್ವಾಹಕ ಎಂಜಿನಿಯರ್‌ಗೆ ಹೈಕೋರ್ಟ್ ₹50 ಸಾವಿರ ದಂಡ ವಿಧಿಸಿದೆ.

ಕಾಮಗಾರಿ ಪ್ರಾರಂಭಿಸಿದ ಬಳಿಕ ಅದೇ ಕಾಮಗಾರಿಗೆ ಮತ್ತೊಮ್ಮೆ ಟೆಂಡರ್ ಕರೆಯಲಾಗಿದ್ದ ಕ್ರಮವನ್ನು ಪ್ರಶ್ನಿಸಿ ರಾಣೆಬೆನ್ನೂರು ತಾಲ್ಲೂಕಿನ ಬೇಲೂರು ಗ್ರಾಮದ ಸರ್ಕಾರದ ‘ಎ’ ದರ್ಜೆ ಗುತ್ತಿಗೆದಾರ ಗೋಪಿ ಗೊಲ್ಲರ ಬಿನ್ ತಿಮ್ಮಪ್ಪ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಈ ಕೃತ್ಯವು ಮೇಲ್ನೋಟಕ್ಕೆ ಕಾನೂನುಬಾಹಿರ ಮತ್ತು ಉದ್ಧಟತನದಿಂದ ಕೂಡಿದೆ. ಹೀಗಾಗಿ, ಎರಡನೇ ಬಾರಿ ಕರೆದಿರುವ ಟೆಂಡರ್ ರದ್ದುಗೊಳಿಸುವುದು ಕೇವಲ ಔಪಚಾರಿಕ ಎನಿಸಬಾರದು’ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠ, ‘ಕಾರ್ಯನಿರ್ವಾಹಕ ಎಂಜಿನಿಯರ್ ತಮ್ಮ ಸ್ವಂತ ಹಣದಿಂದ ದಂಡವನ್ನು ಅರ್ಜಿದಾರರಿಗೆ ಕಾನೂನು ಹೋರಾಟದ ವೆಚ್ಚವಾಗಿ ಪಾವತಿಸಬೇಕು’ ಎಂದು ತಾಕೀತು ಮಾಡಿದೆ.

ಪ್ರಕರಣವೇನು?: ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಬಾಳಂಬೀಡ ಗ್ರಾಮ ಪಂಚಾಯತ್‌ನಲ್ಲಿ ಮಲ ತ್ಯಾಜ್ಯ ಸಂಸ್ಕರಣಾ (ಎಫ್‌ಎಸ್‌ಟಿಪಿ) ಘಟಕದ ನಿರ್ಮಾಣಕ್ಕಾಗಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ಟೆಂಡರ್ ಕರೆಯಲಾಗಿತ್ತು. ಈ ಟೆಂಡರ್‌ನ್ನು ಗೋಪಿ ಗೊಲ್ಲರ ಪಡೆದುಕೊಂಡಿದ್ದರು. 2025ರ ಮೇ 27ರಂದು ಕಾರ್ಯಾದೇಶ ನೀಡಲಾಗಿತ್ತು. ಆದರೆ, 2025ರ ಸೆಪ್ಟೆಂಬರ್ 9ರಂದು ಇದೇ ಕಾಮಗಾರಿಗೆ ಮತ್ತೊಂದು ಟೆಂಡರ್ ಆಹ್ವಾನಿಸಿ ಅಧಿಸೂಚನೆ ಹೊರಡಿಸಲಾಗಿತ್ತು.

28 ನಕ್ಸಲ್ ಪ್ರಕರಣ ವಿಲೇವಾರಿ

ಉಡುಪಿ: ಜಿಲ್ಲೆಯಲ್ಲಿ 68 ನಕ್ಸಲ್ ಪ್ರಕರಣಗಳಲ್ಲಿ 39 ಪ್ರಕರಣಗಳು ಕೋರ್ಟ್ ವಿಚಾರಣೆಯಲ್ಲಿದ್ದು, 28 ಪ್ರಕರಣಗಳು ವಿಲೇವಾರಿ ಆಗಿವೆ. 1 ಪ್ರಕರಣದಲ್ಲಿ ಹೆಚ್ಚುವರಿ ಆರೋಪಪಟ್ಟಿ ಸಲ್ಲಿಸಲು ಬಾಕಿ ಇದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ತಿಳಿಸಿದ್ದಾರೆ.

ಮೂವರು ಆರೋಪಿಗಳ ವಿರುದ್ಧ ಹೆಚ್ಚುವರಿ ದಾಖಲಾತಿ ಸಲ್ಲಿಸಲು ಬಾಕಿ ಇದೆ. ಒಂದು ಪ್ರಕರಣ ಸಿಐಡಿ ತನಿಖೆಯಲ್ಲಿದೆ. ಕಳೆದ 6 ತಿಂಗಳಲ್ಲಿ 39 ಪ್ರಕರಣ ಗಳಲ್ಲಿ 11 ಜನ ನಕ್ಸಲ್ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

39 ಪ್ರಕರಣಗಳಲ್ಲಿ ಹಾಜರುಪಡಿಸಿದ ಆರೋಪಿಗಳ ವಿರುದ್ಧ ನ್ಯಾಯಾಲಯ ದಲ್ಲಿ ಚಾರ್ಜ್ ಫ್ರೇಮ್ ಆಗಿದ್ದು, ನ್ಯಾಯಾಲಯದ ವಿಚಾರಣೆಯಲ್ಲಿದೆ ಎಂದು ತಿಳಿಸಿದ್ದಾರೆ.

ಆದಿಕೇಶವುಲು ಪುತ್ರ, ಪುತ್ರಿ ಬಂಧನ

ಒಂದನೇ ಪುಟದಿಂದ...

ವಂಚನೆ, ನಕಲಿ ದಾಖಲೆ ಸೃಷ್ಟಿ, ಛಾಪಾಕಾಗದ ಹಾಗೂ ಮೊಹರುಗಳ ನಕಲು, ಸಾಕ್ಷ್ಯನಾಶ ಹಾಗೂ ನಕಲಿ ಸಾಕ್ಷ್ಯ ಸೃಷ್ಟಿ ಕುರಿತ ಪ್ರಕರಣಗಳಿಗೆ ಸಂಬಂಧಿಸಿ ಸಿಬಿಐ ತನಿಖೆ ನಡೆಸಿದೆ.

ನಕಲಿ ದಾಖಲೆ ಹಾಗೂ ಕೆ.ರಘುನಾಥ ಸಾವಿನ ಪ್ರಕರಣಕ್ಕೆ ಸಂಬಂಧಿಸಿ ಹೈಕೋರ್ಟ್ ಆದೇಶದ ಅನ್ವಯ ಸಿಬಿಐ ಪ್ರಕರಣ ದಾಖಲಿಸಿಕೊಂಡಿತ್ತು. ಈ ಹಿಂದೆ ಇದೇ ಪ್ರಕರಣವನ್ನು ಕರ್ನಾಟಕದ ಪೊಲೀಸರು ತನಿಖೆ ನಡೆಸಿದ್ದರು. ಹೈಕೋರ್ಟ್‌ನ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು.

ರಘುನಾಥ್ ಅವರು ಆದಿಕೇಶವುಲು ಅವರ ಆಪ್ತರಾಗಿದ್ದರು. 2019ರ ಮೇ 4ರಂದು ರಘುನಾಥ್ ನೇಣುಬಿಗಿದ ಸ್ಥಿತಿಯಲ್ಲಿ ಆದಿಕೇಶವುಲು ಅವರಿಗೆ ಸೇರಿದ ಅತಿಥಿ ಗೃಹದಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದರು. ವೈದೇಹಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಇದು ಆತ್ಮಹತ್ಯೆ ಎಂದು ಪ್ರಕರಣ ಮುಕ್ತಾಯಗೊಳಿಸಲಾಗಿತ್ತು.

ಆದರೆ, 2020ರ ಫೆ.15ರಂದು ರಘುನಾಥ್ ಪತ್ನಿ ಇದು ಕೊಲೆ ಎಂದು ಶಂಕಿಸಿ ದೂರು ನೀಡಲು ಮುಂದಾಗಿದ್ದರು. ದೂರು ಸ್ವೀಕರಿಸದಿದ್ದಾಗ ಖಾಸಗಿ ದೂರು ಸಲ್ಲಿಸಿದ್ದರು.

‘ಸಿ.ಎಂ: ರಾಹುಲ್ ತೀರ್ಮಾನಿಸಲಿ’

ಒಂದನೇ ಪುಟದಿಂದ...

‘ಸಂಕ್ರಾಂತಿಗೆ ಕ್ರಾಂತಿಯೂ ಇಲ್ಲ. ಸಮಸ್ಯೆ ಏನೇ ಇದ್ದರೂ ಹೈಕಮಾಂಡ್ ತೀರ್ಮಾನವೇ ಅಂತಿಮ’ ಎಂದರು

ಮಾಜಿ ಸಚಿವ ಕೆ.ಎನ್.ರಾಜಣ್ಣ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಭೇಟಿ ಬಗ್ಗೆ ಪ್ರತಿಕ್ರಿಯಿಸಿ, ‘ಪಕ್ಷದ ಅಧ್ಯಕ್ಷರನ್ನು ಯಾರಾದರೂ ಭೇಟಿ ಯಾದರೆ ತಪ್ಪೇನು? ಭೇಟಿಯಾಗಲಿ’ ಎಂದರು.

‘ರಾಜಣ್ಣ ಅವರನ್ನು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರನ್ನಾಗಿ ಮಾಡಿದ್ದು ನಾನೇ’ ಎಂಬ ಶಿವಕುಮಾರ್ ಹೇಳಿಕೆಗೆ, ‘ಅಧಿಕಾರದಲ್ಲಿ ಇದ್ದಾಗ ನಾನು ಮಾಡಿದೆ, ಅವರು ಮಾಡಿದರು ಎನ್ನುವುದು ಮುಖ್ಯವಲ್ಲ. ಆ ಪ್ರಶ್ನೆಯೇ ಇಲ್ಲ. ಎಸ್.ಎಂ.ಕೃಷ್ಣ ಅವರು ಆಗ ಮುಖ್ಯಮಂತ್ರಿ ಆಗಿದ್ದರು, ಸರ್ಕಾರ ಮಾಡಿತ್ತು’ ಎಂದು ಹೇಳಿದರು.

‘ರಾಜ್ಯ ಬಜೆಟ್ ಸಿದ್ಧತೆ ನಡೆದಿದೆಯೇ’ ಎಂಬ ಪ್ರಶ್ನೆಗೆ, ‘ತಯಾರಿ ನಡೆಸುವಾಗ ನಿಮಗೆ ತಿಳಿಸುವೆ’ ಎಂದರು.

‘ಭಾರತ ಹಿಂದೂ ರಾಷ್ಟ್ರ ಎಂಬುದು ಸತ್ಯ’

ಸಾಂವಿಧಾನಿಕ ಅನುಮೋದನೆಯ ಅಗತ್ಯವಿಲ್ಲ: ಮೋಹನ್ ಭಾಗವತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತ ಹಿಂದೂ ರಾಷ್ಟ್ರ ಎಂಬುದು ಸತ್ಯ. ಹೀಗಾಗಿ ಅದಕ್ಕೆ ಸಾಂವಿಧಾನಿಕ ಅನುಮೋದನೆಯ ಅಗತ್ಯವಿಲ್ಲ’ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಒತ್ತಿ ಹೇಳಿದರು.



ಮೋಹನ್ ಭಾಗವತ್

ಆರ್‌ಎಸ್‌ಎಸ್‌ನ 100ನೇ ವರ್ಷಾಚರಣೆ ಸಂದರ್ಭದಲ್ಲಿ ಭಾನುವಾರ ಆಯೋಜಿಸಲಾಗಿದ್ದ ‘100 ವ್ಯಾಖ್ಯಾನ ಮಾಲಾ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಭಾರತ ಹಿಂದೂ ರಾಷ್ಟ್ರವಾಗಿದೆ. ಅಲ್ಲದೆ ಭಾರತೀಯ ಸಂಸ್ಕೃತಿಯನ್ನು ಎಲ್ಲಿಯವರೆಗೆ ಅನುಸರಿಸಲಾಗುತ್ತದೆಯೋ ಅಲ್ಲಿಯವರೆಗೆ ಅದು ಹಿಂದೂ ರಾಷ್ಟ್ರವಾಗಿಯೇ ಉಳಿಯುತ್ತದೆ’ ಎಂದು ತಿಳಿಸಿದರು.

‘ಸೂರ್ಯ ಪೂರ್ವ ದಿಕ್ಕಿನಲ್ಲಿ ಉದಯಿಸುತ್ತಾನೆ; ಇದು ಎಂದಿನಿಂದ ನಡೆಯುತ್ತಿದೆ ಎಂಬುದು ನಮಗೆ ಗೊತ್ತಿಲ್ಲ. ಹಾಗೆಂದು, ಇದಕ್ಕೂ ಸಾಂವಿಧಾನಿಕ ಅನುಮೋದನೆಯ ಅಗತ್ಯವಿದೆಯೇ? ಹಿಂದೂಸ್ತಾನವು ಹಿಂದೂ ದೇಶ. ಭಾರತವನ್ನು ತಮ್ಮ ಮಾತೃಭೂಮಿ ಎಂದು ಪರಿಗಣಿಸುವವರು, ಭಾರತೀಯ ಸಂಸ್ಕೃತಿಯನ್ನು ಗೌರವಿಸುವವರು ಇರುವ ತನಕ ಇದು ಹಿಂದೂ ದೇಶ. ಅಷ್ಟೇ ಏಕೆ, ಹಿಂದೂಸ್ತಾನದಲ್ಲಿ ತಮ್ಮ ಪೂರ್ವಜರ ವೈಭವ, ಸಂಸ್ಕೃತಿಯನ್ನು ನಂಬುವ ಮತ್ತು ಪಾಲಿಸುವಂತಹ ಒಬ್ಬ ವ್ಯಕ್ತಿ ಜೀವಂತವಾಗಿದ್ದರೂ ಇದು ಹಿಂದೂ ರಾಷ್ಟ್ರವೇ ಆಗಿರುತ್ತದೆ. ಇದೇ ಸಂಘದ ಸಿದ್ಧಾಂತವೂ ಆಗಿದೆ’ ಎಂಬುದಾಗಿ ಅವರು ಹೇಳಿದ್ದಾರೆಂದು ‘ಎನ್‌ಡಿಟಿವಿ’ ವರದಿ ಮಾಡಿದೆ.

ಸಂವಿಧಾನದಲ್ಲಿ ‘ಹಿಂದೂ ರಾಷ್ಟ್ರ’ ಪದವನ್ನು ಸೇರಿಸಲು ಸಂಸತ್ತು ಅದರ ತಿದ್ದುಪಡಿ ಮಾಡಲಿ ಅಥವಾ ಮಾಡದಿರಲಿ, ಅದರ ಬಗ್ಗೆ ನಾವು ತಲೆ ಕೆಡಿಸಿಕೊಳ್ಳುವುದಿಲ್ಲ. ಏಕೆಂದರೆ ನಾವು ಹಿಂದೂಗಳಾಗಿದ್ದು, ನಮ್ಮ ರಾಷ್ಟ್ರ ಹಿಂದೂ ದೇಶ ಎಂಬುದು ಸತ್ಯವಾಗಿದೆ ಎಂದು ಅವರು ಪ್ರತಿಪಾದಿಸಿದರು. ಅಲ್ಲದೆ ಸಂಘವು ‘ಮುಸ್ಲಿಂ ವಿರೋಧಿ’ ಅಲ್ಲ ಎಂದೂ ಅವರು ಇದೇ ವೇಳೆ ಒತ್ತಿ ಹೇಳಿದರು.

ಭಾಗವತ್ ಭಾಷಣದ ಪ್ರಮುಖಾಂಶಗಳು

- ಭಾರತದಲ್ಲಿನ ಬಹುಸಂಖ್ಯಾತರು ಹಿಂದೂ ಧರ್ಮದ ಜತೆಗೆ ಸಂಬಂಧ ಹೊಂದಿದ್ದಾರೆ. ಹೀಗಾಗಿ ಆರ್‌ಎಸ್‌ಎಸ್ ಯಾವಾಗಲೂ ಭಾರತವನ್ನು ಹಿಂದೂ ರಾಷ್ಟ್ರ ಎಂದು ಪ್ರತಿಪಾದಿಸುತ್ತಾ ಬಂದಿದೆ
- ‘ಜಾತ್ಯತೀತ’ ಪದವು ಮೂಲತಃ ಸಂವಿಧಾನದ ಪ್ರಸ್ತಾವನೆಯ ಭಾಗವಾಗಿರಲಿಲ್ಲ. ಅಗಿನ ಪ್ರಧಾನಿ ಇಂದಿರಾ ಗಾಂಧಿ ಅವರು ತುರ್ತುಪರಿಸ್ಥಿತಿ ಹೇರಿದ್ದಾಗ, 1976ರಲ್ಲಿ ಸಂವಿಧಾನಕ್ಕೆ 42ನೇ ತಿದ್ದುಪಡಿ ತರುವ ಮೂಲಕ ‘ಸಮಾಜವಾದಿ’ ಪದದ ಜತೆಗೆ ‘ಜಾತ್ಯತೀತ’ ಪದವನ್ನು ಸೇರಿಸಲಾಯಿತು
- ಹುಟ್ಟನ್ನು ಆಧರಿಸಿದ ಜಾತಿ ವ್ಯವಸ್ಥೆಯು ಹಿಂದುತ್ವದ ಲಕ್ಷಣ ಅಲ್ಲ
- ಸಂಘವು ಮುಸ್ಲಿಂ– ವಿರೋಧಿ ಅಲ್ಲ. ಈ ಬಗ್ಗೆ ತಪ್ಪು ಗ್ರಹಿಕೆಗಳಿದ್ದು, ಅವುಗಳನ್ನು ಹೋಗಲಾಡಿಸಬಹುದು. ಸಂಘದ ಕೆಲಸವನ್ನು ಅರ್ಥ ಮಾಡಿಕೊಳ್ಳಲು ಜನರು ಸಂಘದ ಕಚೇರಿಗಳು ಮತ್ತು ಶಾಖೆಗಳಿಗೆ ಭೇಟಿ ನೀಡಿ
- ಸಂಘವು ಹಿಂದೂಗಳ ರಕ್ಷಣೆಯನ್ನು ಪ್ರತಿಪಾದಿಸುತ್ತದೆ. ಸಂಘದ ಸದಸ್ಯರು ಕಟ್ಟಾ ರಾಷ್ಟ್ರೀಯವಾದಿಗಳೇ ಹೊರತು ಮುಸ್ಲಿಂ ವಿರೋಧಿಗಳಲ್ಲ. ಇದನ್ನು ಜನರು ಅರ್ಥಮಾಡಿಕೊಂಡಿದ್ದಾರೆ
- ಆರ್‌ಎಸ್‌ಎಸ್ ಪಾರದರ್ಶಕವಾಗಿ ಕೆಲಸ ಮಾಡುತ್ತದೆ. ಸಂಘವು ಮುಸ್ಲಿಂ ವಿರೋಧಿ ಎಂಬ ಗ್ರಹಿಕೆ ಇರುವವರು ಯಾವಾಗ ಬೇಕಾದರೂ ಸಂಘಕ್ಕೆ ಬಂದು ಪರಿಶೀಲಿಸಬಹುದು. ಒಂದು ವೇಳೆ ಅಂತಹದ್ದೇನಾದರೂ ನೀವು ಗಮನಿಸಿದರೆ ನಿಮ್ಮ ಅಭಿಪ್ರಾಯವನ್ನು ನೀವು ಇಟ್ಟುಕೊಳ್ಳಬಹುದು. ಗಮನಿಸದಿದ್ದರೆ ಆರ್‌ಎಸ್‌ಎಸ್ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬದಲಿಸಿಕೊಳ್ಳಬಹುದು
- ಆರ್‌ಎಸ್‌ಎಸ್ ಬಗ್ಗೆ ಅರ್ಥಮಾಡಿಕೊಳ್ಳಲು ಬಹಳಷ್ಟಿದೆ. ಆದರೆ ಅರ್ಥಮಾಡಿಕೊಳ್ಳಲು ನೀವು ಬಯಸದೇ ಇದ್ದರೆ, ನಿಮ್ಮ ಮನಸ್ಸನ್ನು ಯಾರಿಂದಲೂ ಬದಲಿಸಲು ಆಗದು. ಕಲಿಯಲು ಇಷ್ಟವಿಲ್ಲದವರಿಗೆ ಸಹಾಯ ಮಾಡಲು ಸಾಧ್ಯವಿಲ್ಲ

ಕಾರ್ಮಿಕನ ಹತ್ಯೆಯಲ್ಲಿ ಆರ್‌ಎಸ್‌ಎಸ್ ಕೈವಾಡ: ಸಿಪಿಎಂ

ತಿರುವನಂತಪುರ: ಛತ್ತೀಸಗಢದಿಂದ ವಲಸೆ ಬಂದಿದ್ದ ಕಾರ್ಮಿಕನ ಹತ್ಯೆಯಲ್ಲಿ ಆರ್‌ಎಸ್‌ಎಸ್ ಸದಸ್ಯರ ಕೈವಾಡವಿದೆ ಎಂದು ಸಿಪಿಎಂ ಆರೋಪಿಸಿದೆ.

ಪಾಲಕ್ಕಾಡ್‌ನ ವಲಯಾರ್‌ನಲ್ಲಿ ಡಿ. 18ರಂದು ರಾಮ್ ನಾರಾಯಣ್ ಬಘೇಲ್ (31) ಎಂಬ ವ್ಯಕ್ತಿಯನ್ನು ಕಳ್ಳ ಎಂದು ತಪ್ಪಾಗಿ ಭಾವಿಸಿದ ಗುಂಪು ದಾಳಿ ಮಾಡಿ ಕೊಲೆ ಮಾಡಿತ್ತು. ಗುಂಪಿನಲ್ಲಿದ್ದ ಕೆಲವರು ಬಘೇಲ್ ಅವರನ್ನು ಬಾಂಗ್ಲಾದೇಶದಿಂದ ಬಂದಿದ್ದೀರಾ ಎಂದು ಪ್ರಶ್ನಿಸಿದ್ದರು ಎಂದು ವರದಿಯಾಗಿದೆ ಎಂದು ಅದು ದೂರಿದೆ.

‘ನರೇಗಾ ಬುಡಮೇಲು ವಿನಾಶಕ್ಕೆ ದಾರಿ’

ನವದೆಹಲಿ (ಪಿಟಿಐ): ನರೇಗಾವನ್ನು (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ) ಬುಡಮೇಲು ಮಾಡಿರುವುದು ಗ್ರಾಮೀಣ ಭಾರತದ ಕೋಟ್ಯಂತರ ಜನರಿಗೆ ವಿನಾಶದ ಸ್ಥಿತಿಯನ್ನು ತಂದೊಡ್ಡಲಿದೆ ಎಂದು ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರು ಸೋಮವಾರ ಆತಂಕ ವ್ಯಕ್ತಪಡಿಸಿದ್ದಾರೆ.

ಸೋನಿಯಾ ಗಾಂಧಿ

ಎಲ್ಲರೂ ಒಟ್ಟಾಗಿ, ಸರ್ವರ ಬದುಕಿಗೆ ಭದ್ರತೆ ನೀಡುವ ಹಕ್ಕನ್ನು ರಕ್ಷಿಸಿಕೊಳ್ಳಬೇಕಿದೆ ಎಂದು ಅವರು ಕರೆ ನೀಡಿದ್ದಾರೆ.

ಪತ್ರಿಕೆಯೊಂದಕ್ಕೆ ‘ಬುಲ್ಡೋಜರ್ ಮೂಲಕ ನರೇಗಾ ನೆಲಸಮ’ ಎಂಬ ಶೀರ್ಷಿಕೆಯಡಿ ಲೇಖನ ಬರೆದಿರುವ ಸೋನಿಯಾ ಗಾಂಧಿ, ನರೇಗಾದ ‘ಸಾವು’ ಸಾಮೂಹಿಕ ವೈಫಲ್ಯ ಎಂದು ಹೇಳಿದ್ದಾರೆ.

ವಿಕಸಿತ ಭಾರತ–ಉದ್ಯೋಗ ಖಾತರಿ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ) (‘ವಿಬಿ–ಜಿ ರಾಮ್ ಜಿ) ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕಿದ ಮಾರನೇ ದಿನ ಈ ಪ್ರತಿಕ್ರಿಯೆ ಹೊರಬಿದ್ದಿದೆ.

‘ನರೇಗಾ ಯೋಜನೆ ಮಹಾತ್ಮ ಗಾಂಧಿ ಪ್ರಣೀತ ಸರ್ವೋದಯದ ಕಲ್ಪನೆಯಾಗಿತ್ತು ಮತ್ತು ಸಾಂವಿಧಾನಿಕವಾಗಿ ಉದ್ಯೋಗದ ಹಕ್ಕನ್ನು ನೀಡಿತ್ತು’ ಎಂದು ಸೋನಿಯಾ ಪ್ರತಿಪಾದಿಸಿದ್ದಾರೆ.

‘ಗ್ರಾಮೀಣರ ಸಂಕಷ್ಟಗಳಿಗೆ ಪರಿಹಾರ ಒದಗಿಸುತ್ತಿದ್ದ ಉದ್ಯೋಗ ಖಾತರಿ ಯೋಜನೆಯನ್ನು ಕೇಂದ್ರ ಸರ್ಕಾರ ಬುಡಸಮೇತ ಧ್ವಂಸ ಮಾಡಿದೆ. ಭಾರತ ಸಂವಿಧಾನದ 41ನೇ ವಿಧಿಯಿಂದ ಪ್ರೇರಿತವಾಗಿ ಹಕ್ಕು ಆಧಾರಿತ ನರೇಗಾ ಕಾನೂನು ತರಲಾಗಿತ್ತು. ಇದು ಜನರಿಗೆ ಉದ್ಯೋಗದ ಹಕ್ಕನ್ನು ನೀಡಲು ಸರ್ಕಾರವನ್ನು ಬದ್ಧಗೊಳಿಸಿತ್ತು’ ಎಂದು ಬರೆದಿದ್ದಾರೆ.

ವರ್ಷ ಪೂರ್ತಿ ಉದ್ಯೋಗ ಈಗ ಉಳಿದಿಲ್ಲ: ‘ವಿಬಿ– ಜಿ ರಾಮ್ ಜಿ ಎನ್ನುವುದು ಅಧಿಕಾರಶಾಹಿಯ ನಿಬಂಧನೆಗಳ ಪಟ್ಟಿಯಲ್ಲದೇ ಬೇರೇನೂ ಅಲ್ಲ. ವಿವೇಚನೆಯಿಂದಲೇ ಕಾಯ್ದೆಯ ಅವಕಾಶಗಳನ್ನು ಮೊಟಕು ಮಾಡಲಾಗಿದೆ. ವರ್ಷ ಪೂರ್ತಿ ಉದ್ಯೋಗ ಖಾತ್ರಿ ಈಗ ಉಳಿದಿಲ್ಲ. ಜನರ ಅಗತ್ಯಕ್ಕಿಂತ ಕೇಂದ್ರ ಸರ್ಕಾರದ ಆದ್ಯತೆ ಮುಖ್ಯವಾಗಿದೆ. ಕೇಂದ್ರ ತನ್ನ ಅನುದಾನವನ್ನೂ ಕಡಿತ ಮಾಡಿದೆ’ ಎಂದಿದ್ದಾರೆ.

‘ಯೋಜನೆ ವೆಚ್ಚದ ಪಾಲನ್ನು ರಾಜ್ಯಗಳಿಗೂ (60:40ರಂತೆ) ವರ್ಗಾಯಿಸುತ್ತಿರುವುದು ಈಗಾಗಲೇ ಆರ್ಥಿಕ ಸಂಕಷ್ಟದಲ್ಲಿರುವ ರಾಜ್ಯಗಳ ಸ್ಥಿತಿ ಇನ್ನಷ್ಟು ಹದಗೆಡುವಂತೆ ಮಾಡಲಿದೆ. ಅವು ಉದ್ಯೋಗ ನೀಡಲು ಕಷ್ಟವಾಗಲಿದೆ’ ಎಂದು ಹೇಳಿದ್ದಾರೆ.

‘ಗಾಂಧಿ ಚಿಂತನೆ ಮೇಲಿನ ದಾಳಿ’

ಭೋಪಾಲ್ (ಪಿಟಿಐ): ನರೇಗಾಕ್ಕೆ ಪರ್ಯಾಯವಾದ ವಿಬಿ–ಜಿ ರಾಮ್ ಜಿ ಕಾಯ್ದೆಯ ಮೂಲಕ ಮಹಾತ್ಮ ಗಾಂಧಿ ಅವರ ಚಿಂತನೆಗಳ ಮೇಲೆ ನೇರವಾಗಿ ದಾಳಿ ನಡೆಸಲಾಗಿದೆ ಎಂದು ಕಾಂಗ್ರೆಸ್ ಹಿರಿಯ ನಾಯಕ ಬಿ.ಕೆ.ಹರಿಪ್ರಸಾದ್ ಸೋಮವಾರ ದೂರಿದರು.

ಬಡಜನರ ಉದ್ಯೋಗದ ಹಕ್ಕನ್ನು ಕಸಿದುಕೊಳ್ಳುವ ಪಿತೂರಿ ನಡೆದಿದೆ ಎಂದು ಆರೋಪಿಸಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯು ಗಾಂಧಿ ಅವರ ‘ಗ್ರಾಮ ಸ್ವರಾಜ್’, ಘನತೆಯ ಉದ್ಯೋಗ ಮತ್ತು ಅಭಿವೃದ್ಧಿಯ ವಿಕೇಂದ್ರೀಕರಣ ಪರಿಕಲ್ಪನೆಗೆ ನೈಜ ಉದಾಹರಣೆಯಾಗಿತ್ತು ಎಂದು ಹೇಳಿದರು.

ಮೋದಿ ಸರ್ಕಾರವು ನೂತನ ಕಾಯ್ದೆಯ ಮೂಲಕ ಮಹಾತ್ಮ ಗಾಂಧಿ ಅವರ ಹೆಸರನ್ನು ಮಾತ್ರ ಅಳಿಸಿಹಾಕಲಿಲ್ಲ, 12 ಕೋಟಿಗೂ ಅಧಿಕ ನರೇಗಾ ಕಾರ್ಮಿಕರ ಹಕ್ಕನ್ನು ನಿರ್ದಾಕ್ಷಿಣ್ಯವಾಗಿ ಕಸಿದುಕೊಂಡಿದೆ ಎಂದು ಆರೋಪಿಸಿದರು.

ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ರದ್ದು

‘ದಲಿತರ ಅನ್ನ ಕಸಿಯುವ ಕುತಂತ್ರ’

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು (ಮನರೇಗಾ) ರದ್ದು ಮಾಡುವ ಮೂಲಕ ಕೇಂದ್ರದ ಬಿಜೆಪಿ ಸರ್ಕಾರವು ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದವರ ಹಾಗೂ ಭೂಹೀನರ ಅನ್ನ ಕಸಿಯುವ ಕುತಂತ್ರ ನಡೆಸಿದೆ ಎಂದು ಎಐಸಿಸಿ ಪರಿಶಿಷ್ಟ ಜಾತಿ ಘಟಕ (ಎಸ್‌ಸಿ) ಆಕ್ರೋಶ ವ್ಯಕ್ತಪಡಿಸಿದೆ.

ಎಐಸಿಸಿ ಕಚೇರಿಯಲ್ಲಿ ಸೋಮವಾರ ನಡೆದ ಎಐಸಿಸಿ ಪರಿಶಿಷ್ಟ ಜಾತಿ ಘಟಕದ ರಾಷ್ಟ್ರೀಯ ಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದ ಎಸ್‌ಸಿ ಘಟಕದ ರಾಷ್ಟ್ರೀಯ ಅಧ್ಯಕ್ಷ ರಾಜೇಂದ್ರ ಪಾಲ್ ಗೌತಮ್, ವಿಕಸಿತ ಭಾರತ–ಉದ್ಯೋಗ ಖಾತರಿ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ) (‘ವಿಬಿ–ಜಿ ರಾಮ್ ಜಿ) ಮಸೂದೆಯ ಮೂಲಕ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಸ್ವಾಯತ್ತತೆಗೆ ಧಕ್ಕೆ ತಂದಿದೆ. ರಾಜ್ಯಗಳ ಮೇಲಿನ ಹೊರೆ ಹೆಚ್ಚಾಗಿದೆ. ಮಹಾತ್ಮ ಗಾಂಧೀಜಿ ಅವರ ಹೆಸರನ್ನು ಕಿತ್ತು ಹಾಕುವ ಮೂಲಕ ಯೋಜನೆಯ ಆತ್ಮವನ್ನೇ ಕಿತ್ತು ಹಾಕಿದೆ’ ಎಂದು ಕಿಡಿಕಾರಿದರು.

ನೂತನ ರಾಷ್ಟ್ರೀಯ ಸಂಯೋಜಕರ ಜತೆಗೆ ಎಐಸಿಸಿ ಎಸ್‌ಸಿ ಘಟಕದ ರಾಷ್ಟ್ರೀಯ ಅಧ್ಯಕ್ಷ ರಾಜೇಂದ್ರ ಪಾಲ್ ಗೌತಮ್ ಚರ್ಚಿಸಿದರು. ಆನಂದ ಕುಮಾರ್ ಇದ್ದರು

‘ಯುಪಿಎ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದಿದ್ದ ಅನೇಕ ಯೋಜನೆಗಳನ್ನು ಬಿಜೆಪಿ ಸರ್ಕಾರ ರದ್ದು ಮಾಡಿ ದ್ವೇಷದ ರಾಜಕಾರಣದಲ್ಲಿ ತೊಡಗಿದೆ’ ಎಂದು ದೂರಿದರು.

ಎಐಸಿಸಿ ರಾಷ್ಟ್ರೀಯ ಸಂಯೋಜಕ ಆನಂದ ಕುಮಾರ್ ಮಾತನಾಡಿ, ‘ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯಗಳಿಗೆ ತಿಲಾಂಜಲಿ ಇಡುತ್ತಿರುವ ಬಿಜೆಪಿ ಸರ್ಕಾರವು ಬಡವರ ಹಾಗೂ ದಲಿತರ ವಿರೋಧಿ. ಆರ್‌ಎಸ್‌ಎಸ್ ಪ್ರೇರಿತ ನೀತಿಗಳಿಂದ ನೇಮಕಾತಿಯಲ್ಲಿ ದಲಿತರಿಗೆ ಅನ್ಯಾಯವಾಗುತ್ತಿದೆ’ ಎಂದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚೆ: ಸಚಿನ್ ಪೈಲಟ್

‘ನರೇಗಾ ಹೆಸರು ಬದಲು ವಿರುದ್ಧ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಹೆಸರಿನಲ್ಲಿ ಗಾಂಧಿ ಹೆಸರು ಕೈಬಿಟ್ಟು, ಯೋಜನೆಯನ್ನೇ ಬದಲಿಸಿದ ಕೇಂದ್ರದ ನಿಲುವನ್ನು ಹೇಗೆ ವಿರೋಧಿಸಬೇಕು ಎಂದು ಇದೇ 27ರಂದು ನಡೆಯಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯಲ್ಲಿ ಚರ್ಚಿಸಲಾಗುವುದು’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಸಚಿನ್ ಪೈಲಟ್ ತಿಳಿಸಿದರು.

ಸಚಿನ್ ಪೈಲಟ್

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೇಂದ್ರದ ಈ ನೀತಿಯನ್ನು ಇಂಡಿಯಾ ಮೈತ್ರಿಕೂಟ ಸೇರಿದಂತೆ ಇಡೀ ದೇಶ ಒಟ್ಟಾಗಿ ವಿರೋಧಿಸಬೇಕಿದೆ. ಈ ಬದಲಾವಣೆಯನ್ನು ಕೇಂದ್ರ ಸರ್ಕಾರ ಹಿಂಪಡೆಯುವಂತೆ ಒತ್ತಡ ಹಾಕಲಾಗುವುದು’ ಎಂದರು.

‘ಇದು ಕಾಂಗ್ರೆಸ್ ಸರ್ಕಾರದ ದೂರದೃಷ್ಟಿ ಯೋಜನೆಯಾಗಿದ್ದು, ಆರ್ಥಿಕವಾಗಿ ತೀರಾ ಹಿಂದುಳಿದ ಜನರಿಗೆ ಸಾಂವಿಧಾನಿಕವಾಗಿ ಉದ್ಯೋಗ ಖಾತರಿ ಹಕ್ಕು ನೀಡಿತ್ತು. ಆದರೆ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಯೋಜನೆಯಲ್ಲಿನ ಅನುದಾನದ ಪಾಲನ್ನು 60:40 ಹಂಚಿಕೆ ಮೂಲಕ ರಾಜ್ಯ ಸರ್ಕಾರದ ಮೇಲೆ ಹೆಚ್ಚು ಹೊರೆ ಹಾಕುತ್ತಿದೆ. ತನ್ನ ತಪ್ಪು ಮರೆಮಾಚಲು 100 ದಿನಗಳಿಂದ 125 ಉದ್ಯೋಗ ದಿನಗಳನ್ನು ಏರಿಕೆ ಮಾಡಲಾಗುತ್ತಿದೆ ಎಂದು ಬಿಂಬಿಸುತ್ತಿದೆ’ ಎಂದು ಟೀಕಿಸಿದರು.

‘ಇಷ್ಟು ದಿನ ಈ ಯೋಜನೆ ಬೇಡಿಕೆ ಆಧಾರಿತವಾಗಿತ್ತು. ಈಗ ಕೇಂದ್ರೀಕೃತ ಯೋಜನೆಯಾಗಿ ಪರಿವರ್ತಿಸಲಾಗಿದ್ದು, ಕೇಂದ್ರ ಸರ್ಕಾರ ಎಲ್ಲಿ, ಎಷ್ಟು ಕೆಲಸ ನಡೆಯಬೇಕು ಎಂದು ನಿರ್ಧಾರ ಮಾಡುವಂತಾಗಿದೆ. ಸಂಸತ್ತಿನಲ್ಲಿ ಚರ್ಚೆ ಮಾಡದೆ, ರಾಜ್ಯ ಸರ್ಕಾರಗಳ ಅಭಿಪ್ರಾಯ ಪಡೆಯದೆ, ಸಂಸತ್ತಿನ ಸ್ಥಾಯಿಸಮಿತಿಯ ಪರಾಮರ್ಶೆಗೂ ಅವಕಾಶ ನೀಡದೆ ಯೋಜನೆಗೆ ಬದಲಾವಣೆ ತರಲಾಗಿದೆ. ಇದರ ಹಿಂದೆ ರಾಷ್ಟ್ರಪಿತಗೆ ಅಪಮಾನ ಮಾಡುವ ಉದ್ದೇಶವಿದೆ. ಬಡ ಜನರ ಜೀವನದ ಮೇಲಿನ ದಾಳಿಯಿದು’ ಎಂದು ಹರಿಹಾಯ್ದರು.

ಷಡ್ಯಂತ್ರ: ‘2014ರಿಂದ ಬಿಜೆಪಿ ಸರ್ಕಾರ ದ್ವೇಷ ರಾಜಕಾರಣವನ್ನು ಮಾಡಿಕೊಂಡು ಬಂದಿದೆ. 11 ವರ್ಷಗಳಿಂದ ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರ ಘನತೆಗೆ ಧಕ್ಕೆ ತರುವ ಪ್ರಯತ್ನ ಮಾಡುತ್ತಿದೆ. ಈ ಪ್ರಕರಣದಲ್ಲಿ ಇಬ್ಬರು ನಾಯಕರು ಯಾವುದೇ ವ್ಯವಹಾರ ನಡೆಸಿಲ್ಲ. ಆದರೂ ಅವರನ್ನು ಆರೋಪದಲ್ಲಿ ಸಿಲುಕಿಸುವ ಷಡ್ಯಂತ್ರ ನಡೆಯುತ್ತಿದೆ’ ಎಂದೂ ಸಚಿನ್ ಆರೋಪಿಸಿದರು.

‘ಪ್ರಿಯಾಂಕ್ ನೇತೃತ್ವದಲ್ಲಿ ಸಭೆ ಇಂದು’

‘ಮಹಾತ್ಮ ಗಾಂಧಿ ಅವರ ಹೆಸರನ್ನು ತೆಗೆಯುವ ಮೂಲಕ ಕೇಂದ್ರ ಸರ್ಕಾರ ನರೇಗಾ ಯೋಜನೆ ಸಮಾಧಿಗೆ ಹೊರಟಿದೆ. ಇದು ಕೇಂದ್ರ ಬಿಜೆಪಿ ಸರ್ಕಾರದ ಕೊನೆಯ ದಿನಗಳ ಆರಂಭ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಈ ಯೋಜನೆಯ ಕುರಿತು ಚರ್ಚಿಸಲು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ದೆಹಲಿಯಲ್ಲಿ ಮಂಗಳವಾರ (ಡಿ. 23) ಸಭೆ ಕರೆದಿದ್ದಾರೆ. ಕೇಂದ್ರ ಸರ್ಕಾರ ಹೇಳಿದ ಅನುಪಾತದಲ್ಲಿ ಯಾವ ರಾಜ್ಯ ಸರ್ಕಾರವೂ ಹಣ ನೀಡಲು ಸಾಧ್ಯವಿಲ್ಲ. ಈ ರೀತಿಯಾದರೆ ಕಾರ್ಯಕ್ರಮ ಸತ್ತು ಹೋದಂತೆ’ ಎಂದರು.

‘ಕೇಂದ್ರದ ಬಿಜೆಪಿ ಸರ್ಕಾರ ತೆಗೆದುಕೊಂಡಿರುವ ಈ ತೀರ್ಮಾನವನ್ನು ವಿರೋಧಿಸಿ ಸರ್ಕಾರ ಮತ್ತು ಪಕ್ಷ ಒಟ್ಟಾಗಿ ಹೋರಾಟ ಮಾಡುತ್ತೇವೆ’ ಎಂದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಗುರಿಯ ದೃಷ್ಟಿ ಇಲ್ಲದ ವಾದ ಎಷ್ಟೇ ತರ್ಕಬದ್ಧವಾದರೂ ಅರ್ಥಹೀನ.

–ಲಿಯೊ ಟಾಲ್‌ಸ್ಟಾಯ್

ಸಂಪಾದಕೀಯ

ಸಾಂಸ್ಕೃತಿಕ ಸಂಸ್ಥೆಗಳಿಗೆ ಅಂಕುಶ ಸರ್ವಾಧಿಕಾರಿ ಧೋರಣೆಯ ಲಕ್ಷಣ

ಇತ್ತೀಚೆಗಷ್ಟೇ ಮುಕ್ತಾಯವಾದ 'ಕೇರಳ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ'ದಲ್ಲಿ ಕೆಲವು ಸಿನಿಮಾಗಳ ಪ್ರದರ್ಶನಕ್ಕೆ ಅವಕಾಶ ನಿರಾಕರಿಸಿರುವುದು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಎದುರಾಗಿರುವ ಆತಂಕಗಳ ಕುರಿತ ಪ್ರಶ್ನೆಗಳನ್ನು ಮತ್ತೆ ಮುನ್ನೆಲೆಗೆ ತರುವಂತಿದೆ. ಈ ಕ್ರಮ, ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಸರ್ಕಾರದ ಅನಗತ್ಯ ಹಸ್ತಕ್ಷೇಪಕ್ಕೆ ನಿದರ್ಶನವೂ ಆಗಿದೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳಬೇಕಿದ್ದ ಕೆಲವು ಸಿನಿಮಾಗಳ ಪ್ರದರ್ಶನವನ್ನು ತಡೆಹಿಡಿಯುವಂತೆ ಕೇರಳ ಸರ್ಕಾರಕ್ಕೆ ಸೂಚಿಸಿದೆ. ಇದರಿಂದಾಗಿ 19 ಸಿನಿಮಾಗಳಿಗೆ ಸೆನ್ಸಾರ್ ವಿನಾಯಿತಿ ನಿರಾಕರಿಸಲಾಗಿದೆ. ಇವುಗಳಲ್ಲಿ ಕೆಲವು ಸಿನಿಮಾಗಳಿಗೆ ನಂತರದಲ್ಲಿ ಅನುಮತಿ ದೊರೆತರೂ, ಚಿತ್ರೋತ್ಸವದ ಒಟ್ಟಾರೆ ವೇಳಾಪಟ್ಟಿ ಅಸ್ತವ್ಯಸ್ತಗೊಂಡಿತು. ಸಿನಿಮಾಗಳ ಪ್ರದರ್ಶನಕ್ಕೆ ತಡೆಯೊಡ್ಡುವ ಕ್ರಮ, ಸೆನ್ಸಾರ್‌ಶಿಪ್ ಪ್ರವೃತ್ತಿಯು ಹೊಸ ಕ್ಷೇತ್ರಗಳನ್ನು ಕಂಡುಕೊಳ್ಳಲು ನಡೆಸಿದ ಹುಡುಕಾಟದಂತಿದೆ. ಸೆನ್ಸಾರ್ ವಿನಾಯಿತಿ ನಿರಾಕರಣೆಯ ಕ್ರಮವನ್ನು ಧಿಕ್ಕರಿಸುವುದಾಗಿ ಹೇಳಿದ ಕೇರಳ ಸರ್ಕಾರ, ವೇಳಾಪಟ್ಟಿ ಪ್ರಕಾರ ಎಲ್ಲ ಸಿನಿಮಾಗಳನ್ನು ಪ್ರದರ್ಶಿಸುವಂತೆ ಆಯೋಜಕರಿಗೆ ಸೂಚಿಸಿತ್ತು. ಆದರೂ ಕೆಲವು ಸಿನಿಮಾಗಳ ಪ್ರದರ್ಶನವನ್ನು ಅಂತಿಮವಾಗಿ ರದ್ದುಗೊಳಿಸಲಾಯಿತು. ಅನುಮತಿ ನಿರಾಕರಣೆಯನ್ನು ಆಡಳಿತಾತ್ಮಕ ಕ್ರಮ ಎಂದು ಕೇಂದ್ರ ಸಚಿವಾಲಯ ಹೇಳಿದ್ದರೂ, ಇದು ರಾಜಕೀಯಪ್ರೇರಿತ ಪ್ರಕ್ರಿಯೆ ಎಂದು ವಿಶ್ಲೇಷಿಸಲಾಗುತ್ತಿದೆ. ಕೇಂದ್ರ ಸರ್ಕಾರದ ತೀರ್ಮಾನವನ್ನು ಕಟುವಾಗಿ ಟೀಕಿಸಿರುವ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ವೈವಿಧ್ಯವನ್ನು ಹಾಗೂ ಭಿನ್ನ ಧ್ವನಿಗಳನ್ನು ಹತ್ತಿಕ್ಕುವ ಸಂಘ ಪರಿವಾರದ ಅಜೆಂಡಾವನ್ನು ಹೇರುವ ಮತ್ತೊಂದು ಪ್ರಯತ್ನ ಇದೆಂದು ಟೀಕಿಸಿದ್ದಾರೆ. ವಿವಿಧ ಚಿತ್ರೋತ್ಸವಗಳಲ್ಲಿ ಭಾಗವಹಿಸಿರುವ ಸಿನಿಮಾಗಳಿಗೆ ಕೇರಳದಲ್ಲಿನ ಉತ್ಸವದಲ್ಲಿ ಪ್ರದರ್ಶನಗೊಳ್ಳಲು ಅನುಮತಿ ನಿರಾಕರಿಸಿರುವುದಕ್ಕೆ ನ್ಯಾಯಯುತ ಕಾರಣಗಳನ್ನು ಕೇಂದ್ರ ಸರ್ಕಾರ ನೀಡಿಲ್ಲ. ಹಾಸ್ಯಾಸ್ಪದ, ತಪ್ಪು ಹಾಗೂ ಅವಿವೇಕದ ನಿರ್ಧಾರ ಸರ್ಕಾರದ್ದಾಗಿದೆ.



ಸಿನಿಮಾ ಪ್ರದರ್ಶನಗಳನ್ನು ನಿರ್ಬಂಧಿಸುವ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕ್ರಿಯೆಯನ್ನು ನಿಯಂತ್ರಿಸುವ ಪ್ರಯತ್ನಗಳು, ಕೇಂದ್ರ ಸರ್ಕಾರದ ಸಾಂಸ್ಕೃತಿಕ ಅಸಹಿಷ್ಣುತೆಯ ಸಂಕೇತ.

ಪ್ರದರ್ಶನಕ್ಕೆ ಅವಕಾಶ ನಿರಾಕರಿಸಲಾದ ಸಿನಿಮಾಗಳಲ್ಲಿ, ಸಾರ್ವಕಾಲಿಕ ಶ್ರೇಷ್ಠ ಚಿತ್ರಗಳಲ್ಲೊಂದಾದ ಹಾಗೂ ಈ ವರ್ಷ ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ 'ಬ್ಯಾಟಲ್‌ಷಿಪ್ ಪೊಟೆಂಕಿನ್' ಸೇರಿದೆ. ಅನುಮತಿ ದೊರೆಯದಿರುವ ಕೆಲವು ಪ್ಯಾಲೆಸ್ಟೀನ್ ಸಿನಿಮಾಗಳನ್ನು, ಅವು ಪ್ಯಾಲೆಸ್ಟೀನ್ ಎನ್ನುವ ಕಾರಣಕ್ಕಾಗಿ ಅವಕೃಪೆಗೆ ಒಳಗಾಗಿರಬಹುದು ಎನ್ನುವ ಅನುಮಾನವಿದೆ. ನಿರಾಕರಣೆಗೆ ಒಳಗಾಗಿರುವ ಅರ್ಜೆಂಟೀನಾದ, 1968ರ ರಾಜಕೀಯ ಸಾಕ್ಷ್ಯಚಿತ್ರ 'ದಿ ಅವರ್ ಆಫ್ ದಿ ಫರ್ನೇಸಸ್' ಕ್ರಾಂತಿಕಾರಿ ಚಳವಳಿಯ ಕಥಾವಸ್ತು ಒಳಗೊಂಡಿದೆ. 'ಬೀಫ್' ಹೆಸರಿನ ಸ್ಪ್ಯಾನಿಶ್ ಚಿತ್ರವೂ ಪ್ರದರ್ಶನವಂಚಿತವಾಗಿದೆ. ಬೀಫ್ ಎನ್ನುವುದೀಗ ಆಕ್ಷೇಪಾರ್ಹ ಆಹಾರವಷ್ಟೇ ಆಗಿರದೆ, ಅಸ್ವೀಕೃತ ಪದವೂ ಆಗಿದೆ. ಚೋದ್ಯದ ಸಂಗತಿಯೆಂದರೆ, ಈ ಸಿನಿಮಾದ ಕಥಾವಸ್ತು ಆಹಾರಕ್ಕೆ ಸಂಬಂಧಿಸಿದ್ದಾಗಿರದೆ, ಹಿಪ್ ಹಾಪ್ ಸಂಸ್ಕೃತಿ ಕುರಿತದ್ದಾಗಿದೆ. ಸಿನಿಮಾ ನೋಡದೆಯೇ ನಿಷೇಧ ಹೇರುವ ಮನಃಸ್ಥಿತಿಯ ಸಂದರ್ಭದಲ್ಲಿ ಚಾರ್ಲಿ ಚಾಪ್ಲಿನ್‌ರ ಅಭಿಜಾತ ಸಿನಿಮಾ 'ಗ್ರೇಟ್ ಡಿಕ್ಟೇಟರ್' ಪ್ರದರ್ಶನಗೊಳ್ಳುವ ಸಾಧ್ಯತೆಯೇ ಇಲ್ಲ. ದೇಶದ ಭದ್ರತೆ ಹಾಗೂ ಸಮಗ್ರತೆಗೆ ಧಕ್ಕೆ ಉಂಟಾಗಬಹುದಾದ ಸಂದರ್ಭ ಅಥವಾ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ಎದುರಾಗಬಹುದಾದ ಸಂದರ್ಭದಲ್ಲಿ ಸಿನಿಮಾವೊಂದರ ಪ್ರದರ್ಶನಕ್ಕೆ ಅನುಮತಿ ನಿರಾಕರಿಸುವ ಅಧಿಕಾರ ಸಚಿವಾಲಯಕ್ಕಿದೆ. ಯಾವ ಸಕಾರಣಗಳೂ ಇಲ್ಲದೆ ಹೇರಲಾದ ನಿರ್ಬಂಧವು ಪೂರ್ವಗ್ರಹಗಳಿಂದ ಕೂಡಿದುದಾಗಿದೆ ಹಾಗೂ ವಿರೋಧ ಪಕ್ಷ ಆಡಳಿತದಲ್ಲಿರುವ ರಾಜ್ಯದಲ್ಲಿನ ಪ್ರತಿಷ್ಠಿತ ಸಾಂಸ್ಕೃತಿಕ ಉತ್ಸವವೊಂದನ್ನು ಅಸ್ತವ್ಯಸ್ತಗೊಳಿಸುವ ಉದ್ದೇಶ ಹೊಂದಿರುವಂತಿದೆ.

ಸಿನಿಮಾ ಮಾತ್ರವಲ್ಲದೆ, ಸಾಹಿತ್ಯಕ್ಕೆ ಸಂಬಂಧಿಸಿದಂತೆಯೂ ಕೇಂದ್ರ ಸರ್ಕಾರ ಹಸ್ತಕ್ಷೇಪ ನಡೆಸಲು ಮುಂದಾಗಿದೆ. ಡಿಸೆಂಬರ್ 18ರಂದು ಪ್ರಕಟಗೊಳ್ಳಬೇಕಾಗಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿಯ 2025ರ ಸಾಲಿನ ವಾರ್ಷಿಕ ಪ್ರಶಸ್ತಿಗಳ ಘೋಷಣೆಯನ್ನು ಕೊನೆಯ ಕ್ಷಣದಲ್ಲಿ ಮುಂದೂಡಲಾಗಿದೆ. ಈ ಮುಂದೂಡುವಿಕೆಗೆ, ತನ್ನ ಅನುಮೋದನೆಯಿಲ್ಲದೆ ಪ್ರಶಸ್ತಿಗಳನ್ನು ಪ್ರಕಟಿಸಬಾರದು ಎಂದು ಕೇಂದ್ರ ಸಂಸ್ಕೃತಿ ಸಚಿವಾಲಯ ನೀಡಿದ ನಿರ್ದೇಶನ ಕಾರಣವಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಸ್ವಾಯತ್ತ ಸಂಸ್ಥೆಯಾಗಿದ್ದು, ಇದುವರೆಗೂ ಅದರ ಚಟುವಟಿಕೆಗಳಲ್ಲಿ ಹಾಗೂ ಪ್ರಶಸ್ತಿ ಪ್ರಕ್ರಿಯೆಯಲ್ಲಿ ಸರ್ಕಾರ ಮೂಗು ತೂರಿಸುತ್ತಿರಲಿಲ್ಲ. ಇದೇ ಮೊದಲ ಬಾರಿಗೆ ಅಕಾಡೆಮಿಯ ಪ್ರಶಸ್ತಿ ಪ್ರಕ್ರಿಯೆಯಲ್ಲಿ ಸರ್ಕಾರ ಹಸ್ತಕ್ಷೇಪ ನಡೆಸಿದೆ. ಸಾಹಿತ್ಯ ಮತ್ತು ಸಿನಿಮಾದಂಥ ಕಲಾಪ್ರಕಾರಗಳಲ್ಲಿ ನಡೆಸುವ ಹಸ್ತಕ್ಷೇಪ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಡೆಸುವ ಹಲ್ಲೆ ಹಾಗೂ ಕಲಾಸ್ಫೂರ್ತಿಗೆ ವಿರುದ್ಧವಾದುದು. ಸ್ವಾಯತ್ತ ಸಂಸ್ಥೆಗಳು ಹಾಗೂ ಕಲಾಪ್ರಕಾರಗಳ ಮೇಲೆ ಹತೋಟಿ ಸಾಧಿಸುವ ಸರ್ಕಾರದ ಪ್ರಯತ್ನ ಸರ್ವಾಧಿಕಾರಿ ಧೋರಣೆಯ ಲಕ್ಷಣವಾಗಿದೆ.

ಜಾಲಪಟ

ಕ್ರೌರ್ಯ ಕೊನೆಗೊಳ್ಳಲಿ

ಬಾಂಗ್ಲಾದಲ್ಲಿ ನಡೆದ ದೀಪು ಚಂದ ದಾಸ್ ಎಂಬ ಯುವಕನ ಬರ್ಬರ ಹತ್ಯೆ ಮತೀಯ ವಿಕೃತಿಯ ಇನ್ನೊಂದು ಭೀಭತ್ಸ ಉದಾಹರಣೆ. ಧಿಕ್ಕಾರವಿರಲಿ, ಅವರಿಗೆ ಕ್ರೂರಶಿಕ್ಷೆಯಾಗಲಿ. ಧರ್ಮದ ಹೆಸರಿನ ಕ್ರೌರ್ಯ ಕೊನೆಗೊಳ್ಳಲಿ.

ಬಿ. ಪೀರ್ ಬಾಷ, ಸಾಮಾಜಿಕ ಕಾರ್ಯಕರ್ತ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಕಾಂಗ್ರೆಸ್ ಹೈಕಮಾಂಡ್ ಮತ್ತು ರಾಹುಲ್ ಗಾಂಧಿಗೆ ಕರ್ನಾಟಕದ ಕಾಂಗ್ರೆಸ್‌ನಲ್ಲಿ ಉದ್ಭವಿಸಿರುವ ಸಮಸ್ಯೆ ಬಗೆಹರಿಸುವ ಸಾಮರ್ಥ್ಯ ಇಲ್ಲ. ಮಲ್ಲಿಕಾರ್ಜುನ ಖರ್ಗೆ ಅವರ ಅಸಹಾಯಕ ಮಾತುಗಳೇ ಇದಕ್ಕೆ ಸಾಕ್ಷಿ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 23-12-2000

- **ವಿದ್ಯಾರ್ಥಿಗಳಿಗೆ ವಿಮೆ: ಜೂನ್‌ನಲ್ಲಿ ಆರಂಭ**

ಬೆಂಗಳೂರು, ಡಿ. 22– ಸರ್ಕಾರಿ ಶಾಲೆಗಳಲ್ಲಿ ಒಂದರಿಂದ ಹತ್ತನೇ ತರಗತಿವರೆಗೆ ಓದುತ್ತಿರುವ 1.10 ಕೋಟಿ ವಿದ್ಯಾರ್ಥಿಗಳನ್ನು ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ವಿಮಾ ವ್ಯಾಪ್ತಿಗೆ ಒಳಪಡಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಮುಂದಿನ ಶೈಕ್ಷಣಿಕ ವರ್ಷದ ಆರಂಭದಲ್ಲಿ ಅಂದರೆ ಜೂನ್ ತಿಂಗಳಿಂದಲೇ ಈ ವಿಮೆ ಯೋಜನೆ ಜಾರಿಗೆ ಬರಲಿದ್ದು, ಶಾಲೆಗೆ ಹೊರಟ ವಿದ್ಯಾರ್ಥಿ ಅವಘಡದಲ್ಲಿ ಮೃತಪಟ್ಟರೆ ಆತನ ಕುಟುಂಬಕ್ಕೆ ರೂ. 25,000 ವರೆಗೆ ವಿಮೆ ಹಣ ನೀಡಲಾಗುವುದು. ಅದಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರತಿವರ್ಷಕ್ಕೆ ಒಂದು ರೂಪಾಯಿಯಂತೆ ವಿಮೆ ಕಂತು ತುಂಬಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಚ್. ವಿಶ್ವನಾಥ್ ತಿಳಿಸಿದರು.

- **ಉತ್ತರ ಕರ್ನಾಟಕ ಪಟ್ಟಣ ಅಭಿವೃದ್ಧಿ ಯೋಜನೆ ಶೀಘ್ರ**

ಮಂಗಳೂರು, ಡಿ. 22– ಕರಾವಳಿ ಪಟ್ಟಣ ಪ್ರದೇಶಗಳ ಅಭಿವೃದ್ಧಿಗೆ ಕೈಗೊಳ್ಳಲಾಗಿರುವ ಮಾದರಿಯಲ್ಲಿಯೇ ಉತ್ತರ ಕರ್ನಾಟಕದ ಹಲವು ಪಟ್ಟಣಗಳ ಅಭಿವೃದ್ಧಿಗೆ ವಿಶ್ವಬ್ಯಾಂಕ್ ಜತೆ ಮಾತುಕತೆ ಆರಂಭಿಸಿದ್ದು, ಸದ್ಯದಲ್ಲೇ ಇದು ಜಾರಿಗೆ ಬರಲಿದೆ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಪ್ರಕಟಿಸಿದರು.

75 ವರ್ಷಗಳ ಹಿಂದೆ

ಶನಿವಾರ, 23-12-1950

- **'ಬಣ್ಣ' ನೋಡಿ... ಬಣ್ಣದ ಪೆಟ್ಟಿಗೆಗೆ...**

ಬೆಂಗಳೂರು, ಡಿ. 22– ಭಾರತದ ಇತಿಹಾಸದಲ್ಲೇ ಪ್ರಥಮವಾಗಿ ಇಂದು ಬೆಂಗಳೂರು ಕಾರ್ಪೊರೇಷನ್ ಚುನಾವಣೆಯಲ್ಲಿ ವಯಸ್ಕರು ಮತದಾನ ಮಾಡುವರು. ಸ್ವತಂತ್ರ ಭಾರತದಲ್ಲಿ ಈ ಪ್ರಯೋಗ ಪ್ರಥಮವಾಗಿ ದೊರೆತಿರುವ ಪುಣ್ಯವಂತ ಪೌರರ ಆನಂದಕ್ಕೆ ಕೊನೆಮೊದಲೇ ಇಲ್ಲ.

ಬೆಳಿಗ್ಗೆ 7ರಿಂದ ಮಧ್ಯಾಹ್ನ 12 ಗಂಟೆವರೆಗೆ ಮತ್ತು ಮಧ್ಯಾಹ್ನ 1 ರಿಂದ ಸಂಜೆ 6ರವರೆಗೆ 12 ಗಂಟೆಗಳ ಕಾಲ ತಿಳಿ ಗುಲಾಬಿ ಬಣ್ಣದ ಹಾಗೂ ಕಾರ್ಮಿಕ ಕ್ಷೇತ್ರಗಳಲ್ಲಿ ಬೂದು ಬಣ್ಣದ ಓಟಿನ ಚೀಟಿಗಳು; ಹಳದಿ, ಕೆಂಪು, ನೀಲಿ, ಹಸುರು ಮತ್ತು ಬಿಳುಪು ಬಣ್ಣದ ಪೆಟ್ಟಿಗೆಗಳಲ್ಲಿ ಬಂದು ಭದ್ರವಾಗಿ ಬೀಳುತ್ತವೆ.

ಬಡವರ ಹಕ್ಕಿಗೆ 'ರಾಮ್ ಜಿ' ಪೆಟ್ಟು

ವಿಶ್ಲೇಷಣೆ

ಎಂ.ಎಸ್. ಶ್ರೀರಾಮ್

> ಬಿಡಿ ಕಾಯ್ದೆಗಳ ತಿದ್ದುಪಡಿ ಹಾಗೂ ಹೆಸರು ಬದಲಾವಣೆ ಮೂಲಕ ಕೇಂದ್ರ ಸರ್ಕಾರ ನಿರಂಕುಶತೆಯತ್ತ ಸಾಗುತ್ತಿರುವುದಕ್ಕೆ ಹೊಸ ಉದಾಹರಣೆ 'ವಿಬಿ–ಜಿ ರಾಮ್ ಜಿ'. ಇದು ಬಡವರ 'ಸ್ವಾಭಿಮಾನ ಮಾರ್ಗ'ವನ್ನು ಮುಚ್ಚುವ ಹಾಗೂ ರಾಜ್ಯ ಸರ್ಕಾರಗಳ ಮೇಲೆ ಹೆಚ್ಚಿನ ಹೊರೆ ಹೇರುವ ಕುಯುಕ್ತಿ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು (ಮನರೇಗಾ) ರದ್ದು ಮಾಡಿ, ಅದರ ಜಾಗದಲ್ಲಿ ಹೊಸತಾಗಿ ರೂಪಿಸಿದ 'ವಿಕಸಿತ ಭಾರತ್ ಗ್ಯಾರಂಟಿ ಫಾರ್ ರೋಜ್‌ಗಾರ್ ಅಂಡ್ ಆಜೀವಿಕ ಮಿಷನ್' (ಗ್ರಾಮೀಣ್) (ಜಿ ರಾಮ್ ಜಿ) ಮಸೂದೆಯನ್ನು ಸಂಸತ್ ಅಂಗೀಕರಿಸಿದೆ; ರಾಷ್ಟ್ರಪತಿ ಅವರೂ ಅಂಕಿತ ಹಾಕಿದ್ದಾರೆ. ಹೊಸ ಯೋಜನೆ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದ ಮಹಾತ್ಮ ಗಾಂಧಿಯವರ ಹೆಸರನ್ನು ಅಳಿಸುವುದಕ್ಕಷ್ಟೇ ಸೀಮಿತವಾಗಿಲ್ಲ. ಇದು ಯೋಜನೆಯ ಆತ್ಮವನ್ನೇ ಕಿತ್ತೊಗೆಯುತ್ತಿದೆ. ಹೀಗಾಗಿ, ಈ ಹೊಸ ಮಸೂದೆಯನ್ನು ಬಹಳ ಸೂಕ್ಷ್ಮವಾಗಿ ಪರಿಶೀಲಿಸಬೇಕು. ರಾಜ್ಯಗಳ ಸ್ವಾಯತ್ತತೆ ಬಗ್ಗೆ ಕಾಳಜಿ ಇರುವ ಎಲ್ಲರೂ ಕಳೆದ ಹತ್ತಾರು ವರ್ಷಗಳಿಂದ ನಡೆಯುತ್ತಿರುವ 'ಕೇಂದ್ರೀಕರಣ'ದ ಕುರಿತು ಜಾಗೃತರಾಗಬೇಕು.

'ಮನರೇಗಾ'ದಿಂದ 'ವಿಬಿ–ಜಿ ರಾಮ್ ಜಿ'ಗೆ ನಡೆಸುತ್ತಿರುವ ಪಯಣದಲ್ಲಿ ಸರ್ಕಾರವು ಬಡಜನರ ಸ್ವಾಭಿಮಾನವನ್ನು ಕಸಿದಿದೆ. ಕೆಲಸ ಮಾಡಲು ತಯಾರಿರುವವರಿಗೆ ಕೆಲಸದ ಹಕ್ಕನ್ನು ಕೊಟ್ಟಿದ್ದ ಮನರೇಗಾ ಕಾರ್ಯಕ್ರಮ, ಬಡವರಪರವಾದ ಅತ್ಯಂತ ಪ್ರಭಾವಶಾಲಿ ಯೋಜನೆಯೆಂದು ಜಗತ್ತಿನಲ್ಲಿ ಹೆಸರು ಮಾಡಿತ್ತು. ಪ್ರಾಯೋಗಿಕವಾಗಿ ಕೆಲವೇ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಿ, ನಂತರ ದೇಶ ವ್ಯಾಪ್ತಿಗೆ ಅನ್ವಯಿಸಿ, 'ಯೋಜನೆ'ಯಷ್ಟೇ ಆಗಿದ್ದ ಕಾರ್ಯಕ್ರಮವನ್ನು ಕಾನೂನಿನ ಮೂಲಕ ಹಕ್ಕಾಗಿ ಪರಿವರ್ತಿಸಲಾಯಿತು. ಈ ಮೂಲಕ ಬಡತನ, ಉದ್ಯೋಗ ಖಾತರಿ ಮತ್ತು ಸಾಮಾಜಿಕ ಸುರಕ್ಷತೆಗೆ ಹೊಸ ಪರಿಭಾಷೆಯನ್ನು ನಿರ್ವಚಿಸಲಾಯಿತು. ಮನರೇಗಾದಿಂದ ಕನಿಷ್ಠ ಕೂಲಿಯ ದರದಲ್ಲಿ ಹೆಚ್ಚಳವಾಯಿತು. ಬಡವರಿಗೆ ದುಡಿಮೆಯ ಹಕ್ಕು ಕೊಟ್ಟಿದ್ದಲ್ಲದೇ, ಅವರು ಊಳಿಗಕ್ಕೆ ಬೀಳದಂತೆ ನಿಲ್ಲುವ ವಾತಾವರಣವನ್ನು ಉಂಟುಮಾಡಿದ್ದು ಮಹತ್ವದ ವಿಚಾರವಾಗಿತ್ತು. ನೇರ ನಗದು ಪಾವತಿಯನ್ನು ಸರ್ಕಾರದ ಉದಾರತೆಯೆಂದು ಬಣ್ಣಿಸಿ ಅದನ್ನು ಪಡೆವವರನ್ನು 'ಫಲಾನುಭವಿ'ಗಳೆಂದು ಗುರುತಿಸುತ್ತಿರುವ ವರ್ತಮಾನದಲ್ಲಿ ಹಕ್ಕಿನಿಂದ ಕೆಲಸ ಕೇಳಿ ಕೂಲಿಯನ್ನು 'ಸಂಪಾದಿಸುವ' ಮನರೇಗಾ ರದ್ದು ಮಾಡಿರುವುದು ಬಡವರ ಸ್ವಾಭಿಮಾನಿ ಮಾರ್ಗಕ್ಕೆ ಕೊಡಲಿಪೆಟ್ಟಾಗಿದೆ.

ಗ್ರಾಮದಲ್ಲಿ ಸರಿಯಾದ ಕೂಲಿ ಸಿಗದಿದ್ದರೆ ಅದನ್ನು ನಿರಾಕರಿಸುವ, ಸರ್ಕಾರಿ ಕೆಲಸವನ್ನು ಹಕ್ಕಿನಿಂದ ಪಡೆಯುವ ಆಯ್ಕೆಯಿದ್ದ ಕಾಯ್ದೆಯನ್ನು ರದ್ದುಗೊಳಿಸಿ, ಹೊಸ 'ವಿಬಿ–ಜಿ ರಾಮ್ ಜಿ' ಮಸೂದೆಯನ್ನು ಸ್ಥಾಯಿ ಸಮಿತಿಗೆ ಕಳುಹಿಸದೆ, ವ್ಯಾಪಕ ಪರಾಮರ್ಶೆಯಿಲ್ಲದೇ, ಲೋಕಸಭೆ ಮತ್ತು ರಾಜ್ಯಸಭೆಯಲ್ಲಿನ ಚರ್ಚೆಯ ನಾಟಕದ ನಂತರ ಯಾವುದೇ ಬದಲಾವಣೆಯಿಲ್ಲದೆ ಅಂಗೀಕರಿಸಲಾಗಿದೆ.

ಹೊಸ ಮಸೂದೆಯಲ್ಲಿ ಅನೇಕ ತೊಡಕುಗಳಿವೆ. ಮಸೂದೆಯ ಐದನೇ ಅಂಶದಲ್ಲಿ ಕನಿಷ್ಠ 125 ದಿನಗಳ ಕೆಲಸವನ್ನು ಕೊಡಲಾಗುವುದೆಂದು ಹೇಳಿದ್ದರೂ, ಅದಕ್ಕೆ ಇನ್ನಷ್ಟು 'ಕಿಂತು–ಪರಂತು'ಗಳನ್ನು ಜೋಡಿಸಿ ಕೇಂದ್ರ ಸರ್ಕಾರ ಸೂಚಿಸಿದ ಜಿಲ್ಲೆ ಮತ್ತು ಗ್ರಾಮಗಳಲ್ಲಿ, ಮೊದಲೇ ಗುರುತಿಸಿ ಅಂಗೀಕರಿಸಿರುವ ರಾಷ್ಟ್ರನಿರ್ಮಾಣ ಯೋಜನೆಗಳಲ್ಲಿ, ಕೃಷಿ ಕೆಲಸಗಳು ಹೆಚ್ಚಿರುವ 60 ದಿನಗಳನ್ನು ಹೊರತುಪಡಿಸಿ, ಒಟ್ಟಾರೆ ಬಜೆಟ್ಟಿನಲ್ಲಿ ನಿಗದಿಪಡಿಸಿದ ಮೊತ್ತ ಮೀರದಂತೆ ಕೆಲಸ ಕೊಡುವುದಾಗಿ ಮಸೂದೆ ಹೇಳುತ್ತದೆ. ಅಂದರೆ, ಇದು ಜನರ ಹಕ್ಕಲ್ಲ. ಕಾರ್ಯಕ್ರಮ ಸಾರ್ವತ್ರಿಕವೂ ಅಲ್ಲ. ದಿನಗಳನ್ನು ಸರ್ಕಾರ ಹೆಚ್ಚಿಸಿದಂತೆ ಕಂಡರೂ, ಅದನ್ನು ಜಾರಿಮಾಡುವುದಕ್ಕೆ ಯಾವುದೇ ಪೂರಕ ಸೂತ್ರಗಳನ್ನು ಸರ್ಕಾರ ನೀಡಿಲ್ಲ. ಮೇಲಾಗಿ ತನ್ನ ಪಾಲನ್ನು ಶೇ 90ರಿಂದ ಶೇ 60ಕ್ಕೆ ಇಳಿಸಿ, ರಾಜ್ಯಗಳ ಮೇಲೆ ಹೆಚ್ಚಿನ ಭಾರವನ್ನು ಮಸೂದೆ ಹೇರುತ್ತದೆ. ರಾಜ್ಯದ ಬಜೆಟ್ಟನ್ನು ಕೇಂದ್ರ ಸರ್ಕಾರ ನಿರ್ದೇಶಿಸುತ್ತಿರುವಂತೆ ಕಾಣುತ್ತದೆ. ಇದನ್ನು ಯಾವುದೇ ದೃಷ್ಟಿಯಿಂದ ಪ್ರಗತಿಪರವೆಂದು ಹೇಳಲು ಸಾಧ್ಯವಿಲ್ಲ. ಕಳೆದ ದಶಕದಿಂದ ಎಲ್ಲ ಅಧಿಕಾರವನ್ನು, ಆರ್ಥಿಕ ಸಂಪನ್ಮೂಲಗಳನ್ನು ಕೇಂದ್ರೀಕರಿಸುವ, ಖರ್ಚನ್ನು ವಿಕೇಂದ್ರೀಕರಿಸುವ, ವಿಕೇಂದ್ರೀಕೃತ ಅನುದಾನಗಳನ್ನು ಮನಸೋಚ್ಛೆ ನೀಡುವ, ಅದನ್ನು ತಡಮಾಡುವ ಪ್ರಕ್ರಿಯೆಯನ್ನು ಕಂಡಿದ್ದೇವೆ.

ನಮ್ಮ ಸಂವಿಧಾನ ಒಕ್ಕೂಟ ವ್ಯವಸ್ಥೆಯನ್ನು ಆದರ್ಶವಾಗಿ ಸ್ವೀಕರಿಸಿದ್ದರೂ, ಸಂವಿಧಾನ ರಚನೆಯ ಸಂದರ್ಭದ ಅನಿವಾರ್ಯತೆಗಳು ವ್ಯವಸ್ಥೆಯನ್ನು 'ಕೇಂದ್ರ'ದತ್ತ ವಾಲುವಂತೆ ಮಾಡಿತ್ತು. ಸ್ವಾತಂತ್ರ್ಯಾನಂತರ ಚದುರಿ ಹೋಗಿದ್ದ ರಾಜಮನೆತನಗಳ ಆಳ್ವಿಕೆಯಲ್ಲಿದ್ದ ಪ್ರಾಂತ್ಯಗಳನ್ನು ಒಂದುಗೂಡಿಸುವ ಪ್ರಕ್ರಿಯೆಯಲ್ಲಿ ಹೊಸ ರಾಜ್ಯಗಳ ಸ್ಥಾಪನೆ, ಹಳೆ ಪ್ರಾಂತ್ಯಗಳ ಮರುವಿಂಗಡಣೆಯ ಅವಶ್ಯಕತೆಯಿತ್ತು. ಹೀಗಾಗಿ, ಕೇಂದ್ರ ಸರ್ಕಾರದ ಬಳಿ ಹೆಚ್ಚು ಅಧಿಕಾರವಿದ್ದದ್ದು ಸಹಜವೂ ಆಗಿತ್ತು. ಆದರೆ ಯೋಜನಾ ಆಯೋಗ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಮನ್ವಯದ ಮೂಲಕ, ಮತ್ತು ಸಂವಿಧಾನದಲ್ಲಿ ಗುರುತಿಸಿರುವ ಕೇಂದ್ರ ಮತ್ತು ರಾಜ್ಯಗಳ ಪರಿಧಿಯಲ್ಲಿ ಬರುವ ಅಧಿಕಾರ ಕ್ಷೇತ್ರದ ಪಟ್ಟಿಗಳನ್ನು ಗೌರವಿಸಿ ವಿಕೇಂದ್ರೀಕರಣದ ಆತ್ಮವನ್ನು ಜಾಗೃತವಾಗಿ ಇಡಲಾಗಿತ್ತು.

ಜಿಎಸ್‌ಟಿ ಕಾನೂನಿನಿಂದಾಗಿ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಉಂಟಾಯಿತು. ವ್ಯಾಪಾರ ವ್ಯವಹಾರಗಳನ್ನು ಕೈಗೊಳ್ಳಲು, ಹೂಡಿಕೆ ಆಕರ್ಷಿಸಲು ಇದು ಅತ್ಯವಶ್ಯಕವಾದ 'ಸುಧಾರಣೆ' ಎಂದು ಪರಿಗಣಿಸಬಹುದು. ಆದರಿದು, ಧನ ಸಂಪನ್ಮೂಲ ಮತ್ತು ಅಧಿಕಾರವನ್ನು ರಾಜ್ಯಗಳು ಕೇಂದ್ರಕ್ಕೆ ಹಸ್ತಾಂತರ ಮಾಡುವ ಆತ್ಮಘಾತುಕ ಕ್ರಿಯೆಯಾಗಿದೆ. 'ಒಂದು ರಾಷ್ಟ್ರ–ಒಂದು ತೆರಿಗೆ' ಎನ್ನುತ್ತಾ, ಸ್ಥಳೀಯತೆಯನ್ನು ಗೌಣವಾಗಿಸಿ, ಎಲ್ಲವನ್ನೂ ಕೇಂದ್ರದ ಜೋಳಿಗೆಯಲ್ಲಿ ಹಾಕುವ ಪ್ರಕ್ರಿಯೆಗೆ ನಾಂದಿ ಹಾಡಿದೆ. ಈಗ ರಾಜ್ಯ ಸರ್ಕಾರಗಳು ತಮ್ಮ ಸ್ವಾಯತ್ತತೆ ಕಳೆದುಕೊಂಡು, ಕೇಂದ್ರ ಸರ್ಕಾರದ ಶಾಖೆಗಳಾಗಿ ಕೆಲಸ ಮಾಡಬೇಕಾಗಿದೆ.

ಮದ್ಯ, ಇಂಧನ, ಆಸ್ತಿ, ನೋಂದಣಿ ತೆರಿಗೆಗಳನ್ನು ಬಿಟ್ಟರೆ ಮಿಕ್ಕೆಲ್ಲ ತೆರಿಗೆಗಳ ದರವನ್ನು ನಿರ್ಧರಿಸುವ ಹಕ್ಕು ಜಿಎಸ್‌ಟಿ ಮಂಡಳಿಯ ಕೈಯಲ್ಲಿದೆ. ರಾಜ್ಯದ ಪಾಲಿನ ತೆರಿಗೆ ತಕ್ಷಣಕ್ಕೆ ಬಂದರೂ, ಕೇಂದ್ರದ ಪಾಲಿನಿಂದ ಬರಬೇಕಾದ ಮೊತ್ತ ಹಣಕಾಸು ಆಯೋಗದ ಅನುದಾನದ ಸೂತ್ರಾನುಸಾರ ಬರುತ್ತದೆ. ತೆರಿಗೆಯ ದರ ಬದಲಿಸಲು ರಾಜ್ಯಗಳಿಗೆ ಅಧಿಕಾರವಿಲ್ಲ. ಹೋಗಲಿ, ರಾಜ್ಯಗಳು ಸಾಲ ಪಡೆದು ಬೆಳವಣಿಗೆ ಮತ್ತು ವಿಕಾಸ ಕಾರ್ಯಗಳಲ್ಲಿ ಹೂಡಿಕೆ ಮಾಡಬಹುದೆಂದರೆ, ಅದಕ್ಕೂ ಮಿತಿಗಳಿವೆ. ಅದನ್ನು ಪಾಲಿಸದಿದ್ದರೆ ದಂಡಿಸುವ ಅಧಿಕಾರ ಕೇಂದ್ರಕ್ಕಿದೆ. ಆದರೆ, ಕೇಂದ್ರಕ್ಕೆ ಈ ಯಾವುದೂ ಅನ್ವಯಿಸುವುದಿಲ್ಲ. ಹೆಚ್ಚಿನ ಸಾಲ ಪಡೆದು ಆರ್ಥಿಕ ಖೋತಾವನ್ನು ಹೆಚ್ಚಿಸಬೇಕೆಂದರೆ, ಕೇಂದ್ರ ಸರ್ಕಾರ ಸುಲಭವಾಗಿ ಕಾನೂನನ್ನು ತಿದ್ದಿ ಬೇಜವಾಬ್ದಾರಿಯಾಗಿ ವರ್ತಿಸಬಹುದು. ಜಿಎಸ್‌ಟಿಯಿಂದ ಪ್ರಾರಂಭವಾದ ಕೇಂದ್ರೀಕರಣ ಈಗ ಸಾಕಷ್ಟು ವಿಸ್ತಾರಗೊಂಡಿದೆ.

ಮೊದಲಿಗೆ, ರಾಜ್ಯಗಳ ಪಟ್ಟಿಯಲ್ಲಿರುವ ಕೃಷಿಗೆ ಅನ್ವಯಿಸುವ ಕಾನೂನುಗಳನ್ನು ವ್ಯಾಪಾರದ ಛದ್ಮವೇಷ ಹೊದಿಸಿ ಕೇಂದ್ರವು ತನ್ನ ಅಧಿಕಾರದ ವ್ಯಾಪ್ತಿ ಹಿಗ್ಗಿಸಲು ಪ್ರಯತ್ನಿಸಿತ್ತು. ಸಹಕಾರವೂ ರಾಜ್ಯಗಳಿಗೆ ಮೀಸಲಿಟ್ಟಿರುವ ವಿಷಯ. ಆದರೆ, ಈಗ ಗೃಹಮಂತ್ರಿಗಳ ವ್ಯಾಪ್ತಿಗೆ ಬರುವ ಹೊಸ ಸಹಕಾರ ಸಚಿವಾಲಯವನ್ನು ಕೇಂದ್ರ ಸರ್ಕಾರ ಆರಂಭಿಸಿದೆ. ರಾಜ್ಯದ ವ್ಯಾಪ್ತಿಯಲ್ಲಿರುವ ಅಧಿಕಾರ ಕ್ಷೇತ್ರದಲ್ಲಿ ಕೇಂದ್ರದ ಪರೋಕ್ಷ ಕೈವಾಡ ಆರಂಭವಾಗಿದೆ. ಕಾರ್ಮಿಕ, ಶಿಕ್ಷಣ ಮತ್ತು ಇತರ ಕ್ಷೇತ್ರಗಳಲ್ಲೂ ಕೇಂದ್ರೀಕರಣ ಆಗುತ್ತಿರುವುದಲ್ಲದೇ, ಎಲ್ಲಕ್ಕೂ ಪ್ರಧಾನಮಂತ್ರಿ ಎನ್ನುವ ಉಪಸರ್ಗವನ್ನು ಜೋಡಿಸಿ ಕೈವಶ ಮಾಡಿಕೊಳ್ಳಲಾಗುತ್ತಿದೆ.

'ವಿಬಿ–ಜಿ ರಾಮ್ ಜಿ' ಮಸೂದೆಯೂ ಕೇಂದ್ರೀಕರಣದತ್ತ ಪಯಣಿಸಿದೆ. ಹೆಸರು ಬದಲಾಯಿಸಿ ಗಮನವನ್ನು ಬೇರೆಡೆ ಸೆಳೆವ, ಡಬ್ಬಲ್ ಎಂಜಿನ್ ಅನ್ನುತ್ತಾ ಕೇಂದ್ರದ ಕೃಪೆಯಲ್ಲಿರುವ ರಾಜ್ಯಗಳಿಗೆ ಮಾತ್ರ ಸಂಪನ್ಮೂಲಗಳನ್ನು ಕೊಡುವ, ಎಲ್ಲವನ್ನೂ 'ಒಂದು ರಾಷ್ಟ್ರ'ದ ಕೇಂದ್ರೀಕರಣದ ಏಕತಾನತೆಯತ್ತ ಒಯ್ಯುತ್ತಿರುವುದನ್ನು ರಾಜ್ಯಗಳು ಗಮನಿಸಿ ಎಚ್ಚೆತ್ತುಕೊಳ್ಳಬೇಕು.

ರಾಜ್ಯಗಳ ಪ್ರಗತಿ, ಸ್ಥಳೀಯ ಸಂದರ್ಭಕ್ಕನುಸಾರವಾಗಿ ಮುಂದುವರಿಯಲು ವಿಕೇಂದ್ರೀಕರಣವು ಅತ್ಯಗತ್ಯವಾಗಿದೆ. ತೆರಿಗೆಯಾಗಲಿ, ಮಾಹಿತಿಯಾಗಲಿ, ಎಲ್ಲವನ್ನೂ ಬಕಾಸುರನಂತೆ ಕಬಳಿಸುವ ಕೇಂದ್ರ, ಹಂಚುವ ವಿಷಯಕ್ಕೆ ಬಂದಾಗ ಮಾಹಿತಿಯನ್ನೂ ಹಂಚದೆ ಕಾಪಿಟ್ಟುಕೊಳ್ಳುವ ಜುಗ್ಗತನವನ್ನು ತೋರಿಸುತ್ತದೆ, ಎಲ್ಲವೂ ಕೇಂದ್ರ ಸರ್ಕಾರದ ಪ್ರಚಾರಕ್ಕೆ ಮಾತ್ರ ಮುಡಿಪಾಗಿವೆ.

'ವಿಬಿ–ಜಿ ರಾಮ್ ಜಿ' ಮಸೂದೆ ಒಂದೊಂದೇ ಇಟ್ಟಿಗೆ ಜೋಡಿಸಿ ಮುತುವರ್ಜಿಯಿಂದ ಕಟ್ಟಿದ್ದ ಸಾಮಾಜಿಕ ಭದ್ರತೆಯ ಕಟ್ಟಡವನ್ನು, ಒಂದೇ ಏಟಿಗೆ ಬುಲ್ಡೋಜರ್ ಮೂಲಕ ನೆಲಸಮ ಮಾಡುತ್ತದೆ. ನಾವು ಮಸೂದೆಯನ್ನು ವಿರೋಧಿಸಬೇಕಾದ್ದು ಕನಿಷ್ಠ ಅಗತ್ಯ.

ವಿಕೇಂದ್ರೀಕರಣದ ವಿಚಾರದಲ್ಲಿ ಏನಾಗುತ್ತಿದೆ ಎನ್ನುವುದನ್ನೂ ಗಮನಿಸಬೇಕು. ಸಂವಿಧಾನದ ತಿದ್ದುಪಡಿಗೆ ಮುಂದಾಗದೆ, ಬಿಡಿ ಕಾಯ್ದೆಗಳನ್ನು ತಿದ್ದುತ್ತಾ, ಹೆಸರು ಬದಲಾಯಿಸುತ್ತಾ, ನಿರಂಕುಶತೆಯತ್ತ ಸಾಗುತ್ತಿರುವ ಪ್ರವೃತ್ತಿಯನ್ನು ನಾವು ಅರ್ಥಮಾಡಿಕೊಳ್ಳಬೇಕು.

ಐದು ವರ್ಷಗಳ ಕಾಲ ವರ್ಷಕ್ಕೆ ನೂರು ದಿನ ಕೆಲಸ ಕೊಡುತ್ತಿದ್ದ ಸರ್ಕಾರ, ಈಗ ಚುನಾವಣೆಯ ಮುನ್ನ ಖಾತೆಗೆ ಹತ್ತು ಸಾವಿರ ರೂಪಾಯಿ ಹಾಕಿ ಓಟು ಗಿಟ್ಟಿಸುವ ಕುಯುಕ್ತಿಯನ್ನು ಅನುಸರಿಸುತ್ತಿದೆ. ಜಿಎಸ್‌ಟಿ ಕಾಯ್ದೆ ವಿರುದ್ಧ ಹೋರಾಟ ರೂಪಿಸಿ ರಾಜ್ಯಗಳು ತಮ್ಮ ಆರ್ಥಿಕ ಸ್ವಾಯತ್ತತೆಯನ್ನು ಮರಳಿ ಪಡೆಯುವ ಹಾದಿಯಲ್ಲಿ ಹೆಜ್ಜೆಯಿಟ್ಟು ಸಮಸ್ಯೆಯ ಮರ್ಮವನ್ನು ತಲಪಬೇಕು. ಇಲ್ಲವಾದರೆ, ಅಂಚನ್ನು ಮೆಲ್ಲುತ್ತಾ ಬರುತ್ತಿರುವ ಕೇಂದ್ರದ ತಂತ್ರಗಳು ಒಂದು ದಿನ ತಿರುಳನ್ನೇ ಇಲ್ಲವಾಗಿಸಬಹುದು. 'ವಿಬಿ–ಜಿ ರಾಮ್ ಜಿ' ಒಂದು ಎಚ್ಚರಿಕೆಯ ಗಂಟೆ. ಈಗಲೇ ಎಚ್ಚೆತ್ತುಕೊಳ್ಳುವುದು ಒಳ್ಳೆಯದು.

ವಾಚಕರ ವಾಣಿ

ಜನತಂತ್ರಕ್ಕೆ ವಿಷ ಉಣಬಡಿಸುವ ಹುನ್ನಾರ

ದೇಶದಲ್ಲಿ ಮತಗಳ್ಳತನದ ವಿವಾದಾತ್ಮಕ ಕಿಚ್ಚು ಇನ್ನೂ ಆರಿಲ್ಲ. ಈ ನಡುವೆ, ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಹೆಸರಿನಲ್ಲಿ 11.6 ಕೋಟಿ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕುವ ಕುರಿತು ಚರ್ಚೆಯಾಗುತ್ತಿದೆ. ಇದು ಪ್ರಜಾತಂತ್ರಕ್ಕೆ ವಿಷ ಉಣಿಸುವ ಹುನ್ನಾರವಷ್ಟೆ. ದೇಶದ ಜನಸಂಖ್ಯೆಗೆ ಹೋಲಿಸಿದರೆ ಇದು ಸಣ್ಣ ಸಂಖ್ಯೆ ಅಲ್ಲ! ಅಲ್ಲದೆ, ಮತದಾರರ ಹಕ್ಕಿನ ಪ್ರಶ್ನೆಯೂ ಆಗಿದೆ. ಕೇಂದ್ರ ಚುನಾವಣಾ ಆಯೋಗದ ಮೇಲಿನ ಕಳಂಕ ಇನ್ನೂ ಮಾಸಿಲ್ಲ. ಅದರ ಇತ್ತೀಚಿನ ನಿರ್ಧಾರಗಳೂ ಸಮಂಜಸವಾಗಿಲ್ಲ. ಆಯೋಗ ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದರ ಬಗ್ಗೆ ಜನರಲ್ಲಿ ಪ್ರಶ್ನೆಗಳಿವೆ. ಉತ್ತರ ಮಾತ್ರ ಶೂನ್ಯ.

ಕಾಶೀನಾಥ ಎಸ್.ಎಂ., ಕಲಬುರಗಿ

ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ಆಗಬೇಕು

ಸಮಾಜದಲ್ಲಿ ಹೆಣ್ಣಿಗೆ ದೈವಿಕ ಸ್ಥಾನ ನೀಡಿದ್ದೇವೆ. ಕುಟುಂಬದಿಂದ ಹಿಡಿದು ರಾಷ್ಟ್ರ ನಿರ್ಮಾಣದಲ್ಲೂ ಮಹಿಳೆಯರ ಪಾತ್ರವಿದೆ. ಆದರೆ, ಮಹಿಳೆಯರ ಮೇಲಿನ ದೌರ್ಜನ್ಯಗಳು ಕಡಿಮೆಯಾಗಿಲ್ಲ. ಪ್ರತಿದಿನವೂ ಅತ್ಯಾಚಾರ, ಹತ್ಯೆ ಪ್ರಕರಣಗಳು ವರದಿಯಾಗುತ್ತಿವೆ. ಅತ್ಯಾಚಾರ ಪ್ರಕರಣ ಬೆಳಕಿಗೆ ಬಂದಾಗ ಮೇಣದಬತ್ತಿ ಹಚ್ಚಿಕೊಂಡು ಮೆರವಣಿಗೆ ಮಾಡುವುದು ನಡೆಯುತ್ತಿದೆ. ಆದರೆ, ದೌರ್ಜನ್ಯದ ಮನಸ್ಸುಗಳನ್ನು ಸುಟ್ಟು ಹಾಕುವ ಕೆಲಸವಂತೂ ನಡೆಯುತ್ತಿಲ್ಲ. ಪರಿಚಿತರೇ ಬಾಲಕಿಯರ ಮೇಲೆ ಅತ್ಯಾಚಾರ ಎಸಗುವುದು ನಡೆಯುತ್ತಿದೆ. ಸರ್ಕಾರವು ಕಾಮುಕರ ಬಂಧನಕ್ಕಷ್ಟೇ ಸೀಮಿತವಾಗಬಾರದು. ಸರಿಯಾದ ದಿಕ್ಕಿನಲ್ಲಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಿದರಷ್ಟೇ ದೌರ್ಜನ್ಯಗಳಿಗೆ ಕಡಿವಾಣ ಬೀಳಲಿದೆ.

ಭಾಸ್ಕರ ಸುಧೀಂದ್ರ, ಬಾಗಲಕೋಟೆ

ಬಿಎಲ್‌ಒ ಹೊರೆಗೆ ಬಸವಳಿದ ಶಿಕ್ಷಕರು

ಬೆಳಗಾವಿ ಅಧಿವೇಶನದಲ್ಲಿ ಬಿಎಲ್‌ಒ ಕೆಲಸಕ್ಕೆ ಶಿಕ್ಷಕರನ್ನು ನಿಯೋಜಿಸದಂತೆ ಚರ್ಚಿಸಲಾಯಿತು. ಆದರೂ, ಶಿಕ್ಷಣ ಸಚಿವರು ಈ ಕುರಿತು ಸ್ಪಷ್ಟ ನಿರ್ಧಾರ ಕೈಗೊಂಡಿಲ್ಲ. ಎನ್‌ಜಿಒ ಮೂಲಕ ಬಿಎಲ್‌ಒ ಕೆಲಸ ಮಾಡಿಸುವ ಅವಕಾಶವಿದ್ದರೂ ಶಿಕ್ಷಕರನ್ನೇ ನಿಯೋಜಿಸಲಾಗುತ್ತಿದೆ. ಇನ್ನೊಂದೆಡೆ, ಚುನಾವಣಾ ಆಯೋಗ ಎಸ್‌ಐಆರ್ ನಡೆಸುತ್ತಿರುವುದರಿಂದ ಬಿಎಲ್‌ಒ ಆಗಿರುವ ಶಿಕ್ಷಕರು ಒತ್ತಡಕ್ಕೆ ಸಿಲುಕಿದ್ದಾರೆ. ಇದು ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಬಡಮಕ್ಕಳ ಶಿಕ್ಷಣದ ಮೇಲೆ ಪರಿಣಾಮ ಬೀರಲಿದೆ. ಹಾಗಾಗಿ, ಶಿಕ್ಷಕರನ್ನು ಈ ಜವಾಬ್ದಾರಿಯಿಂದ ಬಿಡುಗಡೆಗೊಳಿಸಿ ಎನ್‌ಜಿಒಗಳಿಗೆ ವಹಿಸುವ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಬೇಕಿದೆ.

ಹರೀಶ್, ದಾವಣಗೆರೆ

ಯುವಜನರ ಧ್ವನಿಗೆ ಸೂಕ್ತ ವೇದಿಕೆ ಅಗತ್ಯ

ಗ್ರಾಮೀಣ ಪ್ರದೇಶದ ಯುವಜನರು ಹಲವು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದ್ದಾರೆ. ಉದ್ಯೋಗ ಮತ್ತು ಸೂಕ್ತ ಮಾರ್ಗದರ್ಶನದ ಕೊರತೆಯಿಂದ ಅವರ ಭವಿಷ್ಯ ಅಡಕತ್ತರಿಗೆ ಸಿಲುಕಿದೆ. ಹಳ್ಳಿಗಳಲ್ಲಿ ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವುದು ಕಳವಳಕಾರಿ. ಯುವಜನರ ಸಮಸ್ಯೆ ಹೇಳಿಕೊಳ್ಳಲು ಸೂಕ್ತ ವೇದಿಕೆ ಸಿಗುತ್ತಿಲ್ಲ. ಪ್ರತಿ ಗ್ರಾಮ ಪಂಚಾಯಿತಿಯಲ್ಲೂ ನಿಯಮಿತವಾಗಿ ಯುವಜನ ಗ್ರಾಮಸಭೆ ನಡೆಸಿದರೆ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ. ಸರ್ಕಾರ ಹಾಗೂ ಸ್ಥಳೀಯ ಆಡಳಿತಗಳು ಈ ದಿಸೆಯಲ್ಲಿ ಹೆಜ್ಜೆ ಇಡಬೇಕಿದೆ.

ಎಲ್. ಹುಲುಗಪ್ಪ, ಹೊಸಪೇಟೆ

ಸಮರ್ಥನೆ ಹೆಸರಿನಲ್ಲಿ ಅಸಭ್ಯತೆ ಸರಿಯೆ?

ಬಿಹಾರದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್, ಮುಸ್ಲಿಂ ಮಹಿಳೆಯೊಬ್ಬರು ಮುಖಕ್ಕೆ ಧರಿಸಿದ್ದ ನಖಾಬ್ ಎಳೆದಿದ್ದು ವಿವಾದಕ್ಕೆ ಕಾರಣವಾಗಿದೆ. ಇದರ ಸಮರ್ಥನೆ ಭರದಲ್ಲಿ ಉತ್ತರ ಪ್ರದೇಶದ ಸಚಿವರೊಬ್ಬರು ಪ್ರಚೋದನಕಾರಿಯಾಗಿ ಪ್ರತಿಕ್ರಿಯಿಸಿದ್ದಾರೆ. ಸಂವಿಧಾನವು ಪ್ರತಿಯೊಬ್ಬರಿಗೂ ಘನತೆಯಿಂದ ಬದುಕುವ ಹಕ್ಕು ನೀಡಿದೆ. ಈ ಪ್ರಕರಣವು ಮಹಿಳೆಯರ ಘನತೆಗೆ ಧಕ್ಕೆ ತಂದಿದೆ. ಇದು ರಾಜಕೀಯ ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಿರುವ ಪಿತೃಪ್ರಧಾನ ಮತ್ತು ಸ್ತ್ರೀವಿರೋಧಿ ಮನೋಭಾವದ ಪ್ರತಿಬಿಂಬವೂ ಹೌದು. ಮಹಿಳೆಯರ ಘನತೆಯನ್ನು ಬರೀ ಭಾಷಣಗಳಲ್ಲಿ ಎತ್ತಿ ಹಿಡಿದರೆ ಸಾಲದು; ಅದು ನಡೆ ಮತ್ತು ನುಡಿ ಎರಡರಲ್ಲೂ ಇರಬೇಕು. ಇಂತಹ ಘಟನೆಗಳ ವಿರುದ್ಧ ಪಕ್ಷಾತೀತವಾಗಿ ಧ್ವನಿ ಎತ್ತಬೇಕಿದೆ.

ಭೂಮಿಕಾ ವಿ., ಕೋಲಾರ

ಸಂಕುಚಿತ ಚಿಂತನೆಯಿಂದ ಯಾರಿಗೆ ಹಿತ?

'ಮೆಕಾಲೆ ಅಪ್ರಸ್ತುತ, ಏಕೆಂದರೆ...' ಲೇಖನವು (ಲೇ: ಎ. ಸೂರ್ಯ ಪ್ರಕಾಶ್, ಪ್ರ.ವಾ., ಡಿ. 20) ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ಹುಟ್ಟಿರುವುದಾಗಿದೆ. ಸಂಸ್ಕೃತದಲ್ಲಿ ಮಾತ್ರವೇ ಜ್ಞಾನವಿತ್ತು, ಅಷ್ಟೇ ಸಾಕಾಗಿತ್ತು ಎಂಬುದು ಅವರ ರಾಷ್ಟ್ರೀಯಪ್ರಜ್ಞೆಯ ಗತವಾದಿ ನಿಲುವು ಮೆಕಾಲೆ ನಿಲುವಷ್ಟೇ ಸಂಕುಚಿತ ಅಲ್ಲವೇ?

'ಕಾನ್ವೆಂಟ್ ಶಾಲೆಗಳು' ನಾಯಿಕೊಡೆಗಳಂತೆ ಹುಟ್ಟಿಕೊಂಡಿದ್ದು, ಬ್ರಿಟಿಷ್ ವಸಾಹತುಶಾಹಿ ಆಡಳಿತದ ಕಾಲದಲ್ಲೋ? ನವವಸಾಹತುಶಾಹಿಯ ಕಾಲವೆಂದು ಕರೆಯಲಾಗುತ್ತಿರುವ ಜಾಗತೀಕರಣದ ಪರಿಣಾಮವಾಗಿಯೋ? 'ಮೆಕಾಲೆ ಶಿಕ್ಷಣದ ಹಾನಿ'ಯ ಬಗ್ಗೆ ಹೇಳುವ ಪ್ರಧಾನಿ ಮೋದಿಯವರ ಪಕ್ಷ– ಸಿದ್ಧಾಂತವು, ರಾಷ್ಟ್ರೀಯತೆ ಹೆಸರಿನಲ್ಲಿ ಶಿಕ್ಷಣವನ್ನು ಕೇಸರೀಕರಣ ಮಾಡುತ್ತಿದ್ದಾರೆ ಎಂಬ ಗಂಭೀರ ಆರೋಪದಾಚೆಗೆ ರೂಪಿಸಿರುವ ರಚನಾತ್ಮಕ ಯೋಜನೆಗಳೇನು? ಪರಿಣತರು ಬಯಸುತ್ತಿರುವಂತೆ, ಶಿಕ್ಷಣವನ್ನು ರಾಷ್ಟ್ರೀಕರಣಗೊಳಿಸಿ ಆಯಾ ನಾಡಿನ ಭಾಷೆಯಲ್ಲಿ ಮಕ್ಕಳು ಶಿಕ್ಷಣ ಪಡೆಯುವಂತೆ ಮಸೂದೆ ಮಂಡಿಸಿ, ಮಹತ್ವಾಕಾಂಕ್ಷೆಯ ಶಾಸನವನ್ನೇಕೆ ಜಾರಿಗೆ ತರಬಾರದು? ಈ ಬಗ್ಗೆ ಪ್ರಧಾನಿಗೆ ಇಚ್ಛಾಶಕ್ತಿ ಇದೆಯೇ?

ದೊಡ್ಡಿಶೇಖರ್, ಆನೇಕಲ್

ಚುರುಮುರಿ

ಹೊಸ ಬ್ಲಡ್ಡು

• ಲಿಂಗರಾಜು ಡಿ.ಎಸ್.

'ಅಣ್ಣೈ, ರಾಜಕಾರಣಿಗಳು ಬೀದಿಬೀದಿಲಿ ನಿಂತುಗಂದು ಸಮಯ ಸಾಧಿಸಿ ಕವಕವ ಅಂತ ಕಿತ್ತಾಡತರಲ್ಲ, ಇದುನ್ನ ಸಮಯಸಾಧಕ ರಾಜಕೀಯ ಅನ್ನಬೈದಾ' ಅಂತ ತುರೇಮಣೆಗೆ ಕೇಳಿದೆ.

'ಲೋ ಹಂಗೆಲ್ಲಾ ಕಂಡಾಬಟ್ಟೆ ಬೈಯಂಗುಲ್ಲ ಕಲಾ. ಮೊನ್ನೆ ದ್ವೇಷ ಭಾಷಣ ಮಸೂದೆ ಜಾರಿಯಾಗ್ಯದೆ. ಆಮೇಲೆ ನಿನ್ನ ತಕ್ಕೊಂಗಿ ಪರಪ್ಪನ ಅಗ್ರಾರಕಾಕ್ತರೆ' ಅಂತ ತುರೇಮಣೆ ಎಚ್ಚರಿಸಿದರು.

'ಮಂತೆ ಗಾಂಧೀಜಿಯೋರು ಸತ್ಯಮೇವ ಜಯತೆ ಅಂದುದ್ದು ಸುಮ್ಮನೇನಾ?' ಅಂತ ಬೇಜಾರಲ್ಲಿ ಕೇಳಿದೆ.

'ಲೇ ದಡ್ಡಾ, ಗಾಂಧಿ ಔಟ್‌ಡೇಟಾಗ್ಯವರೆ ಅಂತ ಜೈರಾಂಜೀ ಹೆಸರಲ್ಲಿ ಹೊಸಾ ಬ್ಲಡ್ಡು ತಂದವ್ರೆ. ಅದುಕ್ಕೇ ಈಗ ರಾಜಕೀಯಕ್ಕೆ ಯುವಕರ ಬ್ಲಡ್ಡು ಬರಬೇಕು ಅಂತ ಅಣ್ಣಾರು ಯೇಳ್ಯವರೆ' ಯಂಟಪ್ಪಣ್ಣ ಒಗ್ಗರಣೆ ಹಾಕಿತು.

'ಅದುಕ್ಕೇ ಇರಬಕು. ಹೈಕಮಾಂಡುಗಳೆಲ್ಲಾ 'ನಮಗೆ ವಯಸ್ಸಾಗ್ಯದೆ ಕಪ್ಪಾ. ಸುಗರ್ರು, ಮಂಡಿನೋವು, ಅಲ್ಜೀಮರ್ಸ್, ಕಣ್ಣು–ಕಿವಿ ಮಂದಾಗ್ಯವೆ. ನಿಮ್ಮ ನಿಮ್ಮ ಜಗಳ ನೀವು ನೀವೇ ಬಗಹರಿಸಿಕ್ಯಂದು ಎಲ್ಲಿಗನ್ನಾ ತ್ಯಾಪೆ ಹಾಕ್ಕಳಿ ಅಂದವ್ರೆ' ತಿಪ್ಪಣ್ಣ ಸಾಸುವೆ ಸಿಡಿಸಿದ.

'ಸತ್ಯ ಕನ ತಿಪ್ಪಣ್ಣ, ಮೊನ್ನೆ ಅಸೆಂಬ್ಲಿ, ಲೋಕಸಭೆ ಅಧಿವೇಶನದಲ್ಲಿ ಒಬ್ಬ ನಾಯಕರನ್ನಾ ಜನದ ಕಷ್ಟಗಳ ಬಗ್ಗೆ ಬಾಯಿ ತಗೀಲೇ ಇಲ್ಲ. ಕಬ್ಬು ಬೆಳೆದೋನು ಬಡವನಾದ. ಫ್ಯಾಕ್ಟ್ರಿ ಓನರು ದುಂಡಗಾದ ಹ್ಯಂಗೆ ಅಂತ ಯಾರೂ ಕೇಳನಿಲ್ಲ. ಎಲ್ಲಾರೂ ರಕ್ಷಣಾತ್ಮಕ ಆಟ ಆಡಿಕ್ಯಂದು ಅವರವರ ವಿಕೆಟ್ ಉಳಿಸಿಕ್ಯಳಕ್ಕೆ ನೋಡಿದ್ರಷ್ಟೇ' ಅಂತ ಹೇಳಿದೆ.

'ಈಗ ಕರ್ನಾಟಕದ ರಾಜಕೀಯದಲ್ಲಿರೋ ಮುದುಕರಿಗೆಲ್ಲಾ ಚಳಿ ಹಿಡಿದು ಕೆಮ್ಮು ಜಾಸ್ತಿಯಾಗಿ ರಾಜಕೀಯ ನಿಶ್ಶಕ್ತಿ ಬಂದೋಗ್ಯದೆ ಕನೋ' ತುರೇಮಣೆಗೂ ಸಿಟ್ಟು ಬಂದಿತ್ತು.

'ಯಾರ್ರೀ ಅದು ನಿಶ್ಶಕ್ತಿ ಅಂದುದ್ದು. ಅದು ದ್ವೇಷ ಭಾಷೆ ಆತದೆ. ವಡೀರಿ ಕಪಾಳಕ' ತಿಪ್ಪಣ್ಣನ ಜೋಕು ಕೇಳಿ ನಮಗೆ ನಕ್ಕು ನಕ್ಕು ನಿಶ್ಶಕ್ತಿ ಆತು.

ಸಂಗತ

ಘಟ್ಟಕ್ಕೆ ಅಪಾಯಕಾರಿ ಯೋಜನೆ ಬೇಕೆ?

ಶರಾವತಿ ನದಿ ಹರಿವು ಬಳಸಿಕೊಂಡು ವಿದ್ಯುತ್ ಉತ್ಪಾದಿಸುವ ಯೋಜನೆ ಪಶ್ಚಿಮ ಘಟ್ಟದ ನಿಬಿಡ ಅರಣ್ಯ ಹಾಗೂ ಜೀವವೈವಿಧ್ಯಕ್ಕೆ ಹಾನಿ ಉಂಟುಮಾಡುತ್ತದೆ.

• ಪ್ರೊ. ಬಿ.ಕೆ. ಚಂದ್ರಶೇಖರ್

ಕಳೆದೊಂದು ದಶಕದಲ್ಲಿ ವಿದ್ಯುತ್ ಬೇಡಿಕೆಯ ಸ್ವರೂಪದಲ್ಲಿ ಮಹತ್ವದ ಬದಲಾವಣೆಗಳಾಗಿವೆ. ಗರಿಷ್ಠ ಬೇಡಿಕೆಯ ಸಮಯ ಬದಲಾಗಿದೆ. ಬಳಕೆಯ ಸ್ವರೂಪದ ಬದಲಾವಣೆ, ಸೌರ ವಿದ್ಯುತ್ ಉತ್ಪಾದನೆಯ ಹೆಚ್ಚಳ ಹಾಗೂ ಬೇಡಿಕೆ, ನಿರ್ವಹಣಾ ವ್ಯವಸ್ಥೆಗಳ ಸುಧಾರಣೆ ಇದಕ್ಕೆ ಪ್ರಮುಖ ಕಾರಣಗಳಾಗಿವೆ.

ಲಭ್ಯವಿರುವ ದತ್ತಾಂಶಗಳ ಪ್ರಕಾರ, ಕರ್ನಾಟಕದಲ್ಲಿ ಇಂದಿನ ಪರಿಸ್ಥಿತಿಯಲ್ಲಿ ಬದಲಾಗುತ್ತಿರುವ ಈ ಬೇಡಿಕೆ ಮಾದರಿಗಳನ್ನು ನಿರ್ವಹಿಸಲು ಸಾಕಷ್ಟು ನವೀಕರಿಸಬಹುದಾದ ಶಕ್ತಿ ಸಾಮರ್ಥ್ಯವಿದೆ. ಆದ್ದರಿಂದ ಗರಿಷ್ಠ ವಿದ್ಯುತ್ ಬೇಡಿಕೆ ನಿರ್ವಹಣೆ ಹಿಂದಿನಂತೆ ಗಂಭೀರ ಸಮಸ್ಯೆಯಾಗಿಲ್ಲ.

ಸೌರ ಫೋಟೊವೋಲ್ಟಾಯಿಕ್ ವ್ಯವಸ್ಥೆಗಳಿಗೆ ಬ್ಯಾಟರಿ ಶಕ್ತಿ ಸಂಗ್ರಹಣೆಯನ್ನು ಸಂಯೋಜಿಸುವುದು ತಾಂತ್ರಿಕವಾಗಿಯೂ ಹಾಗೂ ಆರ್ಥಿಕವಾಗಿಯೂ ಪರಿಣಾಮಕಾರಿ. ಇದಕ್ಕೆ ನಿದರ್ಶನವಾಗಿ, ಸೌರಶಕ್ತಿ ನಿಗಮ ಇತ್ತೀಚೆಗೆ ಹೊರಡಿಸಿರುವ ಟೆಂಡರ್‌ಗಳನ್ನು ಗಮನಿಸಬಹುದು. 'ಆರ್‌ಇ-ಆರ್‌ಟಿಸಿ' (ರೆನ್ಯೂಬಲ್ ಎನರ್ಜಿ– ರೌಂಡ್ ದಿ ಕ್ಲಾಕ್) ಟೆಂಡರ್‌ಗಳಲ್ಲಿ ವಿದ್ಯುತ್ ದರವು ಪ್ರತಿ ಯೂನಿಟ್‌ಗೆ ಸುಮಾರು ₹3ಕ್ಕೆ ಇಳಿದಿದೆ. ಇದಕ್ಕೆ ಹೋಲಿಸಿದರೆ, ಪಂಪ್ ಹೈಡ್ರೋ ಯೋಜನೆಗಳಿಂದ ಉತ್ಪಾದನೆಯಾಗುವ ವಿದ್ಯುತ್ ದರ ಪ್ರತಿ ಯೂನಿಟ್‌ಗೆ ಕನಿಷ್ಠ ₹6ರಿಂದ ₹8 ಆಗಿರುತ್ತದೆ.

ಬ್ಯಾಟರಿ ಸಂಗ್ರಹಣೆ ವ್ಯವಸ್ಥೆಯಲ್ಲಿ ಸಾಕಷ್ಟು ಲಾಭಗಳಿವೆ. ಆ ಲಾಭಗಳಲ್ಲಿ, ಕಡಿಮೆ ಅವಧಿಯಲ್ಲಿ ಸ್ಥಾಪನೆ ಸಾಧ್ಯ, ಹಂತ ಹಂತವಾಗಿ ವಿಸ್ತರಿಸಬಹುದಾದ ವ್ಯವಸ್ಥೆ, ವಿಶಾಲ ಭೂಮಿ ಅಥವಾ ಅರಣ್ಯ ಮುಳುಗಡೆ ಇಲ್ಲದಿರುವುದು, ದೊಡ್ಡ ಜಲವಿದ್ಯುತ್ ಯೋಜನೆಗಳಿಗಿಂತ ಬಹಳ ಕಡಿಮೆ ಪರಿಸರ ಹಾನಿ ಸೇರಿವೆ.

ಪಂಪ್ ಹೈಡ್ರೋ ಯೋಜನೆಗಳ ಪರಿಣಾಮಗಳು ನಿರ್ಮಾಣ ಸ್ಥಳಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಇವು ಭೂಮಿಯ ಹಾಗೂ ಜಲ ಪರಿಸರ ವ್ಯವಸ್ಥೆಗಳ ಮೇಲೆ ವ್ಯವಸ್ಥಾತ್ಮಕ, ಪರೋಕ್ಷ ಮತ್ತು ಸಂಚಯಾತ್ಮಕ ಪರಿಣಾಮ ಉಂಟುಮಾಡುತ್ತವೆ.

ಪಶ್ಚಿಮಘಟ್ಟಗಳಲ್ಲಿನ ನಿತ್ಯಹರಿದ್ವರ್ಣ ಹಾಗೂ ಅರೆ ನಿತ್ಯಹರಿದ್ವರ್ಣ ಕಾಡುಗಳು ಅತ್ಯಧಿಕ ಕಾರ್ಬನ್ ಸಂಗ್ರಹ ಸಾಮರ್ಥ್ಯ ಹೊಂದಿವೆ. ಒಮ್ಮೆ ಹಾನಿಗೊಳಗಾದರೆ, ಇವು ತಮ್ಮ ಮೂಲ ಕಾರ್ಬನ್ ಸಂಗ್ರಹ ಸಾಮರ್ಥ್ಯವನ್ನು ಮರುಪಡೆಯಲು 100ರಿಂದ 300 ವರ್ಷ ಬೇಕಾಗುತ್ತದೆ. ಪಂಪ್ ಹೈಡ್ರೋ ಯೋಜನೆಗಳು ನೈಸರ್ಗಿಕ ನೀರಿನ ಹರಿವಿನ ಕ್ರಮವನ್ನು ಬದಲಾಯಿಸುತ್ತವೆ. ಇದರ ಪರಿಣಾಮವಾಗಿ– ಮಣ್ಣಿನ ತೇವಾಂಶ, ಆವೋತ್ಪ್ರಸರಣ (Evapotranspiration) ಮಾದರಿಗಳು ಹಾಗೂ ಭೂಗರ್ಭ ಜಲ ಪುನರ್ಭರಣ ಮಾದರಿಗಳಲ್ಲಿ ವ್ಯತ್ಯಯ ಉಂಟಾಗುತ್ತದೆ. ಇದರಿಂದ ಕಾಡು–ನದಿ–ವಾತಾವರಣದ ನಡುವಿನ ನೈಸರ್ಗಿಕ ಸಂಬಂಧ ದುರ್ಬಲಗೊಳ್ಳುತ್ತದೆ. ದೀರ್ಘಾವಧಿಯಲ್ಲಿ, ಸ್ಥಳೀಯ ತಾಪಮಾನ ಏರಿಕೆ, ವಾತಾವರಣದ ತೇವಾಂಶ ಪುನರಾವರ್ತನೆ ಕುಗ್ಗುವುದು ಹಾಗೂ ಉಪ ಪ್ರಾದೇಶಿಕ ಮಟ್ಟದಲ್ಲಿ ಮಳೆಗಾಲದ ಮಾದರಿಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ.

ಪಶ್ಚಿಮಘಟ್ಟಗಳು ಜಾಗತಿಕವಾಗಿ ಅತ್ಯಂತ ಪ್ರಮುಖ ಜೀವವೈವಿಧ್ಯ ತಾಣಗಳಾಗಿವೆ. ಅರಣ್ಯ ತುಂಡಾಗುವಿಕೆ ಮತ್ತು ಜಲಚಕ್ರದ ವ್ಯತ್ಯಯಗಳು ಉಭಯಚರಗಳನ್ನು ಗಂಭೀರ ಅಪಾಯಕ್ಕೆ ಒಳಪಡಿಸುತ್ತವೆ. 'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ'ಗೆ ಸಂಬಂಧಿಸಿದಂತೆ ಈ ಎಲ್ಲ ಸೂಕ್ಷ್ಮಗಳನ್ನು ಗಮನಿಸಬೇಕಾಗಿದೆ.

ಸರ್ಕಾರವು ಶರಾವತಿ ನದಿಯ ಹರಿವನ್ನು ಬಳಸಿಕೊಂಡು ಸುಮಾರು 2,000 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆಯನ್ನು ರೂಪಿಸಿದೆ. ಆ ಪ್ರದೇಶದ ಗಂಭೀರ ಪರಿಸರ ಪರಿಣಾಮಗಳನ್ನು ಸಮರ್ಪಕವಾಗಿ ಪರಿಗಣಿಸದೆ, ಅಲ್ಲಿರುವ ಅಮೂಲ್ಯ ಸಸ್ಯಸಂಪತ್ತು ಮತ್ತು ಜೀವಸಂಕುಲಕ್ಕೆ ಭಾರೀ ಹಾನಿ ಉಂಟುಮಾಡುವ ಸಾಧ್ಯತೆಯಿದೆ. ಶತಮಾನಗಳ ಕಾಲದಲ್ಲಿ ರೂಪುಗೊಂಡಿರುವ ಈ ಪರಿಸರ ವ್ಯವಸ್ಥೆ ಅಲ್ಪ ವ್ಯತ್ಯಯಕ್ಕೂ ಅತ್ಯಂತ ಸಂವೇದನಾಶೀಲವಾಗಿದೆ. ಸ್ಥಳ ಪರಿಶೀಲನೆ ನಡೆಸಿದ ಅರಣ್ಯ ಸಲಹಾ ಸಮಿತಿ ಹಾಗೂ ಕರ್ನಾಟಕ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಈ ಯೋಜನೆಗೆ ಗಂಭೀರ ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಪರಿಸರ ಸಚಿವಾಲಯದ ಅಧಿಕಾರಿಗಳು, ಪಶ್ಚಿಮಘಟ್ಟಗಳಿಗೆ ಮಾತ್ರ ಸೀಮಿತವಾದ ಸಿಂಹಬಾಲದ ಸಿಂಗಳೀಕಗಳ ಮೇಲೆ ಬೀರುವ ಪರಿಣಾಮದ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ದಾಖಲೆಗಳ ಪ್ರಕಾರ, ಈ ಜಾತಿಯ ಸುಮಾರು 730 ಪ್ರಾಣಿಗಳು ಮಾತ್ರ ಉಳಿದಿವೆ.

ಈ ಯೋಜನೆಯು ಎರಡು ಜಲಾಶಯಗಳ ನಿರ್ಮಾಣ, ಗರಿಷ್ಠ 3.2 ಕಿ.ಮೀ ಉದ್ದದ ಸುರಂಗ, ಗರಿಷ್ಠ 500 ಮೀಟರ್ ಆಳದವರೆಗೆ ತೋಡಿಕೆ, ಹಾಗೂ ಭೂಗತ ಕಾಮಗಾರಿಗಳಿಗೆ ಡ್ರಿಲ್ಲಿಂಗ್ ಮತ್ತು ಸ್ಫೋಟ ಕಾರ್ಯಗಳನ್ನು ಒಳಗೊಂಡಿದೆ. ಯೋಜನಾ ಪ್ರದೇಶವು ಭೂಕಂಪ ವಲಯ–3ರಲ್ಲಿ ಇರುವುದಾಗಿ ಸಮಿತಿ ಹೇಳಿದ್ದು, ಇಳಿಜಾರು ಕತ್ತರಿಕೆ, ಸ್ಫೋಟ ಕಾರ್ಯಗಳು ಮತ್ತು ಭಾರಿ ಮಾನ್ಸೂನ್ ಮಳೆಯ ಸಂಯೋಜನೆಯಿಂದ ಭೂಕುಸಿತ ಮತ್ತು ಮಣ್ಣು ಕೊಚ್ಚುವ ಅಪಾಯಗಳು ಹೆಚ್ಚಾಗುವ ಸಾಧ್ಯತೆ ಇದೆ.

ಪರಿಸರದ ದೃಷ್ಟಿಯಿಂದ ಅತ್ಯಂತ ಸಂವೇದನಾಶೀಲವಾದ ಪ್ರದೇಶದಲ್ಲಿ 54 ಎಕರೆ ಅರಣ್ಯ ಭೂಮಿಯನ್ನು ಪರಿವರ್ತಿಸುವುದು ಮತ್ತು ಸುಮಾರು 15,000 ಮರಗಳನ್ನು ಕಡಿಯುವ ಪ್ರಸ್ತಾವಕ್ಕೆ ಸಮಿತಿ ತೀವ್ರ ವಿರೋಧ ವ್ಯಕ್ತಪಡಿಸಿದೆ. ಇಂತಹ ಕ್ರಮಗಳು ಈಗಾಗಲೇ ಅಪರೂಪವಾಗುತ್ತಿರುವ ಮತ್ತು ಮರುಸ್ಥಾಪಿಸಲಾಗದ ಅರಣ್ಯಗಳಿಗೆ ಭಾರೀ ಅಪಾಯ ಉಂಟುಮಾಡುತ್ತವೆ. ಶರಾವತಿ ಕಣಿವೆ ಅಭಯಾರಣ್ಯದ ಒಳಭಾಗದಲ್ಲಿರುವುದು ಹಾಗೂ ಮಧ್ಯ ಪಶ್ಚಿಮಘಟ್ಟಗಳ ಪರಿಸರ ಸಂವೇದನಾಶೀಲತೆಯನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಮೇಲ್ನೋಟಕ್ಕೆ ಆಕರ್ಷಕವಾಗಿ ಕಂಡರೂ, ಪರಿಸರ ಹಾನಿಯ ಬೆಲೆತೆತ್ತು ಸಾಕಾರಗೊಳ್ಳುವ ಯೋಜನೆಯನ್ನು ರಾಜ್ಯ ಸರ್ಕಾರ ಕೈಬಿಡುವುದೇ ಒಳ್ಳೆಯದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಾಂಗ್ಲಾ ಪ್ರಕ್ಷುಬ್ಧ ಹೊಣೆ ಯಾರು?

ಬಾಂಗ್ಲಾದೇಶ ಮತ್ತೊಮ್ಮೆ ಪ್ರಕ್ಷುಬ್ಧಗೊಂಡಿದೆ .ಇಂಕ್ವಿಲಾಬ್ ಮಂಚ್ ವಕ್ತಾರ ಶರೀಫ್ ಉಸ್ಮಾನ್ ಹಾದಿ ಹತ್ಯೆಯಿಂದ ಪರಿಸ್ಥಿತಿ ಉದ್ವಿಗ್ನಗೊಂಡಿದ್ದು, ಹಲವೆಡೆ ಹಿಂಸಾಚಾರ ನಡೆದಿವೆ. ಹಿಂದೂವೊಬ್ಬರ ಮೇಲೆ ಗುಂಪು ಹಲ್ಲೆ ನಡೆಸಿ ಹತ್ಯೆ ಮಾಡಲಾಗಿದೆ. ಈ ಬೆಳವಣಿಗೆಗಳು ಭಾರತದ ಮೇಲೆ ಎಂಥ ಪರಿಣಾಮ ಬೀರಲಿವೆ ಎನ್ನುವುದರ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಬಾಂಗ್ಲಾದಲ್ಲಿ ಇಸ್ಲಾಂ ಮೂಲಭೂತವಾದಿಗಳ ಕೈ ಮೇಲಾಗುತ್ತಿದ್ದು, ಭಾರತ ವಿರೋಧಿ ಭಾವನೆ ತೀವ್ರಗೊಳ್ಳುತ್ತಿದೆ. ಇದರಿಂದಾಗಿ ಉಭಯ ರಾಷ್ಟ್ರಗಳ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ಸೃಷ್ಟಿಯಾಗಿದೆ

ಪ್ರಜಾವಾಣಿ ವಾರ್ತೆ

ದಶಕಗಳ ಕಾಲ ಶಾಂತಿ, ಸಮೃದ್ಧಿ ನೆಲಸಿದ್ದ ಬಾಂಗ್ಲಾದೇಶದಲ್ಲಿ ಮೀಸಲಾತಿ ನೀತಿ ವಿರುದ್ಧ ಕಾಲೇಜು ವಿದ್ಯಾರ್ಥಿಗಳು ಕಳೆದ ವರ್ಷ ಆರಂಭಿಸಿದ್ದ ಹೋರಾಟವು ಭಾರಿ ಬದಲಾವಣೆಗಳಿಗೆ ಕಾರಣವಾಗಿತ್ತು. ಪ್ರಧಾನಿ ಶೇಖ್ ಹಸೀನಾ ಸರ್ಕಾರ ಪತನಗೊಂಡಿತ್ತು. ಜೀವ ಉಳಿಸಿಕೊಳ್ಳಲು ಭಾರತಕ್ಕೆ ಬಂದ ಹಸೀನಾ, ಅಂದಿನಿಂದ ದೆಹಲಿಯಲ್ಲಿಯೇ ಆಶ್ರಯ ಪಡೆದಿದ್ದಾರೆ. ಅವರನ್ನು ಬಾಂಗ್ಲಾದೇಶಕ್ಕೆ ಒಪ್ಪಿಸುವಂತೆ ಭಾರತದ ಮೇಲೆ ಬಾಂಗ್ಲಾ ಒತ್ತಡ ಹೇರುತ್ತಲೇ ಇದೆ. ಹಸೀನಾ ಅವರಿಗೆ ನೆಲೆ ಕಲ್ಪಿಸಿದೆ ಎನ್ನುವ ಕಾರಣಕ್ಕೆ ಬಾಂಗ್ಲಾದಲ್ಲಿ ಭಾರತ ವಿರೋಧಿ ಭಾವನೆ ಹೆಚ್ಚಾಗುತ್ತಿದೆ. ಮೀಸಲಾತಿ ವಿರೋಧಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಶರೀಫ್ ಉಸ್ಮಾನ್ ಹಾದಿ ಅವರ ಹತ್ಯೆಯ ನಂತರ ಹಿಂಸೆಯ ತೀವ್ರತೆ ಹೆಚ್ಚಾಗಿದೆ.

2024ರ ಜುಲೈ–ಆಗಸ್ಟ್‌ನಲ್ಲಿ ನಡೆದಿದ್ದ ವಿದ್ಯಾರ್ಥಿ ದಂಗೆಯ ನಾಯಕತ್ವ ವಹಿಸಿದ್ದವರ ಪೈಕಿ ಶರೀಫ್ ಉಸ್ಮಾನ್ ಹಾದಿ ಒಬ್ಬರಾಗಿದ್ದರು. ತಮ್ಮ ಭಾರತ ವಿರೋಧಿ ನಿಲುವಿಗೆ ಹೆಸರಾಗಿದ್ದ ಅವರು, ಹಸೀನಾ ಅವರನ್ನು ಭಾರತವು ಬಾಂಗ್ಲಾಕ್ಕೆ ಹಸ್ತಾಂತರಿಸಬೇಕು ಎಂದು ಪ್ರಬಲವಾಗಿ ಪ್ರತಿಪಾದಿಸುತ್ತಿದ್ದರು. ಫೆಬ್ರುವರಿಯಲ್ಲಿ ನಡೆಯಲಿದ್ದ ಬಾಂಗ್ಲಾದೇಶ ಸಾರ್ವತ್ರಿಕ ಚುನಾವಣೆಯಲ್ಲಿ ಢಾಕಾ–8 ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಇರಾದೆ ಹೊಂದಿದ್ದರು. ಅದಕ್ಕೆ ಸಿದ್ಧತೆಯನ್ನೂ ನಡೆಸುತ್ತಿದ್ದರು. ಹಸೀನಾ ನಂತರದ ಬಾಂಗ್ಲಾದಲ್ಲಿ ಒಂದು ಶಕ್ತಿಯಾಗಿ ರೂಪುಗೊಳ್ಳುತ್ತಿದ್ದ ಹಾದಿ ಅವರನ್ನು ಅಪರಿಚಿತ ಮುಸುಕುಧಾರಿಗಳು ಗುಂಡಿಟ್ಟು ಕೊಂದಿದ್ದಾರೆ. ಈ ಒಂದು ಕೊಲೆಯಿಂದ ಇಡೀ ದೇಶ ಪ್ರಕ್ಷುಬ್ಧಗೊಂಡಿದೆ. 2026ರ ಫೆಬ್ರುವರಿಯಲ್ಲಿ ಸಾರ್ವತ್ರಿಕ ಚುನಾವಣೆಗೆ ಸಜ್ಜಾಗುತ್ತಿದ್ದ ಬಾಂಗ್ಲಾದಲ್ಲಿ ಮತ್ತೆ ರಾಜಕೀಯ ಅಸ್ಥಿರತೆ ತಲೆದೋರಿದೆ. ಈ ಹತ್ಯೆಯನ್ನು ಭಾರತಕ್ಕೆ ತಳಕು ಹಾಕಲಾಗುತ್ತಿದ್ದು, ಮೊದಲಿನಿಂದಲೂ ಭಾರತವನ್ನು ವಿರೋಧಿಸುತ್ತಲೇ ಬಂದಿರುವ ಮತಾಂಧ ಶಕ್ತಿಗಳು ದೇಶದ ಮೇಲೆ ಹಿಡಿತ ಸಾಧಿಸಲು ಕೋಮುಧ್ರುವೀಕರಣ ನಡೆಸಲು ಈ ಸಂದರ್ಭವನ್ನು ಬಳಸಿಕೊಳ್ಳುತ್ತಿವೆ ಎನ್ನಲಾಗುತ್ತಿದೆ.

ಭಾರತ ವಿರೋಧಿ ಕಥನ: ಸಿಂಗಪುರ ಆಸ್ಪತ್ರೆಯಲ್ಲಿ ಹಾದಿ ಮೃತಪಟ್ಟ (ಡಿ.18) ಹಿಂದಿನ ದಿನವೂ ಭಾರತದ ವಿರುದ್ಧ ಪ್ರತಿಭಟನೆ ನಡೆದಿತ್ತು. ಹಸೀನಾ ಅವರನ್ನು ವಾಪಸ್ ಕರೆತರಬೇಕು ಎಂದು ಘೋಷಣೆ ಕೂಗುತ್ತಾ ಪ್ರತಿಭಟನಕಾರರು ಢಾಕಾದಲ್ಲಿರುವ ಭಾರತದ ಹೈಕಮಿಷನ್ ಕಚೇರಿಯ ಮುಂಭಾಗದಲ್ಲಿ ಹಾದುಹೋಗಿದ್ದರು. ಭಾರತವು ರಾಜತಾಂತ್ರಿಕ ಕಚೇರಿಯನ್ನು ಒಂದು ದಿನದ ಮಟ್ಟಿಗೆ ಮುಚ್ಚಿ, ವೀಸಾ ನೀಡುವಿಕೆಯನ್ನು ಸ್ಥಗಿತಗೊಳಿಸಿತ್ತು.

ಶೇಖ್ ಹಸೀನಾ ಭಾರತದಲ್ಲಿ ಆಶ್ರಯ ಪಡೆದ ನಂತರ ಬಾಂಗ್ಲಾದೇಶದಲ್ಲಿ ಭಾರತ ವಿರೋಧಿ ಕಥನವನ್ನು ಹೆಣೆದು ಜನರಲ್ಲಿ ಭಾರತ ವಿರೋಧಿ ಭಾವನೆ ಬಿತ್ತಲಾಗುತ್ತಿದೆ. ಈಗ ಹಾದಿ ಹತ್ಯೆಗೂ ಭಾರತಕ್ಕೂ ಸಂಬಂಧ ಕಲ್ಪಿಸಲಾಗುತ್ತಿದೆ. ಹತ್ಯೆ ಮಾಡಿದವರು, ಕೃತ್ಯದ ನಂತರ ಭಾರತಕ್ಕೆ ಪಲಾಯನ ಮಾಡಿದ್ದಾರೆ ಎನ್ನುವ ವದಂತಿಯನ್ನು ಹರಿಬಿಡಲಾಯಿತು. ಅದರಿಂದ ಕೆರಳಿದ ಪ್ರತಿಭಟನಕಾರರು, ಚಿತ್ತಗಾಂಗ್‌ನಲ್ಲಿರುವ ಭಾರತದ ರಾಜತಾಂತ್ರಿಕ ಕಚೇರಿ ಮೇಲೆ ಕಲ್ಲು ತೂರಾಟ ನಡೆಸಿದರು. ಭಾರತವನ್ನು ಬೆಂಬಲಿಸುತ್ತಿವೆ ಮತ್ತು ಶರೀಫ್ ಸಾವಿಗೆ ನೆಲ ಸಜ್ಜುಗೊಳಿಸಿವೆ ಎಂದು ಆರೋಪಿಸಿ ‘ಪ್ರೊಥೊಮ್ ಅಲೊ’ ಮತ್ತು ‘ದಿ ಡೈಲಿ ಸ್ಟಾರ್’ ಪತ್ರಿಕಾ ಕಚೇರಿಗಳ ಮೇಲೂ ದಾಳಿ ನಡೆಸಿದರು.

ಭಾರತವು ಬಾಂಗ್ಲಾದ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಎನ್ನುವ ಭಾವನೆ ಕೆಲವರಲ್ಲಿದೆ. ಶೇಖ್ ಹಸೀನಾ ಅವರನ್ನು ಭಾರತದಿಂದ ಕರೆತಂದು ವಿಚಾರಣೆ ನಡೆಸಬೇಕು. ಅವರ ಜತೆಯಲ್ಲೇ ಶರೀಫ್ ಅವರನ್ನು ಕೊಂದವರನ್ನೂ ವಿಚಾರಣೆಗೊಳಪಡಿಸಬೇಕು ಎನ್ನುವ ಒತ್ತಾಯ ಕೇಳಿಬಂದಿದೆ. ಆದರೆ, ಈ ಎಲ್ಲ ಪ್ರತಿಭಟನೆ, ಹಿಂಸಾಚಾರಗಳ ಹಿಂದೆ ಬಾಂಗ್ಲಾದೇಶದ ಮುಸ್ಲಿಂ ಮೂಲಭೂತವಾದಿ ಶಕ್ತಿಗಳ ಕೈವಾಡವಿದ್ದು, ಪರಿಸ್ಥಿತಿಯನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಲು ಅವು ಉರಿಯುವ ಬೆಂಕಿಗೆ ತುಪ್ಪ ಸುರಿಯುತ್ತಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

ಚುನಾವಣೆ ಮುಂದೂಡಲು ಪಿತೂರಿ?: ಶೇಖ್ ಹಸೀನಾ ಅವರು ಪ್ರಧಾನಿಯಾಗಿದ್ದಾಗ ಭಾರತದೊಂದಿಗೆ ಉತ್ತಮ ಸಂಬಂಧ ಹೊಂದಿದ್ದರು. ಅವರ ಪದಚ್ಯುತಿಯೊಂದಿಗೆ ಪರಿಸ್ಥಿತಿ ಬದಲಾಗಿದೆ. ಪಾಕಿಸ್ತಾನದಂತೆ ಬಾಂಗ್ಲಾದೇಶದಲ್ಲೂ ಭಾರತ ವಿರೋಧಿ ಇಸ್ಲಾಂ ಮೂಲಭೂತವಾದಿಗಳ ಕೈ ಮೇಲಾಗುತ್ತಿದೆ. ಬಲಪಂಥೀಯ ಮುಸ್ಲಿಮರ ನೇತೃತ್ವದ ಜಮಾತ್–ಎ–ಇಸ್ಲಾಮಿ ಪಕ್ಷವು ದೇಶದ ಪ್ರಮುಖ ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ಚುನಾವಣೆಗಳಲ್ಲಿ ಗೆಲುವು ಸಾಧಿಸಿದೆ.

ಆದರೆ, ಭಾರತವೂ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳು ಬಾಂಗ್ಲಾದಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ಸಾರ್ವತ್ರಿಕ ಚುನಾವಣೆ ನಡೆದು, ಪ್ರಜಾಪ್ರಭುತ್ವವಾದಿ ಸರ್ಕಾರ ಸ್ಥಾಪನೆಯಾಗುವುದನ್ನು ಎದುರುನೋಡುತ್ತಿವೆ. ಫೆಬ್ರುವರಿಯಲ್ಲಿ ಸಾರ್ವತ್ರಿಕ ಚುನಾವಣೆ ನಡೆಸಲಾಗುವುದು ಎಂದು ಮಧ್ಯಂತರ ಸರ್ಕಾರ ಈಗಾಗಲೇ ಘೋಷಿಸಿದೆ. ಆದರೆ, ಚುನಾವಣೆಗಳು ನಿಜಕ್ಕೂ ನಡೆಯುವವೇ ಎನ್ನುವುದರ ಬಗ್ಗೆ ಭಿನ್ನ ಕಥನಗಳು ಕೇಳಿಬರುತ್ತಿವೆ. ಹಾಗೊಂದು ವೇಳೆ ಚುನಾವಣೆಗಳು ನಡೆದರೂ, ಹಸೀನಾ ಅವರ ಅವಾಮಿ ಲೀಗ್ ಪಕ್ಷಕ್ಕೆ ಸ್ಪರ್ಧಿಸಲು ಅವಕಾಶ ನೀಡಲಾಗುವುದೇ ಎನ್ನುವ ಪ್ರಶ್ನೆಯೂ ಮುಖ್ಯವಾಗಿದೆ. ಇಂಥ ಸ್ಥಿತಿಯಲ್ಲಿಯೇ ಶರೀಫ್ ಹಾದಿ ಹತ್ಯೆ ನಡೆದಿದೆ. ಅದಾಗಿ ಕೆಲವೇ ದಿನಗಳಲ್ಲಿ ಧರ್ಮ ನಿಂದನೆ ಮಾಡಿದ್ದಾರೆ ಎಂದು ಆರೋಪಿಸಿ ಅಲ್ಪಸಂಖ್ಯಾತ ಹಿಂದೂ ಸಮುದಾಯಕ್ಕೆ ಸೇರಿದ ದೀಪುಚಂದ್ರ ದಾಸ್ ಎಂಬ ಯುವಕನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ.

ಚುನಾವಣೆಗಳನ್ನು ಮುಂದೂಡುವ ದೃಷ್ಟಿಯಿಂದಲೇ ಈಗಿನ ಹಿಂಸಾಚಾರಗಳನ್ನು ವ್ಯವಸ್ಥಿತವಾಗಿ ನಡೆಸಲಾಗುತ್ತಿದೆ ಎಂದು ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಆರೋಪಿಸಿದೆ. ಹಿಂಸಾಚಾರ, ಹತ್ಯೆಗಳನ್ನು ದೇಶದಲ್ಲಿ ಅಶಾಂತ ವಾತಾವರಣ ಮೂಡಿಸಿ ಚುನಾವಣೆಗಳನ್ನು ಮುಂದೂಡಲು, ಭಾರತ ವಿರೋಧಿ ಭಾವನೆ ಉದ್ದೀಪಿಸಿ ಜನಬೆಂಬಲ ಗಳಿಸಲು ಮೂಲಭೂತವಾದಿ ಗುಂಪುಗಳು ಬಳಸಿಕೊಳ್ಳುತ್ತಿವೆ ಎಂದು ವಿಶ್ಲೇಷಿಸಲಾಗಿದೆ.

ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ದಿನದಿಂದ ದಿನಕ್ಕೆ ಪರಿಸ್ಥಿತಿ ಕೈಮೀರುತ್ತಿದೆ. ಬಾಂಗ್ಲಾದಲ್ಲಿ ಚುನಾವಣೆಗಳು ತಡವಾಗುತ್ತಿರುವುದರಿಂದಲೇ ಅನಪೇಕ್ಷಿತ ವಿದ್ಯಮಾನಗಳು ನಡೆಯುತ್ತಿವೆ ಎನ್ನುವುದು ಭಾರತದ ನಿಲುವು. ಕೆಲವೇ ವರ್ಷಗಳ ಹಿಂದೆ ಮಿತ್ರ ರಾಷ್ಟ್ರವಾಗಿದ್ದ, ನೆರೆಯ ಬಾಂಗ್ಲಾದಲ್ಲಿ ಅಸ್ಥಿರತೆ ಉಂಟಾಗಿರುವುದು ಭಾರತದ ಮಟ್ಟಿಗೆ ಉತ್ತಮ ಬೆಳವಣಿಗೆಯೇನಲ್ಲ. ಆದರೆ, ಭಾರತವು ತಕ್ಷಣಕ್ಕೆ ಯಾವುದೇ ರೀತಿಯ ಕ್ರಮಕ್ಕೂ ಮುಂದಾಗದೇ, ಅಲ್ಲಿನ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ.

ಆಧಾರ: ಪಿಟಿಐ, ಬಿಬಿಸಿ, ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಂಸದೀಯ ಸ್ಥಾಯಿ ಸಮಿತಿ ವರದಿ, ಮಾಧ್ಯಮ ವರದಿಗಳು

ಬಾಂಗ್ಲಾಸ್ಥಿರತೆ: ಭಾರತಕ್ಕೆ ಏಕೆ ಮುಖ್ಯ?

- ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಭಾರತದ ಪ್ರಮುಖ ಪಾಲುದಾರ ರಾಷ್ಟ್ರ
- ದಕ್ಷಿಣ ಏಷ್ಯಾದಲ್ಲಿ ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರ. ಭಾರತದ ಸರಕು ಮತ್ತು ಕಚ್ಚಾ ವಸ್ತುಗಳ ಬಹುದೊಡ್ಡ ಗ್ರಾಹಕ ರಾಷ್ಟ್ರ
- ಆಗ್ನೇಯ ಏಷ್ಯಾ ರಾಷ್ಟ್ರಗಳಿಗೆ ಭಾರತದ ಸಂಪರ್ಕ ಕೊಂಡಿ
- ಬಾಂಗ್ಲಾದೇಶ, ಭೂತಾನ್, ಭಾರತ, ಮ್ಯಾನ್ಮಾರ್, ನೇಪಾಳ, ಶ್ರೀಲಂಕಾ ಮತ್ತು ಥಾಯ್ಲೆಂಡ್‌ಗಳನ್ನೊಳಗೊಂಡ ಬೇ ಆಫ್ ಬೆಂಗಾಲ್ ಇನಿಷಿಯೇಟಿವ್ ಫಾರ್ ಮಲ್ಟಿ ಸೆಕ್ಟೋರಲ್ ಟೆಕ್ನಿಕಲ್ ಮತ್ತು ಎಕಾನಮಿಕ್ ಕೊ–ಆಪರೇಷನ್ ಮುಖ್ಯ ಕಚೇರಿ ಇರುವುದು ಢಾಕಾದಲ್ಲಿ
- ಭಾರತದ ಈಶಾನ್ಯ ರಾಜ್ಯಗಳಿಗೆ ಬಾಂಗ್ಲಾದೇಶದ ಮೂಲಕವೂ ಹೋಗಬಹುದು. ಭಾರತದ ಇತರ ರಾಜ್ಯಗಳು ಈಶಾನ್ಯ ರಾಜ್ಯಗಳನ್ನು ಸಂಪರ್ಕಿಸಲು ಕಿರಿದಾದ ‘ಚಿಕನ್ ನೆಕ್’ ಕಾರಿಡಾರ್ ಮೇಲೆ ಹೆಚ್ಚು ಅವಲಂಬಿಸುವುದನ್ನು ಇದು ತಪ್ಪಿಸುತ್ತದೆ
- ರಾಜಕೀಯ ಅಸ್ಥಿರತೆಯಲ್ಲೇ ಇರುವ, ಭಯೋತ್ಪಾದಕರ ಕಪಿಮುಷ್ಟಿಯಲ್ಲಿರುವ ಪಾಕಿಸ್ತಾನದಿಂದಾಗಿ ದೇಶದ ಉತ್ತರದ ಕಾಶ್ಮೀರದಲ್ಲಿ ಭದ್ರತೆಗೆ ಸದಾ ಅಪಾಯ ಎದುರಾಗಿತ್ತಿರುವ ಹೊತ್ತಿನಲ್ಲೇ, ಪಶ್ಚಿಮದಲ್ಲಿರುವ ನೆರೆ ರಾಷ್ಟ್ರದಲ್ಲಿ ರಾಜಕೀಯ ಅಸ್ಥಿರತೆ ಉಂಟಾಗುವುದು ಭಾರತದ ಭದ್ರತೆಗೂ ಸವಾಲೊಡ್ಡಲಿದೆ

ಬಾಂಗ್ಲಾದ ರಾಜ್‌ಶಾಹಿಯಲ್ಲಿರುವ ಭಾರತೀಯ ಹೈಕಮಿಷನ್ ಕಚೇರಿ ಮುಂದೆ ಇದೇ 18ರಂದು ಪ್ರತಿಭಟಿಸಲು ಯತ್ನಿಸಿದವರನ್ನು ಭದ್ರತಾ ಸಿಬ್ಬಂದಿ ತಡೆದರು –ಎಎಫ್‌ಪಿ ಚಿತ್ರ

‘1971ರ ನಂತರದ ಬಹುದೊಡ್ಡ ಸವಾಲು’

ಬಾಂಗ್ಲಾದೇಶದ ಜನರಲ್ಲಿ ವಿಶೇಷವಾಗಿ ಯುವಜನಾಂಗದಲ್ಲಿ ಭಾರತ ವಿರೋಧಿ ಭಾವನೆ ಬೆಳೆಯುತ್ತಿರುವುದನ್ನು ಮತ್ತು ಉದ್ದೇಶಪೂರ್ವಕವಾಗಿ ಭಾರತದ ವಿರುದ್ಧವಾದ ಭಾವನೆ ಮೂಡುವಂತಹ ಕಥನವನ್ನು ಸೃಷ್ಟಿಸುತ್ತಿರುವುದರ ಕುರಿತಾಗಿ ಶಶಿ ತರೂರ್ ಅಧ್ಯಕ್ಷತೆಯ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಂಸದೀಯ ಸಮಿತಿಯು ತನ್ನ ‘ಭಾರತ–ಬಾಂಗ್ಲಾದೇಶದ ಸಂಬಂಧದ ಭವಿಷ್ಯ’ ವರದಿಯಲ್ಲಿ ಪ್ರಸ್ತಾಪಿಸಿದೆ. ಇದೇ 18ರಂದು ಸಂಸತ್ತಿನಲ್ಲಿ ವರದಿಯನ್ನು ಮಂಡಿಸಲಾಗಿದೆ. ಬಾಂಗ್ಲಾದೇಶದಲ್ಲಿನ ಬೆಳವಣಿಗೆಗಳು, ಆಡಳಿತದಲ್ಲಿ ಮೂಲಭೂತವಾದಿಗಳ ಹಿಡಿತ ಹೆಚ್ಚಾಗುತ್ತಿರುವುದು, ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದಾಳಿಗಳ ಬಗ್ಗೆ ಸಮಿತಿಯು ತೀವ್ರ ಆತಂಕ ವ್ಯಕ್ತಪಡಿಸಿದೆ.

1971ರಲ್ಲಿ ನಡೆದಿದ್ದ ವಿಮೋಚನಾ ಯುದ್ಧದ ನಂತರದಲ್ಲಿ ಇದೇ ಮೊದಲ ಬಾರಿಗೆ ಭಾರತವು ಬಾಂಗ್ಲಾದೇಶದಲ್ಲಿ ದ್ವಿಪಕ್ಷೀಯ ಸಂಬಂಧಕ್ಕೆ ಸಂಬಂಧಿಸಿದಂತೆ ಬಹುದೊಡ್ಡ ಸವಾಲನ್ನು ಎದುರಿಸುತ್ತಿದೆ. 1971ರಲ್ಲಿದ್ದ ಸವಾಲು ಅಸ್ತಿತ್ವಕ್ಕಾಗಿ, ಮಾನವೀಯತೆಯಿಂದ ಕೂಡಿದ್ದಾಗಿತ್ತು. ಅದು ಒಂದು ರಾಷ್ಟ್ರದ ಹುಟ್ಟಿಗೂ ಕಾರಣವಾಗಿತ್ತು. ಆದರೆ, ಈಗಿನ ಸವಾಲು ಹೆಚ್ಚು ಗಂಭೀರವಾದದ್ದು; ತಲೆಮಾರುಗಳ ವರ್ತನೆ, ಮೌಲ್ಯಗಳಲ್ಲಿ ಆದ ಬದಲಾವಣೆ, ರಾಜಕೀಯ ನಿಲುವಿನಲ್ಲಿ ಆದ ಬದಲಾವಣೆ ಮತ್ತು ಭಾರತದೊಂದಿಗಿನ ಸಂಬಂಧದಿಂದ ದೂರ ಸರಿಯುವ ಸಾಧ್ಯತೆಗೆ ಸಂಬಂಧಿಸಿದ್ದಾಗಿದೆ. ಅವಾಮಿ ಲೀಗ್‌ನ ಪತನದೊಂದಿಗೆ ಯುವ ಸಮುದಾಯ ನೇತೃತ್ವದ ರಾಷ್ಟ್ರೀಯತೆ, ಇಸ್ಲಾಂ ಮೂಲಭೂತವಾದಿಗಳ ಮರುಪ್ರವೇಶ ಮತ್ತು ಚೀನಾ, ಪಾಕಿಸ್ತಾನದ ಪ್ರಭಾವ ಹೆಚ್ಚುತ್ತಿರುವುದು ಬಾಂಗ್ಲಾದೊಂದಿಗೆ ಭಾರತದ ಹೊಂದಿರುವ ಸಂಬಂಧ ಪ್ರಮುಖ ತಿರುವಿನ ಬಿಂದುವಾಗಿದ್ದು, ತಕ್ಷಣವೇ ಈ ಪರಿಸ್ಥಿತಿಯನ್ನು ಭಾರತ ತಕ್ಷಣವೇ ಸರಿಪಡಿಸಿಕೊಳ್ಳಬೇಕು ಎಂದು ತಜ್ಞರೊಬ್ಬರ ಅಭಿಪ್ರಾಯವನ್ನು ಸಮಿತಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಭಾರತವು ಬಾಂಗ್ಲಾದ ಆಂತರಿಕ ರಾಜಕೀಯದಲ್ಲಿ ಮಧ್ಯಪ್ರವೇಶಿಸದೆ, ಅಲ್ಲಿನ ಪ್ರಜಾಪ್ರಭುತ್ವ ಪ್ರಕ್ರಿಯೆಗೆ, ಮುಕ್ತ, ನ್ಯಾಯಸಮ್ಮತ, ಎಲ್ಲರನ್ನೊಳಗೊಂಡ ಚುನಾವಣೆಗೆ ಬೆಂಬಲ ನೀಡಬೇಕು ಎಂದು ಸಮಿತಿ ತನ್ನ ಶಿಫಾರಸಿನಲ್ಲಿ ಹೇಳಿದೆ.

ಭಾರತದಲ್ಲಿ ಅಲ್ಲಿನ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ಆಶ್ರಯ ಪಡೆದಿರುವುದನ್ನೂ ಉಲ್ಲೇಖಿಸಿರುವ ವರದಿಯು, ಜೀವಕ್ಕೆ ಆಪತ್ತು, ಅಸ್ತಿತ್ವಕ್ಕೆ ಅಪಾಯ ಎದುರಿಸುತ್ತಿರುವ ವ್ಯಕ್ತಿಗಳಿಗೆ ನಾಗರಿಕ ನಡವಳಿಕೆ, ಮಾನವೀಯ ನೆಲೆಯಲ್ಲಿ ಆಶ್ರಯ ನೀಡುವ ಸಂಪ್ರದಾಯದ ಅನುಸಾರ ಭಾರತವು ಶೇಖ್ ಹಸೀನಾ ಅವರಿಗೆ ಆಶ್ರಯ ನೀಡಿದೆ. ಸರ್ಕಾರವು ಈ ಪರಿಸ್ಥಿತಿಯನ್ನು ತುಂಬಾ ಸೂಕ್ಷ್ಮತೆಯಿಂದ ನಿರ್ವಹಿಸಬೇಕು ಎಂದೂ ಸಮಿತಿ ಸಲಹೆ ನೀಡಿದೆ.

ಅರಾವಳಿಗೆ ಬಂದಿರುವ ಅಪಾಯ ಪಶ್ಚಿಮ ಘಟ್ಟಕ್ಕೂ ಬರಬಹುದು: ಜಲ ತಜ್ಞ ರಾಜೇಂದ್ರ ಸಿಂಗ್

‘ಪರ್ವತಗಳ ಉಳಿವಿಗಾಗಿ ಪ್ರತ್ಯೇಕ ಕಾನೂನು ಬೇಕು’

ಅರಣ್ಯ ಸಂರಕ್ಷಣಾ ನಿಯಮಗಳ (2022) ತಿದ್ದುಪಡಿ ಪ್ರಕಾರ ‘ಅರಾವಳಿ ಶ್ರೇಣಿ ವ್ಯಾಪ್ತಿಯಲ್ಲಿ 100 ಮೀಟರ್‌ಗಿಂತ ಕಡಿಮೆ ಎತ್ತರದಲ್ಲಿರುವ ಬೆಟ್ಟಗಳಲ್ಲಿ ಗಣಿಗಾರಿಕೆಗೆ ಯಾವುದೇ ಆಕ್ಷೇಪವಿರುವುದಿಲ್ಲ’ ಎಂಬ ಕೇಂದ್ರ ಸರ್ಕಾರದ ವ್ಯಾಖ್ಯಾನಕ್ಕೆ ಸುಪ್ರೀಂ ಕೋರ್ಟ್ ಅನುಮೋದನೆ ನೀಡಿದೆ. ಈ ನಿರ್ಧಾರವನ್ನು ಖಂಡಿಸಿ ರಾಜಸ್ಥಾನ ಮತ್ತು ಹರಿಯಾಣದಲ್ಲಿ ವ್ಯಾಪಕ ಪ್ರತಿಭಟನೆಗಳು ಭುಗಿಲೆದ್ದಿರುವ ಹಿನ್ನೆಲೆಯಲ್ಲಿ ‘ಪ್ರಜಾವಾಣಿ’ಯೊಂದಿಗೆ ಭಾರತದ ಭಗೀರಥ ಎಂದೇ ಖ್ಯಾತರಾದ, ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ರಾಜೇಂದ್ರ ಸಿಂಗ್ ಅವರು ಮಾತನಾಡಿದ್ದಾರೆ

• ರಾಧಾಕೃಷ್ಣ ಎಸ್. ಭಡ್ತಿ

• ಮತ್ತೊಮ್ಮೆ ಅರಾವಳಿಯಲ್ಲಿ ಗಣಿಗಾರಿಕೆಯ ಸದ್ದು ಕೇಳಿಬರುತ್ತಿದೆ. ನೀವೂ ಒಂದು ಕಾಲದಲ್ಲಿ ಈ ಕಬಂಧ ಬಾಹುವಿನ ವಿರುದ್ಧ ಹೋರಾಡಿದವರು. ಈ ಸನ್ನಿವೇಶದಲ್ಲಿ ನಿಮ್ಮ ನಿಲುವೇನು?

ಗಣಿಗಾರಿಕೆಯಿಂದ ನಾಶವಾದ ಪರ್ವತಗಳನ್ನು ಪುನರುಜ್ಜೀವನಗೊಳಿಸಲು ಸಾಧ್ಯವಿಲ್ಲ ಎಂಬುದನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕು. ಕೇಂದ್ರ ಸರಕಾರ ಕಳೆದ ನವೆಂಬರ್ 20ರಂದು ಕೈಗೊಂಡ ನಿರ್ಧಾರದಂತೆ ಗಣಿಗಾರಿಕೆಗೆ ಅವಕಾಶ ನೀಡುವುದರಿಂದ ಅರಾವಳಿ ಪರ್ವತ ಶ್ರೇಣಿಯೇ ನಾಶವಾಗುತ್ತವೆ. ಆ ಮೂಲಕ ಒಂದಿಡೀ ಸಮುದಾಯ ಮತ್ತೆ ವಿನಾಶದ ಆತಂಕಕ್ಕೆ ತಳ್ಳಲ್ಪಡುತ್ತದೆ. ಎಂಥದ್ದೇ ಹರಸಾಹಸದಿಂದಲೂ ಪರ್ವತಗಳೂ ಸೇರಿದಂತೆ ಸುತ್ತಲಿನ ಪರಿಸರವನ್ನು ಮೂಲ ಸ್ಥಿತಿಗೆ ತರುವುದು ದುಃಸಾಧ್ಯ. ಒಂದನ್ನು ಇಲ್ಲಿ ನಾವು ಅರ್ಥ ಮಾಡಿಕೊಳ್ಳಬೇಕು. ಒಂದೊಮ್ಮೆ ನೀರಿಲ್ಲ ಎಂದಾದರೆ ನದಿಗಳು ಮತ್ತು ಕೊಳಗಳನ್ನು ಪುನರುಜ್ಜೀವನಗೊಳಿಸಬಹುದು. ರೂಪಾರೆಲ್ (ಅರಾವಳಿಯ ಜೀವನದಿ)ನ ವಿಷಯದಲ್ಲಿ ಇದನ್ನು ಸಾಬೀತುಪಡಿಸಿದ್ದೇವೆ. ಆದರೆ ಪರ್ವತಗಳನ್ನು ಅವುಗಳ ಮೂಲ ಸ್ಥಿತಿಗೆ ಮರುಸ್ಥಾಪಿಸುವುದು ಅಸಾಧ್ಯ.

• ಅಭಿವೃದ್ಧಿಯ ವಿಚಾರ ಬಂದಾಗಲೆಲ್ಲ, ಪರಿಸರವಾದಿಗಳು ವಿರೋಧಿಸುತ್ತಾರೆ, ಅವರು ಅಭಿವೃದ್ಧಿಯ ವಿರೋಧಿಗಳು ಎಂಬ ಅಭಿಪ್ರಾಯ ಮೊಳೆತಿದೆ. ಹಾಗಾದರೆ ಅಭಿವೃದ್ಧಿ ಬೇಡವೇ?

ಯಾವುದೇ ಕಾರಣಕ್ಕೂ ಅಭಿವೃದ್ಧಿ ಬೇಡ ಎನ್ನುವುದು ನಮ್ಮ ನಿಲುವಲ್ಲ. ಆದರೆ ಅಭಿವೃದ್ಧಿಯ ವ್ಯಾಖ್ಯಾನ ಬದಲಾಗಬೇಕಿದೆ. ಯಾವ ಬೆಲೆತೆತ್ತು ನಾವು ಅಭಿವೃದ್ಧಿ ಮಾಡುತ್ತೇವೆ ಎಂಬುದು ಗಮನಾರ್ಹ. ಜನರಲ್ಲಿ ಅಭಿವೃದ್ಧಿಯ ಕೆಲಸದ ಬಗ್ಗೆ ಆತುರ ಇರಬೇಕು. ಆದರೆ, ಆತಂಕ ಎಂದಿಗೂ ಸಲ್ಲ. ಅದರ ಬಗ್ಗೆ ಕಾಳಜಿ ಇರಬೇಕು. ಬೇಡಿಕೆಯಿಲ್ಲದೇ ಹೇರುವ ಯೋಜನೆಗಳು, ನಿರ್ಧಾರಗಳು ಅರ್ಥಹೀನ. ಗಣಿಗಾರಿಕೆಗೆ ಅವಕಾಶದಂಥ ನಿರ್ಧಾರಗಳು ಯಾವುದೋ ಸ್ವಾರ್ಥ ಹಿತಾಸಕ್ತಿಗಳ ಪರವಾದ ನಿರ್ಣಯಗಳಷ್ಟೇ. ಇಲ್ಲಿ ಇನ್ನೊಂದು ಪ್ರಮುಖ ಅಂಶ ಎಂದರೆ ನೀವು ಯಾವ ಜಾಗದಲ್ಲಿ ಗಣಿಗಾರಿಕೆಗೆ ಅನುಮತಿ ನೀಡುತ್ತಿದ್ದೀರಿ, ಎಲ್ಲಿ ಯೋಜನೆಗಳನ್ನು ಆರಂಭಿಸಲು ಹೊರಟಿದ್ದೀರಿ ಎಂಬ ಬಗ್ಗೆ ಅವಲೋಕನ ಆಗಲೇಬೇಕು. ಅದಿಲ್ಲದ ನಿರ್ಧಾರಗಳಿಗೆ ಜನಬೆಂಬಲ ಎಂದಿಗೂ ಸಿಗುವುದೇ ಇಲ್ಲ.

• ನಿಮ್ಮ ಮುಂದಿನ ಹೆಜ್ಜೆ ಏನು? ಮತ್ತೆ ಕಾನೂನು ಹೋರಾಟವೇ?

ನಾವೆಲ್ಲರೂ ಈಗಾಗಲೇ ಎಲ್ಲೆಡೆ ಅರಾವಳಿ ಪರ್ವತ ಶ್ರೇಣಿಯ ಸಂರಕ್ಷಣೆಗಾಗಿ ಧ್ವನಿ ಎತ್ತುತ್ತಿದ್ದೇವೆ. ಕಾಡನ್ನು ನಾಶಗೊಳಿಸಿಯೂ ಕೇಂದ್ರದ ನವೆಂಬರ್ 20ರ ವ್ಯಾಖ್ಯಾನದ ಅಡಿಯಲ್ಲೇ ಆಶ್ರಯ ಪಡೆಯುವ ಅಧಿಕಾರಿಗಳು, ರಾಜಕಾರಣಿಗಳು ಮತ್ತು ಉದ್ಯಮಿಗಳು ಕಾನೂನು ಕುಣಿಕೆಯಿಂದ ತಪ್ಪಿಸಿಕೊಂಡು ಸುರಕ್ಷಿತವಾಗಿ ಉಳಿಯುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆಯು ಏನನ್ನೂ ಮಾಡಲು ಸಾಧ್ಯವಾಗುವುದಿಲ್ಲ.

• ಜನಸಾಮಾನ್ಯರು ಈ ನಿಟ್ಟಿನಲ್ಲಿ ಏನು ಮಾಡಬಹುದು?

–ಇದು ದೂರದ ಎಲ್ಲೋ ಅರಾವಳಿ ಪರ್ವತಗಳಿಗೆ ಸಂಬಂಧಿಸಿದ್ದು ಎಂದು ಸುಮ್ಮನೆ ಕೂರಬಾರದು. ನಾಳೆ ಇದು ಪಶ್ಚಿಮ ಘಟ್ಟಗಳ ವಿಚಾರದಲ್ಲೂ ಸಂಭವಿಸಬಹುದು. ಹೀಗಾಗಿ ಇದೀಗ ಅರಾವಳಿಯನ್ನು ರಕ್ಷಿಸುವುದು ನಮ್ಮ ಕರ್ತವ್ಯ ಎಂದು ನಾವೆಲ್ಲರೂ ಪರಿಗಣಿಸಬೇಕು.

–ಪರ್ವತಗಳನ್ನು ರಕ್ಷಿಸಲು ಕಾನೂನುಗಳನ್ನು ಜಾರಿಗೆ ತನ್ನಿ ಎಂಬ ಒತ್ತಡ ಹೇರಲು ಇದು ಸುಸಮಯ.

–ಮೊದಲು, ನ್ಯಾಯಾಂಗದ ಮೂಲಕ ಅರಾವಳಿ ಪರ್ವತಗಳಿಗೆ ನ್ಯಾಯವನ್ನು ಖಚಿತಪಡಿಸಿಕೊಳ್ಳಲು ಪುನರ್ವಿಮರ್ಶೆಗಾಗಿ ನಾವು ಸುಪ್ರೀಂ ಕೋರ್ಟ್ ಅನ್ನು ಸಂಪರ್ಕಿಸಬೇಕು. ಈ ನಿಟ್ಟಿನಲ್ಲಿ ದೇಶಾದ್ಯಂತದ ವ್ಯಕ್ತಿಗತ ನೆಲೆಯಲ್ಲಿಯೂ ಅರ್ಜಿಗಳ ಸಲ್ಲಿಕೆಯಾಗಬೇಕು.

ಪ್ರಜಾವಾಣಿ ಸಂದರ್ಶನ

ಸಂದರ್ಶನದ ಪೂರ್ಣ ಪಾಠಕ್ಕೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪಿವಿ ಫ್ಯಾಕ್ಟ್ ಚೆಕ್

ಬಾಂಗ್ಲಾದೇಶದಲ್ಲಿ ಶರೀಫ್ ಉಸ್ಮಾನ್ ಹಾದಿಯ ಹತ್ಯೆ ಮಾಡಿದ ಇಬ್ಬರು ಶಂಕಿತ ಶೂಟರ್‌ಗಳು ಭಾರತ–ಬಾಂಗ್ಲಾದೇಶದ ಗಡಿಯನ್ನು ದಾಟುತ್ತಿರುವುದು ಪತ್ತೆಯಾಗಿದೆ ಎಂದು ಪ್ರತಿಪಾದಿಸುತ್ತಾ, ಇಬ್ಬರು ಯುವಕರು ಲಗೇಜುಗಳೊಂದಿಗೆ ನಡೆಯುತ್ತಿರುವ ಫೋಟೊವನ್ನು ‘ಕಾಶ್ಮೀರ ಡಿಜಿಟಲ್’ ಎನ್ನುವ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಲಾಗಿದೆ. ಆದರೆ ಇದು ಸುಳ್ಳು ಸುದ್ದಿ.

ರಿವರ್ಸ್ ಸರ್ಚ್ ವಿಧಾನದ ಮೂಲಕ ಗೂಗಲ್‌ನಲ್ಲಿ ಹಾಕಿ ಹುಡುಕಿದಾಗ ಇನ್ನೂ ಕೆಲವರು ಈ ಪೋಸ್ಟ್ ಅನ್ನು ಹಂಚಿಕೊಂಡಿರುವುದು ಕಂಡು ಬಂತು. ‘ಕಾಶ್ಮೀರ ಡಿಜಿಟಲ್’ ಸುದ್ದಿ ವೆಬ್‌ಸೈಟ್‌ನಲ್ಲಿ ಪ್ರಕಟಕೊಂಡಿರುವ ವರದಿಯೂ ಸಿಕ್ಕಿತು. ಆ ವೆಬ್‌ಸೈಟ್‌ನ ‘ಅಬೌಟ್ ಅಸ್’ ಲಿಂಕ್‌ಗೆ ಹೋಗಿ ನೋಡಿದಾಗ, ಅದು ಪಾಕಿಸ್ತಾನ ಮೂಲದ ವೆಬ್‌ಸೈಟ್ ಎಂಬುದು ಖಚಿತವಾಯಿತು. ಮತ್ತಷ್ಟು ಹುಡುಕಾಟ ನಡೆಸಿದಾಗ 2024ರ ಆಗಸ್ಟ್ 7ರಂದು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಕಟವಾಗಿದ್ದ ವರದಿ ಸಿಕ್ಕಿತು. ಅದರಲ್ಲಿ ಇದೇ ಫೋಟೊವನ್ನೇ ಹೋಲುವ ಫೋಟೊ ಪ್ರಕಟವಾಗಿತ್ತು. ಮೇಘಾಲಯದ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಬಾಂಗ್ಲಾದೇಶದ ವಿದ್ಯಾರ್ಥಿಗಳು ಚೆಕ್ ಪೋಸ್ಟ್ ಒಂದರಲ್ಲಿ ಭಾರತ–ಬಾಂಗ್ಲಾ ಗಡಿಯನ್ನು ದಾಟುತ್ತಿರುವ ಚಿತ್ರ ಅದಾಗಿತ್ತು. ಆದರೆ, ಈಗ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿರುವ ಫೋಟೊದಲ್ಲಿರುವ ಯುವಕರ ಮುಖವನ್ನು ಡಿಜಿಟಲ್ ತಂತ್ರಜ್ಞಾನದಲ್ಲಿ ಮಾರ್ಪಾಡು ಮಾಡಿರುವುದು ಗಮನಕ್ಕೆ ಬಂತು. ಈ ನಡುವೆ, ಬಾಂಗ್ಲಾದೇಶದ ಆಡಳಿತವು ಹಾದಿ ಹತ್ಯೆ ತನಿಖೆಯನ್ನು ತೀವ್ರಗೊಳಿಸಿದ್ದು, ಶಂಕಿತನ ಗುರುತನ್ನು ಪತ್ತೆ ಹಚ್ಚಿದೆ. ಆತನ ಬಗ್ಗೆ ದೇಶದಾದ್ಯಂತ ಲುಕ್‌ಔಟ್ ನೋಟಿಸ್ ನೀಡಿದೆ. ಹಳೆಯ ಫೋಟೊವನ್ನು ಡಿಜಿಟಲ್ ತಂತ್ರಜ್ಞಾನದಲ್ಲಿ ತಿರುಚಿ ಶಂಕಿತ ಶೂಟರ್‌ಗಳು ಭಾರತ–ಬಾಂಗ್ಲಾ ಗಡಿದಾಟುತ್ತಿರುವುದು ಪತ್ತೆಯಾಗಿದೆ ಎಂದು ತಪ್ಪಾಗಿ ಪೋಸ್ಟ್ ಮಾಡಲಾಗಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ಹೇಳಿದೆ.

ಎರಡು ಬಾಣಗಳು

ದೀಪಾ ಹಿರೇಗುತ್ತಿ

ಒಂದು ದಿನ ಶಿಷ್ಯನೊಬ್ಬ ಬುದ್ಧನ ಹತ್ತಿರ ಕೇಳಿದ, ‘ಗುರುಗಳೇ, ಒಂದೇ ಥರದ ಸಮಸ್ಯೆ ಇದ್ದರೂ ಕೆಲವರು ಜಾಸ್ತಿ ಸಂಕಷ್ಟ ಅನುಭವಿಸುತ್ತಾರೆ. ಮತ್ತೆ ಕೆಲವರು ಕಡಿಮೆ ನರಳುತ್ತಾರೆ. ಇದು ಏಕೆ ಅನ್ನುವುದು ನನಗಿನ್ನೂ ಅರ್ಥವಾಗಿಲ್ಲ. ಇದಕ್ಕೆ ಕಾರಣವೇನು?’ ಅದಕ್ಕೆ ಬುದ್ಧ ಎರಡು ಬಾಣಗಳ ಕಥೆ ಹೇಳಿದ.

‘ಮನುಷ್ಯನೊಬ್ಬ ಬಾಣವೊಂದರಿಂದ ಗಾಸಿಗೊಂಡಾಗ ನೋವನ್ನನುಭವಿಸುತ್ತಾನೆ. ಯಾರಿಗೇ ಆದರೂ ಬಾಣ ತಗುಲಿದಾಗ ನೋವಾಗುತ್ತದೆ. ಇದು ಸಹಜವಾದದ್ದು. ಆದರೆ ಬಾಣ ನೆಟ್ಟಾಗ ಆತ ಹೇಗೆ ವರ್ತಿಸುತ್ತಾನೆ ಎಂಬುದರ ಮೇಲೆ ಆತನ ಸಂಕಷ್ಟದ ಪ್ರಮಾಣ ನಿರ್ಧಾರವಾಗುತ್ತದೆ. ಮೊದಲನೇ ಬಾಣ ಬದುಕಿನ ಅನಿವಾರ್ಯ ಸಂಕಷ್ಟಗಳು. ಕಾಯಿಲೆ, ನಷ್ಟ, ಕಷ್ಟ, ಸೋಲು ಇವೆಲ್ಲ ಪ್ರತಿಯೊಬ್ಬರ ಬದುಕಿನಲ್ಲೂ ಸಾಮಾನ್ಯ. ಇವನ್ನು ಬಯಸಿದರೂ ತಡೆಯಲಾಗದು. ಆದರೆ ಈ ಅನಿವಾರ್ಯವಾದ ಮೊದಲ ಬಾಣ ಚುಚ್ಚಿದಾಗ ನಾವು ಹೇಗೆ ವರ್ತಿಸುತ್ತೇವೆ ಎಂಬುದು ನಮಗೆ ಎರಡನೇ ಬಾಣ ಚುಚ್ಚುತ್ತದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸುತ್ತದೆ. ಸಾಮಾನ್ಯವಾಗಿ ಭಯ, ಸಿಟ್ಟು, ಅಳು ಇವುಗಳನ್ನು ನಮ್ಮ ಸಂಕಟಕ್ಕೆ ಜತೆಯಾಗಿಸಿಕೊಳ್ಳುತ್ತೇವೆ. ಅದೂ ಸಹಜವೇ. ಆದರೆ ನಮಗೆ ಏನಾದರೂ ತೊಂದರೆ ಆದಾಗ ‘ಅಯ್ಯೋ ನನಗೇ ಏಕೆ ಹೀಗಾಯಿತು? ನನ್ನ ಹಣೆಬರಹ ಇಷ್ಟೇ, ನನ್ನ ಬದುಕೇ ವ್ಯರ್ಥ, ನನ್ನ ಜೀವನದಲ್ಲಿ ಎಲ್ಲ ಮುಗಿದು ಹೋಯಿತು’ ಅಂತೆಲ್ಲ ಅಂದುಕೊಂಡೆವೋ ಆಗ ಎರಡನೇ ಬಾಣವನ್ನು ಚುಚ್ಚಿಸಿಕೊಳ್ಳುತ್ತೇವೆ’ ಅಂದ ಬುದ್ಧ.

ಉದಾಹರಣೆಗೆ ಸಣ್ಣ ಅಪಘಾತವೊಂದರಲ್ಲಿ ಕೈ ಮುರಿದು ಹೋಗಿ ಎರಡು ತಿಂಗಳು ಪಟ್ಟಿ ಹಾಕಿಕೊಂಡಿರಬೇಕಾಯಿತೆನ್ನಿ. ಅದೋ ಅನಿವಾರ್ಯ. ಸೂಕ್ತ ಚಿಕಿತ್ಸೆ ಪಡೆದು ಮತ್ತೆ ಮಾಮೂಲು ಸ್ಥಿತಿಗೆ ಮರಳಿದರೆ ಮುಗಿಯಿತು. ಆದರೆ, ‘ಅಯ್ಯೋ ನನ್ನ ಕೆಲಸದ ಕಥೆ ಏನು, ಎಷ್ಟು ದಿನ ಒಂದು ಕೈಲಿ ಮ್ಯಾನೇಜ್ ಮಾಡಬೇಕಾಗುತ್ತದೆಯೋ, ಜಗತ್ತಿನಲ್ಲಿ ಕೆಟ್ಟದ್ದಕ್ಕೆಲ್ಲ ನಾನೇ ಸಿಗುತ್ತೇನೆ’ ಇಂಥವೆಲ್ಲ ಯೋಚನೆಗಳನ್ನು ಅತಿಯಾಗಿ ಮಾಡುವುದರಿಂದ ಮತ್ತಷ್ಟು ಸಂಕಷ್ಟ ಜಾಸ್ತಿಯಾಗುತ್ತದೆ. ಈ ಹೆಚ್ಚುವರಿ ಸಂಕಟವೇ ಎರಡನೇ ಬಾಣ. ಈ ಎರಡನೇ ಬಾಣ ನೆಟ್ಟರೆ ಅದು ಮೊದಲ ಬಾಣದ ನೋವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಒಂದಂತೂ ನೆನಪಿನಲ್ಲಿರಬೇಕು. ಮೊದಲನೆಯ ಬಾಣ ಅನಿವಾರ್ಯವಾದರೆ ಎರಡನೆಯ ಬಾಣ ಐಚ್ಛಿಕ ಅಷ್ಟೇ.

ಹೀಗಾಗಿ ಬುದ್ಧಿವಂತರು ಎರಡನೆಯ ಬಾಣವನ್ನು ತಪ್ಪಿಸಿಕೊಳ್ಳುತ್ತಾರೆ. ಸಂಕಟ ಅನಿವಾರ್ಯ, ನೋವು ತಾತ್ಕಾಲಿಕ ಅನ್ನುವುದನ್ನು ಅರ್ಥ ಮಾಡಿಕೊಂಡು ಕಡ್ಡಿಯನ್ನು ಗುಡ್ಡವಾಗಿಸಲು ಹೋಗುವುದಿಲ್ಲ. ತಮ್ಮನ್ನು ತಾವೇ ದೂಷಿಸಿಕೊಳ್ಳುವುದಿಲ್ಲ, ತಮ್ಮ ಸ್ಥಿತಿಗಾಗಿ ಬೇರೆಯವರನ್ನು ದೂರುವುದಿಲ್ಲ. ಆದರೆ ಮೂರ್ಖರು ಎರಡನೇ ಬಾಣವನ್ನು ಚುಚ್ಚಿಸಿಕೊಳ್ಳದೇ ಬಿಡುವುದಿಲ್ಲ.

ಹಾಗಾಗಿ ಬರುವ ಸಂಕಷ್ಟಗಳನ್ನು ಪ್ರಶಾಂತ ಮನಸ್ಸಿನಿಂದ ಸ್ವೀಕರಿಸಬೇಕು. ಸಮಸ್ಯೆ ಬಂದ ಮೇಲೆ ಅದನ್ನು ಹೇಗೆ ಪರಿಹರಿಸಿಕೊಳ್ಳಬೇಕು ಎನ್ನುವುದನ್ನು ಆಲೋಚಿಸಬೇಕು. ಉದಾಹರಣೆಗೆ ಹಣಕಾಸಿನ ಸಮಸ್ಯೆಯಾದರೆ, ಸಾಲ ಜಾಸ್ತಿಯಾದರೆ ನಮ್ಮ ಅನವಶ್ಯಕ ಖರ್ಚುಗಳನ್ನು ಕಡಿಮೆ ಮಾಡಿಕೊಂಡು ಮತ್ತಷ್ಟು ಕಷ್ಟಪಟ್ಟು ದುಡಿದು ನಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕು. ಲೋಕದ ಕಣ್ಣಿಗೆ ಮೆಚ್ಚಿಗೆಯಾಗುವಂತೆ ಬದುಕುವುದನ್ನು ಬಿಟ್ಟು ನಮ್ಮ ಆದಾಯಕ್ಕೆ ಅನುಗುಣವಾಗಿ ಬದುಕಬೇಕು. ಅದನ್ನು ಬಿಟ್ಟು ತನಗೇ ಕಷ್ಟ ಬಂದಿತೆಂದು ಮರುಗುತ್ತ ಕುಳಿತರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಕೆಲವರು ಕೆಟ್ಟ ನಿರ್ಧಾರಗಳನ್ನೂ ತೆಗೆದುಕೊಂಡು ಬಿಡುತ್ತಾರೆ. ಹಾಗಾಗಿ ಮೊದಲ ಬಾಣದ ಗಾಯವನ್ನು ಜಾಗರೂಕತೆಯಿಂದ ವಾಸಿ ಮಾಡಿಕೊಳ್ಳುವುದರಲ್ಲಿಯೇ ಜಾಣತನವಿದೆ. ❖

ಗುಂಡಣ್ಣ

ಪದಬಂಧ 6262

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆರ್ಥಿಕ ನೆರವು (5)
3.ಕಾಸಿದ್ರೆ ಮಾತ್ರವೇ ಶಿವನ ನೆಲೆ! (3)
5.ಯಾವುದೇ ಅಪರಾಧವನ್ನು ಮಾಡದಿರುವವನು (5)
8.ಲಿಂಗ ವಚನ ವಿಭಕ್ತಿಗಳಿಗಾಗಿ ರೂಪ ಭೇದ ಹೊಂದದ ಶಬ್ದ (3)
9.ವನದ ಕೊನೆಗೆ ನಡೆಸಿದ ನವಬಾಳು (5)
12.ಅಳುತ್ತಲೇ ಹಿಸುಕಿದ್ದು ಬೆಂದಕ್ಕಿ ಕಾಳು (3)
13.ಈತ ಮಂದಿಗೆಲ್ಲಾ ಒಡೆಯ (5)
16.ನಿಜವಾಗಿಯೂ ಈತ ಕಾಂತಿಹೀನನಾದವನು! (3)
17.ಒಂದುಗೂಡಿಸುವುದನ್ನು ಹೀಗೂ ಹೇಳಬಹುದು (5)

ಮೇಲಿಂದ ಕೆಳಕ್ಕೆ

1.ರಕ್ತ ಹರಿಯುವ ನಾಳ (3)
2.ಸರಸದ ಮಾತುಕತೆ (3)
4.ಮಯನ ಬಳಿ ಕಳೆದ ಕಾಲ (3)
6.ಈಕೆ ಮನ್ಮಥನ ಪತ್ನಿ (2)
7.ಸಾಕ್ಷರನ ಹತ್ತಿರ ಅಸುರನಿದ್ದಾನಲ್ಲಾ! (3)
8.ಆಹಾರವನ್ನು ಹೀಗೂ ಹೇಳುವರು (3)
9.ನಾಭಿ ಇಲ್ಲಿ ಕಾಣುತ್ತಿದೆ (3)
10.ವನದಲ್ಲಿ ಕಾಣುತ್ತಿರುವ ಮುಖ (3)
11.ಹೆದರಿಕೆ ಹೀಗೆ ಬಂದಿದೆ (2)
12.ಅವನಿರುವ ಭೂಮಿಯಿದು (3)
14.ನಾಕದಲ್ಲಿ ತೂರಿಸಿರುವ ಮೂಗು (3)
15.ಕಣದಲ್ಲಿ ಆಗಿರುವ ಮದುವೆ (3)



6261ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವರ್ತಕ 5.ಕರ್ಣ 6.ನಿಕೇತನ 7.ಕಮಲಾಹಂಪನಾ 9.ಸ್ವರ 10.ಅಂಬು 11.ಕಪೋಲಕಲ್ಪಿತ 14.ತಂಗದಿರ 15.ತಲ 16.ರಸಿಕ

ಮೇಲಿಂದ ಕೆಳಕ್ಕೆ: 1.ವರ್ಣಸಂಕರ 2.ಕಣಿಕ್ಷಲಾ 3.ಕಕೇರಿನಾ 4.ಜನಕ 8.ಹಂಬಲ 10.ಅಂತಕಾಂತಕ 11.ಕೆನ್ನೈದಿಲು 12.ಕಡವರ 13.ಸ್ವಾತಂತ್ರ್ಯ

ಸುಡೊಕು 6646

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6		4				7		8
		5		7	1		4	
1	3			4				6
		1				9		7
			3	9	7			4
7		9				8		
5				6		4		
4					3		2	1
	6	2		8	4			5

6645 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

23 ಡಿಸೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ತೃತೀಯ ಗಂ 12-13 **ನಕ್ಷತ್ರ:** ಶ್ರವಣ ಅಹೋರಾತ್ರ **ಯೋಗ:** ವ್ಯಾಘಾತ ಗಂ. 16-30 **ಕರಣ:** ಗರ ಗಂ. 12-13 ಧನು ಮಾಸದ 08 ನೇ ದಿನ. ಮಳೆ ನಕ್ಷತ್ರ : ಮೂಲ 3 ನೇ ಪಾದ. ಮಧ್ಯಾಹ್ನ 03-00 - 04-30, **ಸೂರ್ಯೋದಯ :** 06-53 ಸೂರ್ಯಾಸ್ತ : 06-06, ಮುಸ್ಲಿಂ ದಿನಾಂಕ : 03 ರಜಬ್, **ಅದೃಷ್ಟ ಸಂಖ್ಯೆ :** 7, 12

ಮೇಷ: ಗೃಹದಲ್ಲಿ ಸಂಭ್ರಮದ ಸಮಾರಂಭದಿಂದ ಅಥವಾ ವೃಥಾ ತಿರುಗಾಟದಿಂದಾಗಿ ಖರ್ಚು ಹೆಚ್ಚಾಗಲಿದೆ. ಪೆಟ್ರೋಲಿಯಂ ಉತ್ಪನ್ನಗಳಿಂದ ಹೆಚ್ಚಿನ ಆದಾಯವಿದೆ. ನೌಕರರಿಗೆ ಅನುಕೂಲ ವಾತಾವರಣ ಸಿಗಲಿದೆ.

ವೃಷಭ: ಹಿಂದಿನ ಸೋಲು ಬಾಧಿಸುತ್ತಿದ್ದರೂ ಹೊಸತನದಲ್ಲಿ ಜಯ ಕಾಣುವಿರಿ. ಆಫೀಸಿನ ಕೆಲಸಗಳಿಗೆ ದೂರದ ಪ್ರಯಾಣ ಲಾಭದಾಯಕ. ವಿದ್ಯಾರ್ಥಿಗಳ ಮನೋಕಾಮನೆಗಳು ಪೂರ್ಣಗೊಳ್ಳಲಿವೆ.

ಮಿಥುನ: ದೇವತಾ ಕೃಪೆಯಿಂದ ಕೆಲಸಗಳನ್ನೂ ಲಾಭಮಯವಾಗಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಬುದ್ಧಿವಂತಿಕೆಯನ್ನೂ ಉಪಯೋಗಿಸಿ. ಚಿಂತೆ ಮತ್ತು ಭಯ ಇವೆರಡನ್ನೂ ದೂರ ಮಾಡಿಕೊಳ್ಳುವ ಬಗ್ಗೆ ಪ್ರಯತ್ನಿಸಿ.

ಕರ್ಕಾಟಕ: ಸ್ವಲ್ಪ ಜಾಗ್ರತೆ ವಹಿಸಿದಲ್ಲಿ ಕೈಗೊಂಡ ಪೂರ್ವನಿಯೋಜಿತ ಕಾರ್ಯಗಳೆಲ್ಲಾ ಉತ್ತಮ ರೀತಿಯಲ್ಲಿ ನಡೆಯಲಿವೆ. ಕಾರ್ಯಕ್ಷೇತ್ರದಲ್ಲಿ ಶಾಂತಚಿತ್ತದಿಂದ ವ್ಯವಹರಿಸಿದರೆ ಹಾದಿ ಸುಗಮ.

ಸಿಂಹ: ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲು ಕಾದು ನೋಡುವ ತಂತ್ರ ಅನುಸರಿಸಿ. ವಾಹನ ಮಾರಾಟದಿಂದ ಉತ್ತಮ ಆದಾಯ. ಸಾಧನೆ ಹಾಗೂ ಅಭಿವೃದ್ಧಿ ಸಾಧಿಸುವ ದಿನ ಎನಿಸಲಿದೆ.

ಕನ್ಯಾ: ಯಾವುದೇ ವಿಷಯವನ್ನು ಸೋಮಾರಿತನದಿಂದಾಗಲೀ, ಆರ್ಥಿಕ ಸಮಸ್ಯೆಯಿಂದಾಗಲೀ ಮುಂದೂಡುವುದು ಸರಿಯಲ್ಲ. ಹಿರಿಯರ ಮಧ್ಯಸ್ಥಿಕೆಯಿಂದ ಭೂವಿವಾದ ಬಗೆಹರಿಯುವುದು. ಸಂತಸದ ಸುದ್ದಿ ಕೇಳಿ ಬರುವುದು.

ತುಲಾ: ಬೆಳ್ಳಗೆ ಇರುವುದೆಲ್ಲವೂ ಹಾಲು ಎಂದು ನಂಬುವ ನಿಮ್ಮ ಮನೋಧರ್ಮದಿಂದ ಈ ದಿನ ಮೋಸ ಹೋಗುವಿರಿ. ಕರ್ತವ್ಯ ದೃಷ್ಟಿಯಿಂದ ವೃತ್ತಿಕ್ಷೇತ್ರದಲ್ಲಿ ಒಂದೇ ಮನಸ್ಸಿನಲ್ಲಿ ದುಡಿದರೆ ಸಮಾಧಾನ ಹೆಚ್ಚುತ್ತದೆ.

ವೃಶ್ಚಿಕ: ಟೆಕ್ಸ್‌ಟೈಲ್ ಉದ್ಯಮದವರಿಗೆ ರಫ್ತು ವ್ಯಾಪಾರಗಳಿಂದ ಬಹಳಷ್ಟು ಹಣ ಹಾಗೂ ವ್ಯಾಪಾರಗಳ ಲಾಭವನ್ನು ಹೊಂದುವರು. ಎಲ್ಲಾ ಕೆಲಸಗಳಿಗೂ ಕುಟುಂಬ ವರ್ಗದವರ ಬೆಂಬಲವಿರಲಿದೆ.

ಧನು: ಬಹಳ ದಿನಗಳ ನಂತರದ ಸಹೋದರಿಯ ಆಗಮನ ತಂದೆ-ತಾಯಿಯ ಸಂತೋಷಕ್ಕೆ ಕಾರಣವಾಗುತ್ತದೆ. ಪೊಲೀಸ್ ಅಧಿಕಾರಿಗಳು ವರ್ಗಾವಣೆಗಾಗಿ ಮಾಡಿದ ಭಾರಿ ಪ್ರಯತ್ನ ವ್ಯರ್ಥವಾಗುವುದು.

ಮಕರ: ಉದ್ಯೋಗ ಬದಲಿಸುವ ವಿಚಾರದಲ್ಲಿ ಚೆನ್ನಾಗಿ ಯೋಚಿಸುವುದು ಉತ್ತಮ. ಔದ್ಯೋಗಿಕ ವ್ಯವಹಾರದಲ್ಲಿ ನಿರೀಕ್ಷೆಗೆ ತಕ್ಕ ಅಥವಾ ಅದಕ್ಕೂ ಮಿಗಿಲಾದ ಫಲಗಳು ದೊರೆತು ನೆಮ್ಮದಿ ಕಾಣುವಂತಾಗುವುದು.

ಕುಂಭ: ಇನ್ನೊಬ್ಬರಿಗೆ ನೋವಿಗೆ ಸಮಾಧಾನ ಹೇಳುವ ಅಥವಾ ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಿ. ನಿರೀಕ್ಷೆಗೂ ಮೀರಿದ ಫಲಿತಾಂಶ ಕಾಣುವಿರಿ.

ಮೀನ: ನೂತನ ಸ್ನೇಹಿತನಿಂದ ಅಥವಾ ಅಪರಿಚಿತರ ವ್ಯಕ್ತಿಯ ಸಹಕಾರದಿಂದ ನಿಮ್ಮ ಕಾರ್ಯ ವ್ಯವಸ್ಥಿತವಾಗಿ ನಡೆಯಲಿದೆ. ಸಹೋದ್ಯೋಗಿಗಳ ಸಂಯಮದ ವರ್ತನೆಯಿಂದ ಅನುಕೂಲ. ಹೆಚ್ಚುವರಿ ಆದಾಯದಿಂದ ಹುಮ್ಮಸ್ಸು ಹೆಚ್ಚಲಿದೆ.

ಷೇರುಪೇಟೆ ವಹಿವಾಟು: ಹಿಂದಿನ ಅಂತ್ಯ 84,929 | 638 | ಇಂದಿನ ಅಂತ್ಯ 85,567 (10:00, 12:00, 14:00, 16:00)

ಎನ್‌ಎಸ್‌ಇ ನಿಫ್ಟಿ: ಹಿಂದಿನ ಅಂತ್ಯ: 25,966; ಇಂದಿನ ಅಂತ್ಯ: 26,172; ದಿನದ ಗಳಿಕೆ: 206

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು: 100 ಕ್ಕೆ ₹705; 12 ಕ್ಕೆ ₹96; ಮೈಸೂರು: 100 ಕ್ಕೆ ₹706

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ): ಆರ್‌ಎಸ್‌ಎಸ್-4 ₹179.50; ಆರ್‌ಎಸ್‌ಎಸ್-5 ₹176.50; ಗುಡ್ ಲಾಟ್ ₹162.50

ರಾಮನಗರ ರೇಷ್ಮೆಗೂಡು: ಮಿಶ್ರತಳಿ(ಕೆ.ಜಿ) ₹272-772; ದ್ವಿತಳಿ (ಕೆ.ಜಿ) ₹333-910

ಮುದ್ರಮನ ಕಾಫಿ: ಎಪಿ ₹26500; ಎಸಿ ₹14840; ಆರ್‌ಪಿ ₹16500; ಆರ್‌ಸಿ ₹9300

ಮುಂಬೈ ಖಾದ್ಯ ತೈಲ (10 ಕೆ.ಜಿ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ): ಶೇಂಗಾ (ರಿಫೈನ್ಡ್) ₹1570 (1575); ಸೋಯಾ (ರಿಫೈನ್ಡ್) ₹1270 (1260); ಸೂರ್ಯಕಾಂತಿ (ರಿಫೈನ್ಡ್) ₹1485 (1475); ಪಾಮೋಲಿನ್ ₹1245 (1235)

ಮುಂಬೈ ಧಾರಣೆ (ಕ್ವಿಂಟಲ್) 22-12-2025

ಜವಾರ 70/80(ಹೊಸ)	10700-10800
ಜವಾರ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆ.ಜಿ)	
ಕಚ್ಚಾ (ತೆಗರಿ ಬೀಜ)	1580 (1565)
ಒಂದು ವಾರದ ಡೆಲಿವರಿ	1575 (1580)
ಘಾಟ್ ವಾರದ ಡೆಲಿವರಿ	1243 (1233)
ಸೂರ್ಯಕಾಂತಿ ಎಣ್ಣೆ ಕಚ್ಚಾ	1420 (1410)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸಹಿತ)	
ಅಪರಂಜಿ ಚಿನ್ನ 10 ಗ್ರಾಂ	1,33,800 (1,31,500)
ಬೆಳ್ಳಿ ಕೆ.ಜಿ	2,07,800 (2,03,250)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1400-2800
ಮಧ್ಯಮ	₹1000-1400
ಸಣ್ಣ	₹200-1000

ನ್ಯೂಜಿಲೆಂಡ್ ಜೊತೆ ಎಫ್‌ಟಿಎ ಅಂತಿಮ

ಭಾರತ– ನ್ಯೂಜಿಲೆಂಡ್ ಪ್ರಧಾನ ಮಂತ್ರಿಗಳ ನಡುವೆ ಮಾತುಕತೆ ನಂತರ ಘೋಷಣೆ

ನವದೆಹಲಿ (ಪಿಟಿಐ): ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆಗಳು ಪೂರ್ಣಗೊಂಡಿವೆ ಎಂದು ಭಾರತ ಮತ್ತು ನ್ಯೂಜಿಲೆಂಡ್ ಸೋಮವಾರ ಘೋಷಿಸಿವೆ.

ಈ ಒಪ್ಪಂದದ ಪರಿಣಾಮವಾಗಿ ಎರಡೂ ದೇಶಗಳ ನಡುವಿನ ವ್ಯಾಪಾರದ ಮೊತ್ತವು (ಸರಕು ಮತ್ತು ಸೇವೆಗಳನ್ನು ಪರಿಗಣಿಸಿ) ಐದು ವರ್ಷಗಳಲ್ಲಿ 5 ಬಿಲಿಯನ್ ಅಮೆರಿಕನ್ ಡಾಲರ್‌ಗೆ (ಸುಮಾರು ₹44.18 ಸಾವಿರ ಕೋಟಿ) ಹೆಚ್ಚಲಿದೆ ಎಂದು ಅಂದಾಜು ಮಾಡಲಾಗಿದೆ.

ಕಿವಿ ಹಣ್ಣು, ವೈನ್, ಕೆಲವು ಬಗೆಯ ಸಮುದ್ರ ಆಹಾರ ಉತ್ಪನ್ನಗಳು, ಚೆರ್ರಿ, ಬೆಣ್ಣೆಹಣ್ಣು, ಪರ್ಸಿಮ್ಮಾನ್ ಹಣ್ಣುಗಳನ್ನು ಭಾರತದ ಮಾರುಕಟ್ಟೆಗೆ ರವಾನಿಸುವಾಗ ನ್ಯೂಜಿಲೆಂಡ್‌ಗೆ ಸುಂಕ ವಿನಾಯಿತಿ ಸಿಗಲಿದೆ.

ನ್ಯೂಜಿಲೆಂಡ್ ಜೊತೆಗಿನ ಎಫ್‌ಟಿಎ ದೇಶಿ ತಯಾರಿಕಾ ವಲಯಕ್ಕೆ ಉತ್ತೇಜನ ನೀಡಲಿದೆ, ಉದ್ಯೋಗ ಸೃಷ್ಟಿಗೆ ಕಾರಣವಾಗಲಿದೆ
ಪೀಯೂಷ್ ಗೋಯಲ್, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

ಒಪ್ಪಂದದ ಪ್ರಮುಖ ಅಂಶಗಳು

- ಭಾರತದಿಂದ ನ್ಯೂಜಿಲೆಂಡ್‌ಗೆ ಆಗುವ ಎಲ್ಲ ರಫ್ತುಗಳು ಸುಂಕರಹಿತವಾಗಿ ಅಲ್ಲಿನ ಮಾರುಕಟ್ಟೆ ಪ್ರವೇಶಿಸಲಿವೆ
- ಇದರಿಂದಾಗಿ ಕಾರ್ಮಿಕರ ಶ್ರಮ ಹೆಚ್ಚಿನ ಮಟ್ಟದಲ್ಲಿ ಅಗತ್ಯವಿರುವ ಭಾರತದ ಜವಳಿ, ಸಿದ್ಧಉಡುಪು, ಚರ್ಮ, ಪಾದರಕ್ಷೆ, ಸಮುದ್ರ ಉತ್ಪನ್ನಗಳು, ಮುತ್ತು ಮತ್ತು ಆಭರಣ, ಕರಕುಶಲ ವಸ್ತುಗಳು, ಎಂಜಿನಿಯರಿಂಗ್ ಸರಕುಗಳು ಮತ್ತು ಆಟೊಮೊಬೈಲ್ ಉತ್ಪನ್ನಗಳು ನ್ಯೂಜಿಲೆಂಡ್ ಮಾರುಕಟ್ಟೆಯಲ್ಲಿ ಹೆಚ್ಚು ಸ್ಪರ್ಧಾತ್ಮಕವಾಗಲಿವೆ
- ಮುಂದಿನ 15 ವರ್ಷಗಳಲ್ಲಿ ಭಾರತದಲ್ಲಿ 20 ಬಿಲಿಯನ್ ಡಾಲರ್ (ಅಂದಾಜು ₹1.79 ಲಕ್ಷ ಕೋಟಿ) ಹೂಡಿಕೆ ಮಾಡುವ ಬದ್ಧತೆಯನ್ನು ನ್ಯೂಜಿಲೆಂಡ್ ವ್ಯಕ್ತಪಡಿಸಿದೆ
- ಮರದ ದಿಮ್ಮಿ, ಕೋಕಿಂಗ್ ಕಲ್ಲಿದ್ದಲು, ಲೋಹದ ತ್ಯಾಜ್ಯವನ್ನು ಭಾರತಕ್ಕೆ ಸುಂಕರಹಿತವಾಗಿ ಆಮದು ಮಾಡಿಕೊಳ್ಳಲು ಅವಕಾಶ

ದೇಶದ ರೈತರು ಹಾಗೂ ಎಂಎಸ್‌ಎಂಇ ವಲಯವನ್ನು ರಕ್ಷಿಸುವ ಉದ್ದೇಶದಿಂದ ಹಾಲಿನ ಉತ್ಪನ್ನಗಳ ವಲಯದ ಯಾವುದೇ ಉತ್ಪನ್ನಕ್ಕೆ ಸುಂಕ ರಹಿತ ಪ್ರವೇಶ ನೀಡಲು ಭಾರತ ಒಪ್ಪಿಲ್ಲ. ಹಾಲಿನ ಉತ್ಪನ್ನಗಳ ವಲಯವು ಭಾರತದಲ್ಲಿ ರಾಜಕೀಯವಾಗಿ ಸೂಕ್ಷ್ಮ ಕೂಡ ಹೌದು.

ಪ್ರತಿ ವರ್ಷ ಭಾರತದ ಐದು ಸಾವಿರ ಕುಶಲ ನೌಕರರಿಗೆ ನ್ಯೂಜಿಲೆಂಡ್ ತಾತ್ಕಾಲಿಕ ನೌಕರಿ ವೀಸಾ ನೀಡಲಿದೆ. ಇದಕ್ಕೆ ಮೂರು ವರ್ಷಗಳ ಮಾನ್ಯತೆ ಇರುತ್ತದೆ. ಆಯುಷ್ ವೈದ್ಯರು, ಯೋಗ ತರಬೇತುದಾರರು, ಬಾಣಸಿಗರು, ಸಂಗೀತ ಶಿಕ್ಷಕರು, ಐ.ಟಿ, ಎಂಜಿನಿಯರಿಂಗ್, ಆರೋಗ್ಯಸೇವೆ, ಶಿಕ್ಷಣ, ಕಟ್ಟಡ ನಿರ್ಮಾಣ ವಲಯದ ನೌಕರರಿಗೆ ಇದು ಪ್ರಯೋಜನ ನೀಡಲಿದೆ.

ಒಪ್ಪಂದಕ್ಕೆ ಮಾತುಕತೆ ಆರಂಭವಾದ ಒಂಬತ್ತು ತಿಂಗಳಲ್ಲಿ ಸಹಿ ಬೀಳುವ ನಿರೀಕ್ಷೆ ಇದೆ.

ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಅವರು ದೂರವಾಣಿ ಮೂಲಕ ಮಾತುಕತೆ ನಡೆಸಿದರು. ಇದಾದ ನಂತರದಲ್ಲಿ ಎಫ್‌ಟಿಎ ಕುರಿತ ಘೋಷಣೆಯನ್ನು ಮಾಡಲಾಯಿತು.

ಸುದ್ದಿ 2 ನಿಮಿಷ

ಬೆಳ್ಳಿ ದರ ₹10,400 ಜಿಗಿತ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು ₹1,685 ಹೆಚ್ಚಳವಾಗಿ, ₹1,38,200ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹10,400ರಷ್ಟು ಜಿಗಿತವಾಗಿ, ₹2,14,500ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಇದೇ ಡಿಸೆಂಬರ್ 2ರಂದು 10 ಗ್ರಾಂ ಚಿನ್ನದ ಬೆಲೆ ₹1,31,530 ಇತ್ತು. ಕೆ.ಜಿ ಬೆಳ್ಳಿ ಧಾರಣೆ ₹1,81,360ರಷ್ಟಿತ್ತು. ಡಿಸೆಂಬರ್ 22ರ ವೇಳೆಗೆ ಚಿನ್ನದ ದರದಲ್ಲಿ ₹6,670 ಏರಿಕೆಯಾಗಿದ್ದರೆ, ಬೆಳ್ಳಿ ದರದಲ್ಲಿ ₹33,140 ಜಿಗಿತವಾಗಿದೆ.

ದರ ಏರಿಕೆಗೆ ಕಾರಣವೇನು?: ಅಮೆರಿಕದಲ್ಲಿ ಬಡ್ಡಿ ದರ ಇಳಿಕೆ ಮತ್ತು ಆರ್ಥಿಕ ಅನಿಶ್ಚಿತತೆಯು ಹೆಚ್ಚುತ್ತಿರುವುದರಿಂದ ಹೂಡಿಕೆದಾರರು ಚಿನ್ನ ಮತ್ತು ಬೆಳ್ಳಿಯ ಕಡೆ ಒಲವು ತೋರಿದ್ದಾರೆ. ಇದೇ ಬೆಲೆ ಏರಿಕೆಗೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸೌಮಿಲ್ ಗಾಂಧಿ ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ರಾಜಕೀಯ ಬಿಕ್ಕಟ್ಟಿನಿಂದ ಸುರಕ್ಷಿತ ಹೂಡಿಕೆಯತ್ತ ಹೂಡಿಕೆ ಮಾಡಲು ಮುಂದಾಗಿದ್ದಾರೆ. ಇದು ಕೂಡ ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ಹೇಳಿದ್ದಾರೆ.

ಬೆಳ್ಳಿ ಗಣಿಗಾರಿಕೆಯಲ್ಲಿ ಅಡಚಣೆ ಉಂಟಾಗಿರುವುದು, ಪ್ರಸ್ತುತ ಬೆಳ್ಳಿ ದಾಸ್ತಾನು ಸೀಮಿತವಾಗಿರುವುದರಿಂದ ಪೂರೈಕೆಯಲ್ಲಿ ಕೊರತೆ ಉಂಟಾಗಿದೆ. ಜೊತೆಗೆ ಕೈಗಾರಿಕೆಗಳಲ್ಲಿ ಬೆಳ್ಳಿಗೆ ಹೆಚ್ಚಿದ ಬೇಡಿಕೆ, ಬೆಳ್ಳಿಯಲ್ಲಿ ಹೆಚ್ಚುತ್ತಿರುವ ಹೂಡಿಕೆಯು ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸೆನ್ಸೆಕ್ಸ್ 638 ಅಂಶ ಏರಿಕೆ

ಮುಂಬೈ (ಪಿಟಿಐ): ಮಾಹಿತಿ ತಂತ್ರಜ್ಞಾನ, ವಾಹನ ಮತ್ತು ಲೋಹ ವಲಯದ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 638 ಅಂಶ ಏರಿಕೆಯಾಗಿ, 85,567ಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 206 ಅಂಶ ಹೆಚ್ಚಳವಾಗಿ 26,172ಕ್ಕೆ ಅಂತ್ಯಗೊಂಡಿದೆ.

'ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಮತ್ತೆ ಇಳಿಕೆ ಮಾಡುವ ನಿರೀಕ್ಷೆ ಮತ್ತು ವಿದೇಶಿ ಬಂಡವಾಳದ ಒಳಹರಿವು ದೇಶದ ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ಕಾರಣವಾಗಿವೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರದ ವಹಿವಾಟಿನಲ್ಲಿ ₹1,830 ಕೋಟಿ ಮತ್ತು ದೇಶಿ ಸಾಂಸ್ಥಿಕ ಹೂಡಿಕೆದಾರರು ₹5,722 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.86ರಷ್ಟು ಏರಿಕೆಯಾಗಿದೆ. ಪ್ರತೀ ಬ್ಯಾರಲ್ ದರವು 60.99 ಡಾಲರ್ ಆಗಿದೆ.

ಮೂಲಸೌಕರ್ಯ ವಲಯದ ಪ್ರಗತಿ ಏರಿಕೆ

ನವದೆಹಲಿ (ಪಿಟಿಐ): ದೇಶದ ಎಂಟು ಪ್ರಮುಖ ಮೂಲಸೌಕರ್ಯ ವಲಯಗಳ ಬೆಳವಣಿಗೆ ನವೆಂಬರ್ ತಿಂಗಳಿನಲ್ಲಿ ಶೇ 1.8ರಷ್ಟು ದಾಖಲಾಗಿದೆ.

ಕಳೆದ ವರ್ಷದ ಇದೇ ತಿಂಗಳಿನಲ್ಲಿ ಬೆಳವಣಿಗೆಯು ಶೇ 5.8ರಷ್ಟು ದಾಖಲಾಗಿತ್ತು. ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಿಸಿದ ಉತ್ಪನ್ನಗಳು ಮತ್ತು ವಿದ್ಯುತ್ ಉತ್ಪಾದನೆಯಲ್ಲಿ ಇಳಿಕೆ ಆಗಿದೆ. ಇದರಿಂದ ಪ್ರಸಕ್ತ ನವೆಂಬರ್ ತಿಂಗಳಿನಲ್ಲಿ ಪ್ರಗತಿ ಮಂದಗೊಂಡಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ತಿಳಿಸಿದೆ.

ಆದರೆ, ಈ ವರ್ಷದ ಅಕ್ಟೋಬರ್‌ನಲ್ಲಿ ಬೆಳವಣಿಗೆಯ ಪ್ರಮಾಣ ಶೇ (–) 0.1ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ ನವೆಂಬರ್‌ನಲ್ಲಿ ಏರಿಕೆಯಾಗಿದೆ ಎಂದು ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ನವೆಂಬರ್ ತಿಂಗಳಿನಲ್ಲಿ ಈ ವಲಯದ ಬೆಳವಣಿಗೆ ಶೇ 2.4ರಷ್ಟು ದಾಖಲಾಗಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಈ ಪ್ರಮಾಣ ಶೇ 4.4ರಷ್ಟಿತ್ತು.

ರಷ್ಯಾ ಲೆಫ್ಟಿನೆಂಟ್ ಜನರಲ್ ಹತ್ಯೆ

ಮಾಸ್ಕೊ (ಎಪಿ): ಕಾರಿನಲ್ಲಿ ಬಾಂಬ್ ಸ್ಫೋಟಗೊಂಡು ರಷ್ಯಾದ ಲೆಫ್ಟಿನೆಂಟ್ ಜನರಲ್ ಫಾನಿಲ್ ಸರ್ವೋವ್ ಅವರು ಸೋಮವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ. ದಾಳಿಯ ಹಿಂದೆ ಉಕ್ರೇನ್ ಕೈವಾಡವಿರಬಹುದು. ವರ್ಷದಲ್ಲಿ ಮೂರನೇ ಬಾರಿಗೆ ರಷ್ಯಾ ಸೇನೆಯ ಹಿರಿಯ ಅಧಿಕಾರಿಗಳನ್ನು ಹತ್ಯೆಗೈದಿರುವ ಪ್ರಕರಣ ಇದಾಗಿದೆ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ.

'ಸರ್ವೋವ್ ಅವರು ರಷ್ಯಾ ಸೇನಾಪಡೆಯ ಕಾರ್ಯಾಚರಣೆ ತರಬೇತಿ ನಿರ್ದೇಶನಾಲಯದ ಮುಖ್ಯಸ್ಥರಾಗಿದ್ದರು. ಹತ್ಯೆಯ ಕುರಿತು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಲಾಗುತ್ತಿದೆ' ಎಂದು ಅಪರಾಧ ತನಿಖಾ ದಳದ ವಕ್ತಾರರೊಬ್ಬರು ತಿಳಿಸಿದರು. ಹತ್ಯೆಯ ಕುರಿತು ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ಮಾಹಿತಿ ನೀಡಲಾಗಿದೆ ಎಂದು ಪ್ರಧಾನಿಗಳ ಕಾರ್ಯಾಲಯದ ವಕ್ತಾರರು ತಿಳಿಸಿದರು.

‘ಮಂಥನ್’ 18ನೇ ಆವೃತ್ತಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಆರ್ಥಿಕ ವ್ಯವಸ್ಥೆಯನ್ನು ಸದೃಢಗೊಳಿಸಲು ಕಾಲೇಜು ಶಿಕ್ಷಣ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ಉದ್ಯಮದ ಬಗ್ಗೆ ಅರಿವು ನೀಡಿ, ಅವರನ್ನು ಉದ್ಯಮಿಗಳಾಗಿ ರೂಪಿಸುವ ಅಗತ್ಯವಿದೆ’ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು (ಎಫ್‌ಕೆಸಿಸಿಐ) ಉನ್ನತ ಶಿಕ್ಷಣ ಇಲಾಖೆ ಮತ್ತು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಏರ್ಪಡಿಸಿದ್ದ ‘ಎಫ್‌ಕೆಸಿಸಿಐನ ಇನ್ನೊ ಮಂಥನ್’ 18ನೇ ಆವೃತ್ತಿಗೆ ಅವರು ಸೋಮವಾರ ಚಾಲನೆ ನೀಡಿದರು.

‘ಮಂಥನ್’ ಕಾರ್ಯಕ್ರಮದ ಪ್ರಯೋಜನವು ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೂ ಲಭಿಸಬೇಕು ಎನ್ನುವ ಆಶಯದಿಂದ ರಾಜ್ಯ ಸರ್ಕಾರವು ಇದೇ ಮೊದಲ ಬಾರಿಗೆ ಎಫ್‌ಕೆಸಿಸಿಐ ಜೊತೆ ಸಹಯೋಗ ಮಾಡಿಕೊಂಡಿದೆ. ವಿದ್ಯಾರ್ಥಿಗಳು ತಮ್ಮ ಬಳಿ ಇರುವ ಉದ್ಯಮದ ಯೋಜನೆಯನ್ನು ಇದರಲ್ಲಿ ಪ್ರಸ್ತುತಪಡಿಸಬಹುದು. ಉತ್ತಮ ಯೋಜನೆಗಳಿಗೆ ₹25 ಲಕ್ಷದವರೆಗೆ ಬಹುಮಾನ ನೀಡಲಾಗುವುದು ಎಂದರು.

ಮಂಥನ್–2026ಕ್ಕೆ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಚಾಲನೆ ನೀಡಿದರು. ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ ಮತ್ತು ಇತರರು ಇದ್ದರು

‘ರಾಜ್ಯದ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಯಾವುದೇ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ವಿದ್ಯಾರ್ಥಿಗಳು ತಮ್ಮಲ್ಲಿನ ಹೊಸ ಉದ್ಯಮ ಯೋಜನೆಯನ್ನು ಎಫ್‌ಕೆಸಿಸಿಐ ವೆಬ್‌ಸೈಟ್‌ನಲ್ಲಿ ದಾಖಲಿಸಬೇಕು’ ಎಂದು ‘ಇನ್ನೊ ಮಂಥನ್ 2026’ ಅಧ್ಯಕ್ಷ ಶ್ರವಣ್ ಜಿ. ಹೇಳಿದರು.

ವಿದ್ಯಾರ್ಥಿಗಳು manthan.fkcci.orgಗೆ ಲಾಗಿನ್ ಆಗಿ, 2026ರ ಜನವರಿ 31ರೊಳಗೆ ಹೆಸರು ನೋಂದಣಿ ಮಾಡಿಕೊಳ್ಳಬೇಕು. ಉದ್ಯಮದ ಯೋಜನೆ ಸಲ್ಲಿಸಲು ಏಪ್ರಿಲ್ 8 ಕೊನೆಯ ದಿನ. ವಿದ್ಯಾರ್ಥಿಗಳಿಗೆ ಅಗತ್ಯ ನೆರವು ನೀಡಲಾಗುವುದು ಎಂದರು.

‘ವಿದ್ಯಾರ್ಥಿಗಳು ಪದವಿ ಪಡೆದರಷ್ಟೇ ಸಾಲದು, ಅವರನ್ನು ಯಶಸ್ವಿ ಉದ್ಯಮಿಗಳನ್ನಾಗಿಸುವ ಉದ್ದೇಶವನ್ನು ಹೊಂದಲಾಗಿದೆ. ಮಂಥನ್‌ನಂತಹ ವೇದಿಕೆ ಇದಕ್ಕೆ ಅವಕಾಶ ಕಲ್ಪಿಸುತ್ತಿದೆ’ ಎಂದು ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ ಹೇಳಿದರು.

ಏಥರ್ ಸ್ಕೂಟರ್ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ತಯಾರಿಕಾ ಕಂಪನಿ ಏಥರ್ ಎನರ್ಜಿ ತನ್ನ ಸ್ಕೂಟರ್‌ಗಳ ಬೆಲೆಯನ್ನು ₹3 ಸಾವಿರದವರೆಗೆ ಹೆಚ್ಚಳ ಮಾಡುವುದಾಗಿ ತಿಳಿಸಿದೆ. ಪರಿಷ್ಕೃತ ದರವು ಜನವರಿ 1ರಿಂದ ಜಾರಿಗೆ ಬರಲಿದೆ.

ತಯಾರಿಕೆ ವೆಚ್ಚದಲ್ಲಿನ ಹೆಚ್ಚಳ ಮತ್ತು ರೂಪಾಯಿ ಮೌಲ್ಯದಲ್ಲಿನ ಇಳಿಕೆಯು ಬೆಲೆ ಏರಿಕೆಗೆ ಕಾರಣ ಎಂದು ಕಂಪನಿ ತಿಳಿಸಿದೆ. ಅಲ್ಲದೆ, ಕಚ್ಚಾ ವಸ್ತುಗಳ ಬೆಲೆಯಲ್ಲಿನ ಹೆಚ್ಚಳ, ಜಾಗತಿಕವಾಗಿ ವಿದ್ಯುತ್ ಚಾಲಿತ ವಾಹನಗಳ ಪ್ರಮುಖ ಬಿಡಿಭಾಗಗಳ ಬೆಲೆ ಹೆಚ್ಚಳ ಕೂಡ ದರ ಏರಿಕೆಗೆ ಕಾರಣ ಎಂದು ಹೇಳಿದೆ.

ಕಂಪನಿಯು 450 ಸೀರೀಸ್‌ನ ಸ್ಕೂಟರ್‌ಗಳು ಮತ್ತು ರಿಟ್ಜಾ ಸ್ಕೂಟರ್‌ನ್ನು ಮಾರಾಟ ಮಾಡುತ್ತಿದೆ. ‘ಎಲೆಕ್ಟ್ರಿಕ್ ಡಿಸೆಂಬರ್’ ಯೋಜನೆಯ ಅಂಗವಾಗಿ ಆಯ್ದ ನಗರಗಳಲ್ಲಿ ₹20 ಸಾವಿರದವರೆಗೆ ವಿವಿಧ ಕೊಡುಗೆಗಳನ್ನು ನೀಡುತ್ತಿದೆ.

ಸೋನಿಯಾ, ರಾಹುಲ್‌ಗೆ ನೋಟಿಸ್

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ(ಇ.ಡಿ) ಸಲ್ಲಿಸಿರುವ ಅರ್ಜಿಗೆ ಪ್ರತಿಕ್ರಿಯೆ ನೀಡುವಂತೆ ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಇತರರಿಗೆ ದೆಹಲಿ ಹೈಕೋರ್ಟ್ ಸೋಮವಾರ ನೋಟಿಸ್ ನೀಡಿದೆ.

ಪ್ರಕರಣದ ಕುರಿತು ಇ.ಡಿ ಸಲ್ಲಿಸಿದ್ದ ಆರೋಪ ಪಟ್ಟಿಯನ್ನು ವಿಚಾರಣಾ ನ್ಯಾಯಾಲಯವು ಡಿಸೆಂಬರ್ 16ರಂದು ತಿರಸ್ಕರಿಸಿತ್ತು. ‘ಎಫ್‌ಐಆರ್ ಇಲ್ಲದೆ ಖಾಸಗಿ ದೂರಿನ ಆಧಾರದಲ್ಲಿ ಸಲ್ಲಿಸಿರುವ ಆರೋಪ ಪಟ್ಟಿಯನ್ನು ಪರಿಗಣಿಸಲು ಸಾಧ್ಯವಿಲ್ಲ. ಕಾನೂನಿನಡಿ ಇದಕ್ಕೆ ಅನುಮತಿ ಇಲ್ಲ’ ಎಂದೂ ಹೇಳಿತ್ತು. ಇದನ್ನು ಪ್ರಶ್ನಿಸಿ, ಆದೇಶಕ್ಕೆ ತಡೆ ಕೋರಿ ಇ.ಡಿ ಹೈಕೋರ್ಟ್ ಮೆಟ್ಟಿಲೇರಿದೆ.

ಇ.ಡಿ ಮೇಲ್ಮನವಿಯನ್ನು ನ್ಯಾಯಮೂರ್ತಿ ರವೀಂದ್ರ ದುಡೇಜಾ ಅವರು ಪುರಸ್ಕರಿಸಿ, ಪ್ರಕರಣದ ಮೂಲ ಅರ್ಜಿಯನ್ನೂ ಪರಿಗಣಿಸಿ ಕಾಂಗ್ರೆಸ್ ಮುಖಂಡರಿಗೆ ಪ್ರತಿಕ್ರಿಯೆ ನೀಡಲು ಸೂಚಿಸಿದ್ದಾರೆ. ಜತೆಗೆ ಮುಂದಿನ ವಿಚಾರಣೆಯನ್ನು ಮಾರ್ಚ್ 12ಕ್ಕೆ ನಿಗದಿಪಡಿಸಿದ್ದಾರೆ.

ಅಜ್ಮೀರ್ ದರ್ಗಾ: ಪ್ರಧಾನಿ ಚಾದರ್ ನೀಡದಂತೆ ಅರ್ಜಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಅಜ್ಮೀರ್ ಷರೀಫ್ ದರ್ಗಾಗೆ ‘ಚಾದರ್’ ನೀಡದಂತೆ ತಡೆ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದು ಸಲ್ಲಿಕೆಯಾಗಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ರಜಾಕಾಲದ ಪೀಠದ ಎದುರು ಈ ಅರ್ಜಿಯನ್ನು ಸಲ್ಲಿಸಲಾಗಿದೆ. ಆದರೆ, ನ್ಯಾಯಪೀಠವು, ಅರ್ಜಿಯನ್ನು ಸೋಮವಾರದ ವಿಚಾರಣೆಗೆ ಪಟ್ಟಿಮಾಡಲಾಗದು ಎಂದು ತಿಳಿಸಿದೆ.

ಅರ್ಜಿದಾರ ಜಿತೇಂದ್ರ ಸಿಂಗ್ ಹಾಗೂ ಇತರರ ಪರ ಹಾಜರಾಗಿದ್ದ ವಕೀಲ ವರುಣ್ ಸಿನ್ಹಾ ಅವರಿಗೆ, ವಿಚಾರಣೆ ಬೇಗ ನಡೆಯಬೇಕು ಎಂಬ ಬಯಕೆಯಿದ್ದಲ್ಲಿ ರಿಜಿಸ್ಟ್ರಿಯನ್ನು ಸಂಪರ್ಕಿಸುವಂತೆಯೂ ನ್ಯಾಯಪೀಠ ಸೂಚಿಸಿದೆ.

‘ಮೊಯಿನುದ್ದೀನ್ ಚಿಶ್ತಿ ಅವರ ಅಜ್ಮೀರ್ ಷರೀಫ್ ದರ್ಗಾಕ್ಕೆ ಭಾರತದ ಪ್ರಧಾನಿ ಚಾದರ್ ಕೊಡುವ ಸಂಪ್ರದಾಯವನ್ನು 1947ರಲ್ಲಿ ಪಂಡಿತ್ ಜವಾಹರಲಾಲ್ ನೆಹರೂ ಅವರು ಆರಂಭಿಸಿದರು. ಅದು ಹಾಗೆಯೇ ಮುಂದುವರಿದಿದೆ. ಆದರೆ, ಇದು ಸಂವಿಧಾನ ಅಥವಾ ಕಾನೂನು ಪ್ರಕಾರ ಅನುಸರಿಸಲೇಬೇಕಾದ ನಿಯಮವಲ್ಲ’ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಎಂಜಿನ್ ವೈಫಲ್ಯ: ವಿಮಾನ ತುರ್ತು ಭೂಸ್ಪರ್ಶ

ನವದೆಹಲಿ (ಪಿಟಿಐ): ಮುಂಬೈಗೆ ಹೊರಟಿದ್ದ ಏರ್‌ಇಂಡಿಯಾ ವಿಮಾನವೊಂದು ಎಂಜಿನ್ ವೈಫಲ್ಯದಿಂದಾಗಿ ದೆಹಲಿಯಲ್ಲಿ ಸೋಮವಾರ ತುರ್ತು ಭೂಸ್ಪರ್ಶ ಮಾಡಿದೆ.

335 ಜನರಿದ್ದ ಎಐ887 ವಿಮಾನವು ದೆಹಲಿಯಿಂದ ಹೊರಟು ಸುಮಾರು ಒಂದು ಗಂಟೆ ಹಾರಾಟ ನಡೆಸಿತ್ತು. ತಾಂತ್ರಿಕ ದೋಷ ಕಂಡುಬಂದ ಕಾರಣ ಮತ್ತೆ ದೆಹಲಿಗೆ ಮರಳಿ ಭೂಸ್ಪರ್ಶ ಮಾಡಿತು ಎಂದು ಮೂಲಗಳು ತಿಳಿಸಿವೆ.

‘ವಿಮಾನವು ಸುರಕ್ಷಿತವಾಗಿ ಭೂಸ್ಪರ್ಶ ಮಾಡಿದೆ. ಪ್ರಯಾಣಿಕರು ಮತ್ತು ಸಿಬ್ಬಂದಿಗೆ ಯಾವುದೇ ಅಪಾಯಗಳು ಆಗಿಲ್ಲ’ ಎಂದು ಏರ್ ಇಂಡಿಯಾ ತಿಳಿಸಿದೆ.

ಘಟನೆಯ ಬಗ್ಗೆ ಸಮಗ್ರ ವರದಿ ನೀಡುವಂತೆ ನಾಗರಿಕ ವಿಮಾನಯಾನ ಸಚಿವಾಲಯವು ಏರ್ ಇಂಡಿಯಾಕ್ಕೆ ನಿರ್ದೇಶನ ನೀಡಿದೆ.

ರೈಲು ಟಿಕೆಟ್ ದರ ಹೆಚ್ಚಳ: ಕೇಂದ್ರದ ವಿರುದ್ಧ ಖರ್ಗೆ ವಾಗ್ದಾಳಿ

‘ಲೂಟಿ ಹೊಡೆಯುವ ಅವಕಾಶವನ್ನು ಬಿಡದು’

ನವದೆಹಲಿ (ಪಿಟಿಐ): ಮೋದಿ ಸರ್ಕಾರವು ಜನಸಾಮಾನ್ಯರನ್ನು ಲೂಟಿ ಹೊಡೆಯುವ ಯಾವುದೇ ಅವಕಾಶವನ್ನೂ ಬಿಡುವುದಿಲ್ಲ. ಕೇಂದ್ರ ಸರ್ಕಾರವು ಒಂದೇ ವರ್ಷದಲ್ಲಿ ಎರಡು ಬಾರಿ ರೈಲು ಟಿಕೆಟ್ ದರವನ್ನು ಹೆಚ್ಚಿಸಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ವಾಗ್ದಾಳಿ ನಡೆಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ

ಮೋದಿ ಸರ್ಕಾರದ ಅವಧಿಯಲ್ಲಿ ರೈಲ್ವೆಯು ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂದು ಖರ್ಗೆ ಅವರು ‘ಎಕ್ಸ್’ನಲ್ಲಿ ಸೋಮವಾರ ದೂರಿದ್ದಾರೆ.

‘ಪ್ರತ್ಯೇಕ ರೈಲ್ವೆ ಬಜೆಟ್ ಇಲ್ಲದ ಕಾರಣ ಹೊಣೆಗಾರಿಕೆಯೇ ಮಾಯವಾಗಿದೆ. ಮೋದಿ ನೇತೃತ್ವದ ಸರ್ಕಾರವು ನಕಲಿ ಪ್ರಚಾರದಲ್ಲಿ ಮಗ್ನವಾಗಿದೆ. ಈ ಮಧ್ಯೆ ರೈಲ್ವೆಯು ರೋಗಗ್ರಸ್ತವಾಗಿದೆ’ ಎಂದು ಹೇಳಿದ್ದಾರೆ.

‘2014–23ರವರೆಗಿನ ಎನ್‌ಸಿಆರ್‌ಬಿ ವರದಿ ಪ್ರಕಾರ, ರೈಲು ಅಪಘಾತಗಳಲ್ಲಿ 2.18 ಲಕ್ಷ ಮಂದಿಯ ಸಾವು ಸಂಭವಿಸಿದೆ. ರೈಲು ಸಂಚಾರದಲ್ಲಿ ಸುರಕ್ಷತೆಯೇ ಇಲ್ಲದಂತಾಗಿದೆ. ಜನರ ಜೀವದ ಜೊತೆ ಚೆಲ್ಲಾಟ ಆಡಲಾಗುತ್ತಿದೆ’ ಎಂದು ಹರಿಹಾಯ್ದಿದ್ದಾರೆ.

‘ಕವಚ್ ಯೋಜನೆಯು ಕೇವಲ ಶೇ 3ರಷ್ಟು ಮಾರ್ಗಗಳಿಗೆ ಮತ್ತು ಶೇ 1ಕ್ಕಿಂತ ಕಡಿಮೆ ಲೋಕೊ ಮೋಟೊ ರೈಲುಗಳಿಗೆ ಅನ್ವಯವಾಗುತ್ತಿದೆ. ರೈಲ್ವೆ ಸುರಕ್ಷತೆಯು ಶಬ್ದಾಡಂಬರದ ಭಾಷಣದಲ್ಲಿ ಮಾತ್ರ ಇದೆ’ ಎಂದು ಆರೋಪಿಸಿದ್ದಾರೆ.

ಅಶ್ವಿನಿ ವೈಷ್ಣವ್ ರಾಜೀನಾಮೆಗೆ ಆಗ್ರಹ

ರೈಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ಸೋಮವಾರ ಆಗ್ರಹಿಸಿದೆ.

ಅಶ್ವಿನಿ ವೈಷ್ಣವ್ ಅವರ ಆಡಳಿತಾವಧಿಯಲ್ಲಿ ಇಲಾಖೆಯು ಹದಗೆಡುತ್ತಿದೆ. ರೈಲು ಟಿಕೆಟ್ ದರವನ್ನು ವರ್ಷದಲ್ಲಿ ಎರಡು ಬಾರಿ ಏರಿಕೆ ಮಾಡಲಾಗಿದೆ ಎಂದು ಪಕ್ಷವು ಆರೋಪಿಸಿದೆ.

ಪಕ್ಷದ ಮುಖ್ಯಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ನಾಯಕ ಅಜಯ್ ಕುಮಾರ್, ವೈಷ್ಣವ್ ಅವರು ಜಾಣ್ಮೆಯಿಂದ 1 ಮತ್ತು 2 ಪೈಸೆ ದರ ಏರಿಕೆ ಮಾಡಿದ್ದಾರೆ. ಆದರೆ ಜನಸಾಮಾನ್ಯರ ಮೇಲೆ ₹100–200 ಹೊರೆ ಬೀಳುತ್ತದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಆಡಳಿತಾವಧಿಯಲ್ಲಿ ಕಳೆದ 10 ವರ್ಷಗಳಲ್ಲಿ ರೈಲು ಟಿಕೆಟ್ ದರವು ಶೇ 107ರಷ್ಟು ಹೆಚ್ಚಾಗಿದೆ. ಹೀಗಾಗಿ ರೈಲುಗಳಲ್ಲಿ ಜನಸಾಮಾನ್ಯರ ಸಂಚಾರವೂ ದುಸ್ತರವಾಗಿದೆ ಎಂದು ಹೇಳಿದರು.

ಅಮೃತ ಭಾರತ ಯೋಜನೆಯಡಿ 453 ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ ಗುರಿ ಹೊಂದಲಾಗಿದೆ. ಆದರೆ ವಾಸ್ತವದಲ್ಲಿ ಒಂದೇ ಒಂದು ನಿಲ್ದಾಣವನ್ನು ಮಾತ್ರ ಮೇಲ್ದರ್ಜೆಗೇರಿಸಲಾಗಿದೆ ಎಂದು ದೂರಿದ್ದಾರೆ.

‘2024ರ ಸಿಎಜಿ ವರದಿ ಪ್ರಕಾರ ರೈಲ್ವೆಯು ₹2,604 ಕೋಟಿ ನಷ್ಟದಲ್ಲಿದೆ. ಹಿರಿಯ ನಾಗರಿಕರ ವಿನಾಯಿತಿಯನ್ನು ರದ್ದು ಮಾಡಿ, ಅವರಿಂದ ₹8,913 ಕೋಟಿ ವಸೂಲಿ ಮಾಡಲಾಗುತ್ತಿದೆ’ ಎಂದು ದೂರಿದರು.

215 ಕಿ.ಮೀ.ಗೂ ದೂರದ ಸಾಮಾನ್ಯ ದರ್ಜೆಯಲ್ಲಿನ ರೈಲು ಪ್ರಯಾಣ ದರವನ್ನು ಪ್ರತಿ ಕಿ.ಮೀಗೆ 1 ಪೈಸೆ ಮತ್ತು ಮೇಲ್, ಎಕ್ಸ್‌ಪ್ರೆಸ್ ರೈಲುಗಳ ಹವಾನಿಯಂತ್ರಿತ ಹಾಗೂ ಹವಾನಿಯಂತ್ರಿತ ವ್ಯವಸ್ಥೆ ಇಲ್ಲದ ಬೋಗಿಗಳಲ್ಲಿನ ಪ್ರಯಾಣ ದರವನ್ನು ಪ್ರತಿ ಕಿ.ಮೀಗೆ 2 ಪೈಸೆ ಏರಿಕೆ ಮಾಡಿ ರೈಲ್ವೆ ಸಚಿವಾಲಯವು ಭಾನುವಾರ ಆದೇಶ ಹೊರಡಿಸಿದೆ.

ಭಾರತದ ಆನಂದ್ ಸ್ಟಾರ್‌ಬಕ್ಸ್ ಉಪಾಧ್ಯಕ್ಷ

ಹ್ಯೂಸ್ಟನ್ (ಪಿಟಿಐ): ಸ್ಟಾರ್‌ಬಕ್ಸ್ ತನ್ನ ಹೊಸ ಕಾರ್ಯನಿರ್ವಾಹಕ ಉಪಾಧ್ಯಕ್ಷ ಮತ್ತು ಮುಖ್ಯ ತಂತ್ರಜ್ಞಾನ ಅಧಿಕಾರಿಯಾಗಿ (ಸಿಟಿಒ) ಭಾರತ ಮೂಲದ ತಂತ್ರಜ್ಞಾನ ಕಾರ್ಯನಿರ್ವಾಹಕ ಆನಂದ್ ವರದರಾಜನ್ ಅವರನ್ನು ನೇಮಕ ಮಾಡಿದೆ.

‘ಜನವರಿ 19ರಂದು ಅಧಿಕಾರ ವಹಿಸಿಕೊಳ್ಳಲಿರುವ ವರದರಾಜನ್, ಕಂಪನಿಯ ಕಾರ್ಯನಿರ್ವಾಹಕ ನಾಯಕತ್ವ ತಂಡವನ್ನು ಸೇರಲಿದ್ದಾರೆ’ ಎಂದು ಸ್ಟಾರ್‌ಬಕ್ಸ್ ತಿಳಿಸಿದೆ. ಅವರ ಸ್ಥಾನದಲ್ಲಿದ್ದ ಡೆಬ್ ಹಾಲ್ ಲೆಫೆವ್ರೆ ಸೆಪ್ಟೆಂಬರ್‌ನಲ್ಲಿ ನಿವೃತ್ತರಾಗಿದ್ದರು.

ವರದರಾಜನ್ ಅವರು ಸುಮಾರು 19 ವರ್ಷ ಅಮೆಜಾನ್‌ನಲ್ಲಿ ಕಾರ್ಯನಿರ್ವಹಿಸಿದ್ದರು. ಅದಕ್ಕೂ ಮೊದಲು ಅವರು ಒರಾಕಲ್ ಹಾಗೂ ಹಲವು ನವೋದ್ಯಮಗಳೊಂದಿಗೆ ಕೆಲಸ ಮಾಡಿದ್ದರು. ವರದರಾಜನ್ ಅವರು ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐಐಟಿ) ಹಳೆಯ ವಿದ್ಯಾರ್ಥಿಯಾಗಿದ್ದರು.

ಅಡಿಕೆ ಧಾರಣೆ

ಕುಮಟಾ		ಸಾಗರ			
ಚಾಲಿ	42089-47299	ಬಿಳಿಗೋಟು	16269-33645	ಕೆಂಪುಗೋಟು	32099-32099
ಚಿಪ್ಪು	26569-34899	ಚಾಲಿ	35199-42399	ರಾಶಿ	46099-60099
ಕೋಕ	11089-29999	ಕೋಕ	16999-34699	**ಯಲ್ಲಾಪುರ**	
ಫ್ಯಾಕ್ಟರಿ	7089-24869	ಕೆಂಪುಗೋಟು	24989-38699	ಆಪಿ	63699-72421
ಹೊಸಚಾಲಿ	34201-39389	ರಾಶಿ	45889-60000	ಬಿಳಿಗೋಟು	14199-36551
ಪುತ್ತೂರು		ಸಿಪ್ಪೆಗೋಟು	10489-23659	ಕೋಕ	12009-26929
ಕೋಕ	20000-35000	**ಶಿರಸಿ**		ಹಳೆಚಾಲಿ	38029-48066
ಹೊಸತು	26000-41500	ಬೆಟ್ಟೆ	36899-50899	ಹೊಸಚಾಲಿ	38101-38101
ಹಳತು	40000-53500	ಬಿಳಿಗೋಟು	22699-38299	ಕೆಂಪುಗೋಟು	12699-36399
		ಚಾಲಿ	44649-48711	ರಾಶಿ	50601-61009
				ತಟ್ಟಿಬೆಟ್ಟೆ	38506-50499

ಬಾಂಗ್ಲಾ: ಮತ್ತೆ ಗುಂಡಿನ ಮೊರೆತ

ಒಂದನೇ ಪುಟದಿಂದ...

ತೀವ್ರ ರಕ್ತಸ್ರಾವವಾಗಿ ಅವರನ್ನು ಆಸ್ಪತ್ರೆಗೆ ಕರೆತರಲಾಗಿದ್ದು, ವೈದ್ಯರು ತುರ್ತು ಚಿಕಿತ್ಸೆ ಆರಂಭಿಸಿದ್ದಾರೆ’ ಎಂದು ಆಸ್ಪತ್ರೆಯ ಮೂಲಗಳನ್ನು ಉಲ್ಲೇಖಿಸಿ ‘ಕಲೇರ್ ಕಾಂತಾ’ ದಿನಪತ್ರಿಕೆಯು ವರದಿ ಮಾಡಿದೆ.

ವ್ಯಾಪಕ ಶೋಧ: ‘ಸಿಕ್ದರ್ ಮೇಲೆ ರಹಸ್ಯ ದಾಳಿ ನಡೆದ ಬೆನ್ನಲ್ಲೇ, ದಾಳಿಕೋರರ ಬಂಧನಕ್ಕೆ ತಕ್ಷಣವೇ ಶೋಧಕಾರ್ಯ ನಡೆಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

32 ವರ್ಷದ ಯುವ ನಾಯಕ ಶರೀಫ್ ಉಸ್ಮಾನ್ ಹಾದಿ ಮೇಲೆ ಡಿಸೆಂಬರ್ 12ರಂದು ಗುಂಡಿನ ದಾಳಿ ನಡೆದಿತ್ತು. ಇದಾದ ಬಳಿಕ ಅವರು ಸಿಂಗಪುರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು.

ಹಾದಿ ಹತ್ಯೆ: ಖಚಿತ ಮಾಹಿತಿ ಸಿಕ್ಕಿಲ್ಲ

ಒಂದನೇ ಪುಟದಿಂದ...

ಶೇಖ್ ಹಸೀನಾ ನೇತೃತ್ವದ ಅವಾಮಿ ಲೀಗ್ ಸರ್ಕಾರದ ವಿರುದ್ಧ ನಡೆದ ಹೋರಾಟದಲ್ಲಿ ಶರೀಫ್ ಉಸ್ಮಾನ್ ಹಾದಿ (32) ಮುಂಚೂಣಿಯಲ್ಲಿ ಗುರುತಿಸಿಕೊಂಡಿದ್ದರು. ಡಿ. 12ರಂದು ಬಿಜೊಯ್‌ನಗರ ಪ್ರದೇಶದ ಢಾಕಾ ಮಧ್ಯಭಾಗದಲ್ಲಿ ಚುನಾವಣಾ ಪ್ರಚಾರ ನಡೆಸುತ್ತಿದ್ದ ವೇಳೆ ಅವರ ಮೇಲೆ ಗುಂಡಿನ ದಾಳಿ ನಡೆಸಲಾಗಿತ್ತು. ಇಂಕ್ವಿಲಾಬ್ ಮಂಚ್ ಪಕ್ಷದ ವಕ್ತಾರರೂ ಆಗಿದ್ದ ಹಾದಿ ಅನ್ನು ತಕ್ಷಣವೇ ಸಿಂಗಪುರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ, ಡಿ. 18ರಂದು ಕೊನೆಯುಸಿರೆಳೆದಿದ್ದರು. ಇದೇ ಫೆಬ್ರುವರಿ 12ರಂದು ನಡೆಯಲಿರುವ ಬಾಂಗ್ಲಾದೇಶ ಚುನಾವಣೆಗೆ ಉಸ್ಮಾನ್ ಹಾದಿ ಅಭ್ಯರ್ಥಿಯಾಗಿದ್ದರು. ಹಾದಿಯ ಸಾವಿನ ಬೆನ್ನಲ್ಲೇ, ಮುಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರವು ಶೋಕಾಚರಣೆ ಘೋಷಿಸಿತ್ತು.

ಜಮ್ಮುವಿನಲ್ಲಿ ಹಿಂದೂ ಸಂಘಟನೆಗಳಿಂದ ಪ್ರತಿಭಟನೆ

ಬಾಂಗ್ಲಾದೇಶದಲ್ಲಿ ಹಿಂದೂಗಳ ಮನೆಗಳ ಮೇಲೆ ದಾಳಿ ಹಾಗೂ ವ್ಯಕ್ತಿಯೊಬ್ಬರನ್ನು ಜೀವಂತವಾಗಿ ಸುಟ್ಟಿರುವುದನ್ನು ಖಂಡಿಸಿ ಜಮ್ಮು ಮತ್ತು ಕಾಶ್ಮೀರದ ಕಿಶ್ತವಾಡ ಜಿಲ್ಲೆಯಲ್ಲಿ ಸೋಮವಾರ ಪ್ರತಿಭಟನೆ ಹಾಗೂ ಬಂದ್ ಆಚರಿಸಲಾಯಿತು. ಸನಾತನ ಧರ್ಮ ಸಭಾ ಕರೆ ನೀಡಿದ್ದ ಪ್ರತಿಭಟನೆ ಹಿನ್ನೆಲೆಯಲ್ಲಿ ನಗರದಲ್ಲಿ ಎಲ್ಲ ಅಂಗಡಿಗಳು ಮುಚ್ಚಿದ್ದವು.

‘ಅಲ್ಪಸಂಖ್ಯಾತರ ಮೇಲಿನ ಕಿರುಕುಳ ತಪ್ಪಿಸಲು ವಿಫಲ’

ಢಾಕಾ (ಪಿಟಿಐ): ‘ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು ಅಲ್ಪಸಂಖ್ಯಾತರ ಮೇಲಿನ ಕಿರುಕುಳ ತಪ್ಪಿಸಲು ವಿಫಲವಾಗಿದೆ’ ಎಂದು ಆರೋಪಿಸಿ ಇಲ್ಲಿನ ಅಲ್ಪಸಂಖ್ಯಾತ ಸಂಘಟನೆಗಳು ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದವು.

ಬಾಂಗ್ಲಾದೇಶದಲ್ಲಿ ಹಿಂದೂ ವ್ಯಕ್ತಿ ದೀಪು ಚಂದ್ರದಾಸ್ ಅವರ ಬರ್ಬರ ಹತ್ಯೆಯಾದ ಕಾರಣಕ್ಕೆ ಹಿಂದೂ ಹಾಗೂ ಇತರೆ ಅಲ್ಪಸಂಖ್ಯಾತರ ಸಂಘಟನೆಗಳ ಮುಖಂಡರು ಢಾಕಾದಲ್ಲಿ ಮಾನವ ಸರಪಳಿ ರಚಿಸಿ ಪ್ರತಿಭಟಿಸಿದರು.

‘ಅವರು (ಮುಹಮ್ಮದ್ ಯೂನಸ್) ಮಾನವೀಯ ಬಾಂಗ್ಲಾದೇಶ ನಿರ್ಮಾಣ ಮಾಡುವುದಾಗಿ ಹೇಳಿಕೊಳ್ಳುತ್ತಾರೆ. ವಾಸ್ತವದಲ್ಲಿ ಅಮಾನವೀಯ ಮುಖ್ಯ ಸಲಹೆಗಾರರಾಗಿದ್ದಾರೆ’ ಎಂದು ಅಲ್ಪಸಂಖ್ಯಾತ ಏಕತಾ ರಂಗದ ಜಂಟಿ ಸಂಯೋಜಕ ಮಹೀಂದ್ರ ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮತ್ತಿಬ್ಬರ ಬಂಧನ: ದಾಸ್ ಹತ್ಯೆಗೆ ಸಂಬಂಧಿಸಿದಂತೆ ಅಪರಾಧ ವಿರೋಧಿ ಕ್ಷಿಪ್ರ ಕಾರ್ಯಪಡೆಯು 10 ಮಂದಿ ಶಂಕಿತರನ್ನು ಬಂಧಿಸಿದ್ದು, ಸೋಮವಾರ ಮತ್ತಿಬ್ಬರನ್ನು ಬಂಧಿಸಿದೆ.

ಗನ್‌ಮ್ಯಾನ್ ಭದ್ರತೆ: ಸಿಕ್ದರ್ ಮೇಲೆ ಗುಂಡಿನ ದಾಳಿ ಬೆನ್ನಲ್ಲೇ, ಹೆಚ್ಚಿನ ಅಪಾಯ ಎದುರಿಸುತ್ತಿರುವ 20 ಮಂದಿಗೆ ಗನ್‌ಮ್ಯಾನ್ ಭದ್ರತೆ ಒದಗಿಸಲು ಸರ್ಕಾರ ನಿರ್ಧರಿಸಿದೆ ಎಂದು ಗೃಹ ಇಲಾಖೆಯ ಸಲಹೆಗಾರ ಜಹಾಂಗೀರ್ ಆಲಮ್ ಚೌಧರಿ ತಿಳಿಸಿದ್ದಾರೆ.

20 ಮಂದಿಯಲ್ಲಿ ಎನ್‌ಸಿಪಿ ಪಕ್ಷದ ಆರು ಮುಖಂಡರು, ಮೀಸಲಾತಿ ವಿರೋಧಿ ಚಳವಳಿಯ ಮುಂಚೂಣಿ ಹೋರಾಟಗಾರರು ಸೇರಿದ್ದಾರೆ.

ಅಸ್ಸಾಂನಲ್ಲಿ ಗರಿಷ್ಠ ಭದ್ರತೆ

ಗುವಾಹಟಿ (ಪಿಟಿಐ): ‘ಬಾಂಗ್ಲಾದೇಶದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿರುವ ಬೆನ್ನಲ್ಲೇ, ಅಸ್ಸಾಂನಲ್ಲಿ ಹೆಚ್ಚಿನ ನಿಗಾ ವಹಿಸಲಾಗಿದೆ’ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ತಿಳಿಸಿದ್ದಾರೆ.

‘ಬಾಂಗ್ಲಾದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ರಾಜ್ಯ ಸರ್ಕಾರವು ಸೂಕ್ಷ್ಮವಾಗಿ ಗಮನಿಸುತ್ತಿದೆ. ಹಿಂದೂಗಳು ದೌರ್ಜನ್ಯಕ್ಕೊಳಗಾಗುತ್ತಿದ್ದು, ಜೀವಂತವಾಗಿ ಸುಡಲಾಗುತ್ತಿದೆ. ಅಲ್ಲಿ ಅಧಿಕಾರ ನಡೆಸುತ್ತಿರುವವರು ಈಶಾನ್ಯ ಭಾರತ ಸೇರಿದಂತೆ ಇಡೀ ಭಾರತವನ್ನು ಸೇರ್ಪಡೆಗೊಳಿಸುವ ಕುರಿತು ಮಾತನಾಡುತ್ತಿದ್ದಾರೆ’ ಎಂದು ತಿಳಿಸಿದ್ದಾರೆ.

ದೆಹಲಿ, ಅಗರ್ತಲಾದಲ್ಲಿ ವೀಸಾ ಸೇವೆ ಸ್ಥಗಿತ

ಭದ್ರತಾ ಕಾರಣದಿಂದ ನವದೆಹಲಿಯಲ್ಲಿರುವ ಬಾಂಗ್ಲಾದೇಶ ಹೈಕಮಿಷನ್, ತ್ರಿಪುರಾದ ಅಗರ್ತಲಾದಲ್ಲಿರುವ ಸಹಾಯಕ ಹೈ ಕಮೀಷನ್‌ನಲ್ಲಿ ಎಲ್ಲಾ ಮಾದರಿಯ ಕಾನ್ಸುಲರ್ ಹಾಗೂ ವೀಸಾ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ.

‘ದೆಹಲಿಯಲ್ಲಿರುವ ಬಾಂಗ್ಲಾದೇಶ ಹೈಕಮಿಷನ್ ಕಚೇರಿಯನ್ನು ಮುಚ್ಚಲು ಔಪಚಾರಿಕವಾಗಿ ನೋಟಿಸ್ ನೀಡಿದ್ದು, ವೀಸಾ ಸೇವೆ ಸ್ಥಗಿತಗೊಳಿಸಲಾಗಿದೆ’ ವಿದೇಶಾಂಗ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ‘ಢಾಕಾ ಟ್ರಿಬ್ಯೂನ್’ ಪತ್ರಿಕೆಗೆ ಖಚಿತಪಡಿಸಿದ್ದಾರೆ.

30 ರಾಜತಾಂತ್ರಿಕರನ್ನು ಹುದ್ದೆಯಿಂದ ತೆಗೆಯಲು ನಿರ್ಧಾರ

ವಾಷಿಂಗ್ಟನ್ (ಎಪಿ): ವಿವಿಧ ದೇಶಗಳಲ್ಲಿ ರಾಯಭಾರಿಗಳಾಗಿ ಮತ್ತು ಇತರ ಹಿರಿಯ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 30 ಅನುಭವಿ ರಾಜತಾಂತ್ರಿಕರನ್ನು ವಾಪಸ್ ಕರೆಸಿಕೊಳ್ಳಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮುಂದಾಗಿದ್ದಾರೆ. ‘ಅಮೆರಿಕಕ್ಕೆ ಆದ್ಯತೆ’ ನೀತಿಯನ್ನು ಬೆಂಬಲಿಸುವ ವ್ಯಕ್ತಿಗಳಿಗೆ ವಿದೇಶಾಂಗ ವ್ಯವಹಾರಗಳನ್ನು ವಹಿಸಲು ಟ್ರಂಪ್ ಆಡಳಿತ ನಿರ್ಧರಿಸಿದೆ.

ಆಫ್ರಿಕಾ ಖಂಡದ ಬುರುಂಡಿ, ಕ್ಯಾಮರೂನ್, ಕೇಪ್ ವರ್ಡೆ, ಗ್ಯಾಬೊನ್, ಐವರಿ ಕೋಸ್ಟ್, ಮಡಗಾಸ್ಕರ್, ಮಾರಿಷಸ್, ನೈಜರ್, ನೈಜೀರಿಯಾ, ರುವಾಂಡಾ, ಸೆನೆಗಲ್, ಸೊಮಾಲಿಯಾ ಮತ್ತು ಉಗಾಂಡಾ, ಏಷ್ಯಾದ ನೇಪಾಳ, ಶ್ರೀಲಂಕಾ, ಫಿಜಿ, ಲಾವೋಸ್, ಮಾರ್ಷಲ್ ದ್ವೀಪಗಳು, ಪಪುವಾ ನ್ಯೂಗಿನಿಯಾ, ಫಿಲಿಪ್ಪೀನ್ಸ್ ಮತ್ತು ವಿಯೆಟ್ನಾಂ, ಯುರೋಪ್‌ನ ಅರ್ಮೇನಿಯಾ, ಮ್ಯಾಸಿಡೋನಿಯಾ, ಮಾಂಟೆನೆಗ್ರೊ ಮತ್ತು ಸ್ಲೋವಾಕಿಯಾ, ಪಶ್ಚಿಮ ಏಷ್ಯಾದ ಅಲ್ಜೀರಿಯಾ, ಈಜಿಪ್ಟ್ ಹಾಗೂ ಗ್ವಾಟೆಮಾಲಾ, ಸುರಿನಾಮ್‌ನ ರಾಯಭಾರಿಗಳನ್ನು ವಾಪಸ್ ಕರೆಸಿಕೊಳ್ಳಲಾಗುತ್ತದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಬೆಂಗಳೂರಿನಲ್ಲಿ ಭಾರತದ ನಂ.1 ಕ್ಯಾಶ್ ಲಾಜಿಸ್ಟಿಕ್ಸ್ ಕಂಪನಿಗೆ
ಬೆಂಗಳೂರು ನಗರ: ಕೂಡ್ಲು ಗೇಟ್, ರಾಜಾಜಿನಗರ, HBR ಲೇಔಟ್ ಶಾಖೆಗಳಿಗೆ
ATM ಆಪರೇಟರ್‌ಗಳು ಬೇಕಾಗಿದ್ದಾರೆ.
ಅರ್ಹತೆ: 10 ನೇ ತರಗತಿ ಪಾಸ್ / +2 ಪಾಸ್ / ಪದವಿ / ಡಿಪ್ಲೊಮಾ
ಸಂಬಳ + ಭತ್ಯೆ ರೂ. 18,000 ರಿಂದ 25,000
18 ರಿಂದ 40 ವರ್ಷದೊಳಗಿನ ಪುರುಷರು ಮಾತ್ರ ಅರ್ಜಿ ಸಲ್ಲಿಸಿ
ವಾಕ್-ಇನ್ ಸಂದರ್ಶನ: ಸೋಮವಾರದಿಂದ ಶನಿವಾರ ಬೆ. 10 ರಿಂದ ಸಂಜೆ 5 ರವರೆಗೆ.
ಸ್ಥಳ: ಬೆಂಗಳೂರು ನಗರ:
ಹೊಂಗಸಂದ್ರ: 8217081781/6362423007
ರಾಜಾಜಿನಗರ: 8928003550/8088551482
HBR ಲೇಔಟ್: 8792056380/8762730620

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 17,000/ ರಿಂದ 20,000/. ESI, PF ಸೌಲಭ್ಯವಿರುತ್ತದೆ. ಬೆಂಗಳೂರು76. ಸಂಪರ್ಕಿಸಿ: 96063 85001, 96063 84001

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆ ಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000ರಿಂದ 25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9019593297, 8095133188.

Wanted

ಕಂಪನಿಗಳಿಗೆ ಆಫೀಸ್ ಗಳಿಗೆ ಬೇಕಾಗಿದ್ದಾರೆ. 7th,PUC, Degree ಡಿಪ್ಲೋಮೊದವರು ಯುವಕರು ಯುವತಿಯರಿಗೆ ಸಂಬಳ 20000, 45000 (ವಿದ್ಯಾರ್ಹತೆಹಿಲ್ಲದವರಿಗೂ) ವಸತಿಯೂಟವಿರುತ್ತದೆ. 9916788422.

ವ್ಯಾಪಾರ

Business Offers

Distributors

ತನ್ಮಯಿ ಜಾಯಿಂಟ್ ಕೇರ್ ಮ್ಯಾಗ್ನೆಟಿಕ್ ಆಯಿಲ್ & ಕ್ರೀಮ್ ಕರ್ನಾಟಕದಾದ್ಯಂತ ಮೆಡಿಕಲ್‌ಗಳಿಗೆ ಹಾಕಲು ಡಿಸ್ಟ್ರಿಬ್ಯುಟರ್ಸ್ ಬೇಕಾಗಿದ್ದಾರೆ. ತಿಂಗಳಿಗೆ 5ರಿಂದ 10 ಲಕ್ಷದವರೆಗೆ ಲಾಭ ಗಳಿಸಬಹುದು. ಶೇಷಾದ್ರಿಪುರಂ, ಬೆಂಗಳೂರು. 9019626612.

ಪ್ರವಾಸ

Travel

11 ದಿನಗಳ ಗುಜರಾತ್ ರನ್ನ್ ಆಫ್ ಕಚ್. 12ದಿನಗಳ ಮಧ್ಯಪ್ರದೇಶ. 7 ದಿನಗಳ ಕಾಶಿಯಾತ್ರೆ ಅಯೋಧ್ಯ. 10 ದಿನಗಳ ನೇಪಾಳ,ಮುಕ್ತಿನಾಥ್. ಸಂಪರ್ಕಿಸಿ. ನಂದಿ ಹಾಲಿಡೇಸ್ 9740228186 9035513332

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

25 ದಿನಗಳಲ್ಲಿ ಮಾರ್ಕ್‌ ಬ್ಯಾಗ್ರೌಂಡ್ ಸ್ಕೋರ್

• ಅಭಿಲಾಷ್ ಪಿ.ಎಸ್.

ಮಾರ್ಕ್‌
ಸುದೀಪ್

'ಉಳಿದವರು ಕಂಡಂತೆ', 'ಕಿರಿಕ್ ಪಾರ್ಟಿ', 'ದಿಯಾ', 'ಕಾಂತಾರ' ಮೂಲಕ ಗುರುತಿಸಿಕೊಂಡಿರುವ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಪಾಲಿಗೆ 2025 ಮಹತ್ವದ ವರ್ಷ.

ಈ ವರ್ಷ ಅಜನೀಶ್ ನಿರ್ಮಾಣದ ಮೊದಲ ಸಿನಿಮಾ 'ಜಸ್ಟ್ ಮ್ಯಾರೀಡ್' ತೆರೆಕಂಡಿತು. ಜೊತೆಗೆ ಅವರು ಸಂಗೀತ ನಿರ್ದೇಶನ ಮಾಡಿರುವ 'ಕಾಂತಾರ–ಚಾಪ್ಟರ್ 1', 'ದಿ ಡೆವಿಲ್' ರಿಲೀಸ್ ಆಗಿದ್ದು, ಇದೀಗ ನಟ ಸುದೀಪ್ ನಟನೆಯ 'ಮಾರ್ಕ್' ತೆರೆಗೆ ಬರಲು ಸಜ್ಜಾಗಿದೆ. ಇದು ಸುದೀಪ್ ಅವರ ಜೊತೆ ಅಜನೀಶ್ ಅವರ ಮೂರನೇ ಪ್ರಾಜೆಕ್ಟ್. 'ವಿಕ್ರಾಂತ್ ರೋಣ', 'ಮ್ಯಾಕ್ಸ್' ಬಳಿಕ 'ಮಾರ್ಕ್' ಮೂಲಕ ಸಂಗೀತದ ಮಿಂಚು ಹರಿಸಲು ಬರುತ್ತಿದ್ದಾರೆ ಅಜನೀಶ್.

'ಮಾರ್ಕ್' ಕುರಿತು ಮಾತಿಗಿಳಿದ ಅಜನೀಶ್, 'ಪ್ರತಿ ಸಿನಿಮಾವೂ ಒಂದು ಸವಾಲು. ಪ್ರತಿಯೊಬ್ಬ ನಿರ್ದೇಶಕರ ಆಲೋಚನೆಗಳು ಭಿನ್ನಭಿನ್ನವಾಗಿರುತ್ತಲ್ಲವೇ. 'ಮ್ಯಾಕ್ಸ್' ಸಿನಿಮಾಗೆ ಹೋಲಿಸಿದರೆ 'ಮಾರ್ಕ್'ನ ಚಿತ್ರಕಥೆ ಇನ್ನೂ ವೇಗವಾಗಿದೆ. ಮೇಕಿಂಗ್, ತಾರಾಗಣದಲ್ಲೂ ದೊಡ್ಡದಾಗಿದೆ. ದೊಡ್ಡ ಕ್ಯಾನ್ವಾಸ್‌ನ ಈ ಸಿನಿಮಾ ಇನ್ನಷ್ಟು ಮಾಸ್ ಆಗಿ ಮೂಡಿಬಂದಿದೆ. 'ಮ್ಯಾಕ್ಸ್' ಒಂದು ರಾತ್ರಿಯಲ್ಲಿ ಒಂದು ಸ್ಥಳದಲ್ಲಿ ನಡೆಯುವ ಕಥೆ ಹೊಂದಿತ್ತು. 'ಮಾರ್ಕ್' ಹಲವು ಪ್ರದೇಶಗಳಲ್ಲಿ ಚಿತ್ರೀಕರಣಗೊಂಡಿದೆ. ಆ ವೇಗಕ್ಕೆ ಹೊಂದಿಕೊಂಡು ಹೋಗುವುದೇ ನನಗೆ ದೊಡ್ಡ ಸವಾಲಾಗಿತ್ತು. ಸಿನಿಮಾವೊಂದನ್ನು ಕೈಗೆತ್ತಿಕೊಂಡಾಗ ದೃಶ್ಯಗಳಿಗೆ ಬ್ಯಾಗ್ರೌಂಡ್ ಸ್ಕೋರ್ ಅನ್ನು ಪರೀಕ್ಷಿಸಿ ನೋಡುತ್ತೇವೆ. 'ಮಾರ್ಕ್'ಗೆ ಅಂತಹ ಅವಕಾಶವೇ ಸಿಗಲಿಲ್ಲ. ಒಮ್ಮೆಯೇ ಹೈಪಾಯಿಂಟ್‌ನಿಂದ ಆರಂಭಿಸಬೇಕಿತ್ತು. ಈ ಹಿಂದೆ ತೆಲುಗಿನ 'ವಿರೂಪಾಕ್ಷ' ಎನ್ನುವ ಸಿನಿಮಾಗೆ ಕೇವಲ ಆರು ದಿನಗಳಲ್ಲಿ ಹಿನ್ನೆಲೆ ಸಂಗೀತ ನೀಡಿದ್ದೆ. 'ಮಾರ್ಕ್'ಗೆ 20–25 ದಿನಗಳಲ್ಲಿ ಬ್ಯಾಗ್ರೌಂಡ್ ಸ್ಕೋರ್ ಮಾಡಿದ್ದೇನೆ. ಕೇವಲ ನಾಲ್ಕೂವರೆ ತಿಂಗಳಲ್ಲಿ ಒಂದು ಪ್ರಾಜೆಕ್ಟ್ ಪೂರ್ಣಗೊಳಿಸಿದ್ದೇವೆ' ಎನ್ನುತ್ತಾರೆ.

ಇಷ್ಟವಾದ ಸಾನ್ವಿ ದನಿ

'ಹಿಂದಿನ 'ಮ್ಯಾಕ್ಸ್'ನಲ್ಲಿ 'ಮಸ್ತ್ ಮಲೈಕಾ' ರೀತಿಯ ಹಾಡನ್ನು ಹಾಕಲು ಅವಕಾಶವೇ ಇರಲಿಲ್ಲ. 'ಮಾರ್ಕ್'ನಲ್ಲಿ ಈ ಹಾಡಿಗೆ ಒಂದು ಸನ್ನಿವೇಶವೂ ಸಿಕ್ಕಿತ್ತು. 'ವಿಕ್ರಾಂತ್ ರೋಣ' ಸಿನಿಮಾದ 'ರ..ರ..ರಕ್ಕಮ್ಮ' ದೊಡ್ಡ ಮಟ್ಟದಲ್ಲಿ ಹಿಟ್ ಆಗಿತ್ತು. ಇದೀಗ 'ಮಸ್ತ್ ಮಲೈಕಾ' ಮೂಲಕ ಮತ್ತೊಮ್ಮೆ ಸುದೀಪ್ ಅವರ ಡಾನ್ಸ್‌ನ ಸೊಬಗು ಅಭಿಮಾನಿಗಳಿಗೆ ದೊರಕಿದೆ. ನನ್ನ ಜೊತೆಗಿರುವ ನಿರ್ದೇಶಕರಾದ ಸಿ.ಆರ್.ಬಾಬಿ ಅವರೇ ಗಾಯಕರನ್ನು ಆಯ್ಕೆ ಮಾಡುತ್ತಾರೆ. ಸುದೀಪ್ ಅವರ ಪುತ್ರಿ ಸಾನ್ವಿ ಅವರಿಂದ ಹಾಡಿಸಬೇಕು ಎಂದು ಬಾಬಿ ಹೇಳಿದ್ದರು. ಇದನ್ನು ಸುದೀಪ್ ಅವರ ಗಮನಕ್ಕೆ ತಂದಿದ್ದೆವು. 'ಮಸ್ತ್ ಮಲೈಕಾ'ಗೆ ಸಾನ್ವಿ ಅವರ ದನಿಯನ್ನು ಪರಿಶೀಲಿಸಿ ಸಿನಿಮಾದಲ್ಲಿ ಬಳಸಿಕೊಳ್ಳುವ ಕುರಿತು ಸುದೀಪ್ ಅವರ ಒಪ್ಪಿಗೆ ಪಡೆದುಕೊಳ್ಳಲು ನಿರ್ಧರಿಸಿದೆವು. ಅವರ ದನಿ ನನಗೆ ಇಷ್ಟವಾಯಿತು. ಈ ನಿರ್ಧಾರವನ್ನು ಸುದೀಪ್ ಅವರಿಗೆ ತಿಳಿಸಿದೆ' ಎಂದರು ಅಜನೀಶ್.

> ಇಷ್ಟು ಕಡಿಮೆ ಅವಧಿಯಲ್ಲಿ ಕನ್ನಡ ಸಿನಿಮಾವೊಂದಕ್ಕೆ ಬ್ಯಾಗ್ರೌಂಡ್ ಸ್ಕೋರ್ ಮಾಡಿರುವುದು ಇದೇ ಮೊದಲು. ಜೊತೆಗೆ ಇದೇ ಅವಧಿಯಲ್ಲಿ ಅಂದಾಜು 17–20 ಕ್ಯಾರೆಕ್ಟರ್ ಥೀಮ್‌ಗಳನ್ನು ಸಿದ್ಧಪಡಿಸಿದ್ದೆ.
> **ಅಜನೀಶ್ ಲೋಕನಾಥ್,** ಸಂಗೀತ ನಿರ್ದೇಶಕ

ಸುದೀಪ್ ನಮಗೆಲ್ಲ ಪ್ರೇರಣೆ

'ಸುದೀಪ್ ಅವರ ಜೊತೆಗೆ ಕೆಲಸ ಮಾಡುವುದೇ ಸಂತೋಷ. ಪೂರ್ಣ ಸ್ವತಂತ್ರ ನೀಡುವ ಅವರ ಗುಣ ನಮಗೆ ರೆಕ್ಕೆ ಬಿಚ್ಚಿ ಹಾರಲು ಪ್ರೇರಣೆ. ಸಂಗೀತ ಕ್ಷೇತ್ರದಲ್ಲಿ ಇದೇ ವೇಗದಲ್ಲಿ ಮತ್ತಷ್ಟು ಸಿನಿಮಾಗಳನ್ನು ಮಾಡುವ ಹಂಬಲವಿದೆ. ಇದೊಂದು ತಂಡದ ಪ್ರಯತ್ನ. ಸುದೀಪ್ ಅವರು ಮುಂಚೂಣಿಯಲ್ಲಿದ್ದುಕೊಂಡು ಎಲ್ಲರನ್ನೂ ಪ್ರೋತ್ಸಾಹಿಸಿದರು. ಇದೇ ದಿನಕ್ಕೆ ಸಿನಿಮಾ ರಿಲೀಸ್ ಎಂದು ಘೋಷಿಸಿದರು. ಈ ರೀತಿ ಪ್ರೇರಣೆಯಿದ್ದರೆ ಎರಡೂವರೆ ತಿಂಗಳಲ್ಲೇ ಸಿನಿಮಾಗಳನ್ನು ತರಬಹುದು' ಎನ್ನುತ್ತಾರೆ ಅಜನೀಶ್ ಲೋಕನಾಥ್.

'ನಿಂಗವ್ವ ನಿಂಗವ್ವ' ಎಂದ ರಾಚಯ್ಯ!

ದುನಿಯಾ ವಿಜಯ್, ರಚಿತಾ ರಾಮ್

'ಕಾಟೇರ' ಸಿನಿಮಾದ ಕಥೆಗಾರ ಜಡೇಶ ಕೆ. ಹಂಪಿ ನಿರ್ದೇಶನದ, 'ದುನಿಯಾ' ವಿಜಯ್ ನಟನೆಯ 'ಲ್ಯಾಂಡ್‌ಲಾರ್ಡ್' ಸಿನಿಮಾ ಜ.23ರಂದು ತೆರೆಕಾಣಲಿದೆ. ಸಿನಿಮಾದ 'ನಿಂಗವ್ವ ನಿಂಗವ್ವ' ಎಂಬ ಹಾಡು ಇತ್ತೀಚೆಗೆ ಬಿಡುಗಡೆಯಾಯಿತು.

ನಿರ್ದೇಶಕ ಯೋಗರಾಜ್ ಭಟ್ ಅವರು ಬರೆದಿರುವ ಈ ಹಾಡಿಗೆ ವಿಜಯ್ ಪ್ರಕಾಶ್ ಹಾಗೂ ಅನನ್ಯ ಭಟ್ ದನಿಯಾಗಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನೀಡಿರುವ ಈ ಹಾಡಿನಲ್ಲಿ ದುನಿಯಾ ವಿಜಯ್ ಹಾಗೂ ರಚಿತಾ ರಾಮ್ ನಟಿಸಿದ್ದಾರೆ. ಸಿನಿಮಾದಲ್ಲಿ ಹಳ್ಳಿಯ ದಂಪತಿ ರಾಚಯ್ಯ–ನಿಂಗವ್ವಳಾಗಿ ಕಾಣಿಸಿಕೊಂಡಿರುವ ಇವರಿಬ್ಬರಿಗೆ ಭೂಷಣ್ ನೃತ್ಯ ನಿರ್ದೇಶನ ಮಾಡಿದ್ದಾರೆ. ಸ್ಯಾಂಡಲ್‌ವುಡ್‌ನ ತಾರಾ ದಂಪತಿಗಳಾದ 'ನೆನಪಿರಲಿ' ಪ್ರೇಮ್-ಜ್ಯೋತಿ, ಡಾರ್ಲಿಂಗ್ ಕೃಷ್ಣ-ಮಿಲನ ನಾಗರಾಜ್ ಹಾಗೂ ತರುಣ್ ಸುಧೀರ್ - ಸೋನಾಲ್ ಅವರು ಹಾಡು ಬಿಡುಗಡೆ ಮಾಡಿದ್ದು ವಿಶೇಷವಾಗಿತ್ತು.

'ನನ್ನ ಹಿಟ್ ಹಾಡುಗಳ ಪಟ್ಟಿಯಲ್ಲಿ ಅತ್ಯಧಿಕ ಹಾಡುಗಳನ್ನು ಬರೆದಿರುವವರು ಯೋಗರಾಜ್ ಭಟ್. ಈ ಹಾಡನ್ನೂ ಅದ್ಭುತವಾಗಿ ಬರೆದಿದ್ದಾರೆ. ಅಷ್ಟೇ ಚೆನ್ನಾಗಿ ವಿಜಯ್ ಪ್ರಕಾಶ್ ಹಾಡಿದ್ದಾರೆ. ಸಾಮಾನ್ಯವಾಗಿ ನಾಯಕಿಯರು ಈ ವಯಸ್ಸಿನ ಪಾತ್ರ ಒಪ್ಪಿಕೊಳ್ಳುವುದು ವಿರಳ. ಆದರೆ ರಚಿತಾ ರಾಮ್ ಅವರು ಒಪ್ಪಿಕೊಂಡು ಈ ಪಾತ್ರ ಮಾಡಿದ್ದಾರೆ' ಎಂದರು ದುನಿಯಾ ವಿಜಯ್.

ಜಡೇಶ ಕೆ.ಹಂಪಿ ಮಾತನಾಡಿ, 'ದುನಿಯಾ ವಿಜಯ್ ಹಾಗೂ ಯೋಗರಾಜ್ ಭಟ್ ಅವರ ಕಾಂಬಿನೇಶನ್‌ನಲ್ಲಿ ಬಂದಿರುವ ಎಲ್ಲಾ ಹಾಡುಗಳು ಸೂಪರ್‌ಹಿಟ್ ಆಗಿವೆ. ಈಗ ಆ ಸಾಲಿಗೆ 'ನಿಂಗವ್ವ' ಕೂಡ ಸೇರಲಿದೆ. ನನ್ನ ಹಿಂದಿನ ಎರಡು ಚಿತ್ರಗಳಿಗೂ ಸಂಗೀತ ಸಂಯೋಜಿಸಿದ್ದ ಅಜನೀಶ್ ಅವರೇ ಈ ಚಿತ್ರಕ್ಕೂ ಸಂಗೀತ ನೀಡಿದ್ದಾರೆ' ಎಂದರು.

ಸಾರಥಿ ಫಿಲಂಸ್ ಲಾಂಛನದಲ್ಲಿ ಕೆ.ವಿ. ಸತ್ಯಪ್ರಕಾಶ್ ಹಾಗೂ ಹೇಮಂತ್ ಗೌಡ ಕೆ.ಎಸ್ ನಿರ್ಮಿಸಿರುವ ಈ ಸಿನಿಮಾಗೆ ಸ್ವಾಮಿ ಜೆ. ಗೌಡ ಛಾಯಾಚಿತ್ರಗ್ರಹಣವಿದೆ. ಸಿನಿಮಾದಲ್ಲಿ ಖಳನಾಯಕನಾಗಿ ನಟ ರಾಜ್ ಬಿ.ಶೆಟ್ಟಿ ನಟಿಸಿದ್ದಾರೆ.

'ಕ್ಯಾಲೆಂಡರ್' ಹಾಡು ಬಿಡುಗಡೆ

ನಿವಿಷ್ಕ ಪಾಟೀಲ್, ಆದರ್ಶ ಗುಂಡುರಾಜ್, ಸುಶ್ಮಿತಾ

ಈ ಹಿಂದೆ 'ಸ್ವಾರ್ಥ ರತ್ನ' ಸೇರಿದಂತೆ ಎರಡು ಚಿತ್ರಗಳಲ್ಲಿ ನಟಿಸಿರುವ ಆದರ್ಶ ಗುಂಡುರಾಜ್ ನಟನೆಯ 'ಕ್ಯಾಲೆಂಡರ್' ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಸಿನಿಮಾದ 'ನಾನ್ಯಾರು' ಎಂಬ ಹಾಡು ಇತ್ತೀಚೆಗೆ ಬಿಡುಗಡೆಯಾಯಿತು.

'ಇದು ನಾನು ನಾಯಕನಾಗಿ ನಟಿಸಿರುವ ಮೂರನೇ ಚಿತ್ರ. ವರ್ಷಗಳು ಉರುಳುತ್ತಿರುತ್ತವೆ. ಆದರೆ ದಿನವನ್ನು ಗುರುತಿಸಲು ನಮಗೆ 'ಕ್ಯಾಲೆಂಡರ್' ಬೇಕು. ಶೀರ್ಷಿಕೆಗೂ ಹಾಗೂ ಚಿತ್ರದ ಕಥೆಗೂ ಸಂಬಂಧವಿದೆ. ನಾನೇ ಚಿತ್ರಕ್ಕೆ ಕಥೆ ಬರೆದು ನಿರ್ಮಾಣ ಮಾಡಿದ್ದೇನೆ. ಹೆಣ್ಣುಮಕ್ಕಳಿಗಂತೂ ಈ ಕಥೆ ಬಹಳ ಹತ್ತಿರವಾಗುತ್ತದೆ. ಈಗಾಗಲೇ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್‌ನಲ್ಲಿದೆ' ಎನ್ನುತ್ತಾರೆ ಆದರ್ಶ ಗುಂಡುರಾಜ್.

'ನಾನು ರಂಗಭೂಮಿಯಿಂದ ಬಂದವನು. ನಿರ್ದೇಶಕನಾಗಿ ಇದು ಮೊದಲ ಚಿತ್ರ. ರಮೇಶ್ ಕೊಯಿರಾ ಛಾಯಾಚಿತ್ರಗ್ರಹಣ, ಸುನಾದ್ ಗೌತಮ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಸುಶ್ಮಿತಾ ಹಾಗೂ ನಿವಿಷ್ಕ ಪಾಟೀಲ್ ನಾಯಕಿರಾಗಿ ನಟಿಸಿದ್ದಾರೆ. ವಿಶೇಷ ಪಾತ್ರದಲ್ಲಿ ನಟಿ ಮಾಲಾಶ್ರೀ ಇದ್ದಾರೆ. ರಮೇಶ್ ಇಂದಿರಾ, ಪ್ರಮೋದ್ ಶೆಟ್ಟಿ, ಪ್ರಕಾಶ್ ತೂಮಿನಾಡು, ಸುಚೇಂದ್ರ ಪ್ರಸಾದ್ ಮುಂತಾದವರು ತಾರಾಬಳಗದಲ್ಲಿದ್ದಾರೆ' ಎಂದರು ನಿರ್ದೇಶಕ ನವೀನ್ ಶಕ್ತಿ.

ಪಂದ್ಯ ಆಯೋಜನೆ: ವರದಿ ಪರಿಶೀಲಿಸಿ ಕ್ರಮ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ– ಸಮಿತಿ ರಚನೆ: ಗೃಹ ಸಚಿವ ಜಿ.ಪರಮೇಶ್ವರ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪೊಲೀಸ್ ಅಧಿಕಾರಿಗಳು, ಅಗ್ನಿಶಾಮಕ ದಳ ಹಾಗೂ ತುರ್ತುಸೇವಾ ಸಿಬ್ಬಂದಿ ಸೋಮವಾರ ಪರಿಶೀಲನೆ ನಡೆಸಿದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯ ನಡೆಸುವ ಕುರಿತಂತೆ ಪರಿಶೀಲಿಸಲು ಸಮಿತಿ ರಚಿಸಲಾಗಿದೆ. ಈ ಸಮಿತಿಯು ಸರ್ಕಾರಕ್ಕೆ ನೀಡಲಿರುವ ವರದಿ ಆಧರಿಸಿ ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ವಿಧಾನಸೌಧದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಪದಾಧಿಕಾರಿಗಳು ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಸೋಮವಾರ ಅವರು ಸಭೆ ನಡೆಸಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಪರಮೇಶ್ವರ, 'ಇದೇ 24ರಂದು ವಿಜಯ್ ಹಜಾರೆ ಕ್ರಿಕೆಟ್ ಪಂದ್ಯ ನಡೆಸಲು ಅನುಮತಿ ನೀಡುವಂತೆ ಕೆಎಸ್‌ಸಿಎ ಮನವಿ ಮಾಡಿದೆ. ಸಾರ್ವಜನಿಕರ ವೀಕ್ಷಣೆಗೆ ಅವಕಾಶ ನೀಡುವುದಿಲ್ಲ. ಪಂದ್ಯ ಮಾತ್ರ ನಡೆಸುತ್ತೇವೆ ಎಂದು ಕೆಎಸ್‌ಸಿಎಯವರು ಹೇಳಿದ್ದಾರೆ' ಎಂದರು.

'ಕ್ರೀಡಾಪಟುಗಳ ಸುರಕ್ಷತೆ ದೃಷ್ಟಿಯಿಂದ ಜಿಬಿಎ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಬೆಂಗಳೂರು ನಗರ ಪೊಲೀಸ್ ಆಯುಕ್ತ, ಲೋಕೋಪಯೋಗಿ, ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆ, ಆರೋಗ್ಯ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಸಮಿತಿ ಚಿನ್ನಸ್ವಾಮಿ ಸ್ಟೇಡಿಯಂಗೆ ಭೇಟಿ ನೀಡಿ ವರದಿ ನೀಡಲಿದೆ' ಎಂದರು.

'ಬೆಂಗಳೂರು ನಗರ ಪೊಲೀಸ್ ಆಯುಕ್ತರು 17 ಅಂಶಗಳ ಸಲಹೆ ಸೂಚನೆಗಳನ್ನು ಪಾಲಿಸುವುದು ಅಗತ್ಯ ಎಂದು ಸೂಚಿಸಿ ಪತ್ರ ಬರೆದಿದ್ದರು. ಅದರಲ್ಲಿ ಏನೆಲ್ಲ ಪೂರ್ಣಗೊಳಿಸಲಾಗಿದೆ ಎಂಬುದನ್ನು ಪರಿಶೀಲಿಸಿ ಸಮಿತಿಯು ಸರ್ಕಾರಕ್ಕೆ ತಿಳಿಸಲಿದೆ. ಕೆಲವು ದಿನಗಳ ಹಿಂದೆಯಷ್ಟೆ ಕೆಎಸ್‌ಸಿಎ ಹೊಸ ಸಮಿತಿ ರಚನೆಯಾಗಿದೆ. ಎಲ್ಲವನ್ನು ಪೂರ್ಣಗೊಳಿಸುವುದಾಗಿ ಕೆಎಸ್‌ಸಿಎಯವರು ಹೇಳಿದ್ದಾರೆ' ಎಂದು ಸಚಿವರು ತಿಳಿಸಿದರು.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಲ್ಲಿ ಹೋಮ, ಹವನ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಲ್ಲಿ ಸೋಮವಾರ ಸುದರ್ಶನ ಹೋಮ ಮತ್ತು ಶಾಂತಿಪೂಜೆಯನ್ನು ನೆರವೇರಿಸಲಾಯಿತು.

ಇತ್ತೀಚೆಗಷ್ಟೇ ಹೊಸದಾಗಿ ಚುನಾಯಿತರಾಗಿರುವ ಆಡಳಿತ ಸಮಿತಿಯು ಈ ಪೂಜೆಯನ್ನು ಹಮ್ಮಿಕೊಂಡಿತ್ತು. ಚಿನ್ನಸ್ವಾಮಿ ಕ್ರೀಡಾಂಗಣದ ಮುಖ್ಯ ಕಟ್ಟಡದಲ್ಲಿರುವ ಸಭಾಂಗಣದಲ್ಲಿ ಹೋಮ ಹಾಗೂ ಧಾರ್ಮಿಕ ಕಾರ್ಯಗಳನ್ನು ಪುರೋಹಿತರ ಬಳಗವು ನೆರವೇರಿಸಿತು.

'ನಮ್ಮ ಸಮಿತಿಯು ಹೊಸದಾಗಿ ಚುನಾಯಿತವಾಗಿದೆ. ಎಲ್ಲಾ ಕಷ್ಟಗಳೂ ಪರಿಹಾರವಾಗಿ ನಮ್ಮ ಸಮಿತಿಯ ಅವಧಿಯಲ್ಲಿ ಉತ್ತಮ ಕಾರ್ಯಗಳು ನೆರವೇರಲಿ ಎಂಬ ಆಶಯದೊಂದಿಗೆ ಸುದರ್ಶನ ಹೋಮ ಹಾಗೂ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲಾಯಿತು. ನಮ್ಮೆಲ್ಲ ಪದಾಧಿಕಾರಿಗಳು ಹಾಗೂ ಸದಸ್ಯರು ಹಾಜರಿದ್ದರು' ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ತಿಳಿಸಿದ್ದಾರೆ.

ಕ್ರೀಡಾಂಗಣದಲ್ಲಿರುವ ಗೇಟ್‌ಗಳಿಗೂ ಪೂಜೆ ಸಲ್ಲಿಸಲಾಯಿತು. ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಉಪಾಧ್ಯಕ್ಷ ಸುಜಿತ್ ಸೋಮಸುಂದರ್, ಕಾರ್ಯದರ್ಶಿ ಸಂತೋಷ್ ಮೆನನ್ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಲ್ಲಿ ಸೋಮವಾರ ಸುದರ್ಶನ ಹೋಮ ಹಾಗೂ ಶಾಂತಿ ಪೂಜೆ ನಡೆಸಲಾಯಿತು ಪ್ರಜಾವಾಣಿ ಚಿತ್ರ

ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ, ಗೃಹ ಇಲಾಖೆಯ ಕಾರ್ಯದರ್ಶಿ ಕೆ.ವಿ. ಶರತ್ ಚಂದ್ರ, ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಾಂತ್ ಕುಮಾರ್ ಸಿಂಗ್, ಎಡಿಜಿಪಿ ಆರ್. ಹಿತೇಂದ್ರ ಮತ್ತು ಕೆಎಸ್‌ಸಿಎ ಪದಾಧಿಕಾರಿಗಳು ಸಭೆಯಲ್ಲಿದ್ದರು.

ಕ್ರಿಕೆಟ್‌ಗೆ ವಿದಾಯ ಘೋಷಿಸಿದ ಆಲ್‌ರೌಂಡರ್

ಆಫ್‌ಸ್ಪಿನ್ ಪರಂಪರೆ ಕೊಂಡಿ ಗೌತಮ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಿಮೂರು ವರ್ಷಗಳ ಹಿಂದೆ ಮೀರತ್ ಕ್ರಿಕೆಟ್ ಅಂಗಳದಲ್ಲಿ ನಡೆದಿದ್ದ ರಣಜಿ ಟ್ರೋಫಿ ಪಂದ್ಯದಲ್ಲಿ ಸ್ಥಳೀಯ ಹೀರೊ ಸುರೇಶ್ ರೈನಾ ಅವರ ಬ್ಯಾಟಿಂಗ್ ನೋಡಲು ಹಲವಾರು ಜನ ಸೇರಿದ್ದರು. ಆದರೆ ಎಂಟು ರನ್ ಗಳಿಸಿದ್ದ ರೈನಾ ಅವರನ್ನು ತಮ್ಮದೇ ಬೌಲಿಂಗ್‌ನಲ್ಲಿ ಕ್ಯಾಚ್ ಪಡೆದ ಕರ್ನಾಟಕದ ಕೃಷ್ಣಪ್ಪ ಗೌತಮ್ ಸಂಭ್ರಮಿಸಿದ್ದರು. ಅದರೊಂದಿಗೆ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ತಮ್ಮ ವಿಕೆಟ್ ಖಾತೆಯನ್ನು ತೆರೆದಿದ್ದರು.

ಅಂದು ಶುರುವಾದ ತಮ್ಮ ಕ್ರಿಕೆಟ್ ಪಯಣಕ್ಕೆ ಗೌತಮ್ ಸೋಮವಾರ ತೆರೆ ಎಳೆದಿದ್ದಾರೆ. ಹರಭಜನ್ ಸಿಂಗ್ ಅವರಂತೆ ಸ್ಪಿನ್ ಮಾಡುತ್ತಿದ್ದ ಕಾರಣಕ್ಕೆ 'ಭಜ್ಜಿ' ಎಂದೇ ಪರಿಚಿತರಾಗಿರುವ 37 ವರ್ಷದ ಬಲಗೈ ಆಟಗಾರ ತಾವು ಆಡಿ ಬೆಳೆದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿಯೇ ಸೋಮವಾರ ನಿವೃತ್ತಿ ಘೋಷಿಸಿದರು. ಅವರ ಪತ್ನಿ ಅರ್ಚನಾ, ಮಗಳು ನಿತಾರಾ ಹಾಗೂ ಕುಟುಂಬದ ಸದಸ್ಯರು ಈ ಸಂದರ್ಭದಲ್ಲಿದ್ದರು.

'ರಾಜ್ಯ, ಐಪಿಎಲ್ ಮತ್ತು ದೇಶಕ್ಕಾಗಿ ಆಡುವ ಅವಕಾಶ ಸಿಕ್ಕಿದೆ. ಅದಕ್ಕಾಗಿ ನನಗೆ ಸಂಪೂರ್ಣ ತೃಪ್ತಿಯಿದೆ. ಕೆಎಸ್‌ಸಿಎ, ಬಿಸಿಸಿಐಗಳಿಗೆ ನಾನು ಆಭಾರಿ. ನನ್ನ ಕುಟುಂಬ, ಸ್ನೇಹಿತರ ನೆರವಿನಿಂದ ಇಷ್ಟು ಬೆಳೆಯಲು ಸಾಧ್ಯವಾಗಿದೆ. ಭವಿಷ್ಯದ ಆಟಗಾರರಿಗೆ ಮಾರ್ಗದರ್ಶನ ನೀಡಲು ಅಥವಾ ಕ್ರಿಕೆಟ್‌ಗೆ ಸೇವೆ ಸಲ್ಲಿಸಲು ಸದಾ ಸಿದ್ಧನಾಗಿರುವೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ತಮ್ಮ ವೃತ್ತಿಬದುಕಿನಲ್ಲಿ ಹಲವು ಏಳುಬೀಳುಗಳನ್ನು ಕಂಡವರು ಗೌತಮ್. ಪದಾರ್ಪಣೆಯ ನಂತರ ಕೆಲ ವರ್ಷ ಅವರು ತಂಡದಲ್ಲಿ ನಿರಂತರ ಅವಕಾಶ ಪಡೆಯಲಿಲ್ಲ. ಆದರೆ ಈ ವೇಳೆ ಗೌತಮ್ ಅವರು ಮಾನಸಿಕವಾಗಿ ಮತ್ತಷ್ಟು ಗಟ್ಟಿಯಾದರು. ತಮ್ಮ ಕೌಶಲಗಳಿಗೆ ಸಾಣೆ ಹಿಡಿದರು. ಬ್ಯಾಟಿಂಗ್ ಕೂಡ ಉತ್ತಮಪಡಿಸಿಕೊಂಡರು. ಇದರಿಂದಾಗಿ 2016–17ರಲ್ಲಿ ರಾಜ್ಯ ತಂಡಕ್ಕೆ ಮರಳಿದರು. ಮೊದಲ ಮೂರು ಪಂದ್ಯಗಳಲ್ಲಿ 18 ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಆ ರಣಜಿ ಟ್ರೋಫಿ ಋತುವಿನಲ್ಲಿ ಒಟ್ಟು 27 ಹಾಗೂ ಅದರ ನಂತರದ ವರ್ಷದಲ್ಲಿ 39 ವಿಕೆಟ್‌ಗಳನ್ನು ಗಳಿಸಿದರು. ಅವರು ಎಲ್ಲ ಮಾದರಿಗಳಲ್ಲಿಯೂ ರಾಜ್ಯ ತಂಡದ ಪ್ರಮುಖ ಆಟಗಾರನಾಗಿ ರೂಪುಗೊಂಡರು.

2018ರಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ನಲ್ಲಿ ಆಡುವ ರಾಜಸ್ಥಾನ ರಾಯಲ್ಸ್ ತಂಡವು ಅವರನ್ನು ₹6.2 ಕೋಟಿ ನೀಡಿ ಸೆಳೆದುಕೊಂಡಿತು. 2021ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು ₹9.25 ಕೋಟಿ ಕೊಟ್ಟು ಗೌತಮ್ ಅವರನ್ನು ಸೇರ್ಪಡೆ ಮಾಡಿಕೊಂಡರು. ಮಧ್ಯಮ ವರ್ಗದ ಕುಟುಂಬದಿಂದ ಬೆಳೆದು ಬಂದ ಹುಡುಗ ಕೋಟ್ಯಧಿಪತಿಯಾದರು. 2021ರಲ್ಲಿ ಕೊಲಂಬೊದಲ್ಲಿ ಶ್ರೀಲಂಕಾ ಎದುರು ಕಣಕ್ಕಿಳಿದಾಗ ಅವರಿಗೆ 33 ವರ್ಷಗಳಾಗಿತ್ತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡುವ ಹೆಚ್ಚು ಅವಕಾಶಗಳು ಅವರಿಗೆ ದೊರೆತಿಲ್ಲ.

ಪತ್ನಿ ಅರ್ಚನಾ ಹಾಗೂ ಪುತ್ರಿ ನಿತಾರಾ ಜೊತೆ ಕೆ. ಗೌತಮ್ ಪ್ರಜಾವಾಣಿ ಚಿತ್ರ

ದೂರವಾಣಿ ನಗರದ ಅಂಗಳಗಳಲ್ಲಿ ಆಡುತ್ತ ಬೆಳೆದ ಗೌತಮ್ ಫೀಲ್ಡಿಂಗ್‌ನಲ್ಲಿಯೂ ಅಪಾರ ಚುರುಕುತನ ಮೆರೆದವರು. ಆದರೆ 2022–23ರ ಋತುವಿನಲ್ಲಿಯೂ ಅವರು 11 ಪಂದ್ಯಗಳಲ್ಲಿ 39 ವಿಕೆಟ್ ಗಳಿಸಿದ್ದರು. ಆದರೂ ನಂತರದ ಋತುವಿನಲ್ಲಿ ಅವರಿಗೆ ಅವಕಾಶ ಸಿಗಲಿಲ್ಲ. ಐಪಿಎಲ್‌ನಲ್ಲಿಯೂ ಅವರು ಹೋದ ವರ್ಷ ಕೊನೆಯ ಬಾರಿಗೆ ಆಡಿದ್ದರು. ಕಳೆದ ಒಂದು ವರ್ಷದಿಂದ ಅವರು ಟಿ.ವಿಯಲ್ಲಿ ಕನ್ನಡ ಕಾಮೆಂಟೇಟರ್ ಆಗಿದ್ದಾರೆ.

'ನನಗೆ ಯಾವುದರ ಬಗ್ಗೆಯೂ ವಿಷಾದವಿಲ್ಲ' ಎಂದು ಹೇಳುವ ಗೌತಮ್, 'ರಾಜ್ಯದಲ್ಲಿ ಹಲವು ಪ್ರತಿಭಾನ್ವಿತರು ಇದ್ದಾರೆ. ಆಫ್‌ಸ್ಪಿನ್ನರ್‌ಗಳ ಸಂಖ್ಯೆ ಕಡಿಮೆ ಇದೆ. ಆದರೆ ಮೊಹಸೀನ್ ಖಾನ್ ಅಂತಹ ಆಟಗಾರರು ಭರವಸೆ ಮೂಡಿಸಿದ್ದಾರೆ' ಎಂದರು.

ಗೌತಮ್ ಅವರು ಪ್ರಥಮದರ್ಜೆ ಕ್ರಿಕೆಟ್‌ನಲ್ಲಿ 59 ಪಂದ್ಯಗಳಲ್ಲಿ 224 ವಿಕೆಟ್ ಪಡೆದಿದ್ದಾರೆ. ಬ್ಯಾಟಿಂಗ್‌ನಲ್ಲಿ ಒಂದು ಶತಕ ಸೇರಿ 1,419 ರನ್ ಬಾರಿಸಿದ್ದಾರೆ. ಲಿಸ್ಟ್ 'ಎ'ನಲ್ಲಿ 68 ಪಂದ್ಯಗಳಲ್ಲಿ 96 ವಿಕೆಟ್ ಗಳಿಸಿದ್ದು, 630 ರನ್ ಹೊಡೆದಿದ್ದಾರೆ.

ಟಿ20 ಮಾದರಿಯಲ್ಲಿ 92 ಪಂದ್ಯಗಳಲ್ಲಿ 91 ವಿಕೆಟ್ ಗಳಿಸಿದ್ದಾರೆ. ಅವರ ಬ್ಯಾಟ್‌ನಿಂದ 734 ರನ್ ಮೂಡಿಬಂದಿವೆ.

ರಾಷ್ಟ್ರೀಯ ಶೂಟಿಂಗ್: ಕಿರಣ್ ಅಂಕುಷ್‌ಗೆ ಸ್ವರ್ಣ

ಭೋಪಾಲ್ (ಪಿಟಿಐ): ನೌಕಾಪಡೆಯ ಕಿರಣ್ ಅಂಕುಷ್ ಜಾಧವ್ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಸೋಮವಾರ ಸ್ವರ್ಣಕ್ಕೆ ಗುರಿಯಿಟ್ಟರು. ಈ ಹಾದಿಯಲ್ಲಿ ಅವರು ಒಲಿಂಪಿಯನ್ ಅರ್ಜುನ್ ಬಬೂತಾ ಅವರ ಸವಾಲನ್ನು ಮೀರಿ ನಿಂತರು.

ಕಿರಣ್ ಅವರು ಒಟ್ಟು 252.1 ಅಂಕಗಳೊಂದಿಗೆ ಪೋಡಿಯಂನ ಅಗ್ರಸ್ಥಾನ ತಮ್ಮದಾಗಿಸಿಕೊಂಡರು. ಬಬೂತಾ (251.4 ಪಾಯಿಂಟ್ಸ್) ಹಾಗೂ ಐಶ್ವರಿ ಪ್ರತಾಪ್‌ಸಿಂಗ್ ತೋಮರ್ (229.8) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಜಯಿಸಿದರು.

ಜೂನಿಯರ್ ಪುರುಷರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಗುಜರಾತ್‌ನ ಮೊಹಮ್ಮದ್ ಮುರ್ತಾಝಾ ವಾನಿಯಾ ಅವರು (254.3 ಪಾಯಿಂಟ್ಸ್) ಅಧಿಕಾರಯುತವಾಗಿ ಚಿನ್ನದ ಪದಕ ಗೆದ್ದರು. ಪಶ್ಚಿಮ ಬಂಗಾಳದ ಅಭಿನವ್ ಶಾ (251.6) ರಜತ ಗೆದ್ದರೆ, ಕನ್ನಡಿಗ ಓಂಕಾರ್ ವಿಕಾಸ್ ವಾಘಮರೆ (230.1) ಕಂಚು ಜಯಿಸಿದರು. ಕರ್ನಾಟಕದ ಮತ್ತೊಬ್ಬ ಶೂಟರ್ ನರೇನ್ ಪ್ರಣವ್ (209) ನಾಲ್ಕನೇ ಸ್ಥಾನ ಪಡೆದುಕೊಂಡರು.

ಓಂಕಾರ್ ವಿಕಾಸ್

ಸಂತೋಷ್ ಟ್ರೋಫಿ ಫುಟ್‌ಬಾಲ್: ಜಹೀರ್ ಖಾನ್ ಅವಳಿ ಗೋಲು

ಸರ್ವಿಸಸ್ ತಂಡಕ್ಕೆ ಮಣಿದ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ. ಜಹೀರ್ ಖಾನ್ ಗಳಿಸಿದ ಅವಳಿ ಗೋಲುಗಳ ನೆರವಿನಿಂದ ಸರ್ವಿಸಸ್ ತಂಡವು 'ಸಂತೋಷ್ ಟ್ರೋಫಿ'ಗಾಗಿ ನಡೆಯುತ್ತಿರುವ 79ನೇ ಸೀನಿಯರ್ ಪುರುಷರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 2–1ರಿಂದ ಕರ್ನಾಟಕ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಅರ್ಹತಾ ಸುತ್ತಿನ 'ಎಚ್' ಗುಂಪಿನ ಪಂದ್ಯದಲ್ಲಿ ಆತಿಥೇಯ ತಂಡದ ಪರ ಎಂ. ಲೂಯಿಸ್ ನಿಕ್ಸನ್ ಏಕೈಕ ಗೋಲು ದಾಖಲಿಸಿದರು. ಲಕ್ಷದ್ವೀಪ ತಂಡವನ್ನು 3–0ಯಿಂದ ಮಣಿಸಿ ಅಭಿಯಾನ ಆರಂಭಿಸಿದ್ದ ಕರ್ನಾಟಕ ತಂಡಕ್ಕೆ ನಿರಾಸೆಯಾಯಿತು.

ಆಡಿರುವ ಎರಡೂ ಪಂದ್ಯಗಳನ್ನು ಗೆದ್ದ ಸರ್ವಿಸಸ್ ಆರು ಅಂಕಗಳೊಂದಿಗೆ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಮುಂದಿನ ಹಂತಕ್ಕೆ ಸನಿಹವಾಗಿದೆ. ಕರ್ನಾಟಕ ಮೂರು ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ತಲಾ ಒಂದು ಅಂಕ ಗಳಿಸಿರುವ ಲಕ್ಷದ್ವೀಪ ಮತ್ತು ಗೋವಾ ತಂಡಗಳು ನಂತರದ ಸ್ಥಾನದಲ್ಲಿವೆ. ನಾಲ್ಕೂ ತಂಡಗಳಿಗೆ ತಲಾ ಒಂದು ಪಂದ್ಯ ಬಾಕಿ ಉಳಿದಿವೆ.

ಸರ್ವಿಸಸ್ ತಂಡದ ಅಭಿಷೇಕ್ ಪವಾರ್ (ಎಡ) ಮತ್ತು ಕರ್ನಾಟಕ ತಂಡದ ರಾಜಿಲ್ ಸಾಜಿ ಅವರು ಚೆಂಡಿಗಾಗಿ ಪೈಪೋಟಿ ನಡೆಸಿದರು ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಎಂ. ಗೋವಿಂದರಾಜು ರಾಮಚಂದ್ರನ್ ಮಾರ್ಗದರ್ಶನದ ಸರ್ವಿಸಸ್ ತಂಡವು ಪಂದ್ಯದ ಎಂಟನೇ ನಿಮಿಷದಲ್ಲೇ ಮುನ್ನಡೆ ಸಾಧಿಸಿತು. ಪೆನಾಲ್ಟಿ ಅವಕಾಶವನ್ನು ಜಹೀರ್ ಅವರು ಗೋಲಾಗಿ ಪರಿವರ್ತಿಸಿದರು. ಅದಾದ ಏಳು ನಿಮಿಷಗಳಲ್ಲಿ ಶುಭಂ ರಾಣಾ ಅವರು ಚೆಂಡನ್ನು ನಿಖರವಾಗಿ ಲಾಫ್ಟ್ ಮಾಡಿದರು. ತಡಮಾಡದ ಜಹೀರ್, ಹೆಡ್ಡರ್ ಮೂಲಕ ಚೆಂಡನ್ನು ಗುರಿ ಸೇರಿಸಿದರು. ಇದರೊಂದಿಗೆ ಸರ್ವಿಸಸ್ 15ನೇ ನಿಮಿಷದಲ್ಲೇ 2–0 ಮುನ್ನಡೆ ಪಡೆಯಿತು.

ಬಳಿಕ ತೀವ್ರ ಒತ್ತಡಕ್ಕೆ ಒಳಗಾದ ಆತಿಥೇಯ ತಂಡವು ತಿರುಗೇಟು ನೀಡಲು ಪ್ರಯತ್ನಿಸಿತು. ಆದರೆ, ಎದುರಾಳಿ ತಂಡದ ಬಲಿಷ್ಠ ರಕ್ಷಣಾ ವ್ಯೂಹವನ್ನು ಭೇದಿಸಲು ಸಾಧ್ಯವಾಗಲಿಲ್ಲ. ಆಟ ಕೈಜಾರಿ ಹೋಗುತ್ತಿದ್ದಂತೆ ಕರ್ನಾಟಕದ ಕೋಚ್ ರವಿ ಬಾಬು ರಾಜು ಅವರು ನಿಖಿಲ್ ರಾಜ್ ಬದಲು ಬೆಂಗಳೂರು ಎಫ್‌ಸಿಯ ಶ್ರೇಯಸ್ ಕೇತ್ಕರ್ ಅವರನ್ನು ಕಣಕ್ಕಿಳಿಸಿದರು.

ಲಕ್ಷದ್ವೀಪ ವಿರುದ್ಧದ ಪಂದ್ಯದಲ್ಲಿ ನಿರಾಸೆ ಮೂಡಿಸಿದ್ದ ಲೂಯಿಸ್ ಅವರು ರೋಮಾಂಚಕ ಸ್ಟ್ರೈಕ್ ಮೂಲಕ ಕರ್ನಾಟಕಕ್ಕೆ ಭರವಸೆ ಮೂಡಿಸಿದರು. 68ನೇ ನಿಮಿಷದಲ್ಲಿ ಅವರು ಗಳಿಸಿದ ಗೋಲಿನಿಂದ ಆತಿಥೇಯ ತಂಡಕ್ಕೆ ಸಮಬಲ ಸಾಧಿಸಲು ಸ್ವಲ್ಪ ಸಮಯ ಸಿಕ್ಕಿತು.

ಪಂದ್ಯ ಮುಕ್ತಾಯಕ್ಕೆ ಕೆಲವೇ ನಿಮಿಷ ಬಾಕಿ ಇರುವಂತೆ ಆತಿಥೇಯರು ಚೆಂಡನ್ನು ಗುರಿ ಸೇರಿಸಿ, ಸಮಬಲ ಸಾಧಿಸಿದ ಸಂಭ್ರಮದಲ್ಲಿ ತೇಲಾಡಿದರು. ಆದರೆ, ಅದನ್ನು 'ಫೌಲ್' ಎಂದು ರೆಫ್ರಿ ಘೋಷಿಸಿದರು. ಹೀಗಾಗಿ ಮೈದಾನದಲ್ಲಿ ಕೆಲ ಹೊತ್ತು ಉದ್ವಿಗ್ನ ವಾತಾವರಣ ನಿರ್ಮಾಣವಾಯಿತು. ಕೊನೆಗೆ ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿ ಶಾಂತಗೊಳಿಸಿದರು.

ದಿನದ ಇನ್ನೊಂದು ಪಂದ್ಯದಲ್ಲಿ ಲಕ್ಷದ್ವೀಪ ಮತ್ತು ಗೋವಾ ತಂಡಗಳು 1–1ರಿಂದ ಡ್ರಾ ಸಾಧಿಸಿದವು. ಬುಧವಾರ ಕರ್ನಾಟಕ ತಂಡವು ಗೋವಾ ವಿರುದ್ಧ; ಸರ್ವಿಸಸ್ ತಂಡವು ಲಕ್ಷದ್ವೀಪ ವಿರುದ್ಧ ತಮ್ಮ ಕೊನೆಯ ಗುಂಪಿನ ಪಂದ್ಯವನ್ನು ಆಡಲಿವೆ.

ಮಹಿಳಾ ಕ್ರಿಕೆಟಿಗರ ಸಂಭಾವನೆ ದುಪ್ಪಟ್ಟು

ನವದೆಹಲಿ (ಪಿಟಿಐ): ಏಕದಿನ ಮಹಿಳಾ ಕ್ರಿಕೆಟ್ ವಿಶ್ವಕಪ್ ಜಯಿಸಿದ ಸಂಭ್ರಮದಲ್ಲಿರುವ ಆಟಗಾರ್ತಿಯರಿಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಖುಷಿಯ ಸುದ್ದಿಯನ್ನು ನೀಡಿದೆ.

ಮಹಿಳೆಯರ ದೇಶಿ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಆಟಗಾರ್ತಿಯರು ಮತ್ತು ಅಧಿಕಾರಿಗಳ ಪಂದ್ಯದ ಸಂಭಾವನೆಯನ್ನು ದುಪ್ಪಟ್ಟು ಮಾಡಿದೆ. ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಇದಕ್ಕೆ ಅನುಮೋದನೆ ನೀಡಿದೆ.

ಪರಿಷ್ಕೃತ ನಿಯಮದ ಪ್ರಕಾರ; ದೇಶಿ ಟೂರ್ನಿಗಳಲ್ಲಿ ಆಡುವ ಆಟಗಾರ್ತಿಯರು ಇನ್ನು ಮುಂದೆ ಪಂದ್ಯದ ಸಂದರ್ಭದಲ್ಲಿ ದಿನವೊಂದಕ್ಕೆ ₹50 ಸಾವಿರ ಪಡೆಯಲಿದ್ದಾರೆ. ಈ ಮೊದಲು ₹20 ಸಾವಿರ ಇತ್ತು. ಮೀಸಲು ಆಟಗಾರ್ತಿಯರು ದಿನಕ್ಕೆ ₹10 ಸಾವಿರ ಗಳಿಸುವರು.

ಸೀನಿಯರ್ ಮಹಿಳಾ ಏಕದಿನ ಟೂರ್ನಿಗಳು ಮತ್ತು ಬಹುದಿನಗಳ ಪಂದ್ಯಗಳಲ್ಲಿ 11ರ ಬಳಗದಲ್ಲಿ ಆಡುವ ಆಟಗಾರ್ತಿಯರು ದಿನವೊಂದಕ್ಕೆ ₹50 ಸಾವಿರ ಪಡೆಯುವರು. ಕಾಯ್ದಿಟ್ಟ ಆಟಗಾರ್ತಿಯರು ₹25 ಸಾವಿರ ಗಳಿಸುವರು. ರಾಷ್ಟ್ರೀಯ ಟಿ20 ಟೂರ್ನಿಗಳಲ್ಲಿ ಕಣಕ್ಕಿಳಿಯುವ 11ರ ಬಳಗದಲ್ಲಿರುವವರು ₹25 ಸಾವಿರ ಮತ್ತು ಮೀಸಲು ಆಟಗಾರ್ತಿಯರು ₹12,500 ಪಡೆಯುವರು.

ಭಾರತಕ್ಕೆ ಫೀಲ್ಡಿಂಗ್ ಸುಧಾರಣೆ ಸವಾಲು

ಮಹಿಳಾ ಕ್ರಿಕೆಟ್: ಶ್ರೀಲಂಕಾ ಎದುರು ಮತ್ತೊಂದು ಗೆಲುವಿನತ್ತ ಹರ್ಮನ್ ಪಡೆ ಚಿತ್ತ



ಶ್ರೀಲಂಕಾ ತಂಡದ ನಾಯಕಿ ಚಾಮರಿ ಅಟಪಟ್ಟು (ಎಡ). ಭಾರತ ಮಹಿಳಾ ತಂಡದ ಆಟಗಾರ್ತಿಯರ ಅಭ್ಯಾಸ ಪಿಟಿಐ ಚಿತ್ರ

ವಿಶಾಖಪಟ್ಟಣಂ (ಪಿಟಿಐ): ಭಾರತ ಮಹಿಳೆಯರ ಕ್ರಿಕೆಟ್ ತಂಡವು ಶ್ರೀಲಂಕಾ ಎದುರಿನ ಸರಣಿಯ ಮೊದಲ ಪಂದ್ಯದಲ್ಲಿ ಜಯಿಸಿ ಅಪಾರ ಆತ್ಮವಿಶ್ವಾಸದಲ್ಲಿದೆ. ಮಂಗಳವಾರ ಇಲ್ಲಿ ನಡೆಯಲಿರುವ ಎರಡನೇ ಟಿ20 ಪಂದ್ಯದಲ್ಲಿಯೂ ಗೆಲುವು ಸಾಧಿಸುವ ಛಲದಲ್ಲಿದೆ.

ಆದರೆ, ಫೀಲ್ಡಿಂಗ್‌ನಲ್ಲಿ ಸುಧಾರಣೆ ಮಾಡಿಕೊಳ್ಳುವ ಸವಾಲು ಹರ್ಮನ್‌ಪ್ರೀತ್ ಕೌರ್ ಬಳಗದ ಮುಂದಿದೆ.

ಮೊದಲ ಪಂದ್ಯದಲ್ಲಿ ಭಾರತ ತಂಡದ ಬೌಲರ್‌ಗಳು ಶ್ರೀಲಂಕಾ ಪಡೆಯನ್ನು (6ಕ್ಕೆ121) ಸಾಧಾರಣ ಮೊತ್ತಕ್ಕೆ ನಿಯಂತ್ರಿಸುವಲ್ಲಿ ಯಶಸ್ವಿಯಾಯಿತು. ಆದರೆ ಫೀಲ್ಡಿಂಗ್‌ನಲ್ಲಿ ಹಲವು ಲೋಪಗಳಿದ್ದವು. ಕೆಲವು ಸುಲಭ ಕ್ಯಾಚ್‌ಗಳೂ ಕೈಜಾರಿದ್ದವು.

‘ಕ್ಯಾಚ್‌ಗಳನ್ನು ಕೈಚೆಲ್ಲುತ್ತಿರುವುದು ಚಿಂತೆಯ ವಿಷಯ. ಫೀಲ್ಡಿಂಗ್ ಸುಧಾರಣೆಯತ್ತ ನಾವು ಚಿತ್ತ ನೆಟ್ಟಿದ್ದೇವೆ. ಇಲ್ಲಿಯ ವಾತಾವರಣದಲ್ಲಿ ಇಬ್ಬನಿ ಇದೆ. ಆದರೆ ಅದನ್ನೇ ನೆಪವಾಗಿಟ್ಟುಕೊಳ್ಳುತ್ತಿಲ್ಲ. ಅದನ್ನು ಮೀರಿ ನಿಲ್ಲಬೇಕಿದೆ. ಮುಂದಿನ ಪಂದ್ಯಗಳಲ್ಲಿ ಸುಧಾರಣೆ ಮಾಡಿಕೊಳ್ಳುತ್ತೇವೆ’ ಎಂದು ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಹೇಳಿದ್ದಾರೆ.

ವಿಶ್ವಕಪ್ ವಿಜಯದ ನಂತರ ಮಹಿಳಾ ತಂಡವು ಆರು ವಾರಗಳ ವಿಶ್ರಾಂತಿ ಪಡೆದಿತ್ತು. ಆ ಅವಧಿಯಲ್ಲಿ ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ನಡೆದಿದ್ದ ಶಿಬಿರದಲ್ಲಿಯೂ ಪಾಲ್ಗೊಂಡಿತ್ತು.

‘ತಿಂಗಳ ನಂತರ ಸ್ಪರ್ಧಾಕಣಕ್ಕೆ ಇಳಿದಿದ್ದೇವೆ. ತಂಡಕ್ಕೆ ಉತ್ತಮವಾದ ಕಾಣಿಕೆ ನೀಡುವುದು ನಮ್ಮ ಗುರಿ’ ಎಂದರು.

ಉತ್ತಮ ಲಯದಲ್ಲಿರುವ ಜೆಮಿಮಾ ರಾಡ್ರಿಗಸ್ ಅವರು ಮೊದಲ ಪಂದ್ಯದ ಜಯದ ರೂವಾರಿಯಾಗಿದ್ದರು. ಲಂಕಾ ತಂಡದ ಎಡಗೈ ಮಣಿಕಟ್ಟಿನ ಸ್ಪಿನ್ನರ್ ಶಶಿನಿ ಗಿಮಾನಿ ಅವರ ಎಸೆತಗಳನ್ನು ದಂಡಿಸಿದ್ದರು. ಅವರ ಬೌಲಿಂಗ್‌ನಲ್ಲಿಯೇ ಜೆಮಿಮಾ ಅರ್ಧ ಡಜನ್ ಬೌಂಡರಿ ಗಳಿಸಿದ್ದರು.

20 ವರ್ಷ ವಯಸ್ಸಿನ ಸ್ಪಿನ್ನರ್ ವೈಷ್ಣವಿ ಶರ್ಮಾ ಅವರು ವಿಕೆಟ್ ಪಡೆಯದಿದ್ದರೂ ಬಿಗಿ ದಾಳಿ ನಡೆಸಿದರು. ಕೇವಲ 16 ರನ್ ಬಿಟ್ಟುಕೊಟ್ಟರು.

ಶಫಾಲಿ ವರ್ಮಾ ಅವರಿಗೆ ಈ ಸರಣಿಯು ಮಹತ್ವದ್ದಾಗಿದೆ. ಚುಟುಕು ಕ್ರಿಕೆಟ್‌ನಲ್ಲಿ ಅವರು ತಮ್ಮ ಛಾಪು ಮೂಡಿಸುವ ಪ್ರಯತ್ನದಲ್ಲಿದ್ದಾರೆ. ಹರ್ಮನ್‌ಪ್ರೀತ್, ದೀಪ್ತಿ ಶರ್ಮಾ, ಸ್ಮೃತಿ ಮಂದಾನ, ಹರ್ಲೀನ್ ಡಿಯೊಲ್ ಹಾಗೂ ರಿಚಾ ಶರ್ಮಾ ಅವರು ತಮ್ಮ ಎಂದಿನ ಲಯಕ್ಕೆ ಮರಳಿದರೆ ಶ್ರೀಲಂಕಾ ತಂಡದ ಹಾದಿ ಮತ್ತಷ್ಟು ಕಠಿಣವಾಗಬಹುದು.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಜಿಯೊ ಹಾಟ್‌ಸ್ಟಾರ್, ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್.

ಭಾರತ ಏಕದಿನ ತಂಡದ ಆಟಗಾರ ರೋಹಿತ್ ಶರ್ಮಾ ಮನದಾಳದ ಮಾತು

‘2023ರಲ್ಲೇ ನಿವೃತ್ತಿ ಬಗ್ಗೆ ಯೋಚಿಸಿದ್ದೆ’

ಗುರುಗ್ರಾಮದಲ್ಲಿ ಭಾನುವಾರ ನಡೆದ ಮಾಸ್ಟರ್ಸ್ ಯೂನಿಯನ್ ಘಟಿಕೋತ್ಸವದಲ್ಲಿ ರೋಹಿತ್ ಶರ್ಮಾ ಭಾಗವಹಿಸಿದರು ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ‘2023ರ ಐಸಿಸಿ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡದ ವಿರುದ್ಧ ಸೋತ ನಂತರ ನಿವೃತ್ತಿಯ ಬಗ್ಗೆ ಯೋಚಿಸಿದ್ದೆ’ ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ.

ರೋಹಿತ್ ನಾಯಕತ್ವದಲ್ಲಿ ಭಾರತ ತಂಡವು ತವರಿನಲ್ಲಿ ನಡೆದ ವಿಶ್ವಕಪ್‌ನಲ್ಲಿ ಸತತ 9 ಗೆಲುವುಗಳೊಂದಿಗೆ ಪ್ರಶಸ್ತಿ ಸುತ್ತು ಪ್ರವೇಶಿಸಿತ್ತು. ಆದರೆ, ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಬ್ಯಾಟರ್ ಟ್ರಾವಿಸ್ ಹೆಡ್ ಬಾರಿಸಿದ ಅಮೋಘ ಶತಕವು ಭಾರತದ ಕನಸನ್ನು ಭಗ್ನಗೊಳಿಸಿತ್ತು.

‘ಅಂದು ಫೈನಲ್ ಪಂದ್ಯದ ಸೋಲಿನ ಬಳಿಕ ನಾನು ಸಂಪೂರ್ಣ ವಿಚಲಿತನಾಗಿದ್ದೆ. ಕ್ರಿಕೆಟ್ ನನ್ನಿಂದ ಎಲ್ಲವನ್ನೂ ಕಸಿದುಕೊಂಡಿದೆ. ಇನ್ನು ಮುಂದೆ ನಾನು ಅದನ್ನು ಆಡಬಾರದು. ನನ್ನಲ್ಲಿ ಏನೂ ಉಳಿದಿಲ್ಲವೆಂದು ಭಾವಿಸಿದ್ದೆ’ ಎಂದು ಭಾನುವಾರ ಗುರುಗ್ರಾಮದಲ್ಲಿ ನಡೆದ ಮಾಸ್ಟರ್ಸ್ ಯೂನಿಯನ್ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಹೇಳಿದರು.

‘ಆ ಸೋಲಿನಿಂದ ನಾನು ಹೊರಬರುವುದು ಅಗತ್ಯವಾಗಿತ್ತು, ಅದಕ್ಕಾಗಿ ಸ್ವಲ್ಪ ಸಮಯ ತೆಗೆದುಕೊಂಡೆ. ಸದ್ಯ, ಆ ನೋವಿನಿಂದ ಹೊರಬಂದು ಮತ್ತೆ ಚೈತನ್ಯ ಪಡೆದುಕೊಂಡಿದ್ದೇನೆ. ಮತ್ತೆ ಮೈದಾನದಲ್ಲಿ ಆಡಲು ಪ್ರಾರಂಭಿಸಿದ್ದೇನೆ’ ಎಂದರು.

‘ವಿಶ್ವಕಪ್ ಸೋಲು ಎಲ್ಲರಿಗೂ ನಿರಾಸೆ ಉಂಟುಮಾಡಿತ್ತು, ವೈಯಕ್ತಿಕವಾಗಿ ಅದು ನನಗೆ ತುಂಬಾ ಕಠಿಣ ಸಮಯವಾಗಿತ್ತು. ಏಕೆಂದರೆ, ನಾನು ಆ ವಿಶ್ವಕಪ್‌ಗಾಗಿ ಕೇವಲ 2-3 ತಿಂಗಳು ಮಾತ್ರ ಅಭ್ಯಾಸ ನಡೆಸಿಲ್ಲ. ಬದಲಾಗಿ, 2022ರಲ್ಲಿ ನಾಯಕತ್ವ ವಹಿಸಿಕೊಂಡಾಗಿನಿಂದಲೂ ವಿಶ್ವಕಪ್ ಗೆಲುವಿನ ಬಗ್ಗೆ ಯೋಚಿಸಿದ್ದೆ’ ಎಂದು ಅವರು ತಿಳಿಸಿದರು.

ಅಂತರರಾಷ್ಟ್ರೀಯ ಟಿ20 ಮತ್ತು ಟೆಸ್ಟ್ ಕ್ರಿಕೆಟ್‌ಗೆ ಈಗಾಗಲೇ ನಿವೃತ್ತಿ ಘೋಷಿಸಿರುವ 38 ವರ್ಷದ ರೋಹಿತ್ ಅವರು ಏಕದಿನ ಮಾದರಿಯಲ್ಲಿ ಮಾತ್ರ ಭಾರತ ತಂಡಕ್ಕೆ ಆಡುತ್ತಿದ್ದಾರೆ. 2027ರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಗುರಿ ಹೊಂದಿದ್ದಾರೆ.

ಪಂಜಾಬ್ ತಂಡದಲ್ಲಿ ಗಿಲ್, ಅಭಿಷೇಕ್

ಚಂಡೀಗಢ (ಪಿಟಿಐ): ಭಾರತ ಟೆಸ್ಟ್ ಹಾಗೂ ಏಕದಿನ ಕ್ರಿಕೆಟ್ ತಂಡದ ನಾಯಕ ಶುಭಮನ್ ಗಿಲ್, ಸ್ಫೋಟಕ ಬ್ಯಾಟರ್ ಅಭಿಷೇಕ್ ಶರ್ಮಾ ಹಾಗೂ ವೇಗಿ ಅರ್ಷದೀಪ್ ಸಿಂಗ್ ಅವರು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಪಂಜಾಬ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಪಂಜಾಬ್ ಕ್ರಿಕೆಟ್ ಸಂಸ್ಥೆಯು ಸೋಮವಾರ 18 ಸದಸ್ಯರ ತಂಡವನ್ನು ಪ್ರಕಟಿಸಿದೆ. ಆದರೆ, ತಂಡದ ನಾಯಕತ್ವವನ್ನು ಯಾರು ವಹಿಸಲಿದ್ದಾರೆ ಎಂಬುದನ್ನು ಬಹಿರಂಗಪಡಿಸಿಲ್ಲ.

ರಾಷ್ಟ್ರೀಯ ತಂಡದ ಆಟಗಾರರು ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಯಲ್ಲಿ ಕನಿಷ್ಠ ಎರಡು ಪಂದ್ಯಗಳಲ್ಲಾದರೂ ಆಡಬೇಕು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ತಾಕೀತು ಮಾಡಿದೆ. ಹೀಗಾಗಿ, ನಾಯಕ ಗಿಲ್ ಸೇರಿ ಎಲ್ಲ ಆಟಗಾರರು ಟೂರ್ನಿಯಲ್ಲಿ ಕಡ್ಡಾಯವಾಗಿ ಆಡಬೇಕಿದೆ.

ಗಿಲ್ ಅವರು ಟೂರ್ನಿಯ ಕೆಲವು ಪಂದ್ಯಗಳಿಗೆ ಲಭ್ಯರಾಗುವ ಸಾಧ್ಯತೆ ಇದೆ.

ಕಿವೀಸ್ ಮಡಿಲಿಗೆ ಟೆಸ್ಟ್ ಸರಣಿ

ಮೌಂಟ್ ಮಾಂಗಾನೂಯಿ (ಎಎಫ್‌ಪಿ): ವೇಗಿ ಜೇಕಬ್ ಡಫಿ (42ಕ್ಕೆ 5) ಅವರ ಅಮೋಘ ಬೌಲಿಂಗ್ ದಾಳಿಯ ನೆರವಿನಿಂದ ನ್ಯೂಜಿಲೆಂಡ್ ತಂಡವು ಮೂರನೇ ಟೆಸ್ಟ್ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡವನ್ನು 323 ರನ್‌ಗಳಿಂದ ಸೋಮವಾರ ಮಣಿಸಿತು. ಇದರೊಂದಿಗೆ ಆತಿಥೇಯ ತಂಡವು ಮೂರು ಪಂದ್ಯಗಳ ಸರಣಿಯನ್ನು 2–0ಯಿಂದ ಗೆದ್ದುಕೊಂಡಿತು.

462 ರನ್‌ಗಳ ಕಠಿಣ ಗುರಿಯನ್ನು ಬೆನ್ನಟ್ಟಿದ ವಿಂಡೀಸ್ ತಂಡವು 80.3 ಓವರ್‌ಗಳಲ್ಲಿ 138 ರನ್‌ಗಳಿಗೆ ಪ್ರವಾಸಿ ತಂಡವು ಆಲೌಟ್ ಆಯಿತು.

ಮೊದಲ ಇನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್ ಪಡೆದಿದ್ದ ಜೇಕಬ್ ಎರಡನೇ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಗೊಂಚಲು (ಒಟ್ಟು 128ಕ್ಕೆ 9) ಪಡೆದರು. ಇದು ಅವರ ವೃತ್ತಿಜೀವನದ ಶ್ರೇಷ್ಠ ಸಾಧನೆಯಾಗಿದೆ.



ಮುಂಬೈನಲ್ಲಿ ಸೋಮವಾರ ನಡೆದ ಕೊನಾಮಿ ಡಿಜಿಟಲ್ ಎಂಟರ್‌ಟೈನ್‌ಮೆಂಟ್‌ನ ಇ–ಫುಟ್‌ಬಾಲ್ ಪ್ರಚಾರ ಕಾರ್ಯಕ್ರಮದಲ್ಲಿ (ಎಡದಿಂದ) ಭಾರತದ ಫುಟ್‌ಬಾಲ್ ದಿಗ್ಗಜ ಆಟಗಾರ ಸುನಿಲ್ ಚೆಟ್ರಿ, ಕ್ರಿಕೆಟಿಗ ಕೆ.ಎಲ್. ರಾಹುಲ್, ನಟ ಅಹಾನ್ ಶೆಟ್ಟಿ ಮತ್ತು ಕ್ರಿಕೆಟಿಗ ವಾಷಿಂಗ್ಟನ್ ಸುಂದರ್ ಭಾಗವಹಿಸಿದ್ದರು ಪಿಟಿಐ ಚಿತ್ರ

ಬೆಂಗಳೂರಿನ ‘ಸಾಯ್’ನಲ್ಲಿ ಸರ್ವಋತು ಹಾಕಿ ಟರ್ಫ್: ಸಚಿವ ಮಾಂಡವೀಯ

ನವದೆಹಲಿ (ಪಿಟಿಐ): ಬೆಂಗಳೂರಿನ ಸಾಯ್ ಕೇಂದ್ರದಲ್ಲಿ ಸರ್ವಋತು ಹಾಕಿ ಟರ್ಫ್ ನಿರ್ಮಾಣ ಮತ್ತು ಪಶ್ಚಿಮ ಬಂಗಾಳದಲ್ಲಿ ಎಂಟು ಪಥಗಳ ಸಿಂಥೆಟಿಕ್ ಅಥ್ಲೆಟಿಕ್ಸ್ ಟ್ರ್ಯಾಕ್ ಸೇರಿದಂತೆ ದೇಶದಾದ್ಯಂತ ಕೇಂದ್ರಗಳಲ್ಲಿ ಹಲವು ಮೂಲಸೌಕರ್ಯ ನವೀಕರಣ ಯೋಜನೆಗಳಿಗೆ ಭಾರತೀಯ ಕ್ರೀಡಾ ಪ್ರಾಧಿಕಾರದ (ಸಾಯ್) ಆಡಳಿತ ಮಂಡಳಿ ಸೋಮವಾರ ಅನುಮೋದನೆ ನೀಡಿದೆ.

‘ದೇಶದ ಕ್ರೀಡಾ ವ್ಯವಸ್ಥೆಯು ಈಗ ಉತ್ತಮ ಪ್ರಗತಿಯ ಹಂತದಲ್ಲಿದೆ. ಅದು ಉಜ್ವಲ ಭವಿಷ್ಯವನ್ನು ಹೊಂದಲು ಸಾಧ್ಯವಿರುವ ಎಲ್ಲ ರೀತಿಯ ವ್ಯವಸ್ಥೆಗಳನ್ನು ಬಲಪಡಿಸುವುದು ಈ ಸಮಯದ ಅಗತ್ಯವಾಗಿದೆ’ ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಹೇಳಿದರು.

‘ನಾವು ಇಂದು ತೆಗೆದುಕೊಳ್ಳುತ್ತಿರುವ ನಿರ್ಧಾರಗಳು ಅಥ್ಲೀಟ್ ಕೇಂದ್ರಿತವಾಗಿವೆ. ಕ್ರೀಡಾಪಟುಗಳಿಗೆ ಅಗತ್ಯವಿರುವ ಅತ್ಯುತ್ತಮ ಮೂಲಸೌಕರ್ಯಗಳನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿವೆ. ಇದು ಕಾಮನ್‌ವೆಲ್ತ್ ಗೇಮ್ಸ್ ಮತ್ತು ಒಲಿಂಪಿಕ್ ಕೂಟಗಳಲ್ಲಿ ಭಾರತದ ಪದಕಗಳ ಸಂಖ್ಯೆಯನ್ನು ಹೆಚ್ಚಿಸಲು ಪೂರಕವಾಗಿದೆ’ ಎಂದು ತಿಳಿಸಿದರು.

ಭಾರತ ಪುರುಷರ ಮತ್ತು ಮಹಿಳೆಯರ ರಾಷ್ಟ್ರೀಯ ಮತ್ತು ‘ಎ’ ಹಾಕಿ ತಂಡಗಳಿಗೆ ತರಬೇತಿ ಕೇಂದ್ರವಾಗಿ ಕಾರ್ಯನಿರ್ವಹಿಸುವ ಬೆಂಗಳೂರಿನ ಸಾಯ್ ಕೇಂದ್ರದಲ್ಲಿ ಪಾಲಿಗ್ರಾಸ್ ಪ್ಯಾರಿಸ್ ಗ್ರೀನ್ ಟೆಕ್ನಾಲಜಿ (ಜಿಟಿ) ಝೀರೊ ಹಾಕಿ ಟರ್ಫ್ ಅನ್ನು ಅಳವಡಿಸುವುದು ಸಭೆಯಲ್ಲಿ ಅನುಮೋದನೆ ಪಡೆದ ಪ್ರಮುಖ ಯೋಜನೆಗಳಲ್ಲಿ ಒಂದು. ಈ ಟರ್ಫ್ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನಿಂದ ಪ್ರಮಾಣೀಕರಿಸಲ್ಪಟ್ಟಿದೆ ಮತ್ತು ಇದಕ್ಕೆ ನೀರಿನ ಅಗತ್ಯತೆ ಕಡಿಮೆಯಾಗಿದೆ.